ಭಾನುವಾರ, ಮೇ 12, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 132 | ಪುಟ 24
www.prajavani.net
prajavani.net | prajavani | prajavani | prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
'ಆದಿ' ಎಂಬ ಯೋಜನೆಯಡಿ ತಮ್ಮ ಬೇರಿನ ಪರಿಚಯದ ಹಾದಿ ತುಳಿಯುತ್ತಿದ್ದಾರೆ ಸೋಲಿಗರ ಮಕ್ಕಳು

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: 13 ಆರೋಪಿಗಳ ಬಂಧನ 9
ಶೇ 80ಕ್ಕೂ ಅಧಿಕ ವಾಹನಗಳಿಗೆ ಅಳವಡಿಕೆಯಾಗದ ನೋಂದಣಿ ಫಲಕ
ಇಂಡಿಯನ್ ಮುಜಾಹಿದೀನ್ ಸದಸ್ಯನಿಗೆ ಜಾಮೀನು 9
ಎಚ್‌ಎಸ್‌ಆರ್‌ಪಿ: ನೀರಸ ಸ್ಪಂದನೆ 8



ನಿಯಮ ಉಲ್ಲಂಘನೆ ವ್ಯಾಪಕ, ಕಡಿವಾಣಕ್ಕೆ ಇಲ್ಲ ಇಚ್ಛಾಶಕ್ತಿ

'ಹೋಮ್ ಸ್ಟೇ' ಅನಧಿಕೃತವೇ ಹೆಚ್ಚು

ಒಳನೋಟ

● ಪ್ರವೀಣ್ ಕುಮಾರ್ ಪಿ.ವಿ

ಎಐ ಚಿತ್ರ

ಮಂಗಳೂರು: ಬೆಂಗಳೂರಿನಿಂದ ಬಂದಿದ್ದ ಎರಡು ತಂಡಗಳು ಉಳ್ಳಾಲ ಸಮೀಪದ ಬಟ್ಟಪ್ಪಾಡಿಯಲ್ಲಿ ಕಡಲ ಕಿನಾರೆ ಬಳಿಯ 'ಅನಧಿಕೃತ ಹೋಂ ಸ್ಟೇ'ಯೊಂದರಲ್ಲಿ ಉಳಿದುಕೊಂಡಿದ್ದವು. ಈ ತಂಡಗಳ ಸದಸ್ಯರು ಕುಡಿದ ಮತ್ತಿನಲ್ಲಿ ಪರಸ್ಪರ ಹೊಡೆದಾಡಿಕೊಂಡರು. ರಾತ್ರಿ ವೇಳೆ ಶುರುವಾದ ಈ ಜಗಳ ಅಷ್ಟಕ್ಕೇ ನಿಲ್ಲದೇ, ಬೀದಿಗೂ ಬಂತು. ಜಗಳ ತಪ್ಪಿಸಲು ಮುಂದಾದ ಸ್ಥಳೀಯರ ಮೇಲೂ ಪ್ರವಾಸಿಗರು ಹಲ್ಲೆ ಮಾಡಿದರು. ಅಕ್ಕ ಪಕ್ಕದ ಮನೆಗಳಿಗೂ ನುಗ್ಗಿ ದಾಂದಲೆ ನಡೆಸಿದರು.

ಸಂಜೆವರಗೂ ಶಾಂತವಾಗಿದ್ದ ಬಟ್ಟಪ್ಪಾಡಿಯಲ್ಲಿ ಮಧ್ಯರಾತ್ರಿ ದೊಡ್ಡ ಘರ್ಷಣೆಯೇ ನಡೆಯಿತು. ಸ್ಥಳೀಯರ ಮೇಲೆ ಪ್ರವಾಸಿಗರು ಹಲ್ಲೆ ನಡೆಸಿದ ಸುದ್ದಿ ಊರಿಡೀ ಹಬ್ಬಿತು. ಮಾಹಿತಿ ಪಡೆದು ಪೊಲೀಸರು ಸ್ಥಳಕ್ಕೆ ಧಾವಿಸು-ವಷ್ಟರಲ್ಲಿ 40–50 ಮಂದಿ ಸೇರಿದ್ದರು. ಆಕ್ರೋಶಗೊಂಡಿದ್ದ ಸ್ಥಳೀಯರನ್ನು ಸಮಾಧಾನಪಡಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಪೊಲೀಸರು ಹರಸಾಹಸಪಟ್ಟಿದ್ದರು.

2022ರ ಜೂನ್ 26ರಂದು ನಡೆದ ಈ ಘಟನೆ 'ಅನಧಿಕೃತ ಹೋಂ ಸ್ಟೇ'ಗಳಿಂದ ಎದುರಾಗುತ್ತಿರುವ ಸಮಸ್ಯೆಗಳಿಗೆ ಒಂದು ಉದಾಹರಣೆ ಅಷ್ಟೇ. ರಾತ್ರಿ 10ರ ಬಳಿಕವೂ ಕಿವಿಗಡಚಿಕ್ಕುವಂತೆ ಧ್ವನಿ ವರ್ಧಕಗಳ ಬಳಸುವುದು, ಪ್ರವಾಸಿಗರು ಪಾನಮತ್ತರಾಗಿ ನೆರೆ–ಹೊರೆಯವರಿಗೆ ಕಿರಿಕಿರಿ ಉಂಟುಮಾಡುವ ಪ್ರಸಂಗಗಳು ಪದೇ ಪದೇ ಮರುಕಳಿಸುತ್ತಿವೆ.

> **ಅನಧಿಕೃತ ಹೋಮ್ ಸ್ಟೇಗಳಿಂದಾಗಿ ಪರವಾನಗಿ ಪಡೆದು ಹೋಮ್‌ಸ್ಟೇ ನಡೆಸುವವರಿಗೂ ಕೆಟ್ಟಹೆಸರು. ಸರ್ಕಾರ ಇಂತಹವುಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಿ**
> **ಎನ್.ಆರ್.ತೇಜಸ್ವಿ,** ಚಿಕ್ಕಮಗಳೂರು ಜಿಲ್ಲೆ ಹೋಮ್ ಸ್ಟೇ ಅಸೋಸಿಯೇಷನ್ ಅಧ್ಯಕ್ಷ

ಅಕ್ರಮ ಮುಚ್ಚಿ ಹಾಕಲು ಕಳ್ಳದಾರಿ

ರಾಜ್ಯದಲ್ಲಿ 'ಹೋಂ ಸ್ಟೇ' ಬದಲು 'ಅತಿಥಿ ಗೃಹ'ಗಳು (ಗೆಸ್ಟ್ ಹೌಸ್) ವ್ಯಾಪಕವಾಗಿವೆ. ಅತಿಥಿ ಗೃಹ ನಡೆಸಲು ಪ್ರವಾಸೋದ್ಯಮ ಇಲಾಖೆಯ ಅನುಮತಿಯ ಅಗತ್ಯವಿಲ್ಲ. ಅದೊಂದು ರೀತಿ, ಮನೆಯನ್ನು ವಸತಿ ಉದ್ದೇಶಕ್ಕೆ ಬಾಡಿಗೆಗೆ ನೀಡಿದಂತೆ. ಅವುಗಳಿಗೆ ಸ್ಥಳೀಯ ಸಂಸ್ಥೆಗಳಿಂದ ವಿಶೇಷ ಪರವಾನಗಿ ಪಡೆಯುವ ಅಗತ್ಯವಿಲ್ಲ. ಅತಿಥಿ ಗೃಹದಿಂದ ಗಳಿಸುವ ವರಮಾನಕ್ಕೆ ಜಿಎಸ್‌ಟಿ ಕಟ್ಟಬೇಕಾಗಿಲ್ಲ. 'ಹೋಂ ಸ್ಟೇ' ನಡೆಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿ ತಿಂಗಳಾನು ಗಟ್ಟಲೆ ಕಾಯುವ ಪ್ರಮೇಯವೂ ಎದುರಾಗದು' ಎಂದು ಪ್ರವಾಸೋದ್ಯಮ ಚಟುವಟಿಕೆಗಳ ಆಳಗಲವನ್ನು ಬಲ್ಲವರು ಕಳ್ಳ ದಾರಿಯನ್ನು ವಿವರಿಸಿದರು.

4ನೇ ಪುಟ ನೋಡಿ

ಬಿರುಸು ಮಳೆ ತಂಪಾದ ಇಳೆ

ಪ್ರಜಾವಾಣಿ ವಾರ್ತೆ

ಮೈಸೂರು/ಹುಬ್ಬಳ್ಳಿ: ರಾಜ್ಯದ ಹಲವು ಜಿಲ್ಲೆಗಳಲ್ಲಿ ಶನಿವಾರ ಗುಡುಗು, ಸಿಡಿಲಿನ ಬಿರುಸಾದ ಮಳೆ ಸುರಿದಿದೆ. ಬಿಸಿಲಿನಿಂದ ಬಸವಳಿದಿದ್ದ ಜನರಿಗೆ ತಂಪಾದ ವಾತಾವರಣವು ಹರ್ಷ ತಂದಿದೆ. ಬಹುತೇಕ ಕಡೆ ಜನರು ಮಳೆ ಕಂಡು ಸಂಭ್ರಮಿಸಿದ್ದಾರೆ.

ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ಬಳ್ಳಾರಿ, ವಿಜಯನಗರ, ವಿಜಯಪುರ, ಗದಗ, ಚಿತ್ರದುರ್ಗ ಜಿಲ್ಲೆಯಲ್ಲಿ ಉತ್ತಮ ಮಳೆ ಸುರಿಯಿತು. ಮೈಸೂರು ಭಾಗದ ಮೈಸೂರು, ಹಾಸನ, ಚಾಮರಾಜನಗರ, ಮಂಡ್ಯ ಹಾಗೂ ಕೊಡಗಿನಲ್ಲಿ ಶುಕ್ರವಾರ ರಾತ್ರಿ ಮತ್ತು ಶನಿವಾರ ಬಿರುಸಿನ ಮಳೆಯಾಗಿದೆ. ರೈತರು ಕೃಷಿ ಚಟುವಟಿಕೆಗೆ ಸಿದ್ಧತೆ ಕೈಗೊಂಡಿದ್ದಾರೆ.

ಹುಬ್ಬಳ್ಳಿಯಲ್ಲಿ ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣ ವಿತ್ತು. ಮಧ್ಯಾಹ್ನ 3.30ರ ಸುಮಾರಿಗೆ ಧಾರಾಕಾರವಾಗಿ ಸುರಿಯತೊಡಗಿದ ಮಳೆಯು ರಾತ್ರಿ 8ರ ನಂತರವೂ ಮುಂದುವರೆಯಿತು. ಬಿರುಗಾಳಿ, ಗುಡುಗು, ಸಿಡಿಲಿನ ಆರ್ಭಟ ಸಹಿತ ಸುರಿದ ಮಳೆಯು ಇಡೀ ವಾತಾವರಣ ಹಿತಕರಗೊಳಿಸಿತು.

7ನೇ ಪುಟ ನೋಡಿ

ಒಳ ಪುಟಗಳಲ್ಲಿ

ಅಫ್ಗಾನಿಸ್ತಾನದಲ್ಲಿ ಭಾರಿ ಮಳೆ: 300ಕ್ಕೂ ಹೆಚ್ಚು ಸಾವು 8

ಜಮ್ಮು: ಆರು ಕಡೆ ಎನ್‌ಐಎ ಶೋಧ 9
ಎಲ್‌ಐಸಿ ಪ್ರೀಮಿಯಂ ಸಂಗ್ರಹ ದಶಕದಲ್ಲೇ ಗರಿಷ್ಠ ದಾಖಲೆ 8

ಬಿಜೆಪಿ ಅಭ್ಯರ್ಥಿಗಳು: ಪದವೀಧರರ ಕ್ಷೇತ್ರ


ಅ. ದೇವೇಗೌಡ — ಬೆಂಗಳೂರು

ಅಮರನಾಥ ಪಾಟೀಲ — ಈಶಾನ್ಯ


ಡಾ.ಧನಂಜಯ ಸರ್ಜಿ — ನೈರುತ್ಯ

ಶಿಕ್ಷಕರ ಕ್ಷೇತ್ರ

ನಾರಾಯಣಸ್ವಾಮಿ — ಆಗ್ನೇಯ

ಈ.ಸಿ.ನಿಂಗರಾಜು — ದಕ್ಷಿಣ

ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಅವರು ನೈರುತ್ಯ ಶಿಕ್ಷಕರ ಕ್ಷೇತ್ರದ ಹಾಲಿ ಸದಸ್ಯರು. ಈ ಬಾರಿ ಅವರಿಗೆ ಟಿಕೆಟ್ ಸಿಗುವ ಸಾಧ್ಯತೆ ಇದೆ.

ಬಿಜೆಪಿ ಗೆದ್ದರೆ ನೇಪಥ್ಯಕ್ಕೆ ಯೋಗಿ ಆದಿತ್ಯನಾಥ: ಕೇಜ್ರಿವಾಲ್

'ಮೋದಿ ಅಲ್ಲ, ಶಾ ಪ್ರಧಾನಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮುಂದಿನ ವರ್ಷ 75 ವರ್ಷ ವಯಸ್ಸಾಗಲಿದ್ದು, ಅವರು ಯೋಗಿ ಆದಿತ್ಯನಾಥ ಸೇರಿದಂತೆ ಬಿಜೆಪಿಯ ಎಲ್ಲ ನಾಯಕರನ್ನು ಬದಿಗೆ ಸರಿಸಿ, ವಿರೋಧ ಪಕ್ಷಗಳ ನಾಯಕರನ್ನು ಜೈಲಿಗೆ ಕಳುಹಿಸಿ, ಅಮಿತ್ ಶಾ ಅವರು ಪ್ರವರ್ಧಮಾನಕ್ಕೆ ಬರಲು ಅನುವು ಮಾಡಿಕೊಡಲಿದ್ದಾರೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದರು.

ಕೇಜ್ರಿವಾಲ್ ಭವಿಷ್ಯ

ಜೈಲಿನಿಂದ ಬಿಡುಗಡೆ ಆಗುತ್ತಿದ್ದಂತೆಯೇ ಚುನಾವಣಾ ಪ್ರಚಾರ ಕಣಕ್ಕೆ ಇಳಿದ ಕೇಜ್ರಿವಾಲ್ ಅವರು ಮೋದಿ ಅವರನ್ನು ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿದರು.

ರೋಡ್‌ಶೋನಲ್ಲಿ ಅರವಿಂದ ಕೇಜ್ರಿವಾಲ್ ಮತ್ತು ಭಗವಂತ ಮಾನ್ –ಪಿಟಿಐ ಚಿತ್ರ

> **ಮೋದಿಗೆ 75 ವರ್ಷ ವಯಸ್ಸಾದ ನಂತರ ನೀವು ಖುಷಿ ಪಡಬೇಕಾಗಿಲ್ಲ ಎಂದು ಅರವಿಂದ ಕೇಜ್ರಿವಾಲ್ ಮತ್ತು ಅವರ ಸಂಗಡಿಗರಿಗೆ ಹೇಳಬಯಸುವೆ. ಮೋದಿ ಅವರು ತಮ್ಮ ಅವಧಿಯನ್ನು ಪೂರ್ಣಗೊಳಿಸುತ್ತಾರೆ**
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು 220ರಿಂದ 230 ಸ್ಥಾನಗಳನ್ನು ಗೆಲ್ಲಲಿದೆ ಎಂದು ಅವರು ಅಂದಾಜಿಸಿದರು.

9ನೇ ಪುಟ ನೋಡಿ

ಪರಿಷತ್: ಬಿಜೆಪಿ 5, ಜೆಡಿಎಸ್ 1ಕಡೆ ಸ್ಪರ್ಧೆ

ಮುಂದುವರಿದ ಮೈತ್ರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನ ಪರಿಷತ್‌ಗೆ ಮೂರು ಪದವೀಧರರ ಹಾಗೂ ಮೂರು ಶಿಕ್ಷಕರ ಕ್ಷೇತ್ರಗಳಿಂದ ನಡೆಯಲಿರುವ ದ್ವೈವಾರ್ಷಿಕ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮುಂದುವರಿಯಲಿದೆ. ಐದು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಬಿಜೆಪಿಯು ಒಂದು ಕ್ಷೇತ್ರವನ್ನು ಮಿತ್ರ ಪಕ್ಷಕ್ಕೆ ಬಿಟ್ಟುಕೊಟ್ಟಿದೆ. ತನ್ನ ಅಭ್ಯರ್ಥಿಗಳ ಹೆಸರುಗಳನ್ನು ಶನಿವಾರ ರಾತ್ರಿ ಪ್ರಕಟಿಸಿದೆ.

ಜೂನ್ 3ರಂದು ವಿಧಾನ ಪರಿಷತ್‌ನ ಆರು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಬೆಂಗಳೂರು ಪದವೀಧರರ ಕ್ಷೇತ್ರ, ಆಗ್ನೇಯ ಶಿಕ್ಷಕರ ಕ್ಷೇತ್ರ, ಈಶಾನ್ಯ ಪದವೀಧರರ ಕ್ಷೇತ್ರ, ನೈರುತ್ಯ ಪದವೀಧರರ ಕ್ಷೇತ್ರ, ದಕ್ಷಿಣ ಶಿಕ್ಷಕರ ಕ್ಷೇತ್ರಗಳಲ್ಲಿ ಬಿಜೆಪಿ ಸ್ಪರ್ಧೆ ಮಾಡಲಿದೆ. ಈ ಪೈಕಿ ಹಾಲಿ ಸದಸ್ಯರಾದ ಅ.ದೇವೇಗೌಡ ಹಾಗೂ ವೈ.ಎ.ನಾರಾಯಣಸ್ವಾಮಿ ಅವರಿಗೆ ಮತ್ತೆ ಟಿಕೆಟ್ ನೀಡಲಾಗಿದೆ. ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್‌ನಿಂದ ಆಯ್ಕೆಯಾಗಿದ್ದ ಮರಿತಿಬ್ಬೇಗೌಡ ಈ ವರ್ಷದ ಮಾರ್ಚ್ 21ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಬಳಿಕ ಕಾಂಗ್ರೆಸ್‌ಗೆ ಸೇರ್ಪಡೆಯಾ-ಗಿದ್ದರು. ಅವರನ್ನು ಕೈ ಪಾಳಯಕ್ಕೆ ಕಣಕ್ಕೆ ಇಳಿಸಲಿದೆ.

ಈ ಕ್ಷೇತ್ರವನ್ನು ತಮ್ಮ ಪಕ್ಷಕ್ಕೆ ಬಿಟ್ಟುಕೊಡುವಂತೆ ಜೆಡಿಎಸ್ ನಾಯಕರು ಮನವಿ ಮಾಡಿದ್ದರು.

5ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ದೇವರಾಜೇಗೌಡ ಬಂಧನ

ಹೊಳೆನರಸೀಪುರ(ಹಾಸನ): ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸೇರಿದ್ದೆನ್ನಲಾದ ಲೈಂಗಿಕ ದೌರ್ಜನ್ಯದ ವಿಡಿಯೊಗಳಿರುವ ಪೆನ್‌ಡ್ರೈವ್ ಹಂಚಿಕೆ ಕುರಿತು ಹೇಳಿಕೆ ನೀಡಿದ್ದ ವಕೀಲ, ಬಿಜೆಪಿ ಮುಖಂಡ ಜಿ. ದೇವರಾಜೇಗೌಡ ಅವರನ್ನು ಲೈಂಗಿಕ ದೌರ್ಜನ್ಯ ಹಾಗೂ ಜಾತಿನಿಂದನೆ ಆರೋಪದ ಮೇರೆಗೆ ಇಲ್ಲಿನ ಪೊಲೀಸರು ಶನಿವಾರ ಬಂಧಿಸಿದ್ದಾರೆ. 5

ಲಡಾಖ್‌ನಲ್ಲಿ ಉತ್ತರ ಧ್ರುವ ಪ್ರಭೆ ವಿಸ್ಮಯ 9

ವಂಡರ್‌ಲಾ
WONDERLA
PARKS AND RESORTS
Summerla
FIESTA
APRIL 6 - MAY 31
ಚಿಲ್ ಮಾಡಿ
TO BOOK, SCAN THE QR CODE
*T&C APPLY
ಜನ್ಮದಿನದ ಕೊಡುಗೆ
ಬೈ 1 ಗೆಟ್ 1 ಫ್ರೀ*
ಮೇ ತಿಂಗಳಲ್ಲಿ ಜನಿಸಿದವರಿಗೆ ಮಾತ್ರ
ಹಾಲ್ ಟಿಕೆಟ್ ಕೊಡುಗೆ
35%* OFF
ವಿದ್ಯಾರ್ಥಿಗಳೇ, ನಿಮ್ಮ ಅಸಲಿ ಹಾಲ್ ಟಿಕೆಟ್ ತೋರಿಸಿ ಮತ್ತು 35% ವರೆಗೂ ರಿಯಾಯಿತಿ ಪಡೆಯಿರಿ
ಈ ಕೊಡುಗೆ ಎಸ್ ಎಸ್ ಎಲ್ ಸಿ, 1st ಪಿಯು & 2nd ಪಿಯು ವಿದ್ಯಾರ್ಥಿಗಳಿಗೆ ಮಾತ್ರ
ಕಾಲೇಜು ಐಡಿ ಆಫರ್
25%* OFF
ನಿಮ್ಮ ಅಸಲಿ ವಿದ್ಯಾರ್ಥಿಗಳ ಐಡಿ ತೋರಿಸಿ 25% ವರೆಗೂ ರಿಯಾಯಿತಿ ಪಡೆಯಿರಿ
(between the ages of 16 - 24 yrs.)
ಆನ್‌ಲೈನ್ ಬುಕಿಂಗ್ ಕೊಡುಗೆ
10%* OFF
ಆನ್‌ಲೈನ್‌ನಲ್ಲಿ 3 ದಿನಗಳ ಮೊದಲು ಬುಕ್ ಮಾಡಿ, 10% ರಿಯಾಯಿತಿ ಪಡೆಯಿರಿ
080 37230333 / 99455 57777
www.wonderla.com
FOR GROUP BOOKINGS & OFFERS, CALL: 96331 96332

ಶುಕ್ರವಾರ ತಡರಾತ್ರಿ ಧಾರಾಕಾರ ಮಳೆ ಪರಿಣಾಮ; ತಗ್ಗುಪ್ರದೇಶದ ನಿವಾಸಿಗಳ ತಪ್ಪದ ಬವಣೆ

ಮನೆಗಳಿಗೆ ನುಗ್ಗಿದ ಒಳಚರಂಡಿ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಶ್ಚಿಮ ಹಾಗೂ ದಕ್ಷಿಣ ಭಾಗದಲ್ಲಿ ಶುಕ್ರವಾರ ತಡರಾತ್ರಿ ಭಾರಿ ಮಳೆಯಾಗಿದ್ದು, ಹಲವು ಪ್ರದೇಶಗಳಲ್ಲಿ ಒಳಚರಂಡಿ ನೀರು ಮನೆಗಳಿಗೆ ನುಗ್ಗಿದೆ.

ಗುಡುಗು, ಮಿಂಚು, ಬಿರುಗಾಳಿಯೊಂದಿಗೆ ಸುಮಾರು ಒಂದೂವರೆ ಗಂಟೆ ಭಾರಿ ಮಳೆಯಾಗಿದೆ. ರಾಜರಾಜೇಶ್ವರಿನಗರ ವಲಯದ ಹೇರೋಹಳ್ಳಿ, ಕೆಂಗೇರಿ, ಪೀಣ್ಯ ಕೈಗಾರಿಕೆ ಪ್ರದೇಶ, ಜ್ಞಾನಭಾರತಿ ಸುತ್ತಲಿನ ಪ್ರದೇಶಗಳಲ್ಲಿ 6 ಸೆಂಟಿಮೀಟರ್‌ನಿಂದ 9 ಸೆಂಟಿಮೀಟರ್‌ನಷ್ಟು ಮಳೆಯಾಗಿದೆ.

ಹೊಸಕೆರೆಹಳ್ಳಿ ಸಮೀಪದ ಪುಷ್ಪಗಿರಿ ಪ್ರದೇಶದಲ್ಲಿ ಒಳಚರಂಡಿ ನೀರು ಮನೆಗಳಿಗೆ ನುಗ್ಗಿ ನಿವಾಸಿಗಳು ರಾತ್ರಿಯಿಡೀ ಪರಿತಪಿಸಿದರು. 'ಈ ಪ್ರದೇಶದಲ್ಲಿ ಒಳಚರಂಡಿ ಮಾರ್ಗದಲ್ಲಿ ಸಮಸ್ಯೆಗಳಿವೆ. ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ' ಎಂದು ಸ್ಥಳೀಯ ನಿವಾಸಿಗಳು ದೂರಿದರು.

ಧಾರಾಕಾರವಾಗಿ ಮಳೆ ಸುರಿದಿದ್ದರಿಂದ, ಹಲವು ರಸ್ತೆಗಳಲ್ಲಿ ಮಳೆ ನೀರು ಹೆಚ್ಚಾಗಿ ನಿಂತಿತ್ತು. ವಾಹನಗಳ ಒಳಗೂ ನೀರು ನುಗ್ಗಿತು. ಮೈಸೂರು ರಸ್ತೆ, ಪೀಣ್ಯ ಮುಖ್ಯರಸ್ತೆ, ನಾಯಂಡಹಳ್ಳಿಯಲ್ಲಿ ಸಂಚಾರ ನಿಧಾನಗತಿಯಲ್ಲಿತ್ತು.

ನಗರದ ವಿವಿಧ ಕಡೆಗಳಲ್ಲಿ ಗಾಳಿ ಮಳೆಯಿಂದಾಗಿ ಸುಮಾರು ಒಂದು ತಾಸು ವಿದ್ಯುತ್ ಸರಬರಾಜು ಸ್ಥಗಿತಗೊಂಡಿತು.

ಕೆಲವು ಅಪಾರ್ಟ್‌ಮೆಂಟ್‌ಗಳಲ್ಲಿ ವಾಹನ ಪಾರ್ಕಿಂಗ್ ಜಾಗವು ಜಲಾವೃತಗೊಂಡವು. ಕಾಂಪೌಂಡ್ ಕುಸಿದು ಬಿದ್ದವು. ಆರ್.ಆರ್. ನಗರ ರಸ್ತೆಯಲ್ಲಿ ಪೆಟ್ರೋಲ್ ಬಂಕ್‌ಗೆ ನೀರು ನುಗ್ಗಿತು.

ಹೊಸಕೆರೆಹಳ್ಳಿ ಸಮೀಪದ ಪುಷ್ಪಗಿರಿ ಪ್ರದೇಶದಲ್ಲಿ ಮನೆಗೆ ನುಗ್ಗಿದ್ದ ಒಳಚರಂಡಿ ನೀರನ್ನು ಮಹಿಳೆ ಹೊರ ಹಾಕಿದರು

ಶುಕ್ರವಾರ ರಾತ್ರಿ ಸುರಿದ ಮಳೆ ಪ್ರಮಾಣ (ಸೆಂ.ಮೀ)

ಹೇರೋಹಳ್ಳಿ	9.25	ವಿದ್ಯಾಪೀಠ	5.15
ಕೆಂಗೇರಿ	9.15	ಉತ್ತರಹಳ್ಳಿ	4.55
ಹೆಗ್ಗನಹಳ್ಳಿ	6.25	ಹಂಪಿನಗರ	4.25
ಪೀಣ್ಯ ಕೈಗಾರಿಕೆ ಪ್ರದೇಶ	6.25	ಗಾಳಿ ಆಂಜನೇಯ ದೇವಸ್ಥಾನ	4.25
ಜ್ಞಾನಭಾರತಿ ವಿವಿ ಆವರಣ	6.2	ಯಲಹಂಕ	3.9
ಹೆಮ್ಮಿಗೆಪುರ	6.2	ಬ್ಯಾಟರಾಯನಪುರ	3.8
ನಾಯಂಡಹಳ್ಳಿ	6.2	ಜಕ್ಕೂರು	3.8
ರಾಜರಾಜೇಶ್ವರಿನಗರ	6.15	ಅಗ್ರಹಾರ ದಾಸರಹಳ್ಳಿ	3.35
ಜ್ಞಾನಭಾರತಿ ವಾರ್ಡ್	6.15	ಕೊಟ್ಟಿಗೆಪಾಳ್ಯ	3.35
ಎಚ್.ಗೊಲ್ಲಹಳ್ಳಿ	5.8	ನಂದಿನಿ ಲೇಔಟ್	3
ನಾಗರಬಾವಿ	5.2	ಎಚ್‌ಎಂಟಿ ವಾರ್ಡ್	3
ಮಾರುತಿ ಮಂದಿರ	5.2	ಕೊಡಿಗೇಹಳ್ಳಿ	3
ಬಸವನಗುಡಿ	5.15	ರಾಧಾಕೃಷ್ಣ ದೇವಸ್ಥಾನ ವಾರ್ಡ್	3
ಕುಮಾರಸ್ವಾಮಿ ಲೇಔಟ್	5.15		

ಬಿಬಿಎಂಪಿ ಅರಣ್ಯ ವಿಭಾಗ ಕಾರ್ಯಾಚರಣೆ: ನಗರದಲ್ಲಿ 256 ಮರ ತೆರವು

ಬೆಂಗಳೂರು: ನಗರದಲ್ಲಿ ಮೇ 6ರಿಂದ ಮೇ 10ರವರೆಗೆ ಮಳೆ–ಗಾಳಿಗೆ ಧರೆಗುರುಳಿದ 256 ಮರಗಳು ಹಾಗೂ 427 ರೆಂಬೆ–ಕೊಂಬೆಗಳನ್ನು ಬಿಬಿಎಂಪಿ ಅರಣ್ಯ ವಿಭಾಗವು ತೆರವುಗೊಳಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆಗಾಲದ ವೇಳೆ ಧರೆಗುರುಳುವ ಮರ, ರೆಂಬೆ/ಕೊಂಬೆಗಳ ತೆರವಿಗೆ 'ಮರ ಕಟಾವು' ತಂಡಗಳು ಕಾರ್ಯನಿರ್ವಹಿಸುತ್ತಿದ್ದು, ನಿಗದಿತ ಕಾಲಮಿತಿಯೊಳಗಾಗಿ ತೆರವುಗೊಳಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಪಾಲಿಕೆಯ ನಿಯಂತ್ರಣ ಕೊಠಡಿಗಳಿಗೆ ಮರ, ರೆಂಬೆಗಳು ಬಿದ್ದ ಬಗ್ಗೆ ದೂರುಗಳು ಬಂದ ಕೂಡಲೇ, ಆಯಾ ವಲಯದ ಅಧಿಕಾರಿಗಳಿಗೆ ಮಾಹಿತಿ ನೀಡಲಾಗುತ್ತದೆ. ಆನಂತರ ಅಧಿಕಾರಿಗಳು ಸ್ಥಳಕ್ಕೆ ಮರ ಕಟಾವು ತಂಡಗಳನ್ನು ಕಳುಹಿಸಿ ಧರೆಗುರುಳಿದ ಮರಗಳನ್ನು ಕಟಾವು ಮಾಡಿ ನಾಗರಿಕರು/ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಿದ್ದಾರೆ.

ಮರ, ರೆಂಬೆ–ಕೊಂಬೆ ತೆರವು

ದಿನ	ಮರ ಬಿದ್ದಿರುವ ದೂರು	ಮರ ತೆರವು	ರೆಂಬೆ ಬಿದ್ದಿರುವ ದೂರು	ರೆಂಬೆ ತೆರವು
ಮೇ 6	126	126	120	120
ಮೇ 8	70	70	123	123
ಮೇ 9	44	44	146	131
ಮೇ 10	31	16	94	53
ಒಟ್ಟು	271	256	483	427

39 ಮರ ಕಟಾವು ತಂಡ: ಪಾಲಿಕೆ ವ್ಯಾಪ್ತಿಯ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ 28 ಮರ ಕಟಾವು ತಂಡಗಳು ಕಾರ್ಯನಿರ್ವಹಿಸುತ್ತಿವೆ. ಜೊತೆಗೆ ತುರ್ತಾಗಿ ಮರಗಳನ್ನು ತೆರವುಗೊಳಿಸಲು ಹೆಚ್ಚುವರಿಯಾಗಿ 11 ತಂಡಗಳನ್ನು ನಿಯೋಜನೆ ಮಾಡಿಕೊಳ್ಳಲಾಗಿದೆ. ಪ್ರತಿ ತಂಡದಲ್ಲೂ ಏಳು ಕಾರ್ಮಿಕರು, ಒಬ್ಬರು ಮೇಲ್ವಿಚಾರಕರು ಇದ್ದಾರೆ. ಮರ, ರೆಂಬೆ ತೆರವಿಗೆ ಅಗತ್ಯವಿರುವ ಪರಿಕರಗಳು, ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

5 ಬೈಕ್ ತಂಡ: ಬಿದ್ದ ಮರಗಳ ತೆರವಿಗೆ ಈ ಬಾರಿ 5 ಬೈಕ್ (ದ್ವಿಚಕ್ರ ತಂಡ) ತಂಡಗಳನ್ನು ನಿಯೋಜಿಸಿಕೊಳ್ಳಲಾಗಿದೆ. ತುರ್ತಾಗಿ ಮರಗಳನ್ನು ತೆಗೆಯಬೇಕಾದ ಸ್ಥಳಗಳಿಗೆ ಬೈಕ್ ತಂಡಗಳು ತೆರಳಿ ಕಾರ್ಯನಿರ್ವಹಿಸಲಿವೆ.

ಅಲ್ಲದೆ, ತ್ವರಿತಗತಿಯಲ್ಲಿ ತೆರವುಗೊಳಿಸಲು ಪಾಲಿಕೆಯ ಅರಣ್ಯ ವಿಭಾಗವು 2 ಕ್ರೇನ್, 2 ಜೆಸಿಬಿಗಳು, ಮರಗಳ ಸಾಗಣೆಗೆ 8 ಟ್ರ್ಯಾಕ್ಟರ್‌ಗಳನ್ನು ಸಜ್ಜಾಗಿರಿಸಲಾಗಿದೆ. ತೆರವುಗೊಳಿಸಿದ ದಿಮ್ಮಿಗಳು, ರೆಂಬೆ, ಕೊಂಬೆಗಳ ವಿಲೇವಾರಿಗಾಗಿ ವಲಯಾವಾರು ಒಂಟು 8 ಡಂಪಿಂಗ್ ಯಾರ್ಡ್ ಇವೆ. ಅಲ್ಲದೆ, ಹೆಚ್ಚುವರಿಯಾಗಿ ತಾತ್ಕಾಲಿಕವಾಗಿ 6 ಕಡೆ ಡಂಪಿಂಗ್ ಯಾರ್ಡ್ ಗುರುತಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.



RAMRAJ COTTON SHOWROOMS

BANGALORE : KG ROAD • SHIVAJI NAGAR • ULSOOR • GANDHI BAZAR • MALLESHWARAM • JAYANAGAR : 30TH CROSS ROAD • SS PLAZA, 10TH B MAIN ROAD KORAMANGALA • RAJAJI NAGAR • R.T. NAGAR • VIJAYANAGAR • BANASHANKARI • YESHWANTHPUR • YELACHENAHALLI • UTTARAHALLI • HSR LAYOUT RAMAMURTHY NAGAR • J.P. NAGAR • RR NAGAR • MARATHAHALLI • KR PURAM • KENGERI • HESARAGATTA • YELHANKA • NELAMANGALA • DEVANAHALLI CHINTAMANI • KANAKAPURA • RAMNAGARA • TUMKUR • CHANDAPURA • CHAMBENAHALLI (SARJAPURA MAIN ROAD)

Available at Ramraj Cotton Showrooms and All Leading Textile Shops | shop online @ www.ramrajcotton.in

ಮಲಬಾರ್: ಬ್ರೈಡ್ಸ್ ಆಫ್ ಇಂಡಿಯಾ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ಚಿನ್ನ ಮತ್ತು ವಜ್ರದ ಆಭರಣಗಳ ಮಾರಾಟ ಕಂಪನಿಯಾದ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್, ನಗರದ ಎಂ.ಜಿ. ರಸ್ತೆಯಲ್ಲಿ ಇರುವ ಮಳಿಗೆಯಲ್ಲಿ 'ಬ್ರೈಡ್ಸ್ ಆಫ್ ಇಂಡಿಯಾ' ಪ್ರದರ್ಶನ ಏರ್ಪಡಿಸಿದೆ. ಇದೇ 19ರವರೆಗೆ ಈ ಪ್ರದರ್ಶನವಿದೆ. ವಧುವಿನ ಸೌಂದರ್ಯವನ್ನು ಇಮ್ಮಡಿಗೊಳಿಸುವಂತಹ ಚಿನ್ನ ಮತ್ತು ವಜ್ರಾಭರಣಗಳ ಸಂಗ್ರಹವಿದೆ ಎಂದು ಕಂಪನಿ ತಿಳಿಸಿದೆ.

ನಿಶ್ಚಿತಾರ್ಥದ ಉಂಗುರ, ಮಾಂಗಲ್ಯಗಳ ಸಂಗ್ರಹವಿದೆ. ಮದುವೆ ಸಮಾರಂಭಕ್ಕೆ ಅಗತ್ಯವಿರುವ ಚಿನ್ನ, ವಜ್ರ, ಪೋಲ್ಕಿ, ರತ್ನದ ಹರಳುಗಳು ಲಭ್ಯವಿದೆ. ಮೈನ್ ಡೈಮಂಡ್ಸ್, ಎರಾ ಅನ್‌ಕಟ್ ಡೈಮಂಡ್ಸ್, ಪ್ರೆಸಿಯಾ ಜೆಮ್‌ಸ್ಟೋನ್ ಜ್ಯುವೆಲ್ಲರಿ, ಡಿವೈನ್ ಇಂಡಿಯನ್ ಹೆರಿಟೇಜ್ ಸೇರಿ ಪ್ರತಿಯೊಂದು ಸಂದರ್ಭಕ್ಕೂ ಒಪ್ಪುವಂತಹ ವಿಭಿನ್ನ ವಿನ್ಯಾಸದ ಆಭರಣಗಳ ಸಂಗ್ರಹವಿದೆ ಎಂದು ತಿಳಿಸಿದೆ.

2,137 ಅನಧಿಕೃತ ಸಂಪರ್ಕ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಒಳಚರಂಡಿ ಮಾರ್ಗ ಹಾಗೂ ಮಳೆನೀರು ಹರಿಯುವ ರಾಜಕಾಲುವೆಗೆ ತ್ಯಾಜ್ಯ ನೀರು ಹರಿಸುತ್ತಿರುವ 2,137 ಅನಧಿಕೃತ ಸಂಪರ್ಕಗಳನ್ನು ಜಲಮಂಡಳಿ ಪತ್ತೆ ಹಚ್ಚಿದೆ. ದಂಡ ವಿಧಿಸಲು ನೋಟಿಸ್ ಜಾರಿ ಮಾಡುತ್ತಿದೆ.

ಅನಧಿಕೃತ ಸಂಪರ್ಕಗಳನ್ನು ಸಕ್ರಮಗೊಳಿಸಿಕೊಳ್ಳಲು ಮೇ 10ರವರೆಗೆ ಗಡುವು ನೀಡಲಾಗಿತ್ತು. ಗಡುವು ಮುಗಿದ ಕಾರಣ ಸೋಮವಾರದಿಂದ ಕಠಿಣ ಕ್ರಮ ಕೈಗೊಳ್ಳಲು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

'ಕೆಲವೆಡೆ ಅನಧಿಕೃತವಾಗಿ ತ್ಯಾಜ್ಯ ನೀರನ್ನು ಒಳಚರಂಡಿಗೆ ಹರಿಸಲಾಗುತ್ತಿದೆ. ಇದರಿಂದ ಹಲವೆಡೆ ರಸ್ತೆಗಳಲ್ಲಿ ತ್ಯಾಜ್ಯ ನೀರು ಹರಿಯುವ ಸಾಧ್ಯತೆ ಹೆಚ್ಚಾಗುತ್ತದೆ. ಇದು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಆಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನಧಿಕೃತ ಸಂಪರ್ಕಗಳ ಪರಿಶೀಲನೆ ಕಾರ್ಯ ಚುರುಕುಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ನಗರದಲ್ಲಿ 17,793 ಕಡೆಗಳಲ್ಲಿ ಸರ್ವೆ ನಡೆಸಲಾಗಿದೆ. 587 ಅಪಾರ್ಟ್‌ಮೆಂಟ್‌ಗಳನ್ನು ಒಳಗೊಂಡಂತೆ ಅನಧಿಕೃತವಾಗಿ ಸಂಪರ್ಕ ಪಡೆದಿರುವ 2,137 ಸಂಪರ್ಕ ಗುರುತಿಸಲಾಗಿದೆ. ಇವುಗಳಲ್ಲಿ 260 ಸಂಪರ್ಕಗಳ ಸಕ್ರಮಕ್ಕೆ ಅರ್ಜಿ ಸಲ್ಲಿಸಿವೆ. 149 ಸಂಪರ್ಕಗಳಿಗೆ ಡಿಮ್ಯಾಂಡ್ ನೋಟಿಸ್ ಜಾರಿಗೊಳಿಸಿದ್ದು, 60 ಸಂಪರ್ಕಗಳಿಂದ ದಂಡ ವಸೂಲು ಮಾಡಲಾಗಿದೆ. 1,390 ಸಂಪರ್ಕಗಳಿಗೆ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

'ಅನಧಿಕೃತವಾಗಿ ತ್ಯಾಜ್ಯ ನೀರಿನ ವಿಲೇವಾರಿ ಹಾಗೂ ಮಳೆಗಾಲದಲ್ಲಿ ಅನಧಿಕೃತ ಸಂಪರ್ಕಗಳಿಂದ ಬರುವಂತಹ ತ್ಯಾಜ್ಯ ನೀರಿನಿಂದ ಒಳಚರಂಡಿ ವ್ಯವಸ್ಥೆಯ ಮೇಲೆ ಒತ್ತಡ ಹೆಚ್ಚಲಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ಅನಧಿಕೃತ ಸಂಪರ್ಕಗಳ ಸಕ್ರಮಕ್ಕೆ ಸ್ವಯಂಪ್ರೇರಿತರಾಗಿ ಮುಂದಾಗಬೇಕು. ಇಲ್ಲದಿದ್ದಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು' ಎಂದು ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಕಾನೂನು ಕಾಲೇಜು ವಿವರ ಪ್ರಕಟಣೆ: ಬಿಸಿಐಗೆ ನಿರ್ದೇಶನ

ಬೆಂಗಳೂರು: 'ಕಾನೂನು ಕಾಲೇಜುಗಳ ಹೆಸರು, ಅವುಗಳ ಮಾನ್ಯತೆ ಸೇರಿದಂತೆ ಎಲ್ಲ ವಿವರಗಳನ್ನೂ, ಭಾರತೀಯ ವಕೀಲರ ಪರಿಷತ್ (ಬಿಸಿಐ) ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು' ಎಂದು ಹೈಕೋರ್ಟ್ ಬಿಸಿಐಗೆ ನಿರ್ದೇಶಿಸಿದೆ.

ಈ ಸಂಬಂಧ ಬಿಎಂಎಸ್ ಕಾನೂನು ಕಾಲೇಜು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ನಿರ್ದೇಶನ ನೀಡಿದೆ.

ಬಿಸಿಐ 2023ರ ಮೇ 15ರಂದು ಪ್ರಕಟಿಸಿದ ಮಾನ್ಯತೆ ನವೀಕರಿಸಿದ ಕಾನೂನು ಕಾಲೇಜುಗಳ ಪಟ್ಟಿಯಲ್ಲಿ ಬಿಎಂಎಸ್ ಕಾಲೇಜಿನ ಹೆಸರು ನಮೂದು ಆಗಿರಲಿಲ್ಲ.

ನಿಧನ ವಾರ್ತೆ

ಚಂದ್ರಶೇಖರ್

ಬೆಂಗಳೂರು: ಉತ್ತರಹಳ್ಳಿಯ ಎಜಿಎಸ್ ಬಡಾವಣೆಯ ಚಂದ್ರಶೇಖರ್ (63) ಅವರು ಶನಿವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ.

ಸಂತ ಅಂತೋಣಿ ಚರ್ಚ್‌ನಲ್ಲಿ ಭಾನುವಾರ ಮಧ್ಯಾಹ್ನ ಪೂಜಾವಿಧಿಗಳು ನಡೆಯಲಿವೆ ಎಂದು ಕುಟುಂಬದವರು ತಿಳಿಸಿದ್ದಾರೆ. ಸಂಪರ್ಕ: 94483 06518.

ಬಿ. ಸುಬ್ಬರಾವ್

ಬೆಂಗಳೂರು: ಕಾಫಿ ಬೋರ್ಡ್‌ನ ನಿವೃತ್ತ ನೌಕರ ಬಿ.ಸುಬ್ಬರಾವ್ (99) ಬಸವೇಶ್ವರ ನಗರದಲ್ಲಿರುವ ಸ್ವಗೃಹದಲ್ಲಿ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರಿ, ಇಬ್ಬರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ಚಾಮರಾಜಪೇಟೆಯ ಟಿ.ಆರ್. ಮಿಲ್ಸ್ ಚಿತಾಗಾರದಲ್ಲಿ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

REGIONAL INSTITUTE OF EDUCATION

National Council of Educational Research and Training, New Delhi
Ministry of Education, Government of India, MYSURU - 570006
Email: principal@riemysore.ac.in, website: www.riemysore.ac.in

WALK-IN-INTERVIEW

The Regional Institute of Education, Mysuru will conduct Walk-in-Interview on the dates as shown against each post purely on contractual basis for the Academic Session 2024-25.

Sl. No.	Name of the Posts	Date of Interviews
1	PGT's & Lab Assistant in Computer Science	20th May, 2024
2	TGT's	21st May, 2024
3	WET's	22nd May, 2024
4	PRT's, Lab Assistants & Semi-Professional Assistant	24th May, 2024

For more details please log on to www.riemysore.ac.in

Principal

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಅಂಗವಾಗಿ ರ‍್ಯಾಲಿ: ಉದ್ಘಾಟನೆ: ಜಿ.ಪರಮೇಶ್ವರ್, ಡಾ.ಶರಣಪ್ರಕಾಶ ಪಾಟೀಲ, ಅಧ್ಯಕ್ಷತೆ: ಬಸವರಾಜ ಹೊರಟ್ಟಿ, ಅತಿಥಿಗಳು: ಐವನ್ ನಿಗ್ಲಿ, ಶಿವಕುಮಾರ್, ಕಮಲಾ, ತೋಸೇಂದ್ರ ದ್ವಿವೇದಿ, ಐ.ಕ್ಲೆಮೆಂಟ್, ಆಯೋಜನೆ: ಫ್ಲಾರೆನ್ಸ್ ನೈಂಟಿಂಗಲ್ ಅವಾರ್ಡ್ ಸಮಿತಿ, ಸ್ಥಳ: ವಿಧಾನಸೌಧದ ಮುಂಭಾಗ, ಬೆಳಿಗ್ಗೆ 7

ಮಂಗಳ ಎಂ.ನಾಡಿಗ್ ಅವರ 'ಪ್ರೀತಿಯ ಚಿಟ್ಟೆಯ ಬೆನ್ನೇರಿ', ಸುತ್ತ ಮುತ್ತ' ಪುಸ್ತಕಗಳ ಬಿಡುಗಡೆ: ಬಿ.ಆರ್. ಲಕ್ಷ್ಮಣರಾವ್, ಅತಿಥಿಗಳು: ಚಿಂತಾಮಣಿ ಕೊಡ್ಲೆಕೆರೆ, ನಾ. ದಾಮೋದರ ಶೆಟ್ಟಿ, ರತೀಶ ಬಿ.ಆರ್., ಆಯೋಜನೆ: ಹರಿವು ಬುಕ್ಸ್, ನ್ಯೂ ವೇವ್ ಬುಕ್ಸ್, ಸ್ಥಳ: ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ಬಿ.ಆರ್ ಲಕ್ಷ್ಮಣರಾವ್

ಗಣಪತಿ ಆರ್. ಭಟ್ ಅವರ 'ಕನ್ನಡದಲ್ಲಿ ಶ್ರೀ ಶಂಕರ' ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್, ಅತಿಥಿಗಳು: ಜಿ.ಬಿ. ಹರೀಶ, ಶತಾವಧಾನಿ ಆರ್. ಗಣೇಶ್, ಆಯೋಜನೆ: ಅಯೋಧ್ಯಾ ಪಬ್ಲಿಕೇಷನ್ಸ್, ಸ್ಥಳ: ನಾಣಿ ಸಭಾಂಗಣ, ಸುಚಿತ್ರ ಫಿಲ್ಮ್ ಸೊಸೈಟಿ, ಬಿ.ವಿ. ಕಾರಂತ್ ರಸ್ತೆ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

2023–24ನೇ ಸಾಲಿನ ವಿದ್ಯಾರ್ಥಿವೇತನ ವಿತರಣಾ ಸಮಾರಂಭ: ಉದ್ಘಾಟನೆ: ಎಂ.ಕೆ. ನಾಯ್ಡು, ಅಧ್ಯಕ್ಷತೆ: ಎಂ. ನಾಗರಾಜ್, ಅತಿಥಿ: ಎಚ್.ಟಿ. ಮೋಹನದಾಸ್, ಸನ್ಮಾನ: ಜ್ಞಾನವಿ, ಆಯೋಜನೆ: ಬೆಂಗಳೂರು ಈಡಿಗರ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳ ಸಂಘ, ಸ್ಥಳ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ಈಡಿಗ ಭವನ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 10.30

ತಾಯಂದಿರ ದಿನಾಚರಣೆ ಪ್ರಯುಕ್ತ ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ರತ್ನಾರಾವ್, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಅತಿಥಿಗಳು: ಮಲ್ಲಿಕಾರ್ಜುನಯ್ಯ ವಿ., ವಿ. ರೇಣುಕಾಪ್ರಸನ್ನ, ಉಪಸ್ಥಿತಿ: ನಾಗೇಶ್ ಡಿ. ಪಾಟಕ್, ಕುವರ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ಶಾಂತಾ ಕೆ. ನಾಗರಾಜ್, ಲಕ್ಷ್ಮೀನರಸಿಂಹ ಎಚ್.ಕೆ., ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

'57ನೇ ಗೋಲ್ಡ್ ಮೆಡಲ್ ಅವಾರ್ಡ್ಸ್' ಸಮಾರಂಭ: ಅತಿಥಿಗಳು: ಕೆ.ರಘು, ಬಿ.ಎಸ್.ಅರುಣ್ ಕುಮಾರ್, ಆಯೋಜನೆ ಮತ್ತು ಸ್ಥಳ: ವಾಸವಿ ಯೂನಿಯನ್ ಚಾರಿಟಬಲ್ ಟ್ರಸ್ಟ್, ಸ್ಥಳ: ವಾಸವಿ ವಿದ್ಯಾನಿಕೇತನ ಆವರಣ, ವಾಣಿವಿಲಾಸ ರಸ್ತೆ, ವಿ.ವಿ.ಪುರ, ಬೆಳಿಗ್ಗೆ 10.30

ಸಾ.ನಾ.ರಮೇಶ ಅವರ 'ನನಸುಗಾರನ ಸ್ವಗತ– ಸಾಗಿ ಸರಿದ ಬದುಕಿನ ಸ್ಮರಣೆಗಳು' ಪುಸ್ತಕ ಬಿಡುಗಡೆ: ಎಲ್.ಎನ್. ಮುಕುಂದರಾಜ್, ಪುಸ್ತಕ ಪರಿಚಯ: ಯೋಗೇಶ್ ಮಾಸ್ಟರ್, ಅಧ್ಯಕ್ಷತೆ: ಡಾ. ವಸುಂಧರಾ ಭೂಪತಿ, ಆಯೋಜನೆ: ರಾಜಮಾರ್ಗ ಸಾಹಿತ್ಯ ಸಂಸ್ಕೃತಿ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30


ಎಲ್.ಎನ್. ಮುಕುಂದರಾಜ್

ಶಂಕರ ಜಯಂತಿ ಮತ್ತು 52ನೇ ವರ್ಷದ ಸುವರ್ಣ ಮಹೋತ್ಸವ ಸಂಗೀತೋತ್ಸವದ ಸಮಾರೋಪ, ಪ್ರಶಸ್ತಿ ಪ್ರದಾನ: ಅತಿಥಿ: ಆರ್.ಎನ್. ತ್ಯಾಗರಾಜನ್, ಉಪಸ್ಥಿತಿ: ರೇವತಿ ಕಾಮತ್, ಎನ್.ಸತ್ಯಪ್ರಕಾಶ್, ಅಧ್ಯಕ್ಷತೆ: ಎಂ.ಅನಂತ್, 'ಕಲಾಭೂಷಣ' ಪ್ರಶಸ್ತಿ ಪುರಸ್ಕೃತರು: ರುದ್ರಪಟ್ಟಣಂ ಎಸ್. ರಮಾಕಾಂತ, ವೇದ: ಟಿ. ನಂಬಿನಾರಾಯಣ ಭಟ್ಟರ್, ಸಂಗೀತ ಸಂಸ್ಥೆ: ಕೃಷ್ಣ ಸಂಗೀತ ಸಭಾ, ಗಾಯನ: ಮಾಲತಿ ಶಿಂಗ್ಲಾಚಾರ್, ಪಿಟೀಲು: ಜ್ಯೋತ್ಸ್ನಾ ಮಂಜುನಾಥ್, ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಬೆಳಿಗ್ಗೆ 10.45

'ಎಂ.ತಿಮ್ಮಯ್ಯ ವಿದ್ಯಾಚೇತನ' ಪ್ರಶಸ್ತಿ ಪ್ರದಾನ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಅತಿಥಿ: ನಿರಂಜನಾರಾಧ್ಯ ವಿ.ಪಿ., ಪ್ರಶಸ್ತಿ ಪುರಸ್ಕೃತರು: ತೇಜಸ್ವಿನಿ ವಿ., ಪ್ರಾಸ್ತಾವಿಕ ನುಡಿ: ಸಿದ್ಧಯ್ಯ, ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11

ರಘುನಂದನ ಅವರ 'ತುಯ್ತವೆಲ್ಲ ನವ್ಯದತ್ತ: ಅಂದತ್ತರ ಉಯ್ಯಾಲೆ ಮತ್ತು ಅದರ ಸುತ್ತ', 'ನಾನು ಸತ್ತ ಮೇಲೆ' ಪುಸ್ತಕಗಳ ಬಿಡುಗಡೆ: ಅತಿಥಿಗಳು: ರಾಜೇಂದ್ರ ಚೆನ್ನಿ, ಬಿ.ಆರ್. ವೆಂಕಟರಮಣ ಐತಾಳ, ಅಚ್ಯುತಕುಮಾರ್, ಬಿ.ಎಸ್. ವಿದ್ಯಾರಣ್ಯ, ಆಯೋಜನೆ: ಥಿಯೇಟರ್ ತತ್ಕಾಲ್ ಬುಕ್ಸ್, ಚಾರುಮತಿ ಪ್ರಕಾಶನ್, ಸ್ಥಳ: ಸುಚಿತ್ರ ಸಭಾಂಗಣ, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಳಿಗ್ಗೆ 11

'ಬೇಂದ್ರೆ ಓದು ಎಂಬ ಮಾಯಾಕಿನ್ನರಿ' ಕುರಿತು ಉಪನ್ಯಾಸ: ಎಸ್.ಆರ್. ವಿಜಯಶಂಕರ, ಆಯೋಜನೆ: ಪರಸ್ಪರ, ಸ್ಥಳ: ಭೂಮಿಕಾ ಸೇವಾ ಫೌಂಡೇಷನ್, ಅಸೆಂಟ್ ಕಾಲೇಜು ಎದುರು, ಹೆಸರಘಟ್ಟ ರಸ್ತೆ, ಎಂಟನೆ ಮೈಲಿ, ಬೆಳಿಗ್ಗೆ 11

ಮೊಲೊಯ್ ಕೆ ಬ್ಯಾನರ್ಜಿ ಅವರ 'ಎ ಪಾಕೆಟ್ ಗೈಡ್ ಟು ದಿ ಸಿಕ್ಸ್ ಸಿಸ್ಟಮ್ಸ್ ಆಫ್ ಇಂಡಿಯನ್ ಫಿಲಾಸಫಿ' ಪುಸ್ತಕ ಬಿಡುಗಡೆ: ಚಿರಂಜೀವಿ ಸಿಂಘ್, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಇಎಸ್‌ವಿ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಚಿರಂಜೀವಿ ಸಿಂಘ್

ಗಾಯತ್ರಿ ಜಯಂತಿ: ಗಾಯತ್ರಿ ಹೋಮ ಪ್ರಾರಂಭ ಬೆಳಿಗ್ಗೆ 7ಕ್ಕೆ, ಪೂರ್ಣಾಹುತಿ ಮಧ್ಯಾಹ್ನ 12ಕ್ಕೆ, ಸಾನ್ನಿಧ್ಯ: ದಯಾನಂದಪುರಿ ಸ್ವಾಮೀಜಿ, ಆಯೋಜನೆ: ದೇವಾಂಗ ಸಂಘ, ಸ್ಥಳ: ದೇವಾಂಗ ಸಂಘ, ದೇವಾಂಗ ಹಾಸ್ಟೆಲ್ ರಸ್ತೆ, ಸಂಪಂಗಿರಾಮನಗರ

56ನೇ ವರ್ಷದ ಮಕ್ಕಳ ಬೇಸಿಗೆ ರಜೆಯ ಸಾಂಸ್ಕೃತಿಕ ಶಿಕ್ಷಣ ಹಾಗೂ ಮನೋರಂಜನಾ ಶಿಬಿರ–2024 ಸಮಾರೋಪ ಸಮಾರಂಭ: ಅಧ್ಯಕ್ಷತೆ: ಕೆ. ಮೋಹನ್‌ದೇವ್ ಆಳ್ವ, ಅತಿಥಿಗಳು: ಅಲ್ಲಮಪ್ರಭು ಚಿಗಟೇರಿ, ಬಿ.ಎಂ. ರಾಜಗೋಪಾಲ್, ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಸಂಜೆ 4

ಬಸವ ಜಯಂತಿ, 'ಬಸವಶ್ರೀ' ಮತ್ತು 'ವಚನ ಸಾಹಿತ್ಯಶ್ರೀ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ 'ಬಸವಶ್ರೀ' ಪ್ರಶಸ್ತಿ ಪ್ರದಾನ: ಬಸವರಾಜ ಬೊಮ್ಮಾಯಿ, 'ಬಸವಜ್ಯೋತಿ' ಸಂಚಿಕೆ ಬಿಡುಗಡೆ– 'ವಚನ ಸಾಹಿತ್ಯಶ್ರೀ' ಪ್ರಶಸ್ತಿ ಪ್ರದಾನ: ಎ.ಎಸ್. ಕಿರಣ್‌ಕುಮಾರ್, ಅಧ್ಯಕ್ಷತೆ: ರತ್ನಕಲಾ, ಪ್ರಶಸ್ತಿ ಪುರಸ್ಕೃತರು: ಲೀಲಾದೇವಿ ಆರ್. ಪ್ರಸಾದ್, ಅಂಬಯ್ಯ ನುಲಿ, ಪ್ರಾಸ್ತಾವಿಕ ನುಡಿ: ಸಿ. ಸೋಮಶೇಖರ್, ಆಯೋಜನೆ: ಬಸವ ವೇದಿಕೆ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 5.30


ನಿರ್ಮಲಾನಂದನಾಥ ಸ್ವಾಮೀಜಿ

8ನೇ ವರ್ಷದ ವಾರ್ಷಿಕೋತ್ಸವ ಮತ್ತು ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಲೋಕನಾಥ್ ದೀಕ್ಷಿತ್, ಅತಿಥಿ: ಎಂ.ಎಸ್. ನರಸಿಂಹಮೂರ್ತಿ, ಪ್ರಾಸ್ತಾವಿಕ ನುಡಿ: ಪ್ರಶಾಂತ್ ರಿಪ್ಪನ್ ಪೇಟೆ, 'ರಂಗಸಂಸ್ಕೃತಿ ಸಿರಿ' ಪ್ರಶಸ್ತಿ ಪುರಸ್ಕೃತರು: ಕಲ್ಯಾಣಿ ಪ್ರದೀಪ್, ಭರತನಾಟ್ಯ ಪ್ರದರ್ಶನ: ಸೌಭಾಗ್ಯ ಕುಮಾರಿ ಹಂದ್ರಾಳ, 'ಭಾಗವತರ ನಾಟಕ ಮಂಡಳಿ' ನಾಟಕ ಪ್ರದರ್ಶನ: ರಚನೆ: ಲೋಕನಾಥ್ ದೀಕ್ಷಿತ್, ನಿರ್ದೇಶನ: ಕೆ.ಜಿ. ಸಂಪತ್‌ಕುಮಾರ್, ನಿರ್ವಹಣೆ: ಲೋಕೇಶ್ ಎಂ., ಆಯೋಜನೆ: ರಂಗ ಸಂಸ್ಕೃತಿ, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 5.30

ಸಂಗೀತ ಸಂಭ್ರಮ: ಅತಿಥಿ: ಕೆ. ಧರಣಿದೇವಿ ಮಾಲಗತ್ತಿ, ಗಾಯನ: ರುಚಿರಾ ಪಾಂಡಾ, ತಬಲಾ: ರಾಜೇಂದ್ರ ನಾಕೋಡ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ತಬಲಾ ಸೋಲೋ: ಯೋಗೇಶ ಸಂಸಿ, ಹಾರ್ಮೋನಿಯಂ ಲೆಹರಾ: ತನ್ಮಯ ದೇವಚಕೆ, ಆಯೋಜನೆ: ಸಪ್ತಕ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವೈಯ್ಯಾಲಿ ಕಾವಲ್, ಮಲ್ಲೇಶ್ವರ, ಸಂಜೆ 5.30

ವೇದಮಾತೆ ಗಾಯತ್ರಿ, ಶಂಕರಾಚಾರ್ಯ, ರಾಮಾನುಜಾಚಾರ್ಯರ ಜಯಂತ್ಯುತ್ಸವ: ಉದ್ಘಾಟನೆ: ಅಸಗೋಡು ಜಯಸಿಂಹ, 'ವೇದಮಾತೆ ಗಾಯತ್ರಿ' ಕುರಿತು ಉಪನ್ಯಾಸ: ಅಶೋಕ ಹಾರನಹಳ್ಳಿ, 'ಶಂಕರಾಚಾರ್ಯ, ರಾಮಾನುಜಾಚಾರ್ಯರ' ಕುರಿತು ಉಪನ್ಯಾಸ: ಪಾವಗಡ ಪ್ರಕಾಶರಾವ್, ಆಯೋಜನೆ: ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್, ಸ್ಥಳ: ನಂ. 242, ಬಡಗನಾಡು ಭವನ, 16ನೇ ಮತ್ತು 17ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರ, ಸಂಜೆ 5.30

ಬಣ್ಣದ ಬೇಸಿಗೆ ಮಕ್ಕಳ ರಂಗ ಶಿಬಿರ–2024: 'ನನ್ನ ಗೋಪಾಲ' ನಾಟಕ ಪ್ರದರ್ಶನ: ಅತಿಥಿಗಳು: ಬೈರಮಂಗಲ ರಾಮೇಗೌಡ, ವಿಜಯಕುಮಾರ್ ಎಸ್., ರಮೇಶ್ ಎನ್., ಪ್ರಶಾಂತ್ ಸಿದ್ಧಿ, ಪ್ರಾಸ್ತಾವಿಕ ನುಡಿ: ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಆಯೋಜನೆ: ರಂಗಮಂಡಲ, ಸ್ಥಳ: ಸಿವಗಂಗ ರಂಗಮಂದಿರ, ಸರ್ ಎಂ.ವಿ. ಬಡಾವಣೆ, 1ನೇ ವಿಭಾಗ, ಕೆಂಗೇರಿ ಉಪನಗರ, ಸಂಜೆ 6

ಭರತನಾಟ್ಯ ರಂಗಪ್ರವೇಶ: ಲಿಖಿತಾ ಕೆ., ಅತಿಥಿಗಳು: ಕೆ. ಗೋಪಾಲಯ್ಯ, ಎಸ್. ಪಿ. ಹೇಮಲತಾ, ಎ.ವಿ. ಶ್ರೀನಿವಾಸನ್, ಪಿ. ಶ್ರೀನಿವಾಸಮೂರ್ತಿ, ಅಧ್ಯಕ್ಷತೆ: ವೈಜಯಂತಿ ಕಾಶಿ, ಆಯೋಜನೆ: ಅಂಜಲಿ ಸ್ಕೂಲ್ ಆಫ್ ಡಾನ್ಸ್ ಆ್ಯಂಡ್ ಮ್ಯೂಸಿಕ್, ಸ್ಥಳ: ಡಾ. ರಾಜ್‌ಕುಮಾರ್ ಕಲಾಭವನ, ಮಾರುತಿನಗರ, ಮಹಾಲಕ್ಷ್ಮಿ ಲೇಔಟ್, ಸಂಜೆ 6

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ತೇಜೋಮಯಿ ಗದ್ದಿ, ಅತಿಥಿಗಳು: ನೇತ್ರಾವತಿ ಮಂಜುನಾಥ್, ಛಾಯಾ ಭಾರ್ಗವಿ ಎಸ್.ಎಚ್., ಪದ್ಮಿನಿ ಅಚ್ಚ, ನಂಜುಂಡಯ್ಯ ಎಸ್., ವರ್ಷಾ ಎಸ್.ಎಸ್. ರುದ್ರ, ಆಯೋಜನೆ: ಭರತಾಂಜಲಿ ನಾಟ್ಯ ಶಾಲೆ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಬಸವನಗುಡಿ, ಸಂಜೆ 6

ADVERTORIAL

ICSE 10ನೇ ಬೋರ್ಡ್ ಪರೀಕ್ಷೆ: ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್‌ಗೆ ಸತತ 16ನೇ ವರ್ಷ 100% ಫಲಿತಾಂಶ

ಮೇಧಾ ಎಸ್ ರಾವ್ 98.8%

ಸಾನ್ವಿ ಕೆ 98.4%

ಆರನ್ ಜುಬಿ 97.4%

ಸುಕಾರು ಸಿ 97.4%

ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್, ಸಹಕಾರ ನಗರ ಕ್ಯಾಂಪಸ್, ICSE 10ನೇ ಬೋರ್ಡ್ ಪರೀಕ್ಷೆಗಳಲ್ಲಿ ಸತತ 16ನೇ ವರ್ಷವೂ ಶೇ. 100ರಷ್ಟು ಉತ್ತೀರ್ಣ ಪ್ರಮಾಣವನ್ನು ದಾಖಲಿಸಿ, ಗಮನಾರ್ಹ ಸಾಧನೆ ಮಾಡಿದೆ. ಈ ಸಾಧನೆಯು 2008ರಿಂದಲೂ ಅವಿಚ್ಛಿನ್ನವಾಗಿದ್ದು, ಶೈಕ್ಷಣಿಕ ಶ್ರೇಷ್ಠತೆ ಮತ್ತು ಸಮಗ್ರ ಅಭಿವೃದ್ಧಿಗೆ ಆರ್ಕಿಡ್ಸ್‌ನ ಅಚಲ ಬದ್ಧತೆಯನ್ನು ಒತ್ತಿಹೇಳುತ್ತದೆ. ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್ ಸಹಕಾರನಗರ ಕ್ಯಾಂಪಸ್‌ನ ಪ್ರಾಂಶುಪಾಲರಾದ ಶ್ರೀಮತಿ ನ್ಯಾನ್ಸಿ ಸಿಂಥಿಕಾ ಅವರು, ಸಹಕಾರ ನಗರ ಕ್ಯಾಂಪಸ್ ವಿದ್ಯಾರ್ಥಿಗಳ ಸಾಧನೆಯ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳ ಹೊಂದಿಕೊಳ್ಳುವ ಸಾಮರ್ಥ್ಯ ಮತ್ತು ದೃಢನಿಶ್ಚಯವನ್ನು ಶ್ಲಾಘಿಸಿದ ಅವರು, ಈ ಯಶಸ್ಸು ಉತ್ಕೃಷ್ಟತೆಗೆ ಶಾಲೆಯು ತೋರುತ್ತಿರುವ ಬದ್ಧತೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಹರ್ಷಿತ್ ಎಸ್ ಗೌಡ 96.4%

ಇತ್ತೀಚಿಗೆ ಪ್ರಕಟವಾದ ICSE ಫಲಿತಾಂಶಗಳಲ್ಲಿ ಮೇಧಾ ಎಸ್. ರಾವ್ ಮತ್ತು ಸಾನ್ವಿ ಕೆ. ಅವರು ಕ್ರಮವಾಗಿ 98.8% ಮತ್ತು 98.4% ಅಂಕಗಳನ್ನು ಕಳಿಸಿ, ಪ್ರಭಾವಶಾಲಿ ಎನಿಸುವ ಸಾಧನೆ ಮಾಡಿದ್ದಾರೆ. ಶಿಕ್ಷಕರು, ಪೋಷಕರು ಮತ್ತು ಶಾಲಾ ಸಮುದಾಯದ ಸಹಯೋಗದ ಪ್ರಯತ್ನಗಳಿಂದಾಗಿ ಮೇಧಾ ಎಸ್. ರಾವ್ ಶಾಲೆಗೆ ಪ್ರಥಮ ಸ್ಥಾನ ಗಳಿಸಿ, ಯಶಸ್ಸು ಸಂಪಾದಿಸಿದ್ದಾರೆ ಎಂದು ಬಣ್ಣಿಸಿದರು. ಶಾಲೆಯ ಸಮಗ್ರ ಕಾರ್ಯಕ್ಷಮತೆಯು ಸ್ಥಿರವಾದ ಏರಿಕೆಯನ್ನು ಕಂಡಿದೆ. ಶಾಖೆಯ 17 ವಿದ್ಯಾರ್ಥಿಗಳು 30 ವಿಷಯಗಳಲ್ಲಿ ಪರಿಪೂರ್ಣ ಅಂಕಗಳನ್ನು ಗಳಿಸಿದ್ದಾರೆ ಮತ್ತು 10 ವಿದ್ಯಾರ್ಥಿಗಳು 95% ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ ಎಂದು ನ್ಯಾನ್ಸಿ ಅವರು ಸಂತೋಷದಿಂದ ಹೇಳಿದರು. ಈ ಪ್ರವೃತ್ತಿಯು ವೈಯಕ್ತಿಕ ಸಾಧನೆಯ ಜೊತೆಗೆ ಶಾಲೆಯ ಅಧ್ಯಾಪಕರು ಮತ್ತು ಆಡಳಿತ ಮಂಡಳಿ ಸದಸ್ಯರ ಸಾಮೂಹಿಕ ಪ್ರಯತ್ನವನ್ನು ಪ್ರತಿಬಿಂಬಿಸುತ್ತದೆ.

ಸಹಕಾರನಗರ ಕ್ಯಾಂಪಸ್‌ನ ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್‌ನ ಸಾಧಕ ವಿದ್ಯಾರ್ಥಿಗಳ ವಿವರಗಳು ಇಂತಿವೆ: ಮೇಧಾ ಎಸ್. ರಾವ್ (98.8%), ಸಾನ್ವಿ ಕೆ. (98.4%), ಆರನ್ ಜುಬಿ (97.4%), ಸುಕಾರು ಸಿ. (97.4%), ಹರ್ಷಿತ್ ಎಸ್. ಗೌಡ (96.4%), ನಿಶಿತಾ ಎಸ್. ಪಲ್ಲೇದ್ (96.4%), ಅವನಿ ಬೆಂಡಿಗೇರಿ (96.2%), ಜಿ.ವಿ. ಅಂಕಿತ್ ಸಾಯಿ (96.2%), ರುಶಿತಾ ಮುಪ್ಪಾಲ (95.6%), ಮತ್ತು ಹರ್ಷ ಆರ್. (95.2%). ಈ ವಿದ್ಯಾರ್ಥಿಗಳು ಗಳಿಸಿರುವ ಅಸಾಧಾರಣ ಫಲಿತಾಂಶವು ಪ್ರತಿಭೆಯನ್ನು ಪೋಷಿಸಲು ಮತ್ತು ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುವ ವಾತಾವರಣವನ್ನು ಬೆಳೆಸಲು ಶಾಲೆಯು ಎಷ್ಟು ಸಮರ್ಪಣಾ ಭಾವದಿಂದ ಶ್ರಮಿಸುತ್ತಿದೆ ಎನ್ನುವುದರ ದ್ಯೋತಕವಾಗಿದೆ.

ಅವನಿ ಬೆಂಡಿಗೇರಿ 96.2%

ಬೋರ್ಡ್ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಸಾಧನೆಯ ಬಗ್ಗೆ ಸಂಭ್ರಮ ವ್ಯಕ್ತಪಡಿಸಿದ ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್ ಸಹಕಾರನಗರ ಶಾಖೆಯ ಪ್ರಾಂಶುಪಾಲರಾದ ಶ್ರೀಮತಿ ನ್ಯಾನ್ಸಿ ಸಿಂಟಿಕಾ ಅವರು, "ಐಸಿಎಸ್‌ಇ ಬೋರ್ಡ್ ಪರೀಕ್ಷೆಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ನಮ್ಮೆಲ್ಲ ವಿದ್ಯಾರ್ಥಿಗಳಿಗೆ ಅಭಿನಂದನೆಗಳು! ಅವರ ಕಠಿಣ ಪರಿಶ್ರಮ, ಸಮರ್ಪಣೆ ಮತ್ತು ಬದ್ಧತೆಯು ನಿಜವಾಗಿಯೂ ಫಲ ನೀಡಿದೆ, ಇದರ ಪರಿಣಾಮವಾಗಿ ಶಾಲೆಯು ಸತತವಾಗಿ 16ನೇ ಬಾರಿಗೆ 100% ಫಲಿತಾಂಶಗಳನ್ನು ಸಾಧಿಸಿದೆ. ಈ ಸಾಧನೆಯು ನಮಗೆ ಹೆಮ್ಮೆ ತಂದಿದೆ, ಅವರ ಯಶಸ್ಸು ಅವರ ಹೊಂದಾಣಿಕೆ ಮತ್ತು ಪ್ರಬಲ ಇಚ್ಛಾಶಕ್ತಿಗೆ ಸಾಕ್ಷಿಯಾಗಿದೆ. ಅನುಭವಿಗಳೂ ಜ್ಞಾನಿಗಳೂ ಆಗಿರುವ ಶಿಕ್ಷಕರು ಪಟ್ಟುಬಿಡದೆ ಪ್ರಯತ್ನಿಸಿದ್ದಾರೆ ಮತ್ತು ವಿದ್ಯಾರ್ಥಿಗಳು ಪ್ರಗತಿಯನ್ನು ಸಾಧಿಸಲು ನಿರಂತರವಾಗಿ ಮಾರ್ಗದರ್ಶನ ಮಾಡಿದ್ದಾರೆ. ಇದು

ಜಿ ವಿ ಅಂಕೀತ್ ಸಾಯಿ 96.2%

ಶ್ಲಾಘನೀಯ. ನಮ್ಮ ವಿದ್ಯಾರ್ಥಿಗಳು ಶ್ರೇಷ್ಠವಾದುದನ್ನೇ ಮಾಡಲು ಶ್ರಮಿಸುತ್ತಿದ್ದಾರೆ ಎಂದು ನಾವು ಭಾವಿಸುತ್ತೇವೆ!" ಎಂದರು.

ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್ ಯುವ ಮನಸ್ಸುಗಳನ್ನು ರೂಪಿಸುವ ತನ್ನ ಪಯಣದಲ್ಲಿ ನಿರಂತರವಾಗಿ ಮುಂದುವರಿಯುತ್ತಿದೆ. ಶೈಕ್ಷಣಿಕ ಸಾಧನೆ ಮತ್ತು ಸಮಗ್ರ ಶಿಕ್ಷಣದ ಪರಂಪರೆಯನ್ನು ಎತ್ತಿಹಿಡಿಯಲು ಬದ್ಧವಾಗಿದೆ, ಮುಂಬರುವ ವರ್ಷಗಳಲ್ಲಿ ಶ್ರೇಷ್ಠತೆಗಾಗಿ ಹೊಸ ಮಾನದಂಡಗಳನ್ನು ಹೊಂದಿಸುತ್ತದೆ.

ಶುಭಾಶಯದ ಬ್ಯಾನರ್: ಎಫ್ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದ್ಮನಾಭನಗರ ವಿಧಾನಸಭೆ ಕ್ಷೇತ್ರದಲ್ಲಿ 'ಕಾರ್ತಿಕ್ ವೆಂಕಟೇಶ್‌ಮೂರ್ತಿ ಅವರಿಗೆ ಹುಟ್ಟುಹಬ್ಬದ ಶುಭಾಶಯ'ದ ಬ್ಯಾನರ್ ಅಳವಡಿಸಿದ್ದವರ ವಿರುದ್ಧ ಬಿಬಿಎಂಪಿ ಎಫ್ಐಆರ್ ದಾಖಲಿಸಿದೆ.

ಬನಶಂಕರಿ 2ನೇ ಹಂತ ದೇವೇಗೌಡ ಪೆಟ್ರೋಲ್ ಬಂಕ್ ವೃತ್ತ, ಎಂ.ಕೆ. ಪುಟ್ಟಲಿಂಗಯ್ಯ ರಸ್ತೆಯ ವಿವಿಧ ಕಡೆಗಳಲ್ಲಿ ಸಾರ್ವಜನಿಕ ಸ್ವತ್ತಿಗೆ 'ಶುಭಾಶಯ'ದ ಬ್ಯಾನರ್‌ಗಳನ್ನು ಅಕ್ರಮವಾಗಿ ಅಳವಡಿಸಿ ನಗರದ ಸೌಂದರ್ಯ ಹಾಳು ಮಾಡಿದ್ದಾರೆ ಎಂದು ಫ್ಲೈಯಿಂಗ್ ಸ್ಕ್ವಾಡ್‌ನ ಅವೀಶ್ ಅವರು ಬನಶಂಕರಿ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ದೂರು ನೀಡಿದ್ದು, ಎಫ್ಐಆರ್ ದಾಖಲಾಗಿದೆ. ಇಂತಹ ಅನಧಿಕೃತ ಬ್ಯಾನರ್‌ಗಳು ಆಸ್ತಿ ವಿರೂಪ ಕಾಯ್ದೆ ಮತ್ತು ಬಿಬಿಎಂಪಿ ಕಾಯ್ದೆ ಉಲ್ಲಂಘನೆಯಾಗಿದೆ. ಅಕ್ರಮ ಬ್ಯಾನರ್, ಪ್ರದರ್ಶನಗಳ ಬಗ್ಗೆ ದೂರುಗಳನ್ನು ಸ್ಥಳ, ಚಿತ್ರದ ಸಮೇತ ಪಾಲಿಕೆ ವ್ಯಾಟ್ಸ್ ಆ್ಯಪ್ 94806 85700ಗೆ ಕಳುಹಿಸಲು ಬಿಬಿಎಂಪಿ ಮನವಿ ಮಾಡಿದೆ.

ಮೃತ ಚೈತ್ರಾಗೌಡ ಹೈಕೋರ್ಟ್ ವಕೀಲೆ; ನೇಣು ಬಿಗಿದ ಸ್ಥಿತಿಯಲ್ಲಿ ಶವ ಪತ್ತೆ

ಕೆಎಎಸ್ ಅಧಿಕಾರಿ ಪತ್ನಿ ಶಂಕಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ವಿಭಾಗದ ಸಂಜಯ್‌ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ವೊಂದರ ಫ್ಲ್ಯಾಟ್‌ನಲ್ಲಿ ಕೆಎಎಸ್ ಅಧಿಕಾರಿ ಶಿವಕುಮಾರ್ ಅವರ ಪತ್ನಿ, ಹೈಕೋರ್ಟ್ ವಕೀಲೆ ಚೈತ್ರಾಗೌಡ (34) ಅವರು ಅನುಮಾನಸ್ಪದ ರೀತಿಯಲ್ಲಿ ಶನಿವಾರ ಮೃತಪಟ್ಟಿದ್ದಾರೆ.

ಫ್ಯಾನ್‌ಗೆ ನೇಣುಬಿಗಿದುಕೊಂಡ ಸ್ಥಿತಿಯಲ್ಲಿ ಮೃತದೇಹವು ಪತ್ತೆಯಾಗಿದ್ದು ಪೊಲೀಸರು ತನಿಖೆ ಆರಂಭಿಸಿದ್ದಾರೆ. ಚೈತ್ರಾಗೌಡ ಅವರು ಹೈಕೋರ್ಟ್ ವಕೀಲರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಮೃತರ ಪತಿ ಶಿವಕುಮಾರ್ ಅವರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ (ಕೆಐಎಡಿಬಿ) ಸಹಾಯಕ ಆಯುಕ್ತರಾಗಿದ್ದು, ಚೈತ್ರಾಗೌಡ ಅವರು ಕುಣಿಗಲ್‌ನವರು. ಕೆಲವು ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಐದು ವರ್ಷದ ಹೆಣ್ಣುಮಗುವಿದೆ.

ಚೈತ್ರಾಗೌಡ ಅವರ ಸಹೋದರ ದೂರು ನೀಡಿದ್ದು, ಶಂಕಾಸ್ಪದ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಸಹೋದರ ನೀಡಿದ ಮಾಹಿತಿ ಆಧರಿಸಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಫ್ಯಾನ್‌ಗೆ ಸೀರೆಯಿಂದ ನೇಣುಬಿಗಿದ ಸ್ಥಿತಿಯಲ್ಲಿ ಮೃತದೇಹವಿತ್ತು ಎಂದು ಪೊಲೀಸರು ಹೇಳಿದರು.

ಮೂರು ಅಂತಸ್ತಿನ ಅಪಾರ್ಟ್‌ಮೆಂಟ್‌ನ ಎರಡನೇ ಫ್ಲ್ಯಾಟ್‌ನಲ್ಲಿ ಚೈತ್ರಾಗೌಡ ಅವರ ಕುಟುಂಬಸ್ಥರು ವಾಸವಾಗಿದ್ದರು. ಇನ್ನೊಂದು ಫ್ಲ್ಯಾಟ್‌ನಲ್ಲಿ ಮೃತಳ ಸಹೋದರ ವಾಸವಿದ್ದರು ಎಂದು ಮೂಲಗಳು ಹೇಳಿವೆ.

'ನನ್ನ ಪತಿ ಒಳ್ಳೆಯವರು, ಜೀವನ ಎಂಜಾಯ್ ಮಾಡಿ. ಮಗಳನ್ನು ಚೆನ್ನಾಗಿ ನೋಡಿಕೊಳ್ಳಿ. ಡಿಪ್ರೆಶನ್‌ನಿಂದ ಬಳಲುತ್ತಿದ್ದೇನೆ. ಅದರಿಂದ ಹೊರಬರಲು ಪ್ರಯತ್ನಿಸಿದರು ಆಗಲಿಲ್ಲ. ನನ್ನ ಜೀವನ ಕೊನೆಗೊಳಿಸುತ್ತಿದ್ದೇನೆ. ಆತ್ಮಹತ್ಯೆ ಮಾಡಿಕೊಳ್ಳುವುದು ತಪ್ಪು ಅಂತ ಗೊತ್ತಿದೆ. ಆದರೂ ನನ್ನ ಜೀವನ ಅಂತ್ಯ ಮಾಡುತ್ತಿದ್ದೇನೆ' ಎಂದು ಕೆಲವು ದಿನಗಳ ಹಿಂದೆ ಬರೆದಿರುವ ಪತ್ರವೊಂದು ಸಿಕ್ಕಿದೆ ಎನ್ನಲಾಗಿದೆ.

'ಸಿಕ್ಕಿರುವ ಪತ್ರದ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಡೆತ್‌ನೋಟ್ ಅನ್ನು ಅವರೇ ಬರೆದಿದ್ದಾರೆಯೇ? ಬೇರೆಯವರು ಬರೆದು ಅಲ್ಲಿಟ್ಟಿದ್ದರೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ತನಿಖೆಗೆ ವಕೀಲರ ಸಂಘ ಆಗ್ರಹ

ಬ್ಯಾಡ್ಮಿಂಟನ್ ಆಟಗಾರ್ತಿಯೂ ಆಗಿದ್ದ ಚೈತ್ರಾಗೌಡ ಸಾವಿನ ಪ್ರಕರಣದ ತನಿಖೆಗೆ ಎಲ್ಲ ರೀತಿಯ ಕ್ರಮ ಕೈಗೊಂಡು ಸೂಕ್ತ ನ್ಯಾಯ ಒದಗಿಸಬೇಕು ಎಂದು ಬೆಂಗಳೂರು ವಕೀಲರ ಸಂಘ ಆಗ್ರಹಿಸಿದೆ.

ಈ ಕುರಿತಂತೆ ಬೆಂಗಳೂರು ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿರುವ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಹಾಗೂ ಖಜಾಂಚಿ ಎಂ.ಟಿ.ಹರೀಶ್, 'ಈ ಸಾವು ಇಡೀ ವಕೀಲ ವೃಂದಕ್ಕೆ ಆಘಾತವುಂಟು ಮಾಡಿದೆ' ಎಂದು ಹೇಳಿದ್ದಾರೆ.

'ಆಕೆಯ ಸ್ನೇಹಿತೆಯರಿಂದ ನಮಗೆ ತಿಳಿದು ಬಂದಿರುವಂತೆ ಚೈತ್ರಾ ಅವರು ಅತ್ಯಂತ ಬಲಿಷ್ಠ ಮನಸ್ಥಿತಿ ಹೊಂದಿದವರಾಗಿದ್ದರು. ಅವರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಮಹಿಳೆ ಆಗಿರಲಿಲ್ಲ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಚೈತ್ರಾಗೌಡ

ಕೈ ಸಾಲ ವಾಪಸ್ ನೀಡದ್ದಕ್ಕೆ ಕೊಲೆ

ಚಾಕುವಿನಿಂದ ಇರಿದು ಕೊಲೆ: ಪರಾರಿಯಾಗಿದ್ದ ಆರೋಪಿಯ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈ ಸಾಲ ವಾಪಸ್ ನೀಡಿಲ್ಲ ಎಂಬ ವಿಚಾರಕ್ಕೆ ಸ್ನೇಹಿತನ ಚಾಕುವಿನಿಂದ ಇರಿದು ಕೊಲೆ ಮಾಡಿದ್ದ ಪರಾರಿಯಾಗಿದ್ದ ಆರೋಪಿಯನ್ನು ಶ್ರೀರಾಮಪುರ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ. ವಿಠಲ್ ಅಲಿಯಾಸ್ ಪಾಂಡು (45) ಬಂಧಿತ.

'ಮೇ 1ರಂದು ಓಕಳಿಪುರದ ವಾಟಾಳ್ ನಾಗರಾಜ್ ರಸ್ತೆಯ ರಾಜೀವ್ ಗಾಂಧಿ ಸಿಗ್ನಲ್ ಮುಕ್ತ ಕಾರಿಡಾರ್ ಕೆಳಸೇತುವೆ ಬಳಿ ಮೃತದೇಹ ಇರುವ ಮಾಹಿತಿ ಆಧರಿಸಿ ಹೊಯ್ಸಳ ಗಸ್ತು ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದರು. ಕೊಳೆತ ಸ್ಥಿತಿಯಲ್ಲಿ ಶವ ಇತ್ತು. ಮೃತನ ಚಹರೆ ಹಾಗೂ ಗುರುತು ಪತ್ತೆಯಾಗಿರಲಿಲ್ಲ. ಜೇಬಿನಲ್ಲೂ ಯಾವುದೇ ಸುಳಿವು ಇರಲಿಲ್ಲ. ದೇಹದ ಮೇಲೆ ಗಾಯಗಳಿದ್ದರಿಂದ ಕೊಲೆ ಪ್ರಕರಣ ದಾಖಲಿಸಿದ್ದು, ಆರೋಪಿ ಪತ್ತೆಗೆ ವಿಶೇಷ ಪೊಲೀಸ್ ತಂಡ ರಚಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

ವಿಠಲ್

ದಿಲೀಪ್

'ಮರಣೋತ್ತರ ಪರೀಕ್ಷೆ ವರದಿಯೂ ಕೊಲೆ ಆಗಿದೆ ಎಂಬುದನ್ನು ದೃಢಪಡಿಸಿತ್ತು. ಮೃತನ ಕುಟುಂಬಸ್ಥರನ್ನು ಪತ್ತೆ ಮಾಡಿ ಮಾಹಿತಿ ಸಂಗ್ರಹಿಸಿ ಆರೋಪಿಯ ಸುಳಿವು ಪತ್ತೆ ಮಾಡಲಾಯಿತು' ಎಂದು ಪೊಲೀಸರು ಹೇಳಿದರು.

'ಕೊಲೆಯಾದ ಯುವಕ, ಸ್ನೇಹಿತ ದಿಲೀಪ್‌ಗೆ ₹20 ಸಾವಿರ ಕೈ ಸಾಲ ನೀಡಿದ್ದ ಪಾಂಡು ಹಿಂದಿರುಗಿಸಲು ಹಲವು ಬಾರಿ ಮನವಿ ಮಾಡಿದ್ದ. ಇದರಿಂದ ಕುಪಿತಗೊಂಡಿದ್ದ ಆರೋಪಿ, ಕೊಲೆಗೆ ಸಂಚು ರೂಪಿಸಿದ್ದ. ಖಾಲಿ ಪ್ರದೇಶಕ್ಕೆ ಕರೆದೊಯ್ದು ಖಾರದ ಪುಡಿ ಎರಚಿ ಚಾಕುವಿನಿಂದ ಕತ್ತು ಕೊಯ್ದು ಕೊಲೆ ಮಾಡಿದ್ದ. ಜೊತೆಗೆ ಸ್ಥಳದಲ್ಲಿ ಬಿದ್ದಿದ್ದ ದೊಡ್ಡ ಕಲ್ಲು ಎತ್ತಿ ಹಾಕಿ ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

ವ್ಯಕ್ತಿ ಕೊಲೆ: ತಲೆಮರೆಸಿಕೊಂಡಿದ್ದ ಆರೋಪಿ ಸೆರೆ

ಬೆಂಗಳೂರು: ಹಳೇ ದ್ವೇಷದಿಂದ ಎಂ.ಸತೀಶ್ ಕುಮಾರ್ ಎಂಬುವರ ಮೇಲೆ ಸಿಮೆಂಟ್ ಬ್ಲಾಕ್ ಇಟ್ಟಿಗೆ ಎತ್ತಿ ಹಾಕಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿಯನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪೊಲೀಸ್ ರೋಡ್ ರಾಮ್‌ಸಿಂಗ್ ಪೇಟ್ ನಿವಾಸಿ, ಬುಕ್ ಬೈಂಡಿಂಗ್ ಹಾಗೂ ವಾಹನ ಚಾಲನೆ ಕೆಲಸ ಮಾಡುತ್ತಿದ್ದ ಎಂ.ಶ್ರೀಕಾಂತ್ (38) ಬಂಧಿತ.

'ಪ್ರಥಮ ಪಿಯುಸಿ ವ್ಯಾಸಂಗ ಮಾಡಿದ್ದ ಆರೋಪಿ, ಬಿಡುವಿನ ವೇಳೆಯಲ್ಲಿ ಬುಕ್ ಬೈಂಡಿಂಗ್ ಕೆಲಸ ಸಹ ಮಾಡುತ್ತಿದ್ದ' ಎಂದರು.

'ಏಪ್ರಿಲ್ 19ರಂದು ರಾತ್ರಿ, ದೊಮ್ಮಲೂರಿನ ಬೀಡಿ ಪಾರ್ಕ್ ಬಳಿ ಈತ ಕೃತ್ಯ ಎಸಗಿದ್ದ. ಮೃತನ ಕುಟುಂಬಸ್ಥರು ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

ಎಂ.ಶ್ರೀಕಾಂತ್

ಉದ್ಯಮಿ ಹತ್ಯೆ: 9 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣಕಾಸಿನ ವಿಚಾರ ಹಾಗೂ ಹಳೇ ದ್ವೇಷದಿಂದ ರಿಯಲ್ ಎಸ್ಟೇಟ್ ಉದ್ಯಮಿಯನ್ನು ನಡು ರಸ್ತೆಯಲ್ಲಿ ಮಾರಕಾಸ್ತ್ರಗಳಿಂದ ಥಳಿಸಿ ಹತ್ಯೆ ಮಾಡಿದ್ದ ಪ್ರಕರಣದಲ್ಲಿ ಬಾಣಸವಾಡಿ ಠಾಣೆ ಪೊಲೀಸರು, 9 ಮಂದಿಯನ್ನು ಬಂಧಿಸಿದ್ದಾರೆ.

ಬಾಣಸವಾಡಿ ನಿವಾಸಿಗಳಾದ ಧರ್ಮ, ಇಶಾಕ್, ಸುಲ್ತಾನ್, ಗೋಕುಲ್, ಬಸವರಾಜು, ಜಾನ್ ಡೇವಿಡ್, ಸೀನಾ, ಪವನ್ ಮತ್ತು ಅರಸು ಬಂಧಿತರು.

ಈ ಪೈಕಿ ಧರ್ಮ, ಜಾನ್ ಡೇವಿಡ್, ಸೀನಾ ಬಾಣಸವಾಡಿ ಠಾಣೆಯ ರೌಡಿ ಶೀಟರ್‌ಗಳಾಗಿದ್ದಾರೆ ಎಂದು ಪೊಲೀಸರು ಹೇಳಿದರು.

ಪ್ರಮುಖ ಆರೋಪಿ ಮಂಜುನಾಥ್ ಅಲಿಯಾಸ್ ಮಂಜು ಎಂಬಾತನಿಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಆರೋಪಿಗಳು ಮೇ 7ರಂದು ಕಾರ್ತಿಕೇಯನ್ (40) ಎಂಬಾತನನ್ನು ಕೊಲೆ ಮಾಡಿ ಪರಾರಿ ಆಗಿದ್ದರು.

'ಬಂಧಿತರು ಹಾಗೂ ಕೊಲೆಯಾದ ಕಾರ್ತಿಕೇಯನ್ ನಡುವೆ ಹಣಕಾಸು ಹಾಗೂ ವೈಯಕ್ತಿಕ ವಿಚಾರಕ್ಕೆ ಹಳೇ ದ್ವೇಷವಿತ್ತು. ಹಲವು ಬಾರಿ ಗಲಾಟೆ ನಡೆದಿತ್ತು. ಮೇ 7ರಂದು ರಾತ್ರಿ 7 ಗಂಟೆ ಸುಮಾರಿಗೆ ಕಾರ್ತಿಕೇಯನ್ ಮನೆ ಸಮೀಪ ವಾಯುವಿಹಾರ ನಡೆಸುತ್ತಿದ್ದ. ಆಗ, ಬೈಕ್‌ಗಳಲ್ಲಿ ಬಂದಿದ್ದ ಆರೋಪಿಗಳು ಕೃತ್ಯ ಎಸಗಿದ್ದರು. ಕೊಲೆ ಯಾದ ಕಾರ್ತಿಕೇಯನ್ ವಿರುದ್ಧವೂ ಈ ಹಿಂದೆ ಬಾಣಸವಾಡಿ, ಕಮರ್ಷಿಯಲ್ ಸ್ಟ್ರೀಟ್ ಠಾಣೆಯ ರೌಡಿಪಟ್ಟಿ ತೆರೆಯಲಾಗಿತ್ತು. ಎರಡು ವರ್ಷಗಳ ಹಿಂದೆ ಕೋರ್ಟ್ ಮೂಲಕ ಕಾರ್ತಿಕೇಯನ್ ಅದನ್ನು ರದ್ದುಪಡಿಸಿ ಕೊಂಡಿದ್ದ. ಬಳಿಕ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ' ಎಂದು ಮೂಲಗಳು ಹೇಳಿವೆ.

'ಈಚೆಗೆ ಕೆಲ ವಿವಾದಿತ ಜಾಗಗಳಿಗೆ ಬೇಲಿ ಹಾಕಿದ್ದ ಕಾರ್ತಿಕೇಯನ್, ಆರೋಪಿ ಮಂಜು, ಆತನ ಸಹಚರರ ಜತೆ ಜಗಳ ಮಾಡಿಕೊಂಡಿದ್ದ. ಗನ್ ತೋರಿಸಿ ಮಂಜುಗೆ ಬೆದರಿಕೆ ಹಾಕಿದ್ದ. ಈ ಹಿನ್ನೆಲೆಯಲ್ಲಿ ಆರೋಪಿಗಳು ಸಂಚು ರೂಪಿಸಿ ಕೊಲೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಪ್ರಜ್ವಲ್ ಸುಳಿವು ನೀಡಿದರೆ ₹1 ಲಕ್ಷ ಬಹುಮಾನ!

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಹುಡುಕಿಕೊಟ್ಟವರಿಗೆ ₹1 ಲಕ್ಷ ಬಹುಮಾನ, ಸನ್ಮಾನ ಮಾಡುವುದಾಗಿ ಹೇಳಿ ಜನತಾಪಕ್ಷದ ಮುಖಂಡ ನಾಗೇಶ್ ನೇತೃತ್ವದಲ್ಲಿ ಶನಿವಾರ ಪೋಸ್ಟರ್ ಅಭಿಯಾನ ನಡೆಯಿತು.

ಅಭಿಯಾನದ ಮಾಹಿತಿ ಪಡೆದು ಸ್ಥಳಕ್ಕೆ ಬಂದ ಪೊಲೀಸರು, ನಾಗೇಶ್ ಸೇರಿದಂತೆ ಹಲವರನ್ನು ವಶಕ್ಕೆ ಪಡೆದರು. ಮುಚ್ಚಳಿಕೆ ಪತ್ರ ಬರೆಸಿಕೊಂಡು, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು. ಶಿವಾನಂದ ವೃತ್ತ, ಆನಂದ್‌ರಾವ್ ವೃತ್ತ, ಶೇಷಾದ್ರಿಪುರದ ಕೆಲವೆಡೆ 'ವಾಂಟೆಡ್ ಪ್ರಜ್ವಲ್' ಎಂಬ ಪೋಸ್ಟರ್ ಅಂಟಿಸಿದರು.

ಮದ್ಯ ವಶ: ಎಫ್ಐಆರ್ ರದ್ದುಪಡಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದೆಡೆ ಮದ್ಯ ಪೂರೈಕೆಗೆ ಅನುಮತಿ ನೀಡಿ, ಮತ್ತೊಂದೆಡೆ ಮಾದರಿ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಹೆಸರಿನಲ್ಲಿ ಎರಡು ಟ್ರಕ್‌ಗಳಲ್ಲಿದ್ದ ಮದ್ಯ ವಶಕ್ಕೆ ತೆಗೆದುಕೊಂಡಿದ್ದು ಎಷ್ಟರಮಟ್ಟಿಗೆ ಸರಿ' ಎಂದು ಪ್ರಶ್ನಿಸಿರುವ ಹೈಕೋರ್ಟ್, ಈ ಸಂಬಂಧ 'ಕಲ್ಪತರು ಬ್ರಿವರೀಸ್ ಆ್ಯಂಡ್ ಡಿಸ್ಟಿಲರೀಸ್ ಸಂಸ್ಥೆ' ವಿರುದ್ಧ ದಾಖಲಿಸಲಾಗಿದ್ದ ಎರಡು ಎಫ್ಐಆರ್‌ಗಳನ್ನು ರದ್ದುಪಡಿಸಿದೆ.

ಎರಡು ಟ್ರಕ್‌ಗಳಲ್ಲಿದ್ದ ಮದ್ಯ ವಶಪಡಿಸಿಕೊಂಡು, ಎಫ್ಐಆರ್ ದಾಖಲಿಸಿದ್ದನ್ನು ಪ್ರಶ್ನಿಸಿ, 'ಕಲ್ಪತರು ಬ್ರಿವರೀಸ್ ಆ್ಯಂಡ್ ಡಿಸ್ಟಿಲರೀಸ್ ಸಂಸ್ಥೆ' ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿದೆ.

'ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದಾಗ, ಕರ್ನಾಟಕ ರಾಜ್ಯ ಪಾನೀಯ ನಿಗಮವು (ಕೆಎಸ್ ಬಿಸಿಎಲ್) ಮದ್ಯ ಪೂರೈಸಲು ಏಕೆ ಅನುಮತಿ ನೀಡಬೇಕಿತ್ತು' ಎಂದು ನ್ಯಾಯಪೀಠ ಪ್ರಶ್ನಿಸಿದೆ.

'ನೀತಿ ಸಂಹಿತೆ ಜಾರಿಯಲ್ಲಿದ್ದಾಗ ಮದ್ಯ ಸಾಗಣೆಗೆ ಅಬಕಾರಿ ಇಲಾಖೆಯೇ ಪರವಾನಗಿ ನೀಡಿದೆ. ಅದೇ ಇಲಾಖೆಯ ಅಧಿಕಾರಿಗಳು ನೀತಿ ಸಂಹಿತೆ ಉಲ್ಲಂಘನೆ ಕಾರಣದಡಿ ಮದ್ಯ ವಶಪಡಿಸಿಕೊಂಡಿರುವುದು ಕಾನೂನಿನ ದುರ್ಬಳಕೆಯಾಗಿದೆ' ಎಂದು ಅಭಿಪ್ರಾಯಪಟ್ಟಿದೆ.

'ಅರ್ಜಿದಾರರು ಸರಕುಪಟ್ಟಿ (ಇನ್ವಾಯ್ಸ್) ಮತ್ತು ಅಗತ್ಯ ಪರವಾನಗಿ ಹೊಂದಿರುವುದರಿಂದ, ಕರ್ನಾಟಕ ಅಬಕಾರಿ ಕಾಯ್ದೆ- 1965ರ ಕಲಂ 32 ಹಾಗೂ 34ರಡಿ ಅಪರಾಧವಲ್ಲ. ಮೇಲ್ನೋಟಕ್ಕೆ ಇದು ನೀತಿ ಸಂಹಿತೆ ಹೆಸರಿನಲ್ಲಿ ಇಲಾಖೆ ಮಾಡಿರುವ ಕಾನೂನಿನ ದುರುಪಯೋಗ' ಎಂದು ಹೇಳಿದೆ.

ಸುಧಾ ಓದಿರಿ...

ಮದ್ರಾಸ್ ಉಚ್ಚ ನ್ಯಾಯಾಲಯ
ನ್ಯಾಯವ್ಯಾಪ್ತಿಯಲ್ಲಿ
(ಸಾಮಾನ್ಯ ಮೂಲ ಸಿವಿಲ್ ನ್ಯಾಯವ್ಯಾಪ್ತಿ)
ಒ.ಎ. ನಂ. 996 & 997/2023
ರಲ್ಲಿ
ಎ.ನಂ. 6207/2023
ರಲ್ಲಿ
ಸಿ.ಎಸ್. (ಕಮರ್ಷಿಯಲ್ ಡಿವಿಜನ್)
ನಂ. 284/2023

ಮೆ. ಕಾಲಿಸುವಾರಿ ರಿಫೈನರಿ ಪ್ರೈವೇಟ್ ಲಿಮಿಟೆಡ್
...ಅರ್ಜಿದಾರ/ಪ್ಲೇಂಟಿಫ್
–ವಿರುದ್ಧ–
ಹೆಚ್.ಕೆ.ಗ್ಲೋಬಲ್ ಎಂಟರ್‌ಪ್ರೈಸಸ್
...ಪ್ರತಿವಾದಿ/ಡಿಫೆಂಡಂಟ್
ಗೆ
ಹೆಚ್.ಕೆ.ಗ್ಲೋಬಲ್ ಎಂಟರ್‌ಪ್ರೈಸಸ್
ಟಿಆರ್ ಲೇಔಟ್, ಮಾಗಡಿ ಪಟ್ಟಣ, ಬಿಜಿಎಸ್ ಕಾಲೇಜ್ ಹತ್ತಿರ, ರಾಮನಗರ ಜಿಲ್ಲೆ–562120

ದಯವಿಟ್ಟು ಗಮನಿಸಿ ಮೇಲೆ ಹೆಸರಿಸಲಾಗಿರುವ ಅರ್ಜಿದಾರ/ಪ್ಲೇಂಟಿಫ್ ಇವರಿಂದ ಮಾನ್ಯ ನ್ಯಾಯಾಲಯದ ಸಮ್ಮುಖದಲ್ಲಿ, ಮೇಲ್ಕಂಡ ಸಿ.ಎಸ್. (ಕಮರ್ಷಿಯಲ್ ಡಿವಿಜನ್) ನಂ. 284/2023 ರಲ್ಲಿನ ಎ.ನಂ. 6207/2023 ರಲ್ಲಿನ ಒ.ಎ. ನಂ. 996 & 997/2023 ಅರ್ಜಿ ಸಲ್ಲಿಕೆಯಾಗಿದ್ದು, ವಿಷಯವು 24.04.2024 ರಂದು ವಿಚಾರಣೆಗೆ ಸನ್ನಿಹಿತವಾಗಿದೆ ಮತ್ತು ಮಾನ್ಯ ನ್ಯಾಯಾಲಯವು "ದಿ ಹಿಂದೂ" ಆಂಗ್ಲಭಾಷೆ ದಿನಪತ್ರಿಕೆಯಲ್ಲಿ ಮತ್ತು ಒಂದು ಜನಪ್ರಿಯ ಕನ್ನಡ ದಿನಪತ್ರಿಕೆಯಲ್ಲಿ 07.06.2024 ರಂದು ವಿಷಯದ ವಿಚಾರಣೆ ಕುರಿತಂತೆ ಪತ್ರಿಕಾ ಪ್ರಕಟಣೆ ಹೊರಡಿಸಲು ನಿರ್ದೇಶನ ನೀಡಿರುತ್ತದೆ. ಆದ್ದರಿಂದ, ದಿನಾಂಕ 07.06.2024 ರಂದು ಖುದ್ದಾಗಿಯಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಹಾಜರಾಬೇಕೆಂದು ಸೂಚಿಸಲಾಗಿದೆ, ಇದಕ್ಕೆ ತಪ್ಪಿದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ಏಕಪಕ್ಷೀಯವಾಗಿ ಈ ವಿಷಯವನ್ನು ಇತ್ಯರ್ಥಪಡಿಸಲಾಗುತ್ತದೆ.

ವಿಜಯನ್ ಸುಬ್ರಮಣಿಯನ್
ಅರ್ಜಿದಾರ/ಪ್ಲೇಂಟಿಫ್ ಪರ ವಕೀಲರು

ನೀರಿನ ಸಮಸ್ಯೆ: ಬೆಂಗಳೂರು ವಿ.ವಿ ವಿದ್ಯಾರ್ಥಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರು ಪೂರೈಕೆಯಲ್ಲಿ ವ್ಯತ್ಯಯ ಖಂಡಿಸಿ ಬೆಂಗಳೂರು ವಿಶ್ವವಿದ್ಯಾಲಯದ ಹಾಸ್ಟೆಲ್ ವಿದ್ಯಾರ್ಥಿಗಳು ಶನಿವಾರ ಪ್ರತಿಭಟಿಸಿದರು.

ಶುಕ್ರವಾರ ರಾತ್ರಿ ವಿದ್ಯುತ್ ವ್ಯತ್ಯಯವಾಗಿ ಸಂಪ್‌ನಿಂದ 'ಓವರ್‌ಹೆಡ್' ಟ್ಯಾಂಕ್‌ಗೆ ನೀರು ಸರಬರಾಜು ಆಗದೇ ವಿದ್ಯಾರ್ಥಿಗಳು ಪರದಾಡಿದರು.

ಹೆಚ್ಚಿನ ಸಾಮರ್ಥ್ಯದ 'ಓವರ್ ಹೆಡ್' ಟ್ಯಾಂಕ್‌ಗಳನ್ನು ಒದಗಿಸಲು ಕೆಲ ಸಮಯದಿಂದಲೂ ಬೇಡಿಕೆ ಇಟ್ಟಿದ್ದೆವು. ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದ್ದರು. ಈಗ ಸಮಸ್ಯೆ ಎದುರಿಸುವಂತಾಗಿದೆ. ಇದರಿಂದ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ನಂತರ ಟ್ಯಾಂಕರ್‌ಗಳಲ್ಲಿ ನೀರು ಪೂರೈಸಲು ವಿಶ್ವವಿದ್ಯಾಲಯದ ಅಧಿಕಾರಿಗಳು ಕ್ರಮಕೈಗೊಂಡರು. ಸಮಸ್ಯೆಗೆ ಶಾಶ್ವತವಾದ ಪರಿಹಾರ ದೊರಕಿಸುವ ಭರವಸೆ ನೀಡಿದರು.

'ಇನ್ನೂ 3 ಹೊಸ ಸಂಚಾರ ಠಾಣೆ ಆರಂಭ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಸಂಚಾರ ದಟ್ಟಣೆ ನಿಯಂತ್ರಣ ಹಾಗೂ ಸಂಚಾರ ವ್ಯವಸ್ಥೆ ಸುಧಾರಿಸಲು ಮತ್ತೆ ಹೊಸದಾಗಿ ಮೂರು ಸಂಚಾರ ಠಾಣೆಗಳನ್ನು ಆರಂಭಿಸಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿದರು.

ಪಶ್ಚಿಮ ವಿಭಾಗ (ಸಂಚಾರ) ಪೊಲೀಸ್ ವತಿಯಿಂದ ರಾಜಾಜಿನಗರದ ಕೈಗಾರಿಕಾ ಪ್ರದೇಶದಲ್ಲಿ ಶನಿವಾರ ನಡೆದ ಜನಸಂಪರ್ಕ ಸಭೆಯಲ್ಲಿ ಅವರು ಮಾತನಾಡಿದರು.

'ಜ್ಞಾನಭಾರತಿ ಮತ್ತು ಚಿಕ್ಕಬಾಣಾವರದಲ್ಲಿ ಹೊಸದಾಗಿ ಸಂಚಾರ ಪೊಲೀಸ್ ಠಾಣೆಗಳನ್ನು ಆರಂಭಿಸಲಾಗಿದೆ. ಇದೇ ವರ್ಷದಲ್ಲಿ ಶೇಷಾದ್ರಿಪುರ, ಜ್ಯೋತಿನಗರ ಮತ್ತು ಸಂಜಯನಗರದಲ್ಲೂ ಹೊಸ ಸಂಚಾರ ಠಾಣೆ ಸ್ಥಾಪಿಸಲಾಗುವುದು. ಬಳಿಕ ಠಾಣೆಗಳ ಸಂಖ್ಯೆ 53ಕ್ಕೆ ಏರಲಿದೆ. 143 ಪೊಲೀಸ್ ಚೌಕಿಗಳಿವೆ. ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ಹೊಸದಾಗಿ 5 ಸಿಗ್ನಲ್‌ಗಳನ್ನು ನಿರ್ಮಿಸಲಾಗುವುದು' ಎಂದು ಮಾಹಿತಿ ನೀಡಿದರು.

ನೋಟಿಸ್: ಮಾಳವೀಯಾ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಹಾಕಿದ್ದ ಪ್ರಕರಣ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ನೀಡಿದ್ದ ನೋಟಿಸ್ ಸ್ವೀಕರಿಸಲು ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಅವರು ನಿರಾಕರಿಸಿದ್ದಾರೆ.

ಪಶ್ಚಿಮ ಬಂಗಾಳದ ಕೃಷ್ಣನಗರ ಹೋಟೆಲ್‌ನಲ್ಲಿ ಅಮಿತ್ ಮಾಳವೀಯಾ ಅವರನ್ನು ಭೇಟಿಯಾದ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆ ಪೊಲೀಸರು ನೋಟಿಸ್ ನೀಡಲು ಮುಂದಾಗಿದ್ದರು. ಆದರೆ, ಪೊಲೀಸರು ತಂದಿದ್ದ ನೋಟಿಸ್ ಸ್ವೀಕರಿಸದ ಅಮಿತ್ ಮಾಳವೀಯಾ, 'ಈಗಾಗಲೇ ಇ-ಮೇಲ್ ಮೂಲಕ ನನಗೆ ನೋಟಿಸ್ ಬಂದಿದೆ. ನೋಟಿಸ್‌ಗೆ ಉತ್ತರ ನೀಡಲು 7 ದಿನ ಅವಕಾಶ ಇದೆ ಎಂದು ಹೇಳಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಪ್ರಚೋದನಕಾರಿ ವಿಡಿಯೊ ಪೋಸ್ಟ್ ಅಪ್‌ಲೋಡ್ ಮಾಡಿದ್ದ ಆರೋಪದಡಿ ಪ್ರಕರಣ ದಾಖಲಾಗಿತ್ತು. ವಿಚಾರಣೆಗೆ ಹಾಜರಾಗುವಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೂ ನೋಟಿಸ್ ಜಾರಿ ಆಗಿತ್ತು.

ರಾಜ್ಯಮಟ್ಟದ ಸಮ್ಮೇಳನದಲ್ಲಿ ಸಾಮಾಜಿಕ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಆಗ್ರಹ

‘ಲಿಂಗತ್ವ ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಿಂಗತ್ವ ಅಲ್ಪಸಂಖ್ಯಾತರನ್ನು ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಹಾಗೂ ವಿಧಾನ ಪರಿಷತ್‌ಗೆ ಆಯ್ಕೆ ಮಾಡುವುದರ ಮೂಲಕ ರಾಜಕೀಯ ಪ್ರಾತಿನಿಧ್ಯ ನೀಡಬೇಕು’ ಎಂದು ಸಾಮಾಜಿಕ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಆಗ್ರಹಿಸಿದರು.

ಕರ್ನಾಟಕ ರಾಜ್ಯ ಲಿಂಗತ್ವ ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ–ಕೋಯಲೀಷನ್ ಫಾರ್ ಕನ್ವರ್ಜೆನ್ಸ್ ಶನಿವಾರ ಆಯೋಜಿಸಿದ್ದ ‘ಲಿಂಗತ್ವ ಅಲ್ಪಸಂಖ್ಯಾತರ ರಾಜಕೀಯ ಪ್ರಾತಿನಿಧ್ಯ ರಾಜ್ಯಮಟ್ಟದ ಸಮ್ಮೇಳನ’ದಲ್ಲಿ ಅವರು ಮಾತನಾಡಿದರು.

‘ದೇಶದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಸಿಗಬೇಕಾದ ಮೂಲಭೂತ ಹಕ್ಕುಗಳು ಸಿಗುತ್ತಿಲ್ಲ. ಹೀಗಿದ್ದಾಗ ನಾವು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಹೇಗೆ ಆಚರಿಸಬೇಕು. ಎಲ್ಲ ಸಮುದಾಯ ಗಳಿಗೆ ನೀಡಿದಂತೆ ಶೇಕಡಾವಾರು ರಾಜಕೀಯ ಪ್ರಾತಿನಿಧ್ಯವನ್ನು ನಮಗೂ ಒದಗಿಸಬೇಕು.

ಸಮ್ಮೇಳನದಲ್ಲಿ ಭಾಗವಹಿಸಿದ್ದವರ ಜೊತೆ ಅಕ್ಕೈ ಪದ್ಮಶಾಲಿ ಚರ್ಚಿಸಿದರು. ರಿಹಾನ, ಕೆ. ಷರೀಫಾ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಸಮುದಾಯದ ಪ್ರತಿನಿಧಿ ಯೊಬ್ಬರು ಶಾಸನಸಭೆಗಳಲ್ಲಿದ್ದರೆ ನಮ್ಮವರ ಹಕ್ಕುಗಳಿಗಾಗಿ ಧ್ವನಿ ಎತ್ತುತ್ತಾರೆ’ ಎಂದರು.

ಲೇಖಕಿ ಕೆ. ಷರೀಫಾ, ‘ಲಿಂಗತ್ವ ಅಲ್ಪಸಂಖ್ಯಾತರ ಬದುಕು ಬೀದಿಗೆ ಬಂದಿದೆ. ಸರ್ಕಾರ ಅವರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಬೇಕು. ಇವರಿಗೆ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಸೇರಿದಂತೆ ಮೂಲಸೌಕರ್ಯಗಳನ್ನು ಕಲ್ಪಿಸಬೇಕು’ ಎಂದು ಒತ್ತಾಯಿಸಿದರು.

‘ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಲಿಂಗತ್ವ ಅಲ್ಪಸಂಖ್ಯಾತರಿಗೆ ರಾಜಕೀಯ ಪ್ರಾತಿನಿಧ್ಯ ನೀಡುವ ಕುರಿತು ಚರ್ಚೆಯ ವಿಷಯವನ್ನಾಗಿ ಪರಿಗಣಿಸಬೇಕು. ವಿಧಾನ ಪರಿಷತ್ತಿನಲ್ಲಿ ಸಮುದಾಯದವರಿಗೆ ಅವಕಾಶ ಕಲ್ಪಿಸಿದ ಮೊದಲ ಪಕ್ಷ ಎಂಬ ಹೆಗ್ಗಳಿಕೆ ಕಾಂಗ್ರೆಸ್ ಸಲ್ಲಲಿ’ ಎಂದು ಒತ್ತಾಯಿಸಲಾಯಿತು.

‘ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಬದುಕು, ಹಕ್ಕುಗಳ ಕುರಿತು ಸರ್ಕಾರ ನಿರ್ಣಯಿಸುವಾಗ ಸಮುದಾಯದ ಪ್ರತಿನಿಧಿಗಳಿಗೂ ಅವಕಾಶ ಇರಬೇಕು. ಸಮುದಾಯವನ್ನು ಈಗ ದೇಶದ ಎಲ್ಲ ಪ್ರಜಾಸತ್ತಾತ್ಮಕ ಸಂಸ್ಥೆಗಳಿಂದ ಹೊರಗಿಟ್ಟಿರುವುದು ಸರಿಯಲ್ಲ’ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಬೇಡಿಕೆಗಳು

- ಶೇಕಡಾವಾರು ರಾಜಕೀಯ ಪ್ರಾತಿನಿಧ್ಯ
- ಲಿಂಗತ್ವ ಅಲ್ಪಸಂಖ್ಯಾತರು ಬದುಕು ಕಟ್ಟಿಕೊಳ್ಳಲು ಎಲ್ಲ ರೀತಿಯ ಸೌಲಭ್ಯ
- ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಸೇರಿದಂತೆ ಮೂಲಸೌಕರ್ಯ

‘ಸಹಕಾರಿ ಬ್ಯಾಂಕ್‌ಗಳು ವಿಶ್ವಾಸ ಹೆಚ್ಚಿಸಿಕೊಳ್ಳಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಹಕಾರಿ ಬ್ಯಾಂಕುಗಳು ವಿಶ್ವಾಸಾರ್ಹತೆ ಹೆಚ್ಚಿಸಿಕೊಂಡು ಉತ್ತಮ ಸೇವಾ ಮನೋಭಾವದಲ್ಲಿ ಕಾರ್ಯನಿರ್ವಹಿಸುವ ಅವಶ್ಯಕತೆ ಇದೆ’ ಎಂದು ವಿಮರ್ಶಕ ನರಹಳ್ಳಿ ಬಾಲಸುಬ್ರಮಣ್ಯ ಹೇಳಿದರು.

ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್‌ನ ವಜ್ರ ಮಹೋತ್ಸವದ ವರ್ಷಾಚರಣೆಯ ಸಂದರ್ಭದಲ್ಲಿ ಕೆಂಗೇರಿಯ ನಾಗದೇವನಹಳ್ಳಿಯಲ್ಲಿ 13ನೇ ಶಾಖೆಯನ್ನು ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಚಂದ್ರಶೇಖರ ನಾಥ ಸ್ವಾಮೀಜಿ ಅವರು, ‘ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕಿನ ವಹಿವಾಟು ಗಮನಿಸಿದಾಗ ಉತ್ತಮ ಸಾಧನೆ ಕಂಡು ಬರುತ್ತಿದೆ. ರಾಷ್ಟ್ರೀಕೃತ ಬ್ಯಾಂಕುಗಳ ಸೌಲಭ್ಯಗಳು ಸಹಕಾರಿ ಬ್ಯಾಂಕುಗಳಲ್ಲಿ ಒದಗಿಸಿದರೆ ಅನುಕೂಲ’ ಎಂದು ಅಭಿಪ್ರಾಯಪಟ್ಟರು.

ಕೆಂಗೇರಿಯ ನಾಗದೇವನಹಳ್ಳಿಯಲ್ಲಿ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್‌ನ 13ನೇ ಶಾಖೆ ಉದ್ಘಾಟನಾ ಸಮಾರಂಭದಲ್ಲಿ ಚಂದ್ರಶೇಖರನಾಥ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು.

ಬ್ಯಾಂಕಿನ ಅಧ್ಯಕ್ಷ ಎಂ.ಆರ್. ವೆಂಕಟೇಶ್, ‘ರಾಷ್ಟ್ರೀಕೃತ ಬ್ಯಾಂಕುಗಳು ನೀಡುವ ಎಲ್ಲ ಸವಲತ್ತುಗಳನ್ನು ನಮ್ಮ ಗ್ರಾಹಕರಿಗೆ ನೀಡಲಾಗುತ್ತಿದೆ. ಮಹಿಳೆಯರ ಸಬಲೀಕರಣ ಹಾಗೂ ಗುಡಿ ಕೈಗಾರಿಕೆಗಳನ್ನು ಉತ್ತೇಜಿಸಲು ವಿವಿಧ ಯೋಜನೆಗಳನ್ನು ರೂಪಿಸಲಾಗಿದೆ’ ಎಂದು ಹೇಳಿದರು.

ಬಿಬಿಎಂಪಿ ಮಾಜಿ ಸದಸ್ಯರಾದ ಮುನಿರಾಜು, ಅಂಜನಾಮೂರ್ತಿ, ಯತೀಶ್ ಭಾಗವಹಿಸಿದ್ದರು.

ಗಮನ ಸೆಳೆದ ತಂತ್ರಜ್ಞಾನ ಪ್ರಾತ್ಯಕ್ಷಿಕೆ

ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಿಂದ ರಾಷ್ಟ್ರೀಯ ತಂತ್ರಜ್ಞಾನ ದಿನ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ತಂತ್ರಜ್ಞಾನ ದಿನ ನಿಮಿತ್ತ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ ಏರ್ಪಡಿಸಿದ್ದ ‘ಟೆಕ್ನೋಮೀಟ್ ಫಾರ್ ಸೊಸೈಟಿ- 2024’ ತಂತ್ರಜ್ಞಾನ ಆವಿಷ್ಕಾರ ಮತ್ತು ಪ್ರಾತ್ಯಕ್ಷಿಕೆ ಪ್ರದರ್ಶನದಲ್ಲಿ ಸೌರಶಕ್ತಿ ಚಾಲಿತ ರೊಬೊಟ್ ಸೇರಿ ವಿವಿಧ ಸಾಧನಗಳು ಗಮನಸೆಳೆದವು.

ಶನಿವಾರ ನಡೆದ ಈ ಪ್ರದರ್ಶನಕ್ಕೆ ಸಿಎಂಆರ್ ತಾಂತ್ರಿಕ ಮಹಾ ವಿದ್ಯಾಲಯದ ಪ್ರಾಂಶುಪಾಲ ಸಂಜಯ್ ಜೈನ್ ಹಾಗೂ ಉಪಪ್ರಾಂಶುಪಾಲ ಬಿ.ನರಸಿಂಹ ಮೂರ್ತಿ ಚಾಲನೆ ನೀಡಿದರು. ವಿದ್ಯಾರ್ಥಿಗಳು ಆವಿಷ್ಕರಿಸಿದ್ದ ಪ್ರಾತ್ಯಕ್ಷಿಕೆ ಎಲ್ಲರನ್ನು ಆಕರ್ಷಿಸಿತು.

ಬ್ಲೂಟೂತ್ ನಿಯಂತ್ರಿತ ರೊಬೊಟ್, ಸುಧಾರಿತ ನೀರಿನ ಶುದ್ಧೀಕರಣ ಸಾಧನ, ರೇಷ್ಮೆ ಉಪಕರಣ ಸಾಧನ, ಭ್ರೂಣದ ಚಲನೆ ಗುರುತಿಸುವ ತಂತ್ರಾಂಶ ಸಾಧನ, ಮೊಬೈಲ್ ಆಟಗಳಲ್ಲಿ ದೈಹಿಕ ಚಟುವಟಿಕೆ ಸಕ್ರಿಯಗೊಳಿಸುವ ತಂತ್ರಾಂಶ, ದೂಳಿನ ಕಣಗಳನ್ನು ಗಾಳಿಯಲ್ಲಿ ಶುದ್ಧೀಕರಿಸುವ ಸಾಧನ, ವಾಹನ ಚಾಲನೆ ಸಮಯದಲ್ಲಿ ಅರೆನಿದ್ರಾವಸ್ಥೆ ಪತ್ತೆಕಾರಕ ಸಾಧನ ಸೇರಿ ವಿವಿಧ ಆವಿಷ್ಕಾರ ಸಾಧನಗಳಿದ್ದವು.

ಪ್ರದರ್ಶನದಲ್ಲಿ ಕೆ.ಸಿ. ರಾಮಮೂರ್ತಿ ಅವರಿಗೆ ವಿದ್ಯಾರ್ಥಿಗಳು ಯಂತ್ರಾಂಶ ಮತ್ತು ತಂತ್ರಾಂಶ ಮಾದರಿಗಳ ಬಗ್ಗೆ ವಿವರಣೆ ನೀಡಿದರು

ಎಐ ಆ್ಯಂಡ್ ಎಂಎಲ್ ವಿದ್ಯಾರ್ಥಿಗಳಾದ ಕೀರ್ತಿ ಮತ್ತು ತಂಡ ಆವಿಷ್ಕರಿಸಿದ್ದ ಅರೆನಿದ್ರಾವಸ್ಥೆ ಪತ್ತೆಕಾರಕ ಸಾಧನ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಇಸಿಇ ವಿದ್ಯಾರ್ಥಿಗಳು ಆವಿಷ್ಕರಿಸಿದ ಧ್ವನಿ ಆಪರೇಟರ್ ಸ್ಮಾರ್ಟ್ ಕನ್ನಡಿ ಸಾಧನವು ಹವಾಮಾನ ಮುನ್ಸೂಚನೆ, ದಿನಾಂಕ, ವಾರ, ದಿನದ ಪ್ರಚಲಿತ ಸುದ್ದಿಗಳನ್ನು ನೀಡಲಿದೆ.

ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸಿ ಮಾತನಾಡಿದ ಸಿಎಂಆರ್ ವಿಶ್ವವಿದ್ಯಾಲಯದ ಅಧ್ಯಕ್ಷ ಕೆ.ಸಿ ರಾಮಮೂರ್ತಿ, ‘ತಂತ್ರಜ್ಞಾನದ ಈ ಯುಗದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಮೇಲಿನ ಅವಲಂಬನೆ ಹೆಚ್ಚಿದೆ. ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿರುವ ತಂತ್ರಜ್ಞಾನ ಆವಿಷ್ಕಾರಗಳು ಭವಿಷ್ಯದ ವಿಜ್ಞಾನಿಗಳನ್ನಾಗಿ ರೂಪಿಸುವ ದಿಕ್ಸೂಚಿಯಾಗಿವೆ’ ಎಂದು ಹೇಳಿದರು.

ಪ್ರೀತಿ ಶುಭಚಂದ್ರಗೆ ‘ಚಾವುಂಡರಾಯ ದತ್ತಿ ಪ್ರಶಸ್ತಿ’

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ನೀಡುವ ‘ಚಾವುಂಡರಾಯ ದತ್ತಿ ಪ್ರಶಸ್ತಿ’ಗೆ ಲೇಖಕಿ ಪ್ರೀತಿ ಶುಭಚಂದ್ರ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದಲ್ಲಿ ಈ ಆಯ್ಕೆ ನಡೆದಿದೆ. ಪ್ರಶಸ್ತಿ ₹ 30 ಸಾವಿರ ನಗದು ಒಳಗೊಂಡಿದೆ.

ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ಪರಿಷತ್ತಿನಲ್ಲಿ ಈ ದತ್ತಿ ಸ್ಥಾಪಿಸಿದ್ದು, ಪ್ರಾಚೀನ ಜೈನ ಸಾಹಿತ್ಯ ಆಧರಿಸಿ ಆಧುನಿಕ ಕನ್ನಡ ಭಾಷೆಯಲ್ಲಿ ರಚಿಸಿದ ಪ್ರಬಂಧ, ಸಂಶೋಧನೆ, ವಿಮರ್ಶೆ, ಕಾದಂಬರಿ, ನಾಟಕ, ಕಥಾ ಸಾಹಿತ್ಯ ಪ್ರಕಾರಗಳ ಲೇಖಕರಿಗೆ ಅಥವಾ ಗ್ರಂಥ ಸಂಪಾದಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರೀತಿ ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ಚಿಣ್ಣರ ಶಿಬಿರ

ನಾಟ್ಯಮಯೂರಿ ಕಲಾ ಟ್ರಸ್ಟ್ ಜ್ಞಾನಭಾರತಿಯ ಮರಿಯಪ್ಪನ ಪಾಳ್ಯದ ನಗೆ ಮನೆ ಅವರಣದಲ್ಲಿ ಹಮ್ಮಿಕೊಂಡಿದ್ದ ಬೇಸಿಗೆ ಚಿಣ್ಣರ ಶಿಬಿರ ಹಬ್ಬವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚಂದ್ರಶೇಖರ್ ಉದ್ಘಾಟಿಸಿದರು. ರಂಗಭೂಮಿ ನಟಿ ಆಶಾರಾಣಿ, ನಾಟ್ಯಮಯೂರಿ ಕಲಾ ಟ್ರಸ್ಟ್‌ನ ವ್ಯವಸ್ಥಾಪಕ ನಿರ್ದೇಶಕಿ ಅನ್ನಪೂರ್ಣ ಪಾಲ್ಗೊಂಡಿದ್ದರು

ಚಾಣಕ್ಯ ಸ್ಕೂಲ್ ಆಫ್ ಬಯೋಸೈನ್ಸ್ ಪ್ರಯೋಗಾಲಯ ಉದ್ಘಾಟನಾ ಸಮಾರಂಭದಲ್ಲಿ ಬಯೋಕಾನ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಭಾಗವಹಿಸಿದ್ದರು. ಚಾಣಕ್ಯ ವಿಶ್ವವಿದ್ಯಾನಿಲಯದ ಕುಲಪತಿ ಎಚ್.ಎಸ್. ಅಶೋಕ್, ಕುಲಾಧಿಪತಿ ಎಂ.ಕೆ. ಶ್ರೀಧರ್, ಕುಲಪತಿ ಎಂ.ಪಿ. ಕುಮಾರ್, ಸಹಕುಲಾಧಿಪತಿ ನಾಗರಾಜ್ ರೆಡ್ಡಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಶಾಂತ್ ಜೋಶಿ ಉಪಸ್ಥಿತರಿದ್ದರು

ಚಿಂತನಾಶೀಲ ನಾಯಕರ ರೂಪಿಸುವ ಬಯೋಸೈನ್ಸ್: ಕಿರಣ್ ಮಜುಂದಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂದಿನ ಪೀಳಿಗೆಯನ್ನು ಚಿಂತನಾಶೀಲ ನಾಯಕರನ್ನಾಗಿ ರೂಪಿಸಲು ಬಯೋಸೈನ್ಸ್ ಸಹಕಾರಿಯಾಗಲಿದೆ’ ಎಂದು ಬಯೋಕಾನ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ತಿಳಿಸಿದರು.

ಚಾಣಕ್ಯ ಸ್ಕೂಲ್ ಆಫ್ ಬಯೋಸೈನ್ಸ್ ಪ್ರಯೋಗಾಲಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇದು ಶಿಕ್ಷಣ ಮತ್ತು ಸಂಶೋಧನೆಯನ್ನು ಹೆಚ್ಚಿಸುವುದಲ್ಲದೇ ಸಾಮೂಹಿಕ ಅನ್ವೇಷಣೆ ಹಾಗೂ ಆರೋಗ್ಯ ರಕ್ಷಣೆ, ಪರಿಸರ ಸುಸ್ಥಿರತೆಗೆ ಜಾಗತಿಕ ಸವಾಲುಗಳನ್ನು ಎದುರಿಸಲು ಒಂದು ದಿಟ್ಟ ಹೆಜ್ಜೆ ಎಂದು ಅವರು ಬಣ್ಣಿಸಿದರು.

ಸುಧಾರಿತ ಉಪಕರಣಗಳು ಮತ್ತು ಮೂಲಸೌಕರ್ಯಗಳೊಂದಿಗೆ ಸುಸಜ್ಜಿತವಾಗಿರುವ ಬಯೋ ಸೈನ್ಸ್‌ನಲ್ಲಿ ಲ್ಯಾಬ್ ಜೀನೋಮಿಕ್ಸ್, ಬಯೋ ಎಂಜಿನಿಯರಿಂಗ್, ಡೀಸೆಲ್ ಬಯಾಲಜಿ, ಕಂಪ್ಯೂಟೇಷನಲ್ ಬಯಾಲಜಿ ಸಹಿತ ವಿವಿಧ ಚಟುವಟಿಕೆಗಳು ನಡೆಯಲಿವೆ ಎಂದು ತಿಳಿಸಿದರು.

ಐಪಿಎಲ್: ವಾಹನ ನಿಲುಗಡೆ ನಿರ್ಬಂಧ

ಬೆಂಗಳೂರು: ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೇ 12ರಂದು ‘ರಾಯಲ್ ಚಾಲೆಂಜರ್ಸ್ ಬೆಂಗಳೂರು’ ಹಾಗೂ ‘ದೆಹಲಿ ಕ್ಯಾಪಿಟಲ್ಸ್’ ತಂಡಗಳ ನಡುವೆ ಐಪಿಎಲ್ ಟೂರ್ನಿಯ ಕ್ರಿಕೆಟ್ ಪಂದ್ಯ ನಡೆಯಲಿದ್ದು, ಕ್ರೀಡಾಂಗಣದ ಸುತ್ತಮುತ್ತಲ ರಸ್ತೆಗಳಲ್ಲಿ ಮಧ್ಯಾಹ್ನ 3ರಿಂದ ರಾತ್ರಿ 11ರ ವರೆಗೆ ವಾಹನಗಳ ನಿಲುಗಡೆ ಹಾಗೂ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

ವಾಹನಗಳ ನಿಲುಗಡೆ ನಿರ್ಬಂಧಿತ ರಸ್ತೆಗಳು: ಕ್ವೀನ್ಸ್ ರಸ್ತೆ, ಮಹಾತ್ಮ ಗಾಂಧಿ ರಸ್ತೆ, ಎಂ.ಜಿ ರಸ್ತೆಯಿಂದ ಕಬ್ಬನ್ ರಸ್ತೆ, ರಾಜಭವನ ರಸ್ತೆ, ಸೆಂಟ್ರಲ್ ಸ್ಟ್ರೀಟ್ ರಸ್ತೆ, ಕಬ್ಬನ್ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ, ಕಸ್ತೂರಿ ಬಾ ರಸ್ತೆ, ಅಂಬೇಡ್ಕರ್ ವೀದಿ ರಸ್ತೆ, ಟ್ರಿನಿಟಿ ವೃತ್ತ, ಲ್ಯಾವೆಲ್ಲೆ ರಸ್ತೆ, ವಿಠ್ಠಲ್‌ಮಲ್ಯ ರಸ್ತೆ, ಕಿಂಗ್ಸ್ ರಸ್ತೆ ಮತ್ತು ನೃಪತುಂಗ ರಸ್ತೆ.

ಸಾರ್ವಜನಿಕ ವಾಹನಗಳ ನಿಲುಗಡೆ ಸ್ಥಳಗಳು: ಸೇಂಟ್ ಜೋಸೆಫ್ ಇಂಡಿಯನ್ ಸ್ಕೂಲ್ ಮೈದಾನ, ಯುಬಿ ಸಿಟಿ ಪಾರ್ಕಿಂಗ್ ಸ್ಥಳ, ಬಿಎಂಟಿಸಿ ಬಸ್ ನಿಲ್ದಾಣದ ಮೊದಲನೇ ಮಹಡಿ ಹಾಗೂ ಓಲ್ಡ್ ಕೆಜಿಐಡಿ ಬಿಲ್ಡಿಂಗ್, ಕಿಂಗ್ಸ್ ರಸ್ತೆ, (ಕಬ್ಬನ್‌ಪಾರ್ಕ್ ಒಳಭಾಗ).

‘ಪ್ರಾಣಿ ಜಗತ್ತು ಜೊತೆಗಿನ ಸಂಬಂಧ ದಾಖಲಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಾಣಿ ಜಗತ್ತಿನೊಂದಿಗಿನ ಮನುಷ್ಯ ಸಂಬಂಧವನ್ನು ದಾಖಲಿಸುವ ಕೆಲಸ ಆಗಬೇಕು. ಮನುಷ್ಯರಿಗಿಂತ ಹೆಚ್ಚು ನಂಬಿಕೆ, ನಿಷ್ಠೆಯನ್ನು ಪ್ರಾಣಿಗಳಲ್ಲಿ ಕಾಣಬಹುದು’ ಎಂದು ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ ತಿಳಿಸಿದರು.

ಶನಿವಾರ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರಿನ ಅಪರಾಜಿತೆ ಪ್ರಕಾಶನ ಹೊರತಂದ ವೇದವತಿ ಕೋದಂಡರಾಮ್ ಅವರ ‘ಯಾವ ಜನ್ಮದ ಮೈತ್ರಿ’ ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

‘ಪ್ರಾಣಿ ಜಗತ್ತು ಜತೆಗಿನ ಮನುಷ್ಯ ಸಂಬಂಧವನ್ನು ಇಂಗ್ಲಿಷ್‌ನಲ್ಲಿ ದಾಖಲಿಸಲಾಗಿದೆ. ಕನ್ನಡದಲ್ಲಿಯೂ ಈ ಕೆಲಸ ಆಗಬೇಕಿದೆ. ಕುವೆಂಪು ಅವರ ‘ಮಲೆಗಳಲ್ಲಿ ಮದುಮಗಳು’ ಕೃತಿಯಲ್ಲಿ ಪ್ರಾಣಿ ಮತ್ತು ಮನುಷ್ಯರ ನಡುವಿನ ಅವಿನಾಭಾವ ಸಂಬಂಧವನ್ನು ಕಟ್ಟಿಕೊಡಲಾಗಿದೆ. ಪೂರ್ಣಚಂದ್ರ ತೇಜಸ್ವಿ ಅವರು ಕೆಲವು ಕೃತಿಗಳಲ್ಲಿ ಪ್ರಾಣಿ ಜತೆಗಿನ ಸಂಬಂಧವನ್ನು ಉಲ್ಲೇಖಿಸಿದ್ದಾರೆ. ವೇದವತಿ ಅವರು ನಾಯಿಗಳ ಜತೆಗೆ ತಾವು, ಕುಟುಂಬದ ಸದಸ್ಯರು ಹೊಂದಿದ್ದ ಸಂಬಂಧಗಳನ್ನು ಪ್ರಸಂಗಗಳ ಮೂಲಕ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ’ ಎಂದರು.

ಕಾರ್ಯಕ್ರಮದಲ್ಲಿ ವೇದವತಿ ಕೋದಂಡರಾಮ್ (ಎಡದಿಂದ ನಾಲ್ಕನೆಯವರು) ಅವರ ‘ಯಾವ ಜನ್ಮದ ಮೈತ್ರಿ’ ಪುಸ್ತಕವನ್ನು ಎಸ್‌.ಜಿ.ಸಿದ್ಧರಾಮಯ್ಯ (ಎಡದಿಂದ ಎರಡನೆಯವರು)ಬಿಡುಗಡೆ ಮಾಡಿದರು. (ಎಡದಿಂದ) ಲಕ್ಷ್ಮಣ ಕೊಡಸೆ, ಎಂ. ನಾರಾಯಣಸ್ವಾಮಿ, ಅಪರಾಜಿತೆ ಪ್ರಕಾಶನದ ಮೀನಾ ಮೈಸೂರು ಹಾಗೂ ಆರ್‌.ಎಲ್‌.ಜಾಲಪ್ಪ ಅಕಾಡೆಮಿ ಅಧ್ಯಕ್ಷ ಎಚ್‌.ಎಲ್‌. ಶಿವಾನಂದ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಪಶುವೈದ್ಯಕೀಯ ಕಾಲೇಜಿನ ಡೀನ್ ಪ್ರೊ.ಎಂ.ನಾರಾಯಣಸ್ವಾಮಿ, ‘ಈ ಕೃತಿ ವಿಶ್ವವಿದ್ಯಾಲಯದ ಪಠ್ಯವಾಗಲು ಯೋಗ್ಯ ವಿದೆ. ಸುಂದರ ಕಥಾ ಹಂದರ ಇದ್ದು, ಸಿನಿಮಾ ಮಾಡಬಹುದಾಗಿದೆ. ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಗೆ ಪ್ರತಿ ಕಳಿಸಿಕೊಡುವ ಕೆಲಸ ಮಾಡುತ್ತೇನೆ’ ಎಂದರು.

ಲೇಖಕಿ ವೇದವತಿ ಕೋದಂಡರಾಮ್, ‘ಕುಟುಂಬದ ಸದಸ್ಯರಿಗೆ ಮೊದಲಿನಿಂದಲೂ ಪಶು, ಪ್ರಾಣಿಗಳ ಬಗೆಗೆ ಅಕ್ಕರೆ. ನಮಗೆ ಹಸು ಸಾಕಲಾಗಲಿಲ್ಲ. ನಾಯಿಗಳನ್ನು ಸಾಕಿದೆವು. ಆ ಜೀವಿಗಳ ಉಪಕಾರ, ಋಣವನ್ನು ತೀರಿಸಲು ಸಾಧ್ಯವೇ ಇಲ್ಲ’ ಎಂದರು.

ಪತ್ರಕರ್ತ ಲಕ್ಷ್ಮಣ ಕೊಡಸೆ, ಪ್ರಕಾಶಕಿ ಮೀನಾ ಮೈಸೂರು ಅವರು ವೇದವತಿ ಕೋದಂಡರಾಮ್ ಅವರ ಬರವಣಿಗೆಯನ್ನು ಶ್ಲಾಘಿಸಿದರು.

ಪುಸ್ತಕ ಪರಿಚಯ

ಪುಸ್ತಕ: ‘ಯಾವ ಜನ್ಮದ ಮೈತ್ರಿ’
ಪ್ರಕಾರ: ಅನುಭವ ಕಥನ
ಲೇಖಕರು: ವೇದವತಿ ಕೋದಂಡರಾಮ್
ಪುಟಗಳು: 114
ಬೆಲೆ: ₹140
ಪ್ರಕಾಶನ: ಅಪರಾಜಿತೆ ಪ್ರಕಾಶನ

ಬಿಡಿಎ ವಾಣಿಜ್ಯ ಸಂಕೀರ್ಣಗಳ ಖಾಸಗೀಕರಣಕ್ಕೆ ಎಎಪಿ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡಿಎ ತನ್ನ ಏಳು ಕಾಂಪ್ಲೆಕ್ಸ್‌ಗಳನ್ನು ಖಾಸಗಿಯವರಿಗೆ ನೀಡಲು ನಿರ್ಧರಿಸಿರುವುದನ್ನು ವಿರೋಧಿಸಿ ಆಮ್ ಆದ್ಮಿ ಪಾರ್ಟಿ ಪ್ರತಿಭಟನೆ ನಡೆಸಿತು.

‘6 ವರ್ಷಗಳ ಹಿಂದೆ ಅಂತಿಮಗೊಂಡಿದ್ದ ವಿವಾದಾದತ್ಮಕ ಒಪ್ಪಂದಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮರುಜೀವ ನೀಡಲು ಮುಂದಾಗಿದ್ದು, 7 ಬಿಡಿಎ ಕಾಂಪ್ಲೆಕ್ಸ್‌ಗಳನ್ನು ಶಾಪಿಂಗ್ ಮಾಲ್‌ಗಳನ್ನಾಗಿ ಪರಿವರ್ತಿಸಲಿದೆ. ಸಾವಿರಾರು ಕೋಟಿ ರೂಪಾಯಿ ಬೆಲೆಬಾಳುವ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು ಭೂ ಮಾಫಿಯಾಗಳ ಕೈಗೆ ನೀಡುತ್ತಿದೆ’ ಎಂದು ಪ್ರತಿಭಟನಕಾರರು ಆರೋಪಿಸಿದರು.

‘ಇಂದಿರಾ ನಗರದ ಬಿಡಿಎ ಕಾಂಪ್ಲೆಕ್ಸ್ ಅನ್ನು ದೊಡ್ಡಭೂಗಳ್ಳರಲ್ಲಿ ಒಬ್ಬರಾದ ಕೆ.ಜೆ.ಜಾರ್ಜ್ ಒಡೆತನದ ಎಂಬೆಸ್ಸಿ ಗ್ರೂಪ್‌ಗೆ ನೀಡಲಾಗುತ್ತಿದೆ. ಇಂದಿರಾನಗರದಲ್ಲಿ ಈಗಾಗಲೇ ವ್ಯಾಪಕ ವಾಣಿಜ್ಯೀಕರಣವಾಗಿದೆ. ಮತ್ತೆ ಇಲ್ಲಿ ಕಮರ್ಷಿಯಲ್ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡಲಾಗುತ್ತಿದೆ’ ಎಂದು ಎಎಪಿ ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ತಿಳಿಸಿದರು.

‘ಶಾಪಿಂಗ್ ಮಾಲ್‌ಗಳನ್ನು ಮಾಡಿದರೆ ಶ್ರೀಮಂತರಿಗಷ್ಟೇ ಲಾಭ. ಸಿದ್ದರಾಮಯ್ಯ ಅವರೇ ಬಡವರ ವಿರೋಧಿ ಸರ್ಕಾರವನ್ನಾಗಿ ಮಾಡಬೇಡಿ’ ಎಂದು ನಗರ ಸಂಘಟನಾ ಕಾರ್ಯದರ್ಶಿ ಅಶೋಕ್ ಮೃತ್ಯುಂಜಯ ಒತ್ತಾಯಿಸಿದರು.

ಉದಕಮಂಡಲ ರೇಸ್

ಭರತ್ ಡರ್ಬಿ ಗೆಲ್ಲುವ ನಿರೀಕ್ಷೆ

ಎಚ್‌ಪಿಎಸ್‌ಎಲ್ ನೀಲ್‌ಗಿರೀಸ್ ಡರ್ಬಿ ಸ್ಟೇಕ್ಸ್ ಭಾನುವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದೆ . ಸಮುರಾಯ್ ಬ್ಲೂ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 11ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

ನಮ್ಮ ಆಯ್ಕೆ:
1ನೇ ರೇಸ್: ಅರ್ಜುನ್ 2, ಮಿಸ್ಟರ್ ಸ್ಟಾರ್ಕ್ 4, ಪ್ರಿನ್ಸ್ ಪರ್ಪ್ಲ್ 1
2ನೇ ರೇಸ್: ವೂಲ್ಫ್ ಕ್ರೀಕ್ 2, ಸಿಯಾನ್ 3, ಎಬಿಲಿಟೇರ್
3ನೇ ರೇಸ್: ನಾಟಿ ಡ್ಯಾನ್ಸರ್ 2. ಸ್ಟಿಲ್ ಐ ರೈಸ್ 3. ಡೆಡಿಕೇಟ್ 5
4ನೇ ರೇಸ್: ನ್ಯೂಮಾ 2, ನೈಟ್ ಇನ್ ಹೂವ್ಸ್ 1, ಸುಪ್ರೀಮ್ ಗ್ರ್ಯಾಂಡಿಯರ್ 4
5ನೇ ರೇಸ್: ಭರತ್ 1, ಸ್ಟಾರ್ಮ್ ಶ್ಯಾಡೊ 7, ದಿಸ್ ಈಸ್ ಗೋಲ್ಡ್ 10
6ನೇ ರೇಸ್: ರಾಯಲ್ ಬೆರೊನ್ 1, ಬ್ರಿಲಿಯಂಟ್ ಲೇಡಿ 2, ಕೀ ಟು ದಿ ಮಿಂಟ್ 3
7ನೇ ರೇಸ್: ಡಾರ್ಕ್ ಸನ್ 1, ನಾಟಿ ವಂಡರ್ 5, ಸ್ಪಿರಿಟ್ ಆಫ್ ದಿ ರೊಸ್ 9

ಉತ್ತಮ ಬೆಟ್: ವೂಲ್ಫ್ ಕ್ರೀಕ್
ಜಾಕ್‌ಪಾಟ್ 3,4,5,6,7 | ಟ್ರಿಬಲ್ 5,6,7

‘ಹೋಮ್ ಸ್ಟೇ’ ಅನಧಿಕೃತವೇ ಹೆಚ್ಚು

ಒಂದನೇ ಪುಟದಿಂದ...

ಕೆಲವು ಹೋಮ್ ಸ್ಟೇಗಳು ಅಕ್ರಮ ಚಟುವಟಿಕೆಯ ತಾಣವಾಗಿ ಮಾರ್ಪಟ್ಟ ಬಗ್ಗೆಯೂ ದೂರುಗಳಿವೆ. ಚಿಕ್ಕಮಗಳೂರಿನ ಹೋಮ್ ಸ್ಟೇ ಯೊಂದರಲ್ಲಿ ಇಸ್ಪೀಟ್ ಜೂಜಾಟದಲ್ಲಿ ತೊಡಗಿದ್ದ 25 ಮಂದಿಯನ್ನು 2023ರ ಜೂನ್‌ನಲ್ಲಿ ಪೊಲೀಸರು ಬಂಧಿಸಿದ್ದರು.

‘ಹೋಮ್ ಸ್ಟೇ’ಗಳಲ್ಲಿ ‘ಡ್ರಗ್ ಪಾರ್ಟಿ’ ನಡೆಸಲಾಗುತ್ತಿದೆ ಎಂಬ ದೂರುಗಳೂ ಇವೆ. ಮಂಗಳೂರು ಕಮಿಷನರೇಟ್‌ನ ಪೊಲೀಸರು ಅಂತಹ ಕೆಲವು ಹೋಮ್ ಸ್ಟೇಗಳ ಮೇಲೆ ದಾಳಿಯನ್ನೂ ನಡೆಸಿದ್ದರು. ‘ಮಾದಕ ದ್ರವ್ಯ ವ್ಯಸನಿ’ಗಳು ಹೋಮ್ ಸ್ಟೇಗಳನ್ನು ದುರ್ಬಳಕೆ ಮಾಡಲು ಅವಕಾಶ ಕಲ್ಪಿಸಬಾರದು ಎಂದು ಮಾಲೀಕರಿಗೆ ಸೂಚನೆ ನೀಡಿದ್ದರು.

ಪ್ರವಾಸಕ್ಕೆ ತೆರಳಿದವರು ಅಲ್ಲಿನ ಮನೆಯೊಂದರಲ್ಲೇ ವಾಸ್ತವ್ಯವಿದ್ದು, ಸ್ಥಳೀಯರೊಂದಿಗೆ ಊಟೋಪಚಾರ ಸವಿದು ಕಾಲಕಳೆಯಬೇಕು. ಆ ಊರಿನ ಸಂಸ್ಕೃತಿ, ಆಹಾರ ಪದ್ಧತಿಗಳನ್ನು ತಿಳಿಯಬೇಕು ಎಂಬ ಆಶಯದೊಂದಿಗೆ ಸರ್ಕಾರ ‘ಹೋಮ್ ಸ್ಟೇ’ಗಳಿಗೆ ಅವಕಾಶ ಕಲ್ಪಿಸಿದೆ. ಆದರೆ, ವಾಣಿಜ್ಯ ಸ್ವರೂಪ ಪಡೆದಿರುವ ಕೆಲ ‘ಹೋಮ್ ಸ್ಟೇ’ಗಳು ಈ ಆಶಯಗಳನ್ನೇ ಗಾಳಿಗೆ ತೂರುತ್ತಿವೆ.

ಪ್ರವಾಸಿ ತಾಣಗಳಲ್ಲಿನ ಸ್ಥಳೀಯರ ಮನೆಯಲ್ಲೇ ಪ್ರವಾಸಿಗರು ಉಳಿದುಕೊಂಡರೆ, ಅಲ್ಲಿನ ಸೊಗಡನ್ನು ಪ್ರವಾಸಿಗರ ಜೊತೆ ಹಂಚಿಕೊಳ್ಳಲು ಅವಕಾಶವಾಗುತ್ತದೆ. ಮಿತವ್ಯಯ ಪ್ರವಾಸಕ್ಕೂ ಉತ್ತೇಜನ ಸಿಗುತ್ತದೆ. ಇದರಿಂದ ಸ್ಥಳೀಯ ನಿವಾಸಿಗಳ ಜೀವನೋಪಾಯಕ್ಕೂ ದಾರಿಯಾಗುತ್ತದೆ ಎಂಬುದು ‘ಹೋಮ್ ಸ್ಟೇ’ ಪರಿಕಲ್ಪನೆಯ ಉದ್ದೇಶ. ಆದರೆ, ಲಾಭ ಗಳಿಕೆಯನ್ನೇ ಮಾನದಂಡವನ್ನಾಗಿ ಮಾಡಿಕೊಂಡ ಕೆಲ ‘ಹೋಮ್ ಸ್ಟೇ’ಗಳಿಂದ ಈ ಉದ್ದೇಶ ಮೂಲೆಗುಂಪಾಗಿದೆ. ಹೋಮ್ ಸ್ಟೇಗಳು ಜನಸಾಮಾನ್ಯರ ಜೀವನೋಪಾಯದ ಮಾರ್ಗವಾಗುವ ಬದಲು ಲಾಭ ಗಳಿಕೆಯ ಅಸ್ತ್ರಗಳಾಗುತ್ತಿವೆ.

ಹೋಮ್ ಸ್ಟೇ ಸ್ಥಾಪಿಸಲು ಜಿಲ್ಲಾಧಿಕಾರಿ ಅಧ್ಯಕ್ಷತೆಯ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಪರವಾನಗಿ ಕಡ್ಡಾಯ. ಇಂತಹವು ಮಾತ್ರ ಪ್ರವಾಸೋದ್ಯಮ ಇಲಾಖೆಯ ಅಧಿಕೃತ ಮಾನ್ಯತೆ ಪಟ್ಟಿಯಲ್ಲಿ ಸೇರುತ್ತವೆ. ಕೊಡಗು, ಚಿಕ್ಕಮಗಳೂರು, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೋಮ್ ಸ್ಟೇಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಸಾಗುತ್ತಿದೆ. ಈ ಜಿಲ್ಲೆಗಳಲ್ಲಿ ಪರವಾನಗಿ ಪಡೆದ ಹೋಮ್ ಸ್ಟೇಗಳಿಗಿಂತ ಅನಧಿಕೃತ ಹೋಮ್ ಸ್ಟೇಗಳ ಸಂಖ್ಯೆ ಅನೇಕ ಪಟ್ಟು ಜಾಸ್ತಿ ಇದೆ. ರಾಜ್ಯದಲ್ಲಿ ಪರವಾನಗಿ ಪಡೆದು ಕಾರ್ಯಾಚರಣೆ ಮಾಡುತ್ತಿರುವ ಹೋಮ್ ಸ್ಟೇಗಳ ನಿಖರ ಮಾಹಿತಿಯೇ ಪ್ರವಾಸೋದ್ಯಮ ಇಲಾಖೆ ಬಳಿ ಇಲ್ಲ.

ಸರ್ಕಾರಿ ನಿಯಮಗಳ ಪ್ರಕಾರ ‘ಹೋಮ್ ಸ್ಟೇ’ಗಳಲ್ಲಿ ಪ್ರವಾಸಿಗರಿಗೆ ಬಾಡಿಗೆಗೆ ನೀಡಲು ಗರಿಷ್ಠ ಐದು ಕೊಠಡಿಗಳನ್ನು ಮಾತ್ರ ಹೊಂದಲು ಅವಕಾಶ ಇದೆ. ಅದಕ್ಕಿಂತ ಹೆಚ್ಚು ಕೊಠಡಿಗಳಿದ್ದರೆ ಅವುಗಳನ್ನು ರೆಸಾರ್ಟ್ ಎಂದು ಪರಿಗಣಿಸಬೇಕಾಗುತ್ತದೆ. ಹೋಮ್ ಸ್ಟೇಗಳು ಜಿಎಸ್‌ಟಿ ವ್ಯಾಪ್ತಿಗೆ ಬರುವುದಿಲ್ಲ. ಆದರೆ, ರೆಸಾರ್ಟ್ ಎಂದು ನೋಂದಣಿ ಮಾಡಿಸಿದರೆ ಅದರ ಮಾಲೀಕರು ಅದಕ್ಕೆ ಸ್ಥಳೀಯ ಸಂಸ್ಥೆಯಿಂದ ಉದ್ದಿಮೆ ಪರವಾನಗಿ ಪಡೆಯುವುದರ ಜೊತೆಗೆ ಜಿಎಸ್‌ಟಿಯನ್ನೂ ಪಾವತಿಸಬೇಕು. ತೆರಿಗೆ ತಪ್ಪಿಸುವ ಸಲುವಾಗಿ ಅನೇಕರು ಹೋಮ್ ಸ್ಟೇಗೆ ಪಡೆದ ಪರವಾನಗಿಯನ್ನೇ ಬಳಸಿ ರೆಸಾರ್ಟ್ ನಡೆಸುತ್ತಿದ್ದಾರೆ. ಇಂತಹ ಅಕ್ರಮಗಳ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಪ್ರವಾಸೋದ್ಯಮ ಇಲಾಖೆ ಇಚ್ಛಾಶಕ್ತಿ ತೋರುತ್ತಿಲ್ಲ. ಇಂತಹ ಅಕ್ರಮ ‘ಹೋಮ್ ಸ್ಟೇ’ಗಳ ವಿರುದ್ಧ ದೂರು ಬಂದರೂ ಅವುಗಳ ಮಾಲೀಕರಿಗಿರುವ ರಾಜಕೀಯ ಪ್ರಭಾವದೆದುರು ಅಧಿಕಾರಿಗಳೂ ತೆಪ್ಪಗಾಗುತ್ತಿದ್ದಾರೆ.

ಸ್ಥಳೀಯ ಊಟೋಪಚಾರದ ಸೊಗಡನ್ನು ಪ್ರವಾಸಿಗರಿಗೆ ಪರಿಚಯಿಸಬೇಕು ಎಂಬ ಉದ್ದೇಶದಿಂದ ಹೋಮ್ ಸ್ಟೇ ಮಾಲೀಕರು ಅಥವಾ ಅವರ ಕುಟುಂಬದವರು ಅದೇ ಕಟ್ಟಡದಲ್ಲಿ ವಾಸವಿರಬೇಕು ಎಂಬ ನಿಯಮವನ್ನು ರೂಪಿಸಲಾಗಿದೆ. ಆದರೆ ಕೆಲವು ಹೋಮ್ ಸ್ಟೇಗಳು ಇದಕ್ಕೆ ಕವಡೆ ಕಾಸಿನ ಕಿಮ್ಮತ್ತನ್ನೂ ನೀಡುತ್ತಿಲ್ಲ. ಪರವೂರಿನಲ್ಲಿ ನೆಲೆಸಿರುವ ಮನೆ ಮಾಲೀಕರು ಕೆಲಸಕ್ಕೆ ನೌಕರರನ್ನು ನೇಮಿಸಿಕೊಂಡು ಹೋಮ್‌ಸ್ಟೇಗಳನ್ನು ನಡೆಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ.

ಒಬ್ಬ ವ್ಯಕ್ತಿ ಒಂದು ಹೋಮ್ ಸ್ಟೇ ನಡೆಸುವುದಕ್ಕೆ ಮಾತ್ರ ಅವಕಾಶ ಇದೆ. ಪಾಲುದಾರಿಕೆಯಲ್ಲಿ ಹೋಮ್‌ಸ್ಟೇ ನಡೆಸುವುದಾದರೂ, ಹತ್ತಿರದ ಸಂಬಂಧಿಗಳ (ತಂದೆ/ತಾಯಿ/ ಗಂಡ/ ಹೆಂಡತಿ/ ಮಕ್ಕಳು) ಜೊತೆ ಪಾಲುದಾರಿಕೆ ಮಾಡಿಕೊಳ್ಳಬಹುದು. ಒಬ್ಬ ಪಾಲುದಾರ ಆ ಕಟ್ಟಡದ ವಾಸಿ ಆಗಿರಬೇಕು ಎನ್ನುತ್ತದೆ ನಿಯಮ. ಪರವಾನಗಿಯನ್ನೇ ಪಡೆಯದೆ ಈ ವ್ಯವಹಾರದಲ್ಲಿ ತೊಡಗಿರುವವರಿಗೆ ಈ ಯಾವ ನಿಯಮವೂ ಅನ್ವಯವಾಗುವುದಿಲ್ಲ!

ಚಿತ್ರ: ಗುರು ನಾವಳ್ಳಿ

ಒತ್ತುವರಿ ಜಾಗದಲ್ಲಿ ಹೋಮ್ ಸ್ಟೇ: ಚಿಕ್ಕಮಗಳೂರು, ಕೊಡಗಿನಂತಹ ಜಿಲ್ಲೆಗಳಲ್ಲಿ ಬಹುತೇಕ ಹೋಮ್ ಸ್ಟೇಗಳು ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಳ್ಳದೇ ಇರುವುದಕ್ಕೆ ಅವುಗಳು ಒತ್ತುವರಿ ಜಾಗದಲ್ಲಿ ನಿರ್ಮಾಣವಾಗಿರುವುದೂ ಕಾರಣ. ಹೋಮ್ ಸ್ಟೇಗೆ ಪರವಾನಗಿ ಪಡೆಯುವಾಗ ಸ್ಥಳೀಯ ಸಂಸ್ಥೆಯಿಂದ ಹಾಗೂ ಪೊಲೀಸ್ ಇಲಾಖೆಯಿಂದ 6 ತಿಂಗಳಿನಿಂದ ಈಚೆಗೆ ಪಡೆದ ನಿರಾಕ್ಷೇಪಣ ಪತ್ರವನ್ನು ಪ್ರವಾಸೋದ್ಯಮ ಇಲಾಖೆಗೆ ಒದಗಿಸಬೇಕು. ಒತ್ತುವರಿ ಜಾಗದಲ್ಲಿ ಕಟ್ಟಡವಿದ್ದರೆ ಅದಕ್ಕೆ ಪಂಚಾಯಿತಿಯವರು ನಮೂನೆ 11ಎ ಅಡಿ ಇ–ಖಾತಾ ನೀಡಲು ಬರುವುದಿಲ್ಲ. ಅದಿಲ್ಲದೇ ನಿರಾಕ್ಷೇಪಣಾ ಪತ್ರ ಪಡೆಯುವುದು ಸಾಧ್ಯವಿಲ್ಲ. ಹಾಗಾಗಿ ಇಂತಹವು ಅನಧಿಕೃತವಾಗಿಯೇ ಮುಂದುವರಿಯುತ್ತಿವೆ.

ಕೊಡಗು ಜಿಲ್ಲೆಯಲ್ಲಿ ರಾಜ್ಯದಲ್ಲೇ ಅತಿ ಹೆಚ್ಚು ಹೋಮ್ ಸ್ಟೇಗಳಿವೆ. ಇಲ್ಲಿ ಸುಮಾರು ಮೂರೂವರೆ ಸಾವಿರ ಹೋಮ್ ಸ್ಟೇಗಳಿದ್ದು, ಅವುಗಳಲ್ಲಿ ನೋಂದಣಿ ಮಾಡಿಸಿಕೊಂಡವುಗಳ ಸಂಖ್ಯೆ 2000 ಮಾತ್ರ. ಸುಮಾರು 500ಕ್ಕೂ ಹೆಚ್ಚು ಹೋಮ್ ಸ್ಟೇಗಳು ನಾಲ್ಕೈದು ತಿಂಗಳಿನಿಂದ ಈಚೆಗೆ ನೋಂದಣಿ ಮಾಡಿಸಿವೆ ಎನ್ನುತ್ತವೆ ಪ್ರವಾಸೋದ್ಯಮ ಇಲಾಖೆಯ ಮೂಲಗಳು.

‘ಹೋಮ್ ಸ್ಟೇಗಳನ್ನು ನಡೆಸುವವರಿಗೆ ಪರವಾನಗಿ ಪಡೆಯುವ ಅಗತ್ಯವನ್ನು ವಿವರಿಸಿ ನೋಂದಣಿ ಮಾಡಿಸಲು ಹೇಳುತ್ತಲೇ ಇದ್ದೇವೆ. ಮೂಲಸೌಕರ್ಯ ಇಲ್ಲದವುಗಳಿಗೆ ಪರವಾನಗಿ ನೀಡುತ್ತಿಲ್ಲ’ ಎನ್ನುತ್ತಾರೆ ಇಲಾಖೆಯ ಕೊಡಗು ಜಿಲ್ಲೆಯ ಉಪನಿರ್ದೇಶಕಿ ಅನಿತಾ ಬಿ.

ಇಲಾಖೆ ಮಾಹಿತಿ ಪ್ರಕಾರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ನೋಂದಣಿಯಾಗಿರುವುದು 602 ಹೋಮ್ ಸ್ಟೇಗಳು ಮಾತ್ರ. 100ಕ್ಕೂ ಹೆಚ್ಚು ಹೋಮ್ ಸ್ಟೇ ಮಾಲೀಕರು ಅರ್ಜಿ ಹಾಕಿದ ಬಳಿಕ ದಾಖಲೆಗಳನ್ನೇ ಸಲ್ಲಿಸಿಲ್ಲ. 120ಕ್ಕೂ ಹೆಚ್ಚು ಅರ್ಜಿದಾರರು ಪೊಲೀಸ್ ಇಲಾಖೆಯ ನಿರಾಕ್ಷೇಪಣಾ ಪತ್ರ ಸಲ್ಲಿಸಿಲ್ಲ. ಆದರೆ, ಜಿಲ್ಲೆಯಲ್ಲಿ ಏನಿಲ್ಲವೆಂದರೂ ಸಾವಿರಕ್ಕೂ ಅಧಿಕ ಅನಧಿಕೃತ ಹೋಮ್ ಸ್ಟೇಗಳು ಕಾರ್ಯನಿರ್ವಹಿಸುತ್ತಿವೆ.



ಹೋಮ್ ಸ್ಟೇ ಕ್ರಮಬದ್ಧ ನಿರ್ವಹಣೆಗೆ ಇರುವ ತೊಡಕು ನಿವಾರಿಸಿ ಸ್ಪಷ್ಟ ನೀತಿ ರೂಪಿಸಬೇಕು. ಸುಲಭವಾಗಿ ಪರವಾನಗಿ ಸಿಗುವಂತಾದರೆ, ಜನರೂ ಈ ಬಗ್ಗೆ ಆಸಕ್ತಿ ತೋರುತ್ತಾರೆ

ಯತೀಶ್ ಬೈಕಂಪಾಡಿ, ಪಣಂಬೂರು ಬೀಚ್ ಪ್ರವಾಸೋದ್ಯಮ ಅಭಿವೃದ್ಧಿ ಸಲಹೆಗಾರ

‘ಅನಧಿಕೃತ ಹೋಮ್ ಸ್ಟೇಗಳಿಗೆ ನೋಟಿಸ್ ನೀಡಲಾಗಿದ್ದು, ಅವುಗಳನ್ನು ನಡೆಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಲಿದ್ದೇವೆ’ ಎನ್ನುತ್ತಾರೆ ಚಿಕ್ಕಮಗಳೂರು ಜಿಲ್ಲೆಯ ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಲೋಹಿತ್.

ಉತ್ತರ ಕನ್ನಡ ಜಿಲ್ಲೆಯಲ್ಲಿ ನೋಂದಣಿಯಾದ 233 ಹೋಮ್ ಸ್ಟೇಗಳಿವೆ. ಅನಧಿಕೃತ ಹೋಮ್ ಸ್ಟೇಗಳು ಮತ್ತು ರೆಸಾರ್ಟ್‌ಗಳ ಸಂಖ್ಯೆ 300ಕ್ಕೂ ಹೆಚ್ಚಿದೆ ಎಂಬುದನ್ನು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳೇ ಒಪ್ಪಿಕೊಳ್ಳುತ್ತಾರೆ. ಗೋಕರ್ಣ ಪರಿಸರದಲ್ಲಿ 180 ರಷ್ಟು ಅನಧಿಕೃತ ಹೋಮ್ ಸ್ಟೇಗಳಿದ್ದು, ಜಿಲ್ಲಾಡಳಿತ ಅವುಗಳ ಪಟ್ಟಿ ಸಿದ್ಧಪಡಿಸಿದೆ. ಹಲವು ವರ್ಷಗಳಿಂದ ಇವು ಕಾರ್ಯಾಚರಣೆ ನಡೆಸುತ್ತಿದ್ದರೂ ಜಿಲ್ಲಾಡಳಿತ ಕ್ರಮ ತೆಗೆದುಕೊಂಡಿಲ್ಲ.

‘ಜಿಲ್ಲಾ ಪ್ರವಾಸೋದ್ಯಮ ಸಮಿತಿಯ ಒಪ್ಪಿಗೆ ಪಡೆಯದೆ ಕೇವಲ ಸ್ಥಳೀಯ ಸಂಸ್ಥೆಯಿಂದ ನಿರಾಕ್ಷೇಪಣ ಪತ್ರ ಪಡೆದು ನಡೆಸುವ ಹೋಮ್‌ಸ್ಟೇಗಳ ಸಂಖ್ಯೆಯೇ ಜಿಲ್ಲೆಯಲ್ಲಿ ಜಾಸ್ತಿ ಇದೆ. ಲೋಕಸಭೆ ಚುನಾವಣಾ ಪ್ರಕ್ರಿಯೆ ಮುಗಿದ ಬಳಿಕ ಪರಿಶೀಲನೆ ನಡೆಸಿ, ಕ್ರಮ ಜರುಗಿಸಲಾಗುವುದು’ ಎಂದು ಇಲಾಖೆಯ ಉತ್ತರ ಕನ್ನಡ ಜಿಲ್ಲೆಯ ಉಪನಿರ್ದೇಶಕ ಎಚ್.ವಿ.ಜಯಂತ್ ಪ್ರತಿಕ್ರಿಯಿಸಿದರು.

ಹೋಮ್ ಸ್ಟೇಗೆ ಸುಸಜ್ಜಿತ ರಸ್ತೆ ಸಂಪರ್ಕ ಇರಬೇಕು. ‘ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಡಿ ನೋಂದಾಯಿತ’ ಎಂಬ ಫಲಕವನ್ನು ದ್ವಾರದ ಬಳಿ ಹಾಕಬೇಕು. ಉಳಿದುಕೊಳ್ಳುವ ಅತಿಥಿಗಳ ರಿಜಿಸ್ಟರ್ ನಿರ್ವಹಿಸಬೇಕು. ನೈರ್ಮಲ್ಯ ಕಾಪಾಡಬೇಕು. ಅಗ್ನಿಸುರಕ್ಷತಾ ವ್ಯವಸ್ಥೆಗಳನ್ನು ಹೊಂದಿರಬೇಕು ಎಂಬ ನಿಯಮಗಳನ್ನೂ ಬಹುತೇಕವು ಪಾಲಿಸುತ್ತಲೇ ಇಲ್ಲ. ಪ್ರವಾಸಿಗರ ವಾಸ್ತವ್ಯಕ್ಕಾಗಿ ಇರುವ ಕೊಠಡಿಗಳು, ಸ್ನಾನದ ಕೋಣೆಗಳು ವಿಶಾಲವಾಗಿರಬೇಕು ಎಂಬ ಮಾರ್ಗಸೂಚಿಗಳನ್ನೂ ಗಾಳಿಗೆ ತೂರಲಾಗುತ್ತಿದೆ.

ಶುಲ್ಕಕ್ಕಿಲ್ಲ ಲಗಾಮು: ಹೋಮ್ ಸ್ಟೇಗಳನ್ನು ನಡೆಸುವವರು ಪ್ರವಾಸಿಗರಿಂದ ದಿನವೊಂದಕ್ಕೆ ಎಷ್ಟು ಬಾಡಿಗೆ ಪಡೆಯಬಹುದು ಎಂಬುದಕ್ಕೂ ಸ್ಪಷ್ಟ ಕಾರ್ಯಸೂಚಿ ಇಲ್ಲ. ಹೋಮ್ ಸ್ಟೇ ಮಾಲೀಕರು ತಮ್ಮಲ್ಲಿನ ಸೌಲಭ್ಯಗಳ ವಿವರ ಹಾಗೂ ಅವುಗಳಿಗೆ ಪಾವತಿಸಬೇಕಾದ ದರವನ್ನು ಮೊದಲೇ ವಿವರಿಸಬೇಕು ಎಂಬುದು ನಿಯಮ. ಆದರೆ, ಕೆಲವರು ವರ್ಷಾಂತ್ಯದಲ್ಲಿ, ಹಬ್ಬ ಹರಿದಿನಗಳಲ್ಲಿ ಬಾಡಿಗೆಯನ್ನು ಮನಸೋ ಇಚ್ಛೆ ಹೆಚ್ಚಳ ಮಾಡಿ ಪ್ರವಾಸಿಗರನ್ನು ಸುಲಿಗೆ ನಡೆಸುತ್ತಿರುವ ದೂರುಗಳೂ ಇವೆ. ಆನ್‌ಲೈನ್ ಜಾಹೀರಾತುಗಳಲ್ಲಿ ನಮೂದಿಸುವ ದರವೇ ಒಂದು, ಇಲ್ಲಿ ಪ್ರವಾಸಿಗರಿಂದ ಪಡೆಯುವ ದರವೇ ಒಂದು. ಈ ರೀತಿ ವಂಚನೆಗೆ ಒಳಗಾದರೆ ದೂರು ನೀಡಲು ಸೂಕ್ತ ವ್ಯವಸ್ಥೆಗಳಿಲ್ಲ ಎಂಬುದು ಪ್ರವಾಸಿಗರ ಅಳಲು. ಸಾಮಾಜಿಕ ಮಾಧ್ಯಮಗಳಲ್ಲೇ ಪ್ರವಾಸಿಗರು ಈ ಬಗ್ಗೆ ಅಳಲು ತೋಡಿಕೊಂಡಿದ್ದಾರೆ.

ಸಿಆರ್‌ಜೆಡ್ ನಿಯಮ ಉಲ್ಲಂಘನೆ: ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕರಾವಳಿ ನಿಯಂತ್ರಣ ವಲಯ (ಸಿಆರ್‌ಜೆಡ್) ನಿಬಂಧನೆಗಳನ್ನು ಉಲ್ಲಂಘಿಸಿ ಅನೇಕ ರೆಸಾರ್ಟ್‌ಗಳು, ಹೋಮ್ ಸ್ಟೇಗಳು ಕಾರ್ಯನಿರ್ವಹಿಸುತ್ತಿವೆ. ಸಿಆರ್‌ಜೆಡ್‌ನ ಪರಿಷ್ಕೃತ ನಿಯಮಗಳ ಪ್ರಕಾರ ಸಮುದ್ರದ ತೀರದಿಂದ ಕನಿಷ್ಠ 50 ಮೀ. ದೂರದಲ್ಲಿರಬೇಕು ಮತ್ತು ಉಬ್ಬರದ ಸಮಯದಲ್ಲಿ ಕಡಲಿನ ಅಲೆಗಳು ತಲುಪುವ ಅಂಚಿಗಿಂತ ಕನಿಷ್ಠ 10 ಮೀ ದೂರದಲ್ಲಿರಬೇಕು. ಸಮುದ್ರದ ತೀರದಲ್ಲಿರುವ ಕಟ್ಟಡ 1991ಕ್ಕಿಂತ ಹಿಂದಿನದಾಗಿದ್ದರೆ ಈ ನಿಯಮ ಅನ್ವಯಿಸುವುದಿಲ್ಲ. ಕಿನಾರೆ ಪಕ್ಕದಲ್ಲಿ ಹಾದು ಹೋಗುವ ರಸ್ತೆಯ ಆಚೆ ಇರಬೇಕು. ಆದರೆ ಕೆಲವು ರೆಸಾರ್ಟ್‌ಗಳು ಮತ್ತು ಹೋಮ್ ಸ್ಟೇಗಳು ಈ ನಿಯಮಗಳಿಗೆ ಸಂಬಂಧವೇ ಇಲ್ಲ ಎಂಬಂತೆ ಇರುವುದನ್ನು ಕಾಣಬಹುದು. ಸಿಆರ್‌ಜೆಡ್ ನಿಯಮ ಉಲ್ಲಂಘಿಸಿ ಕಟ್ಟಿರುವ ಕಟ್ಟಡಗಳಿಗೆ ಸ್ಥಳೀಯ ಸಂಸ್ಥೆ ನಿರಾಕ್ಷೇಪಣಾ ಪತ್ರ ನೀಡಲು ನಿಯಮಗಳಲ್ಲಿ ಅವಕಾಶವೇ ಇಲ್ಲ. ಅಂತಹ ಕಟ್ಟಡಗಳಲ್ಲೂ ರೆಸಾರ್ಟ್ ಹಾಗೂ ಹೋಮ್ ಸ್ಟೇಗಳು ಕಾರ್ಯಾಚರಿಸುತ್ತಿವೆ.

ಅಕ್ರಮವೇ ಜಾಸ್ತಿ ಏಕೆ: ‘ಹೋಮ್ ಸ್ಟೇಗಳಿಗೆ ಆನ್‌ಲೈನ್‌ನಲ್ಲೇ ಅರ್ಜಿ ಹಾಕಿ ನೋಂದಣಿ ಮಾಡಿಸಬಹುದು ಎನ್ನುತ್ತದೆ ಪ್ರವಾಸೋದ್ಯಮ ಇಲಾಖೆ. ಅದರೆ, ಈ ಪ್ರಕ್ರಿಯೆ ಅಂದುಕೊಂಡಷ್ಟು ಸರಳವಲ್ಲ. ನಿರಾಕ್ಷೇಪಣಾ ಪತ್ರ ನೀಡಲು ಸ್ಥಳೀಯ ಸಂಸ್ಥೆಯವರು ಹಾಗೂ ಪೊಲೀಸ್ ಇಲಾಖೆಯವರು ಸಾಕಷ್ಟು ಸತಾಯಿಸುತ್ತಾರೆ. ಕೆಲವು ಗ್ರಾಮ ಪಂಚಾಯಿತಿ ಅಥವಾ ನಗರ ಸ್ಥಳೀಯ ಸಂಸ್ಥೆಗಳು ₹15 ಸಾವಿರದವರೆಗೂ ಶುಲ್ಕ ವಿಧಿಸುತ್ತವೆ. ಇವು ಅಧಿಕೃತವಾಗಿ ಪಡೆಯುವ ಶುಲ್ಕ. ನಿರಾಕ್ಷೇಪಣಾ ಪತ್ರ ಪಡೆಯುವುದಕ್ಕೆ ಮಾಡಬೇಕಾದ ‘ವೆಚ್ಚ’ ಇನ್ನೂ ಜಾಸ್ತಿ. ಪೊಲೀಸ್ ಇಲಾಖೆಯವರೂ ನಿರಾಕ್ಷೇಪಣೆ ಪತ್ರವನ್ನು ಸುಮ್ಮನೆ ನೀಡುವುದಿಲ್ಲ. ಎಲ್ಲ ದಾಖಲೆಗಳನ್ನು ಒದಗಿಸಿದ ಬಳಿಕ ಪ್ರವಾಸೋದ್ಯಮ ಇಲಾಖೆಯವರು ಈ ಕುರಿತ ಕಡತವನ್ನು ಜಿಲ್ಲಾ ಪ್ರವಾಸೋದ್ಯಮ ಸಮಿತಿ ಮುಂದೆ ಮಂಡಿಸುತ್ತಾರೆ. ಆ ಸಮಿತಿಯಿಂದ ಅನುಮೋದನೆಗೊಂಡರೆ ಮಾತ್ರ ನೋಂದಣಿ ಸಾಧ್ಯ. ಈ ಪ್ರಕ್ರಿಯೆಯೂ ಸುಲಭವಲ್ಲ. ಅದಕ್ಕಾಗಿ ನೋಂದಣಿ ಮಾಡಿಸುವ ಗೋಜಿಗೇ ಹೋಗುವುದಿಲ್ಲ’ ಎಂದು ಈ ಕುರಿತ ಅನುಭವ ಇರುವವರೊಬ್ಬರು ‘ಅನಧಿಕೃತ’ ಹೋಮ್ ಸ್ಟೇಗಳ ಹಿಂದಿನ ಮರ್ಮವನ್ನು ಬಿಚ್ಚಿಟ್ಟರು.

ಹೋಮ್ ಸ್ಟೇಗಳ ಆಶಯ ಈಡೇರಬೇಕಾದರೆ ಅವುಗಳಿಗೆ ಪರವಾನಗಿ ನೀಡುವ ವ್ಯವಸ್ಥೆಯೂ ಪಾರದರ್ಶಕವಾಗಬೇಕು. ಪೊಲೀಸ್ ಇಲಾಖೆ, ಸ್ಥಳೀಯ ಸಂಸ್ಥೆಗಳು ಹಾಗೂ ಪ್ರವಾಸೋದ್ಯಮ ಇಲಾಖೆ ಪರವಾನಗಿ ನೀಡಲು ಸತಾಯಿಸುವುದು ನಿಲ್ಲಬೇಕು ಎಂದು ಅವರು ತಿಳಿಸಿದರು.

‘ಪ್ರವಾಸಿಗರು ಹಾಗೂ ಪ್ರವಾಸಿ ತಾಣಗಳ ಸ್ಥಳೀಯ ಸಮುದಾಯದ ಜೊತೆ ನಂಟು ಬೆಸೆಯಬಲ್ಲ ಹೋಮ್ ಸ್ಟೇ ಒಂದು ಉತ್ತಮ ಪರಿಕಲ್ಪನೆಯೇನೋ ನಿಜ. ಆದರೆ, ಹೋಮ್ ಸ್ಟೇ ನಿರ್ವಹಣೆಗೆ ಸಂಬಂಧಿಸಿ ಅನೇಕ ಪ್ರಶ್ನೆಗಳಿಗೆ ಪ್ರವಾಸೋದ್ಯಮ ಇಲಾಖೆ ಬಳಿ ಉತ್ತರವಿಲ್ಲ. ಕೇವಲ ಪರವಾನಗಿ ನೀಡುವುದಷ್ಟೇ ಅವರ ಕೆಲಸ ಆಗಿದೆ. ಮೂಲಸೌಕರ್ಯಗಳಿವೆಯೇ, ಇಲಾಖೆಯೇ ರೂಪಿಸಿರುವ ನಿಯಮಗಳ ಅನುಷ್ಠಾನಕ್ಕೆ ಪ್ರಾಯೋಗಿಕವಾಗಿ ಇರುವ ಸಮಸ್ಯೆಗಳನ್ನು ಅರಿತು ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಆಸಕ್ತಿಯೂ ಇಲ್ಲ. ಪ್ರವಾಸೋದ್ಯಮ ಬೆಳೆಯುವುದು ಪರಸ್ಪರ ನಂಬಿಕೆಯ ಮೇಲೆ. ಇದನ್ನು ಇನ್ನಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಸ್ಪಷ್ಟವಾದ ನೀತಿಯನ್ನು ನಿರೂಪಿಸುವ ಅಗತ್ಯ ಇದೆ’ ಎನ್ನುತ್ತಾರೆ ಪಣಂಬೂರು ಕಿನಾರೆ ಪ್ರವಾಸೋದ್ಯಮ ಅಭಿವೃದ್ಧಿ ಸಲಹೆಗಾರ ಯತೀಶ್ ಬೈಕಂಪಾಡಿ.

(ಪೂರಕ ಮಾಹಿತಿ: ವಿಜಯಕುಮಾರ್ ಎಸ್.ಕೆ, ಗಣಪತಿ ಹೆಗಡೆ)

ವನ್ಯಜೀವಿಗಳಿಗೆ ಆಪತ್ತು

ಸಂರಕ್ಷಿತಾರಣ್ಯಗಳ ಅಂಚಿನಲ್ಲಿರುವ ಹೋಂ ಸ್ಟೇಗಳು ಅಥವಾ ರೆಸಾರ್ಟ್‌ಗಳಿಂದಾಗಿ ವನ್ಯಜೀವಿಗಳೂ ತೊಂದರೆ ಎದುರಿಸುವಂತಾಗಿದೆ. ರಾತ್ರಿ ವೇಳೆಯೂ ಧ್ವನಿವರ್ಧಕ ಬಳಸಿ ಮನರಂಜನಾ ಚಟುವಟಿಕೆ ಹಮ್ಮಿಕೊಳ್ಳುವುದು, ಶಿಬಿರಾಗ್ನಿ (ಕ್ಯಾಂಪ್ ಫೈರ್), ಪ್ರವಾಸಿಗರು ಬೇಕಾಬಿಟ್ಟಿ ಬಳಸಿ ಬಿಸಾಡುವ ಪ್ಲಾಸ್ಟಿಕ್, ಮದ್ಯದ ಬಾಟಲಿಗಳು ವನ್ಯಜೀವಿಗಳ ಪ್ರಾಣಕ್ಕೂ ಕುತ್ತು ತರುತ್ತಿವೆ.

ರಾಷ್ಟ್ರೀಯ ಉದ್ಯಾನ, ವನ್ಯಜೀವಿ ಧಾಮದಂತಹ ಸಂರಕ್ಷಿತಾರಣ್ಯ ಹಾಗೂ ಅವುಗಳ ಪರಿಸರ ಸೂಕ್ಷ್ಮ ವಲಯಗಳಲ್ಲಿ ಹೋಮ್ ಸ್ಟೇ ಅಥವಾ ರೆಸಾರ್ಟ್‌ಗಳಲ್ಲಿ ಕೆಲವು ಚಟುವಟಿಕೆಗೆ ನಿರ್ಬಂಧಿಸುವ ಕುರಿತು ಸರ್ಕಾರ ಮಾರ್ಗಸೂಚಿ ರಚಿಸಿ 2017ರ ಜುಲೈ 10ರಂದು ಆದೇಶ ಹೊರಡಿಸಿದೆ. ಈ ಆದೇಶದ ಪ್ರಕಾರ ವನ್ಯಜೀವಿ ಸೂಕ್ಷ್ಮ ಪ್ರದೇಶಗಳ ಬಳಿ ಹೋಮ್ ಸ್ಟೇ / ರೆಸಾರ್ಟ್ ಆರಂಭಿಸಲು ಪರಿಸರ ಸೂಕ್ಷ್ಮ ವಲಯ ಸಮಿತಿಗಳಿಂದ ಅನುಮತಿ ಕಡ್ಡಾಯ. ಸಂರಕ್ಷಿತ ಪ್ರದೇಶದ ಧಾರಣಾ ಸಾಮರ್ಥ್ಯ ಆಧರಿಸಿ ಪ್ರವಾಸಿ ಚಟುವಟಿಕೆಗೆ ಅವಕಾಶ ನೀಡಬಹುದು. ಕಸ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗೂ ಸೂಕ್ತ ಪ್ರಾಧಿಕಾರದ ಅನುಮತಿ ಅಗತ್ಯ. ಅವುಗಳ ತ್ಯಾಜ್ಯ ನೀರನ್ನು ಶುದ್ಧೀಕರಿಸದೇ ನದಿ, ತೊರೆ ಅಥವಾ ಇತರ ಜಲಮೂಲಗಳಿಗೆ ಬಿಡುವಂತಿಲ್ಲ. ವಾಹನಗಳ ಸಂಚಾರಕ್ಕೂ ಪಾಸ್ ವ್ಯವಸ್ಥೆ ಮೂಲಕ ನಿಯಂತ್ರಿಸಬೇಕು. ಪ್ರವಾಸಿ ಚಟುವಟಿಕೆ ಪರಿಸರ ಸೂಕ್ಷ್ಮ ವಲಯದ ಅಧಿಸೂಚನೆಗೆ ಅನುಗುಣವಾಗಿಯೇ ಇರಬೇಕು. ಹುಲಿಧಾಮಗಳ ಬಳಿ ಪ್ರವಾಸಿ ಚಟುವಟಿಕೆ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಾರ್ಗಸೂಚಿಗಳಿಗೆ ಅನುಗುಣವಾಗಿರಬೇಕು.

ಈ ಆದೇಶವನ್ನು ಕಡೆಗಣಿಸಿ, ವನ್ಯಪ್ರಾಣಿಗಳ ಆವಾಸಕ್ಕೆ ಅಪಾಯ ತಂದೊಡ್ಡಬಲ್ಲ ಪ್ರದೇಶಗಳಲ್ಲೂ ಹೋಮ್ ಸ್ಟೇಗಳು, ರೆಸಾರ್ಟ್‌ಗಳು ತಲೆ ಎತ್ತುತ್ತಲೇ ಇವೆ. ಈ ಬಗ್ಗೆ ಇಲಾಖೆಗೆ ಸಾರ್ವಜನಿಕರು ದೂರು ನೀಡಿದರೂ ಕ್ರಮವಾಗುತ್ತಿಲ್ಲ.

‘ದಾಂಡೇಲಿ, ಜೊಯಿಡಾ ತಾಲ್ಲೂಕಿನಲ್ಲಿ ಕಾಳಿ ಹುಲಿ ಸಂರಕ್ಷಿತಾರಣ್ಯಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶಗಳ ಬಳಿಯೇ ಅನಧಿಕೃತ ಹೋಮ್ ಸ್ಟೇಗಳು ಹೆಚ್ಚುತ್ತಿದೆ. ಕೆಲವು ಉದ್ಯಮಿಗಳು ನಿಯಮ ಮೀರಿ ಇವುಗಳನ್ನು ನಡೆಸುತ್ತಿದ್ದಾರೆ. ಪ್ರವಾಸಿಗರನ್ನು ಸೆಳೆಯಲು ಪಾರ್ಟಿ, ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಬಫರ್ ಪ್ರದೇಶದಲ್ಲಿ ಅನಧಿಕೃತವಾಗಿ ತಲೆಯೆತ್ತಿರುವ ರೆಸಾರ್ಟ್‌ಗಳಿಂದ ವನ್ಯಜೀವಿಗಳಿಗೆ ಅಡ್ಡಿಯಾಗುತ್ತಿದೆ’ ಎಂದು ಪರಿಸರ ಕಾರ್ಯಕರ್ತರೊಬ್ಬರು ದೂರಿದರು.

ಬಿಳಿಗಿರಿರಂಗನ ಬೆಟ್ಟದಲ್ಲಿ ಅನಧಿಕೃತ ಹೋಮ್ ಸ್ಟೇ ಹಾಗೂ ರೆಸಾರ್ಟ್ ತೆರವುಗೊಳಿಸುವಂತೆ ಸ್ವತಃ ಹುಲಿ ಸಂರಕ್ಷಣಾ ಪ್ರಾಧಿಕಾರ ವರದಿ ನೀಡಿದ್ದರೂ ಕ್ರಮವಾಗಿಲ್ಲ. ಪ್ರಾಧಿಕಾರವು ಬಂಡೀಪುರ ಹೊರವಲಯದಲ್ಲಿ ಅನಧಿಕೃತ ಹೋಮ್ ಸ್ಟೇ ಮತ್ತು ರೆಸಾರ್ಟ್‌ಗಳ ಮೇಲೆ ಕ್ರಮ ಜರುಗಿಸಿ ಎಂದು ಅರಣ್ಯ ಇಲಾಖೆಗೆ ಸೂಚನೆ ನೀಡಿದೆ. ಆದರೂ ಏನೂ ಪ್ರಯೋಜನವಾಗಿಲ್ಲ. ರೈತರು ತಮ್ಮ ಜಮೀನಿನಲ್ಲಿ ಮನೆ ಕಟ್ಟಲು ತಕರಾರು ಎತ್ತುವ ಇಲಾಖೆ ವನ್ಯಜೀವಿಗಳಿಗೆ ಆಪತ್ತು ಉಂಟುಮಾಡುವ ಅಕ್ರಮ ಚಟುವಟಿಕೆ ವಿರುದ್ಧ ಕ್ರಮ ತೆಗೆದುಕೊಳ್ಳಲು ಹಿಂದೇಟು ಹಾಕುತ್ತಿದೆ.

ಕಾಮೆಡ್–ಕೆ ಪರೀಕ್ಷೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್-ಕೆ) ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಇದೇ ಭಾನುವಾರ (ಮೇ 12) ಪರೀಕ್ಷೆ ನಡೆಸುತ್ತಿದೆ.

ಕಂಪ್ಯೂಟರ್ ಆಧಾರಿತ ಪರೀಕ್ಷೆಯಾಗಿದ್ದು, 28 ರಾಜ್ಯಗಳು, 189 ನಗರಗಳು ಮತ್ತು 264 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. ಬೆಳಿಗ್ಗೆ 8.30 ರಿಂದ 11.30ರವರೆಗೆ ಹಾಗೂ ಮಧ್ಯಾಹ್ನ 1ರಿಂದ 4 ರವರೆಗೆ, ಸಂಜೆ 5.30ರಿಂದ 8.30ರವರೆಗೆ ಮೂರು ಅವಧಿಯಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಪರೀಕ್ಷೆ ಎದುರಿಸುವ ವಿದ್ಯಾರ್ಥಿಗಳು ಕರ್ನಾಟಕದ 150 ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ದೇಶದ 50ಕ್ಕೂ ಹೆಚ್ಚು ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯಬಹುದಾಗಿದೆ.

1.18 ಲಕ್ಷ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಕಳೆದ ವರ್ಷಕ್ಕಿಂತ 20 ಸಾವಿರಕ್ಕೂ ಹೆಚ್ಚು ನೋಂದಣಿಯಾಗಿವೆ. ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಂಡ ಪ್ರವೇಶ ಪತ್ರದ ಜತೆಗೆ ಇತ್ತೀಚಿನ ಎರಡು ಭಾವಚಿತ್ರ, ಗುರುತು ಪತ್ರಗಳನ್ನು ತೆಗೆದುಕೊಂಡು ಹೋಗಬೇಕು ಎಂದು ಕಾಮೆಡ್–ಕೆ ಸೂಚಿಸಿದೆ.


ಎಚ್.ಪಿ.ಅಖಿಲಾಶ್

ಕಿರಣ್

ಭ್ರೂಣ ಹತ್ಯೆ ಪ್ರಕರಣ ಮತ್ತಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ಪಟ್ಟಣದ ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ಈಚೆಗೆ ನಡೆದಿದ್ದ ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಸಂಬಂಧ ಮತ್ತಿಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಬಂಧಿತರ ಸಂಖ್ಯೆ 8ಕ್ಕೆ ಏರಿದೆ.

ತಾಲ್ಲೂಕಿನ ಮಹದೇಶ್ವರಪುರ ಗ್ರಾಮದ ಕಿರಣ್ ಹಾಗೂ ಹೊಸಕೋಟೆ ಎಚ್.ಪಿ.ಅಖಿಲಾಶ್ ಬಂಧಿತ ಆರೋಪಿಗಳು. ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಗರ್ಭಪಾತ ಮಾಡಿಸಿಕೊಳ್ಳುವ ಗರ್ಭಿಣಿಯರನ್ನು ಆರೋಪಿಗಳು ಸ್ಕ್ಯಾನಿಂಗ್ ಸೆಂಟರ್ ಮತ್ತು ಗರ್ಭಪಾತ ಸ್ಥಳಗಳಿಗೆ ಗೋಪ್ಯವಾಗಿ ಕರೆದೊಯ್ಯುತ್ತಿದ್ದರು ಎನ್ನಲಾಗಿದೆ.

ಸ್ನಾನಕ್ಕೆ ತೆರಳಿದ್ದ ವ್ಯಕ್ತಿ ಮೊಸಳೆಗೆ ಬಲಿ

ಚಿಕ್ಕೋಡಿ(ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಸದಲಗಾ ಪಟ್ಟಣದ ಬಳಿ ದೂಧಗಂಗಾ ನದಿಗೆ ಸ್ನಾನಕ್ಕೆ ತೆರಳಿದ್ದ ಮಹಾದೇವ ಪುನ್ನಪ್ಪ ಖುರೆ (72) ಎಂಬುವರು ಮೊಸಳೆ ದಾಳಿಗೆ ಸಿಲುಕಿ, ಮೃತಪಟ್ಟಿದ್ದಾರೆ. ಅವರು ಈಜುತಿದ್ದ ವೇಳೆ ಕಾಲನ್ನು ಮೊಸಳೆ ಎಳೆದೊಯ್ಯಿತು. ಅವರ ಮೃತದೇಹ ಪತ್ತೆಯಾಗಿದೆ ಎಂದು ಸದಲಗಾ ಠಾಣೆ ಪೊಲೀಸರು ತಿಳಿಸಿದ್ದಾರೆ.

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 12-5-1999

● ರಾಜೀವ್ ಹತ್ಯೆ: ನಳಿನಿ ಸೇರಿ ನಾಲ್ವರಿಗೆ ಗಲ್ಲು

ನವದೆಹಲಿ, ಮೇ 11 (ಪಿಟಿಐ, ಯುಎನ್‌ಐ)– ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಒಟ್ಟು 26 ಆರೋಪಿಗಳ ಪೈಕಿ 19 ಮಂದಿಯನ್ನು ಇಂದು ಖುಲಾಸೆ ಮಾಡಿರುವ ಸುಪ್ರೀಂ ಕೋರ್ಟ್, ಒಬ್ಬ ಮಹಿಳೆ ಸೇರಿ ನಾಲ್ವರ ವಿರುದ್ಧದ ಮರಣದಂಡನೆಯನ್ನು ಎತ್ತಿಹಿಡಿದಿದೆ.

ತಮಿಳುನಾಡಿನ ಶ್ರೀಪೆರಂಬುದೂರಿನ ಬಹಿರಂಗ ಸಭೆ ಆವರಣದಲ್ಲಿ ರಾಜೀವ್ ಗಾಂಧಿ 1991ರ ಮೇ 21ರಂದು ಮಾನವ ಬಾಂಬ್‌ಗೆ ಬಲಿಯಾಗಿದ್ದರು. ಈ ವೇಳೆ ಇತರ 18 ಜನರು ಹತ್ಯೆಗೊಳಗಾಗಿ, 43 ಮಂದಿ ತೀವ್ರವಾಗಿ ಗಾಯಗೊಂಡಿದ್ದರು.

50 ವರ್ಷಗಳ ಹಿಂದೆ

ಭಾನುವಾರ, 12-5-1974

● ಮುಷ್ಕರದ ಬಿಸಿ: ಆಹಾರ ಪದಾರ್ಥಗಳ ಬೆಲೆ ಏರಿಕೆ

ನವದೆಹಲಿ, ಮೇ 11– ರೈಲ್ವೆ ನೌಕರರ ರಾಷ್ಟ್ರವ್ಯಾಪಿ ಮುಷ್ಕರ ಇಂದು 4ನೇ ದಿನಕ್ಕೆ ಕಾಲಿಟ್ಟಂತೆ ದೇಶದ ವಿವಿಧ ಭಾಗಗಳ ಜನತೆಗೆ ಮುಷ್ಕರದ ಬಿಸಿ ತಾಕುತ್ತಿರುವ ಅನುಭವವಾಗುತ್ತಿದೆ.

ದೆಹಲಿ ಮತ್ತು ಬಿಹಾರಗಳಲ್ಲಿ ಆಹಾರ ಧಾನ್ಯಗಳ ಬೆಲೆ ಏರಿದೆ. ರೈಲು ಸಂಚಾರ ಅಸ್ತವ್ಯಸ್ತಗೊಂಡಿರುವ ಕಾರಣ ಅನೇಕ ಕಡೆಗಳಲ್ಲಿ ತರಕಾರಿ, ಹಣ್ಣು ಹಂಪಲುಗಳ ಬೆಲೆ ಏರಿಕೆಯಾಗಿದೆ.

ಪೂರ್ವ ಮತ್ತು ಆಗ್ನೇಯ ರೈಲ್ವೆ ವಿಭಾಗಗಳಲ್ಲಿ ರೈಲು ಸಂಚಾರ ಸ್ವಲ್ಪ ಸುಧಾರಿಸಿದೆ. ಆದರೆ, ಅರ್ಥವ್ಯವಸ್ಥೆ ಮೇಲೆ ದುಷ್ಪರಿಣಾಮ ಆಗಿದೆ ಎಂದು ಕಲ್ಕತ್ತದಿಂದ ಬಂದ ವರದಿ ತಿಳಿಸಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಮೇ 12, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಪಂಚಮಿ ಗಂ. 26-04 ನಕ್ಷತ್ರ ಆರ್ದ್ರಾ ಗಂ. 10-27 ಯೋಗ: ಧೃತಿ ಗಂ. 08-33 ಕರಣ : ಬವ ಗಂ. 13-59, ಮೇಷ ಮಾಸದ 30 ನೇ ದಿನ, ಮಳೆನಕ್ಷತ್ರ: ಕೃತ್ತಿಕಾ 1.

ರಾಹುಕಾಲ: ಸಾಯಂಕಾಲ 04-30 - 06-00

ಸೂರ್ಯೋದಯ : 06-09 **ಸೂರ್ಯಾಸ್ತ :** 06-45

ಮುಸ್ಲಿಂ ದಿನಾಂಕ : 03 ಜುಲ್ಕಾಯದ್

ಅದೃಷ್ಟ ಸಂಖ್ಯೆ : 4, 5

ಮೇಷ: ನವದಂಪತಿಗಳಿಗೆ ಉಲ್ಲಾಸಕರ ಸಮಯ ಅನುಭವಿಸಲು ಕಾಲಾವಕಾಶ ಸಿಗಲಿದೆ. ನಿಮ್ಮ ಮನಸ್ಸಿಗೆ ಹತ್ತಿರವಾಗಿರುವ ಜನರಿಗೆ ಚುಚ್ಚು ಮಾತುಗಳನ್ನಾಡಿ ಸಂಬಂಧ ಹಾಳು ಮಾಡಿಕೊಳ್ಳದಿರಿ.

ವೃಷಭ: ಬಿಡುವಿಲ್ಲದ ನಿಮ್ಮ ದಿನಚರಿಯಲ್ಲಿ ಎಷ್ಟೇ ಆಯಾಸವಾಗಿದ್ದರೂ, ಮನೆಯವರಿಗೆ ನೀಡುವ ಸಮಯವು ಅತ್ಯಂತ ಪ್ರಮುಖವಾಗಿರುತ್ತದೆ. ಹರಿತವಾದ ಮಾತುಗಳು ನಿಮ್ಮನ್ನು ಇಂದು ಘಾಸಿಗೊಳಿಸುವ ಸಾಧ್ಯತೆ ಇದೆ.

ಮಿಥುನ: ನಿಮ್ಮ ಸಂತೋಷ ಹೆಚ್ಚಿಸಲು ನಿಮ್ಮ ಸೋದರ ಸಂಬಂಧಿಗಳು ವಿಶೇಷ ಪ್ರಯತ್ನ ಮಾಡಲಿದ್ದಾರೆ. ನಿಮಗೆ ಎಷ್ಟೇ ಒತ್ತಡವಿದ್ದರೂ, ನಿಮ್ಮ ಮುಖದಲ್ಲಿನ ನಗುವು ಮಾಸದೇ ಇರಲಿ.

ಕರ್ಕಾಟಕ: ಶ್ರದ್ಧೆಯಿಂದ ನೀವು ಮಾಡುತ್ತಿರುವ ಕೆಲಸಗಳಿಗೆ ನಿಮ್ಮ ಸಹಚರರು ಕೈಜೋಡಿಸದೆ ಇರಬಹುದು. ನಿಮ್ಮ ಸಂಕಷ್ಟಕ್ಕೆ ಕಾರಣವಾಗಬಹುದು. ದೂಳಿನಿಂದಾಗಿ ಶ್ವಾಸಕೋಶಕ್ಕೆ ತೊಂದರೆ ಉಂಟಾಗಬಹುದು.

ಸಿಂಹ: ಕುಟುಂಬದ ಗೌರವ ಉಳಿಸುವುದಕ್ಕಾಗಿ ನೀವು ಮಾಡುತ್ತಿರುವ ತ್ಯಾಗವು ಪ್ರಶಂಸನೀಯ. ಗೃಹ ನಿರ್ಮಾಣ ಕಾರ್ಯದ ಆಲೋಚನೆಯು ಕಾರ್ಯರೂಪಕ್ಕೆ ಬರಲಿದೆ. ಯಾವುದೇ ಕೆಲಸ ಕೈಗೊಳ್ಳುವ ಮುನ್ನ ತಾಳ್ಮೆ ವಹಿಸುವುದು ಉತ್ತಮ

ಕನ್ಯಾ: ನಿಮ್ಮ ನಿಸ್ವಾರ್ಥ ಸೇವೆಗೆ ಜನರಿಂದ ಉತ್ತಮ ಸ್ಪಂದನೆ ದೊರೆಯಲಿದೆ. ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು, ತಂದೆಯ ಮಾತಿನಂತೆಯೇ ನಡೆಯಲು ಒಪ್ಪಲಿದ್ದೀರಿ.

ತುಲಾ: ನಿಮಗೆ ಇಂದು ನಿರಂತರವಾಗಿ ಆಗುತ್ತಿರುವ ಎಡವಟ್ಟುಗಳು ಸಂಗಾತಿಯ ಮಾತುಗಳು ಮರುಕಳಿಸುವಂತೆ ಮಾಡುತ್ತದೆ. ಓಡಾಟ ತಿರುಗಾಟಗಳು ಹೆಚ್ಚಿದ ಕಾರಣ ದೇಹಾಯಾಸವು ಬಾಧಿಸುತ್ತದೆ.

ವೃಶ್ಚಿಕ: ಸಹೋದರರ ಅಥವಾ ದಾಯಾದಿಗಳ ಭಿನ್ನಾಭಿಪ್ರಾಯದಿಂದ ನ್ಯಾಯಾಲಯದ ಮೆಟ್ಟಿಲು ಹತ್ತಬೇಕಾಗಲಿದೆ. ಮಗಳ ಅನಾರೋಗ್ಯವು ಹಂತ ಹಂತವಾಗಿ ಸರಿಯಾಗಲಿದ್ದು, ಸಮಾಧಾನಕರ ಎನ್ನಿಸಲಿದೆ.

ಧನು: ಕೆಲವು ವಸ್ತುಗಳ ಸಂಪಾದನೆಗಾಗಿ ನೀವು ಶ್ರಮಿಸಿದ ರೀತಿಗೆ ಹಲವರು ಗೇಲಿ ಮಾಡಬಹುದು. ಕಳೆದು ಹೋದ ವಸ್ತು ಲಭ್ಯವಾಗಲಿದ್ದು, ಹರ್ಷವನ್ನುಂಟು ಮಾಡಲಿದೆ. ಕುಟುಂಬದ ಸಂತೋಷವು ಹರ್ಷ ತರಲಿದೆ.

ಮಕರ: ನಿಮ್ಮ ಕುಟುಂಬದ ಹಿರಿಯರ ದರ್ಶನ ಹಾಗೂ ಅವರಿಂದ ಪಡೆದ ಆಶೀರ್ವಾದದಿಂದ ನಿಮ್ಮ ಮನಸ್ಸು ಪ್ರಫುಲ್ಲವಾಗಲಿದೆ. ನಿಮ್ಮ ಅತಿಯಾದ ನಿರ್ಲಕ್ಷ್ಯದಿಂದ ನಿಮ್ಮ ಮಕ್ಕಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಕುಂಭ: ಎಂಜಿನಿಯರ್‌ಗಳಿಗೆ ಹಿರಿಯ ಅನುಭವಿ ವ್ಯಕ್ತಿಗಳಿಂದ ಮಾರ್ಗದರ್ಶನ ಹಾಗೂ ಶುಭ ಹಾರೈಕೆ ದೊರೆಯುತ್ತದೆ. ಮಕ್ಕಳ ಸಣ್ಣಪುಟ್ಟ ಜಗಳಗಳನ್ನು ಬಗೆಹರಿಸಲು ಮುಂದಾಗುವಿರಿ. ಬೆಂಕಿಯಿಂದ ಜಾಗೃತೆ ವಹಿಸಿ.

ಮೀನ: ಕಟ್ಟಡ ರಚನೆಯಂತಹ ಕಾರ್ಯಗಳು ಭರದಿಂದ ಸಾಗಲಿವೆ. ಈಗಿನ ಪೈಪೋಟಿ ಜೀವನದಲ್ಲಿ ಕೇವಲ ಲಾಭವನ್ನು ಪರಿಗಣಿಸಬೇಡಿ. ವಿದ್ಯುತ್ ಉಪಕರಣಗಳಿಂದ ಅಪಾಯ ಸಾಧ್ಯತೆ ಇದ್ದು, ಎಚ್ಚರ ವಹಿಸಿ.

ಪದಬಂಧ 5678

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತಿಂಗಳ ಕೊನೆಗೆ ಒಂದಾಗಿ ಸೇರಿಸಿದುದು! (3)
3.ಅವಸರದಲ್ಲಿರುವ ರಾಜ (3)
6.ಈತ ಬಹಳ ಕರುಣಾಳು (3)
7.ಮಣಿ ಧರಿಸಿರುವ ನಲ್ಲೆ (3)
8.ಟಾರ ರಸ್ತೆ ಬದಿಯಲ್ಲಿನ ಚರಂಡಿ (3)
10.ಮುದ್ದು ಮಾಡುತ್ತಾ ಕುಡಿಸಿದ ಔಷಧ (2)
11.ಕನ್ನ ಕೊರೆದಾಗ ಕಾಣಿಸಿರುವ ದರ್ಪಣ (3)
13.ಗಾದೆಯಲ್ಲಿ ಹಣವೆಂದಾಗ ಬಾಯ್ಬಿಡುವ ಶವ! (2)
14.ಧನ ಕನಕಗಳಿಗಾಗಿ ನಡೆದ ಯುದ್ಧ (3)
15.ಗ್ರಂಥದ ವಿಭಾಗ (3)
16.ಹಾರ ಹಿಡಿದಿರುವ ಬ್ರಾಹ್ಮಣ (3)
17.ಈ ರೀತಿ ಕೆಳಕ್ಕೆ ಬೀಳಿಸು (3)
18.ತಿರುಗಿಸಿದರೂ ಇದು ಹೊಸದು (3)

ಮೇಲಿಂದ ಕೆಳಕ್ಕೆ

1.ಮಧುರವಾದ ಸ್ವಪ್ನ (5)
2.ಸರ ಕೊಟ್ಟದ್ದಕ್ಕೇ ಈ ಸಲಿಗೆ (3)
3.ಅಗಲು ನೋಡಿದಾಗ ದುಃಖ ಬಂದೀತೇ (2)
4.ಹದ್ದು ಕುಳಿತಿರುವ ಜಾಗವೇ ಎಲ್ಲೆ! (4)
5.ಹಂಗಿಗೆ ಒಳಗಾದವನು (2)
9.ಪತ್ರಿಕೆಯಲ್ಲಿನ ಉದ್ದ ಸಾಲು (3)
10.ಮಡಿವಂತಿಕೆ ತೋರುತ್ತಿರುವವಳ ಉಡಿ! (3)
12.ಲೋಹದ ಹಕ್ಕಿಯಲ್ಲಿನ ಪಯಣ (5)
13.ಮಹತ್ವಾಕಾಂಕ್ಷೆಯಿದು (4)
14.ವನದ ಬಗ್ಗೆ ಬರೆದಿರುವ ಪದ್ಯ (3)
15.ಅಕ್ಕರೆ ತೋರುವ ಹಿರಿ ಸಹೋದರಿ (2)
16.ಹಾವುಗೆಯಲ್ಲಿ ನುಸುಳಿರುವ ಉರಗ (2)



5677ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಅಭಿಭವ 3. ಬುದ್ಧಿವಾದ
5. ನೆಮ್ಮದಿ 6. ತವಕ
8. ಪಾಮರ 9. ವಿಯೋಗ
10. ಗುಲಾಮ 12. ಕುಣಿಕೆ
14. ಕಳೇಬರ 15. ಕವಾಡಿಗ

ಮೇಲಿಂದ ಕೆಳಕ್ಕೆ:
1. ಅಭಿಜಾತ 2. ವರ್ತನೆ
3. ಬುನಾದಿ 4. ದರಕಾರ
7. ಕರಗ 8. ಪಾರಾಗು
9. ವಿನಾಯಕ 11. ಮದುಮಗ
12. ಕುಠಾರ 13. ಕೆಡುಕ

ಸುಡೊಕು 6063

	7			5		2		8
5		4	1		8			
	8			7			5	
	6		9	3		1		2
2		5					8	
	3			8	2	5		6
			5		6		2	
3		2					6	
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6062 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿ ಮುಖಂಡನಿಗೆ ನಿರೀಕ್ಷಣಾ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ನಾಯಕರನ್ನು ಕೀಳಾಗಿ ಬಿಂಬಿಸಿ, ಧರ್ಮ, ಸಮುದಾಯಗಳ ನಡುವೆ ದ್ವೇಷ ಹುಟ್ಟಿಸುವ ರೀತಿಯಲ್ಲಿ ಅನಿಮೇಟೆಡ್ ವಿಡಿಯೊವನ್ನು ಸಾಮಾಜಿಕ ಜಾಲ ತಾಣದಲ್ಲಿ ಪೋಸ್ಟ್ ಮಾಡಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬಿಜೆಪಿ ಐಟಿ ಸೆಲ್ ಸಂಚಾಲಕ ಪ್ರಶಾಂತ್ ಮಾಕನೂರ್‌ಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಪ್ರಶಾಂತ್ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು- ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕ ರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಪುರಸ್ಕರಿಸಿದ್ದಾರೆ.

ಪ್ರಕರಣವೇನು?: 'ಕಾಂಗ್ರೆಸ್ ನಾಯಕರನ್ನು ಸಮಾಜಗಳ ನಡುವೆ ದ್ವೇಷ ಹರಡುವ ರೀತಿ ಬಿಂಬಿಸಿ ಅನಿಮೇಟೆಡ್ ವಿಡಿಯೊ ಪ್ರಸಾರ ಮಾಡಲಾಗಿದೆ' ಎಂದು ಆಕ್ಷೇಪಿಸಿ ಕಾಂಗ್ರೆಸ್ ಮಾಧ್ಯಮ ಮತ್ತು ಸಂವಹನ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಇದೇ 5ರಂದು ಬಿಜೆಪಿ ರಾಷ್ಟ್ರೀಯ ಮುಖಂಡರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು.

ಬಿಜೆಪಿ ಚುನಾವಣಾ ಉಸ್ತುವಾರಿಗಳಿಂದ ಅವಲೋಕನ ಸಭೆಗೆ ವರದಿ

ಗೆಲುವಿನ ಅಂತರ ಕುಸಿಯುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಲೋಕಸಭಾ ಕ್ಷೇತ್ರಗಳಲ್ಲಿ 2019ರ ಚುನಾವಣೆಗೆ ಹೋಲಿಸಿದರೆ ಈ ಬಾರಿ ಬಿಜೆಪಿ ಅಭ್ಯರ್ಥಿಗಳ ಗೆಲುವಿನ ಅಂತರದಲ್ಲಿ ಕುಸಿತವಾಗುವ ಸಾಧ್ಯತೆ ಇದೆ ಎಂಬ ವರದಿಯನ್ನು ಪಕ್ಷದ ಚುನಾವಣಾ ಉಸ್ತುವಾರಿಗಳು ನೀಡಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಶನಿವಾರ ನಡೆದ ಅವಲೋಕನ ಸಭೆಯಲ್ಲಿ ಎಲ್ಲ 28 ಲೋಕಸಭಾ ಕ್ಷೇತ್ರಗಳ ಚುನಾವಣೆ ಕುರಿತ ವರದಿಗಳನ್ನು ಉಸ್ತುವಾರಿಗಳು ಸಲ್ಲಿಸಿದರು. ಹಲವು ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳೂ ಸಭೆಯಲ್ಲಿದ್ದರು.

ಹಿಂದಿನ ಚುನಾವಣೆಗೆ ಹೋಲಿಸಿದರೆ ಈ ಬಾರಿ ಕಾಂಗ್ರೆಸ್ ಹೆಚ್ಚು ಮತ ಗಳಿಸಲಿದೆ. ಬಿಜೆಪಿಗೆ ಎಲ್ಲ ಕ್ಷೇತ್ರಗಳಲ್ಲೂ ಗೆಲುವಿನ ಅವಕಾಶವಿದೆ. ಆದರೆ, ಗೆಲುವಿನ ಅಂತರ ಕಡಿಮೆ ಆಗುವ ಸಾಧ್ಯತೆ ಇದೆ ಎಂಬ ಮಾಹಿತಿ ಬಿಜೆಪಿ ಚುನಾವಣಾ ಉಸ್ತುವಾರಿಗಳ ವರದಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

'ಕಾಂಗ್ರೆಸ್ ಸರ್ಕಾರ ತಾನಾಗಿಯೇ ಬೀಳಲಿದೆ'

'ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ತನ್ನ ಭಾರಕ್ಕೆ ತಾನಾಗಿಯೇ ಕುಸಿದು ಬೀಳಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ವಿ. ಸುನಿಲ್ ಕುಮಾರ್ ಹೇಳಿದರು.

'ಕಾಂಗ್ರೆಸ್‌ನಲ್ಲಿ ಅಧಿಕಾರಕ್ಕಾಗಿ ನಾಲ್ಕು ಮಂದಿ ಮಧ್ಯೆ ಪೈಪೋಟಿ ಇದೆ. ಲೋಕಸಭಾ ಚುನಾವಣಾ ಫಲಿತಾಂಶದಲ್ಲಿ ಹಿನ್ನಡೆಯಾದರೆ ತಮ್ಮ ಕುರ್ಚಿಗೆ ಅಪಾಯವಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಒಕ್ಕಲಿಗರು ಮುಖ್ಯಮಂತ್ರಿ ಆಗುತ್ತಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಸಚಿವ ಸತೀಶ ಜಾರಕಿಹೊಳಿ ಗುಪ್ತಗಾಮಿನಿಯಂತೆ ಶಾಸಕರನ್ನು ಸಂಪರ್ಕಿಸುತ್ತಿದ್ದಾರೆ. ಗೃಹ ಸಚಿವ ಜಿ. ಪರಮೇಶ್ವರ ಅವರೂ ಅದೇ ಪ್ರಯತ್ನದಲ್ಲಿದ್ದಾರೆ' ಎಂದರು.

ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ವಿ. ಸುನಿಲ್ ಕುಮಾರ್, 'ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಎಲ್ಲ ಸ್ಥಾನಗಳಲ್ಲೂ ಗೆಲ್ಲುವ ವಿಶ್ವಾಸವಿದೆ. ಆದರೆ, ಕೆಲವೆಡೆ ಗೆಲುವಿನ ಅಂತರ ಕಡಿಮೆ ಆಗಬಹುದು' ಎಂದರು.

ಹೊಂದಾಣಿಕೆ ಉತ್ತಮವಾಗಿತ್ತು: ಬಿಜೆಪಿ-ಜೆಡಿಎಸ್ ಮಧ್ಯೆ ಹೊಂದಾಣಿಕೆ ಉತ್ತಮವಾಗಿತ್ತು. ಜೆಡಿಎಸ್ ಅಭ್ಯರ್ಥಿಗಳು ಸ್ಪರ್ಧಿಸಿದ್ದ ಮೂರು ಕ್ಷೇತ್ರಗಳಲ್ಲಿ ಬಿಜೆಪಿ ಕಾರ್ಯಕರ್ತರು ಸಂಪೂರ್ಣ ಸಹಕಾರ ನೀಡಿದ್ದಾರೆ. ಉಳಿದ ಕ್ಷೇತ್ರಗಳಲ್ಲಿ ಜೆಡಿಎಸ್ ಕಾರ್ಯಕರ್ತರು ಬಿಜೆಪಿ ಅಭ್ಯರ್ಥಿಗಳಿಗೆ ಅದೇ ರೀತಿ ಸಹಕರಿಸಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರವು ಚುನಾವಣೆಯಲ್ಲಿ ಆಡಳಿತ ಯಂತ್ರವನ್ನು ದೊಡ್ಡ ಪ್ರಮಾಣದಲ್ಲಿ ದುರ್ಬಳಕೆ ಮಾಡಿಕೊಂಡಿದೆ. ಬಿಜೆಪಿ, ಜೆಡಿಎಸ್ ಕಾರ್ಯಕರ್ತರನ್ನು ಬೆದರಿಸುವ, ಮೊಕದ್ದಮೆ ದಾಖಲಿಸಿ ದೌರ್ಜನ್ಯ ಎಸಗುವ ಕೆಲಸ ಮಾಡಿದೆ. ಆದರೂ, ಬಿಜೆಪಿ-ಜೆಡಿಎಸ್ ಮೈತ್ರಿಕೂಟವು ಚುನಾವಣೆಯಲ್ಲಿ ದೊಡ್ಡ ಪ್ರಮಾಣದ ಯಶಸ್ಸು ಪಡೆಯಲಿದೆ ಎಂದರು.

ರಾಜ್ಯದಲ್ಲಿ ಬಿಜೆಪಿಯು ಚುನಾವಣಾ ಪ್ರಚಾರವನ್ನು ಅತ್ಯಂತ ವ್ಯವಸ್ಥಿತವಾಗಿ ನಡೆಸಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ರಾಷ್ಟ್ರೀಯ ಮಟ್ಟದ 14 ನಾಯಕರು 79 ಸಭೆ ಮತ್ತು 39 ರೋಡ್ ಶೋ ನಡೆಸಿದ್ದರು. ರಾಜ್ಯದ 30 ಪ್ರಮುಖ ನಾಯಕರು 557 ಸಭೆ ಮತ್ತು 139 ರೋಡ್ ಶೋ ನಡೆಸಿದ್ದರು ಎಂದು ವಿವರ ನೀಡಿದರು.

ಮತಗಟ್ಟೆಗೊಬ್ಬ ಉಸ್ತುವಾರಿ

ಬೆಂಗಳೂರು: ವಿಧಾನ ಪರಿಷತ್‌ನ ಶಿಕ್ಷಕರು ಮತ್ತು ಪದವೀಧರರ ಕ್ಷೇತ್ರಗಳ ಚುನಾವಣೆಯಲ್ಲಿ ಪ್ರತಿ ಮತಗಟ್ಟೆಗೆ ಒಬ್ಬ ಉಸ್ತುವಾರಿಯನ್ನು ನೇಮಿಸಲು ಬಿಜೆಪಿ ನಿರ್ಧರಿಸಿದೆ.

ಪಕ್ಷದ ಪದಾಧಿಕಾರಿಗಳು, ವಿಧಾನ ಪರಿಷತ್ ಸದಸ್ಯರು ಮತ್ತು ಚುನಾವಣಾ ಉಸ್ತುವಾರಿಗಳ ಜತೆ ಶನಿವಾರ ಸಭೆ ನಡೆಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಪರಿಷತ್ ಚುನಾವಣಾ ತಯಾರಿ ಕುರಿತು ಚರ್ಚಿಸಿದರು. ತಕ್ಷಣದಿಂದಲೇ ಸ್ಥಳೀಯ ಮಟ್ಟದಲ್ಲಿ ಚುನಾವಣಾ ಉಸ್ತುವಾರಿಗಳನ್ನು ನೇಮಿಸಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

'ಎಲ್ಲ ಮತಗಟ್ಟೆಗಳಿಗೂ ತಲಾ ಒಬ್ಬ ಉಸ್ತುವಾರಿಗಳನ್ನು ಪಕ್ಷದಿಂದ ನೇಮಿಸಲಾಗುವುದು. ಅವರ ಮೇಲುಸ್ತುವಾರಿಗೆ ವಿಧಾನಸಭಾ ಕ್ಷೇತ್ರಕ್ಕೊಬ್ಬ ಉಸ್ತುವಾರಿಯನ್ನು ನೇಮಿಸಲಾಗುವುದು. ಸಂಪೂರ್ಣ ಜವಾಬ್ದಾರಿಯನ್ನು ಕ್ಷೇತ್ರ ಮಟ್ಟದ ಚುನಾವಣಾ ಉಸ್ತುವಾರಿಗೆ ವಹಿಸಲಾಗುವುದು' ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ತಕ್ಷಣದಿಂದಲೇ ಮತಗಟ್ಟೆ ಹಂತದಲ್ಲಿ ಕಾರ್ಯಪ್ರವೃತ್ತರಾಗುವಂತೆ ವಿಜಯೇಂದ್ರ ಅವರು ಪಕ್ಷದ ಪದಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಮತದಾರರ ಸಂಪರ್ಕ ಅಭಿಯಾನವನ್ನೂ ಚುರುಕುಗೊಳಿಸುವಂತೆ ನಿರ್ದೇಶನ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಬಿ.ಎಸ್.ಯಡಿಯೂರಪ್ಪ ಚೀಟಿ ನೀಡಿದ ಕ್ಷಣ

ಹಾಲಿ–ಮಾಜಿ ಸಿ.ಎಂ ಚೀಟಿ ಚರ್ಚೆ!

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಇಲ್ಲಿ ವೇದಿಕೆ ಹಂಚಿಕೊಂಡರು. ಆ ಸಂದರ್ಭದಲ್ಲಿ ಅವರಿಬ್ಬರ ನಡುವೆ, ಚೀಟಿಯೊಂದರ ಕುರಿತು ನಡೆದ ಚರ್ಚೆ ಸಭಿಕರ ಗಮನ ಸೆಳೆಯಿತು.

ಇಲ್ಲಿ ಶನಿವಾರ ಆಯೋಜಿಸಿದ್ದ 'ಸ್ವಾಭಿಮಾನಿಗೆ ಸಾವಿರದ ನುಡಿನಮನ' – ಸಂಸದ ವಿ.ಶ್ರೀನಿವಾಸ ಪ್ರಸಾದ್ ಶ್ರದ್ಧಾಂಜಲಿ ಕಾರ್ಯಕ್ರಮ ಈ ನಾಯಕರ ಸಮಾಗಮಕ್ಕೆ ವೇದಿಕೆಯಾಯಿತು.

ಅಕ್ಕಪಕ್ಕದ ಕುರ್ಚಿಯಲ್ಲಿ ಕುಳಿತಿದ್ದ ನಾಯಕರು ಕುಶಲೋಪರಿ ವಿಚಾರಿಸಿದರು. ಯಡಿಯೂರಪ್ಪ ಅವರು ನೀಡಿದ ಚೀಟಿಯನ್ನು ಮುಖ್ಯಮಂತ್ರಿ ತಮ್ಮ ಶರ್ಟ್ ಜೇಬಿನಲ್ಲಿಟ್ಟುಕೊಂಡರು. ಅದರ ಬಗ್ಗೆಯೇ ಕೆಲ ಹೊತ್ತು ಮಾತುಕತೆ ನಡೆಸಿದರು. ಬಳಿಕ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರೂ ಚೀಟಿ ಕುರಿತು ಯಡಿಯೂರಪ್ಪ ಜೊತೆ ಚರ್ಚಿಸಿದರು.

'ಚೀಟಿ ಕೊಟ್ರಾ' ಎಂದು ಸಂಜ್ಞೆ ಮಾಡಿ ಕೇಳಿದರು. 'ಕೊಟ್ಟೆ, ಜೇಬಿನಲ್ಲಿಟ್ಟುಕೊಂಡಿದ್ದಾರೆ' ಎಂದು ಯಡಿಯೂರಪ್ಪ ತಿಳಿಸಿದರು. 'ಆ ಬಗ್ಗೆ ನಾನೂ ಮಾತಾಡ್ತೀನಿ ಬಿಡಿ' ಎಂದು ಮಹದೇವಪ್ಪ ಪ್ರತಿಕ್ರಿಯಿಸಿದರು.

'ಬೆಂಗಳೂರಿಗೆ ಹೋಗುತ್ತಿದ್ದೇನೆ, ನಾಳೆ ಆ ಬಗ್ಗೆ ನೋಡುತ್ತೇನೆ' ಎಂದು ಸಿದ್ದರಾಮಯ್ಯ ಹೇಳಿದರು. ವೇದಿಕೆ ಮೇಲೆ ನಡೆದ ಈ ಪ್ರಸಂಗ ಸಭಿಕರ ನಡುವೆ ಚರ್ಚೆಗೆ ಗ್ರಾಸವಾಯಿತು.

ಪೆನ್‌ಡ್ರೈವ್: ವಕೀಲ ದೇವರಾಜೇಗೌಡ ಬಂಧನ

ಲೈಂಗಿಕ ದೌರ್ಜನ್ಯ, ಜಾತಿನಿಂದನೆ ಪ್ರಕರಣ ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದಾಖಲು

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ(ಹಾಸನ): ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸೇರಿದ್ದೆನ್ನಲಾದ ಲೈಂಗಿಕ ದೌರ್ಜನ್ಯದ ವಿಡಿಯೊಗಳಿರುವ ಪೆನ್‌ಡ್ರೈವ್ ಹಂಚಿಕೆ ಕುರಿತು ಹೇಳಿಕೆ ನೀಡಿದ್ದ ವಕೀಲ, ಬಿಜೆಪಿ ಮುಖಂಡ ಜಿ. ದೇವರಾಜೇಗೌಡ ಅವರನ್ನು ಲೈಂಗಿಕ ದೌರ್ಜನ್ಯ ಹಾಗೂ ಜಾತಿನಿಂದನೆ ಆರೋಪದ ಮೇರೆಗೆ ಇಲ್ಲಿನ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ರಾತ್ರಿ ಇಲ್ಲಿನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಸಿದ್ಧರಾಮ ಎದುರು ಹಾಜರುಪಡಿಸಿದ್ದು, ಮೇ 24 ರವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಶುಕ್ರವಾರ ರಾತ್ರಿ ಹಿರಿಯೂರು ಪೊಲೀಸರ ವಶದಲ್ಲಿದ್ದ ಆರೋಪಿಯನ್ನು ಇಲ್ಲಿನ ಪೊಲೀಸರು ಶನಿವಾರ ಪಟ್ಟಣಕ್ಕೆ ಕರೆತಂದರು. ಸರ್ಕಲ್ ಇನ್‌ಸ್ಪೆಕ್ಟರ್ ಕಚೇರಿಯಲ್ಲಿ ಎಸ್ಪಿ ಮೊಹಮ್ಮದ್ ಸುಜೀತಾ, ಎಎಸ್ಪಿ ವೆಂಕಟೇಶ್ ನಾಯ್ಡು, ಡಿವೈಎಸ್ಪಿ ಅಶೋಕ್ ಹಾಗೂ ಸಿಪಿಐ ಸುರೇಶ್ ಕುಮಾರ್ ವಿಚಾರಣೆ ನಡೆಸಿದರು. ಸುಮಾರು ನಾಲ್ಕು ಗಂಟೆ ವಿಚಾರಣೆ ನಡೆಸಿದ ಬಳಿಕ ಆರೋಪಿಯನ್ನು ಬಂಧಿಸಲಾಯಿತು.

ಹೊಳೆನರಸೀಪುರ ಗ್ರಾಮಾಂತರ ಠಾಣೆ ಆವರಣದಲ್ಲಿ ಆರೋಪಿ ದೇವರಾಜೇಗೌಡ ಉಪಸ್ಥಿತಿಯಲ್ಲಿ ಪೊಲೀಸರು ಅವರ ಕಾರಿನ ಮಹಜರು ನಡೆಸಿದರು

'ಕಾರಿನಲ್ಲೂ ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂದು ಸಂತ್ರಸ್ತೆ ದೂರಿರುವುದರಿಂದ, ಆರೋಪಿಯ ಇನ್ನೋವಾ ಕ್ರಿಸ್ಟಾ ಕಾರನ್ನು ಪೊಲೀಸರು ವಶಕ್ಕೆ ಪಡೆದು, ಅವರ ಸಮ್ಮುಖದಲ್ಲೇ ತಪಾಸಣೆ ನಡೆಸಿ, ಅಲ್ಲಿದ್ದ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಂಡರು.

ನಂತರ ವೈದ್ಯಕೀಯ ತಪಾಸಣೆಗಾಗಿ ತಾಲ್ಲೂಕು ಆಸ್ಪತ್ರೆಗೆ ಕರೆತಂದ ವೇಳೆ ಆರೋಪಿಯು 'ಸತ್ಯಕ್ಕೆ ಜಯವಿದೆ' ಎಂದರು. ತಪಾಸಣೆ ನಂತರ ಪೊಲೀಸರು ನ್ಯಾಯಾಧೀಶರ ಎದುರು ಹಾಜರು ಪಡಿಸಿದರು.

'ನಿವೇಶನ ಮಾರಿಸಿಕೊಡುವ ಸಂಬಂಧ ಸಂಪರ್ಕಿಸಿದ್ದ ಆರೋಪಿಯು, ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಏ.1 ರಂದು ಸಂತ್ರಸ್ತೆ ನೀಡಿದ್ದ ದೂರಿನ ಅನ್ವಯ ಹೊಳೆನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಾತಿನಿಂದನೆಗೆ ಸಂಬಂಧಿಸಿದಂತೆ ಸಂತ್ರಸ್ತೆಯ ಪತಿ ನೀಡಿರುವ ದೂರಿನಂತೆ ಮತ್ತೊಂದು ಪ್ರಕರಣ ದಾಖಲಾಗಿದೆ. ಈ ಮಧ್ಯೆ, ಮಾರ್ಚ್‌ನಲ್ಲಿ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಅವರೂ, ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿ ದ್ದಾರೆಂದು ಆರೋಪಿ ವಿರುದ್ಧ ಹಾಸನ ನಗರ ಠಾಣೆಗೆ ದೂರು ನೀಡಿದ್ದರು. ಒಟ್ಟಿಗೇ ಎಲ್ಲ ಪ್ರಕರಣಗಳ ವಿಚಾರಣೆ ನಡೆದಿದೆ.

ಸಿಗದ ಪ್ರಜ್ವಲ್ ಸುಳಿವು: ರೆಡ್ ಕಾರ್ನರ್ ನೋಟಿಸ್ ಜಾರಿಗೆ ಸಿದ್ಧತೆ

ಬೆಂಗಳೂರು: ಹಲವು ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದ ಆರೋಪ ಎದುರಿಸುತ್ತಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರು ವಿದೇಶದಲ್ಲಿ ತಲೆಮರೆಸಿಕೊಂಡಿದ್ದು, ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳವು(ಎಸ್‌ಐಟಿ) ಅವರ ಪತ್ತೆಗೆ 'ರೆಡ್ ಕಾರ್ನರ್' ನೋಟಿಸ್ ಜಾರಿಗೆ ಸಿದ್ಧತೆ ನಡೆಸಿದೆ.

ಈಗಾಗಲೇ ಬ್ಲೂ ಕಾರ್ನರ್ ನೋಟಿಸ್ ಹೊರಡಿಸಲಾಗಿದ್ದರೂ ಅವರ ಸುಳಿವು ದೊರೆತಿಲ್ಲ. ರೆಡ್ ಕಾರ್ನರ್ ನೋಟಿಸ್ ಜಾರಿ ಸಂಬಂಧ ಎಸ್‌ಐಟಿ ಅಧಿಕಾರಿಗಳು, ಸಿಬಿಐ ಅಧಿಕಾರಿಗಳ ಜೊತೆಗೆ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ರೆಡ್ ಕಾರ್ನರ್ ನೋಟಿಸ್ ಹೊರಡಿಸಬೇಕಾದರೆ, ಸಿಬಿಐ ಅಧಿಕಾರಿಗಳು ಇಂಟರ್‌ಪೋಲ್ ಸಂಪರ್ಕಿಸಿ ಬೇಡಿಕೆ ಸಲ್ಲಿಸಬೇಕು. ಸಿಬಿಐ ಒಪ್ಪಿಗೆ ಸೂಚಿಸಿದರೆ ರೆಡ್ ಕಾರ್ನರ್ ನೋಟಿಸ್ ಜಾರಿ ಮಾಡಲಾಗುತ್ತದೆ. ರೆಡ್ ಕಾರ್ನರ್ ನೋಟಿಸ್ ಜಾರಿಯಾದರೆ ಆರೋಪಿ ತಲೆಮರೆಸಿಕೊಂಡಿರುವ ದೇಶದ ಪೊಲೀಸರು, ಆರೋಪಿಯನ್ನು ಪತ್ತೆಹಚ್ಚಿ ವಶಕ್ಕೆ ಪಡೆಯಲಿದ್ದಾರೆ. ನಂತರ, ರೆಡ್ ಕಾರ್ನರ್ ನೋಟಿಸ್ ಜಾರಿ ಮಾಡಿದ ದೇಶಕ್ಕೆ ಆರೋಪಿಯನ್ನು ಹಸ್ತಾಂತರಿಸಲಿದ್ದಾರೆ' ಎಂದು ಮೂಲಗಳು ಹೇಳಿವೆ.

'ಪಾಸ್‌ಪೋರ್ಟ್ ರದ್ದತಿಗೆ ಅಡ್ಡಿ ಏನು?'

ನವದೆಹಲಿ (ಪಿಟಿಐ): ಲೈಂಗಿಕ ಕಿರುಕುಳದ ಆರೋಪ ಎದುರಿಸುತ್ತಿರುವ ಸಂಸದ ಪ್ರಜ್ವಲ್ ರೇವಣ್ಣ ಹೊಂದಿರುವ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸಲು ಅಡ್ಡಿ ಏನು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಕೇಂದ್ರ ಸರ್ಕಾರವನ್ನು ಶನಿವಾರ ಪ್ರಶ್ನಿಸಿದ್ದಾರೆ.

ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಆರೋಪಗಳ ಬಗ್ಗೆ ತನಿಖೆ ನಡೆಸುವಂತೆ ಕರ್ನಾಟಕ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದ ನಂತರ ಪ್ರಜ್ವಲ್ ಜರ್ಮನಿಗೆ ತೆರಳಿದ್ದಾರೆ ಎನ್ನಲಾಗಿದೆ. ಪ್ರಜ್ವಲ್‌ಗೆ ದೇಶದಿಂದ ಹೊರಗಡೆ ತೆರಳಲು ಅವಕಾಶ ಕಲ್ಪಿಸಿದ್ದು ಹೇಗೆ ಎಂದು ರಮೇಶ್ ಎಕ್ಸ್ ಮೂಲಕ ಪ್ರಶ್ನಿಸಿದ್ದಾರೆ.

ವಿಜಯಕುಮಾರ್‌ಗೆ 'ರೋಹಿತ್ ರಾಜಣ್ಣ ಪತ್ರಿಕೋದ್ಯಮ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಎಸ್.ಕೆ. ವಿಜಯ ಕುಮಾರ್

ಬೆಂಗಳೂರು: ಭಾರತೀಯ ಸಮೂಹ ಮಾಧ್ಯಮ ಮತ್ತು ಸಂಶೋಧನಾ ಸಂಸ್ಥೆ (ಐಎಂಎಸ್‌ಆರ್) ನೀಡುವ 'ರೋಹಿತ್ ರಾಜಣ್ಣ ಪತ್ರಿಕೋದ್ಯಮ ಪ್ರಶಸ್ತಿ'ಗೆ 'ಪ್ರಜಾವಾಣಿ'ಯ ಚಿಕ್ಕಮಗಳೂರು ಜಿಲ್ಲಾ ವರದಿಗಾರ ಎಸ್.ಕೆ. ವಿಜಯಕುಮಾರ್ ಆಯ್ಕೆ ಆಗಿದ್ದಾರೆ.

ಇವರು ಹಾಸನ ಜಿಲ್ಲೆಯವರು. 'ಬೂದಿಯಾಗದ ಕೆಂಡ' ಇವರ ಪ್ರಕಟಿತ ಕೃತಿಯಾಗಿದ್ದು, ಇದರಲ್ಲಿನ 'ಅನ್ನಕ್ಕಾಗಿ ರಾತ್ರಿಯಿಡೀ ಕಾದದ್ದು' ಲೇಖನವು ಮೈಸೂರು ವಿಶ್ವವಿದ್ಯಾಲಯದ ಬಿ.ಎ ನಾಲ್ಕನೆ ಸೆಮಿಸ್ಟರ್ ಪಠ್ಯವಾಗಿದೆ.

ರೋಹಿತ್ ರಾಜಣ್ಣ ಅವರು 'ವಿಜಯ ಟೈಮ್ಸ್' ಮತ್ತು 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ವರದಿಗಾರರಾಗಿ ಕಾರ್ಯ ನಿರ್ವಹಿಸಿದ್ದರು. ಅಕಾಲಿಕವಾಗಿ ನಿಧನರಾದ ಮಗನ ಸ್ಮರಣಾರ್ಥ ಅವರ ತಂದೆ ರಾಜಣ್ಣ ಅವರು ರೋಹಿತ್ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಿದ್ದಾರೆ ಎಂದು ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಎಚ್.ಆರ್. ಶ್ರೀಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಕಿಯ ರುಂಡ ಕೊಂಡೊಯ್ದಿದ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಕುಂಬಾರಗಡಿಗೆ ಗ್ರಾಮದಲ್ಲಿ 16 ವರ್ಷದ ಬಾಲಕಿಯ ರುಂಡ ಕತ್ತರಿಸಿ ಕೊಂಡೊಯ್ದಿದ್ದ ಆರೋಪಿ ಮೊನ್ನಂಡ ಪ್ರಕಾಶ್ (33) ಎಂಬಾತನನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ. ಕೊಲೆ ನಡೆದ ಸ್ಥಳದಿಂದ ಕೆಲವೇ ಮೀಟರ್ ದೂರದಲ್ಲಿ ರುಂಡವನ್ನೂ ಪತ್ತೆ ಹಚ್ಚಿದ್ದಾರೆ.

'ಆರೋಪಿಯು ಸಮೀಪದ ಕಾಡಿನಲ್ಲಿ ಅವಿತುಕೊಂಡಿರುವುದನ್ನು ಗಮನಿಸಿ ಸುತ್ತುವರೆದು ಬಂಧಿಸಲಾಯಿತು. ಬಳಿಕ ವಿಚಾರಣೆ ನಡೆಸಿ ಬಾಲಕಿಯ ರುಂಡ, ಕೊಲೆಗೆ ಬಳಸಿದ್ದ ಮಚ್ಚು ಹಾಗೂ ಕೋವಿಯನ್ನೂ ವಶಪಡಿಸಿಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಾಲೂರಿನಲ್ಲಿ ಭ್ರೂಣ ಹತ್ಯೆ: ಆರೋಪ

ಪ್ರಜಾವಾಣಿ ವಾರ್ತೆ

ಮಾಲೂರು (ಕೋಲಾರ): ಪಟ್ಟಣದ ಆಸ್ಪತ್ರೆಯೊಂದರಲ್ಲಿ ದಂಪತಿ ಭ್ರೂಣ ಲಿಂಗ ಪತ್ತೆ ಪರೀಕ್ಷೆ ಮಾಡಿಸಿಕೊಂಡ ಆರೋಪ ಕೇಳಿ ಬಂದಿದ್ದು, ಹೆಣ್ಣು ಭ್ರೂಣವೆಂದು ತಿಳಿದು ಗರ್ಭಪಾತ ಮಾಡಿಸಿದ್ದಾರೆ. ಬಳಿಕ, ಅದು ಗಂಡು ಭ್ರೂಣ ಎಂದು ಗೊತ್ತಾಗಿ ಆಸ್ಪತ್ರೆ ಹಾಗೂ ವೈದ್ಯರ ವಿರುದ್ಧ ತಿರುಗಿ ಬಿದ್ದಿದ್ದಾರೆ.

'ಹೆಣ್ಣು ಭ್ರೂಣವಿದೆ ಎಂದು ಹೇಳಿ ವೈದ್ಯರು ಮಾತ್ರೆ ನೀಡಿ ಗರ್ಭಪಾತ ಮಾಡಿಸಿದರು. ಗರ್ಭಪಾತದ ನಂತರ ಅದು ಹೆಣ್ಣು ಭ್ರೂಣವಲ್ಲ, ಗಂಡು ಭ್ರೂಣ ಎಂದು ಗೊತ್ತಾಯಿತು' ಎಂದು ದಂಪತಿ ಆರೋಪ ಮಾಡಿದ್ದಾರೆ. ಈ ಸಂಬಂಧ ಟಿಎಚ್‌ಒಗೆ ದೂರು ನೀಡಿದ್ದಾರೆ.

ಭ್ರೂಣ ಲಿಂಗ ಪತ್ತೆ ಮತ್ತು ಭ್ರೂಣ ಹತ್ಯೆ ಆರೋಪ ಎದುರಿಸುತ್ತಿರುವ ಪಟ್ಟಣದ ಸಂಜನಾ ಆಸ್ಪತ್ರೆಯ ಸ್ಕ್ಯಾನಿಂಗ್ ವಿಭಾಗವನ್ನು ಜಿಲ್ಲಾ ಆರೋಗ್ಯ ಇಲಾಖೆ ಅಧಿಕಾರಿಗಳು ಶನಿವಾರ ಸೀಲ್ ಮಾಡಿದ್ದಾರೆ. ಸ್ಕ್ಯಾನಿಂಗ್ ಯಂತ್ರಗಳನ್ನು ಜಪ್ತಿ ಮಾಡಿದ್ದಾರೆ. ಆಸ್ಪತ್ರೆಗೆ ನೋಟಿಸ್ ನೀಡಿರುವ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಗದೀಶ್, ತನಿಖೆ ಕೈಗೊಂಡಿದ್ದಾರೆ.

'₹25 ಸಾವಿರ ಪಡೆದು ಭ್ರೂಣ ಲಿಂಗ ಪರೀಕ್ಷೆ ನಡೆಸಿದ ಆಸ್ಪತ್ರೆಯ ವೈದ್ಯರು, ಹೊಟ್ಟೆಯಲ್ಲಿ ಹೆಣ್ಣು ಮಗು ಇದೆ ಎಂದು ಹೇಳಿದರು. ಮಾತ್ರೆ ನೀಡಿ ಗರ್ಭಪಾತ ಮಾಡಿಸಿ, 3 ತಿಂಗಳ ಭ್ರೂಣ ಹತ್ಯೆ ಮಾಡಿದ್ದಾರೆ' ಎಂದು ಕೆಜಿಎಫ್ ತಾಲ್ಲೂಕಿನ ಆಡಂಪಲ್ಲಿಯ ಮುರುಗೇಶ್–ಅನಿತಾ ದಂಪತಿ ಆರೋಪಿಸಿದ್ದಾರೆ.

'ಸ್ಕ್ಯಾನಿಂಗ್ ಮಾಡಿಸಲು ಮೇ 6ರಂದು ಪತ್ನಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಸ್ಕ್ಯಾನಿಂಗ್ ಮಾಡಿ ಯಾವ ಮಗು ಎಂಬುದಾಗಿ ತಿಳಿಸುತ್ತೇವೆ ಎಂದರು. ಆಕಸ್ಮಾತ್ ಹೆಣ್ಣು ಮಗು ಇದ್ದರೆ ಚಿಕಿತ್ಸೆ ನೀಡಿ ಗಂಡು ಮಗುವನ್ನಾಗಿ ಪರಿವರ್ತಿಸುತ್ತೇವೆ. ಅದಕ್ಕೆ ₹25 ಸಾವಿರ ಖರ್ಚಾಗುತ್ತದೆ ಎಂದರು. ಸ್ಕ್ಯಾನಿಂಗ್ ಮಾಡಿ ಹೆಣ್ಣು ಮಗುವೆಂದು ಹೇಳಿದರು. ಹೆಣ್ಣು ಮಗು ಬೇಡವೆಂದರೆ ತಾಯಿಗೆ ತೊಂದರೆ ಆಗದ ರೀತಿ ಗರ್ಭಪಾತ ಮಾಡುವುದಾಗಿ ₹75 ಸಾವಿರಕ್ಕೆ ಬೇಡಿಕೆ ಇಟ್ಟರು. ಹಣವಿಲ್ಲದ ಕಾರಣ ಯಾವ ಚಿಕಿತ್ಸೆ ಬೇಡ ಎಂದೆವು. ಅವರು ನೀಡಿದ ಮಾತ್ರೆ ಸೇವಿಸಿ ಮೇ 8ರಂದು ಪತ್ನಿಗೆ ಗರ್ಭಪಾತವಾಗಿದೆ. ಭ್ರೂಣ ಗಂಡು ಮಗುವಿನ ಆಕಾರದಲ್ಲಿದೆ' ಎಂದು ಮುರುಗೇಶ್ ದೂರಿನಲ್ಲಿ ತಿಳಿಸಿದ್ದಾರೆ.

ಮುರುಗೇಶ್ ಹಾಗೂ ಅನಿತಾ

'ಗಂಡು ಮಗು ಎಂಬುದು ಗೊತ್ತಿದ್ದರೂ ಆಸ್ಪತ್ರೆ ವೈದ್ಯರು ಮತ್ತು ನರ್ಸ್‌ಗಳು ದುಡ್ಡಿನ ಆಸೆಗಾಗಿ ಹೆಣ್ಣು ಮಗುವೆಂದು ಸುಳ್ಳು ಹೇಳಿ ಹಣ ಪಡೆದು ಗರ್ಭಪಾತ ಮಾಡಿಸಿದ್ದಾರೆ. ನ್ಯಾಯ ದೊರಕಿಸಿಕೊಡಿ' ಎಂದು ಮನವಿ ಮಾಡಿದ್ದಾರೆ.

'ಆಸ್ಪತ್ರೆಯಲ್ಲಿ ಲೋಪ ಕಂಡುಬಂದಿದೆ'

ಆಸ್ಪತ್ರೆಯ ದಾಖಲೆ ಪರಿಶೀಲಿಸಿದ್ದು ಲೋಪ ಕಂಡುಬಂದಿವೆ. ಸ್ಕ್ಯಾನಿಂಗ್ ವಿಭಾಗದಲ್ಲಿ ಸರಿಯಾಗಿ ದಾಖಲೆ ನಿರ್ವಹಣೆ ಮಾಡಿಲ್ಲ. ಸಿಸಿಟಿವಿ ಕ್ಯಾಮೆರಾ ಕಾರ್ಯನಿರ್ವಹಿಸುತ್ತಿಲ್ಲ. ಯಂತ್ರಗಳನ್ನು ವಶಕ್ಕೆ ಪಡೆದು ಸ್ಕ್ಯಾನಿಂಗ್ ವಿಭಾಗ ಸೀಲ್ ಮಾಡಿದ್ದೇವೆ. ಮಾತ್ರೆ ಕೊಟ್ಟು ಹೆಣ್ಣು ಮಗುವನ್ನು ಗಂಡು ಮಗುವನ್ನಾಗಿ ಮಾಡುವುದಾಗಿ ವೈದ್ಯರು ಹೇಳಿದ್ದರು ಎಂದು ಸಂತ್ರಸ್ತರು ದೂರು ನೀಡಿದ್ದಾರೆ. ಅದಕ್ಕೆ ಯಾವುದೇ ದಾಖಲೆ, ಪುರಾವೆ ಇಲ್ಲ. ಯಾವ ಮಾತ್ರೆ ಕೊಟ್ಟಿದ್ದಾರೆ ಎಂಬುದನ್ನು ಪತ್ತೆ ಹಚ್ಚಬೇಕಿದೆ. ಹಿಂದೆ ಏನಾದರೂ ಈ ರೀತಿ ನಡೆದಿದೆಯೇ ಎಂಬುದರ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದೇವೆ. ಆಸ್ಪತ್ರೆಗೆ ನೋಟಿಸ್ ನೀಡಿದ್ದು, ತನಿಖೆ ನಡೆಸುತ್ತಿದ್ದೇವೆ

ಡಾ.ಜಗದೀಶ್, ಜಿಲ್ಲಾ ಆರೋಗ್ಯಾಧಿಕಾರಿ, ಕೋಲಾರ

ಸುಳ್ಳು ಆರೋಪ: ವೈದ್ಯರ ಸ್ಪಷ್ಟನೆ

'ದಂಪತಿ ಸುಳ್ಳು ಹೇಳುತ್ತಿದ್ದಾರೆ. ನಾವು ಯಾವುದೇ ಸ್ಕ್ಯಾನಿಂಗ್ ಆಗಲಿ, ಚಿಕಿತ್ಸೆಯಾಗಲಿ ನೀಡಿಲ್ಲ. ಈ ಸಂಬಂಧ ದಾಖಲೆಗಳಿದ್ದರೆ ತೋರಿಸಲಿ. ಆರೋಗ್ಯ ಇಲಾಖೆಯವರು ಭೇಟಿ ನೀಡಿ ಅವರ ಕೆಲಸ ಮಾಡಿದ್ದಾರೆ' ಎಂದು ಸಂಜನಾ ಆಸ್ಪತ್ರೆಯ ಡಾ.ಮೋಹನ್ ಶನಿವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಎಸ್.ಎಂ. ಕೃಷ್ಣ ಆರೋಗ್ಯ ಸ್ಥಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ ಎಂದು ಮಣಿಪಾಲ್ ಆಸ್ಪತ್ರೆ ಪ್ರಕಟಣೆ ತಿಳಿಸಿದೆ.

ವಯೋಸಹಜ ಅನಾರೋಗ್ಯದ ಸಮಸ್ಯೆಯಿಂದ ಬಳಲುತ್ತಿರುವ ಕೃಷ್ಣ ಅವರನ್ನು ಚಿಕಿತ್ಸೆಗಾಗಿ ವೈದೇಹಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಏಪ್ರಿಲ್ 29ರಂದು ಮಣಿಪಾಲ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು.

ಮುಂದುವರಿದ ಮೈತ್ರಿ

ಒಂದನೇ ಪುಟದಿಂದ

ಇದಕ್ಕೆ ವರಿಷ್ಠರು ಒಪ್ಪಿಲ್ಲ. ಈ ಕ್ಷೇತ್ರಕ್ಕೆ ಮೈಸೂರು ವಿವಿಯ ಸಿಂಡಿಕೇಟ್ ಮಾಜಿ ಸದಸ್ಯ ಈ.ಸಿ.ನಿಂಗರಾಜು ಅವರು ಬಿಜೆಪಿಯ ಅಭ್ಯರ್ಥಿ.

ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಭಾಗಿಯಾಗಿರುವ ಲೈಂಗಿಕ ಹಗರಣವು ಬಿಜೆಪಿಗೆ ತೀವ್ರ ಮುಜುಗರ ಉಂಟು ಮಾಡಿದೆ. ಈ ಹಿನ್ನೆಲೆಯಲ್ಲಿ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಜತೆಗೆ ಮೈತ್ರಿ ಬೇಡ ಎಂದು ಪಕ್ಷದ ಕೆಲವು ನಾಯಕರು ಪ್ರತಿಪಾದಿಸಿದ್ದರು. ಈ ಮಧ್ಯೆ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಜತೆ ಚರ್ಚೆ ನಡೆಸಿ, ಪ್ರಜ್ವಲ್ ಪ್ರಕರಣದ ಬಗ್ಗೆ ಮಾಹಿತಿ ನೀಡಿದ್ದರು. ಶಾ ಅವರು ಎರಡೂ ಪಕ್ಷಗಳ ಮಧ್ಯೆ ಮೈತ್ರಿ ಮುಂದುವರೆಸುವ ಬಗ್ಗೆ ಸೂಚನೆ ನೀಡಿದ್ದರು.

SAD DEMISE

Smt. K R SRIDEVI

Date of Birth : 16th November 1962

We deeply regret to inform the sad demise of Smt. K R Sridevi on Saturday, 11 May 2024

GULAB PRODUCTIONS

Deeply Mourned by : Family Members, Relatives & Friends

200ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸುವ ನಿರೀಕ್ಷೆ

'ಆಳ್ವಾಸ್ ಪ್ರಗತಿ' ಉದ್ಯೋಗ ಮೇಳ ಜೂ.7ರಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ನಡೆಸುವ 14ನೇ ಆವೃತ್ತಿಯ 'ಆಳ್ವಾಸ್ ಪ್ರಗತಿ' ರಾಜ್ಯ ಮಟ್ಟದ ಉದ್ಯೋಗ ಮೇಳವನ್ನು ಜೂನ್ 7 ಮತ್ತು 8ರಂದು ಮೂಡುಬಿದಿರೆಯ ವಿದ್ಯಾಗಿರಿ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ, 'ಬ್ಯಾಂಕಿಂಗ್ ಮತ್ತು ಹಣಕಾಸು, ಐಟಿ, ಮ್ಯಾನುಫ್ಯಾಕ್ಚರಿಂಗ್, ಹೆಲ್ತ್‌ಕೇರ್ ಮತ್ತು ಫಾರ್ಮಾ, ಮಾರಾಟ ಮತ್ತು ಚಿಲ್ಲರೆ ವ್ಯಾಪಾರ, ಆಟೊಮೊಬೈಲ್, ಹಾಸ್ಪಿಟಾಲಿಟಿ, ಮಾಧ್ಯಮ, ಶಿಕ್ಷಣ ಮತ್ತು ಎನ್‌ಜಿಒಗಳನ್ನು ಪ್ರತಿನಿಧಿಸುವ ಕಂಪನಿಗಳು ಮೇಳದಲ್ಲಿ ಭಾಗವಹಿಸಲಿವೆ' ಎಂದು ಹೇಳಿದರು.

ಹೈದರಾಬಾದ್‌ನ ಫ್ಯಾಕ್ಟ್‌ಸೆಟ್ ಸಂಸ್ಥೆ, ಇಎಕ್ಸ್‌ಎಲ್, ಮಹೀಂದ್ರಾ ಫಿನಾನ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಕಿರ್ಲೋಸ್ಕರ್ ಟೊಯೊಟಾ ಟೆಕ್ಸ್‌ಟೈಲ್ ಮೆಷಿನರಿ, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಆಜಾಕ್ಸ್ ಎಂಜಿನಿಯರಿಂಗ್, ಬುಹ್ಲರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಏರೊಸ್ಪೇಸ್ ಡಿವಿಷನ್, ವೋಲ್ವೊ ಗ್ರೂಪ್ ಸೇರಿದಂತೆ 60ಕ್ಕೂ ಹೆಚ್ಚು ಕಂಪನಿಗಳು ನೋಂದಾಯಿಸಿದ್ದು, 200ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಪದವಿ, ಸ್ನಾತಕೋತ್ತರ ಪದವೀಧರರು, ವೈದ್ಯಕೀಯ ಮತ್ತು ಪ್ಯಾರಾ ಮೆಡಿಕಲ್, ಎಂಜಿನಿಯರಿಂಗ್, ಕಲಾ, ವಾಣಿಜ್ಯ ಹಾಗೂ ಮ್ಯಾನೇಜ್‌ಮೆಂಟ್, ಮೂಲ ವಿಜ್ಞಾನ, ಐಟಿಐ, ನರ್ಸಿಂಗ್, ಪಿಯುಸಿ ಉತ್ತೀರ್ಣರಾಗಿರುವ ಉದ್ಯೋಗಾಕಾಂಕ್ಷಿಗಳು ಮೇಳದಲ್ಲಿ ಪಾಲ್ಗೊಳ್ಳಬಹುದು. ಸಂಸ್ಥೆಯು ಈವರೆಗೆ 20 ಉದ್ಯೋಗ ಮೇಳಗಳನ್ನು ಆಯೋಜಿಸಿದ್ದು, ಇದಕ್ಕಾಗಿ ₹5 ಕೋಟಿ ವ್ಯಯಿಸಿದೆ. ವಿವಿಧ ರಾಜ್ಯಗಳ ಅಭ್ಯರ್ಥಿಗಳು ಮೇಳದಲ್ಲಿ ಉದ್ಯೋಗ ಪಡೆದಿದ್ದಾರೆ. ಈವರೆಗೆ 31,896 ಜನರಿಗೆ ಉದ್ಯೋಗ ದೊರೆತಿದೆ ಎಂದು ವಿವೇಕ್ ಆಳ್ವ ಹೇಳಿದರು.

ಹೊರ ಜಿಲ್ಲೆಗಳಿಂದ ಬರುವವರಿಗೆ ಜೂನ್ 6ರಂದು ವಸತಿ ವ್ಯವಸ್ಥೆ, ಐಟಿಐ ಅಭ್ಯರ್ಥಿಗಳಿಗೆ ಬಸ್ ಸೌಕರ್ಯ ಕಲ್ಪಿಸಲಾಗುವುದು. ಮಾಹಿತಿಗೆ ಮೊ. 90089 07716, 9663190590, 797522 3865, 9741440490 ಸಂಪರ್ಕಿಸಿ.

ಉದ್ಯೋಗ ಮತ್ತು ತರಬೇತಿ ವಿಭಾಗದ ಮುಖ್ಯಸ್ಥ ಸುಶಾಂತ್ ಅನಿಲ್ ಲೋಬೊ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರಸಾದ್ ಶೆಟ್ಟಿ ಇದ್ದರು.

'ನೋಂದಣಿ ಕಡ್ಡಾಯ'

ಉದ್ಯೋಗ ಮಾಹಿತಿಗೆ ಸಂಬಂಧಿಸಿದ ಮಾಹಿತಿಯನ್ನು www.alvaspragati.com ಇಲ್ಲಿ ಪ್ರಕಟಿಸಲಾಗಿದೆ. ಉದ್ಯೋಗ ಮೇಳದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಈ ವೆಬ್‌ಸೈಟ್‌ನಲ್ಲಿ ಉಚಿತವಾಗಿ ನೋಂದಣಿ ಮಾಡಿಕೊಳ್ಳಬೇಕು ಎಂದು ವಿವೇಕ್ ಆಳ್ವ ಹೇಳಿದರು.

ಚುಟುಕು

3ನೇ ಹಂತ: ಶೇ 65.68 ಮತದಾನ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಮೂರನೇ ಹಂತದಲ್ಲಿ ಶೇ 65.68 ಮತದಾನ ನಡೆದಿದೆ ಎಂದು ಚುನಾವಣಾ ಆಯೋಗ ಶನಿವಾರ ತಿಳಿಸಿದೆ.

ಮೂರನೇ ಹಂತದ ಮತದಾನ ಮೇ 7ರಂದು ನಡೆದಿತ್ತು. 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 93 ಕ್ಷೇತ್ರಗಳ ಮತದಾರರು ತಮ್ಮ ಹಕ್ಕು ಚಲಾಯಿಸಿದ್ದರು.

'ಮೂರನೇ ಹಂತದಲ್ಲಿ 8.85 ಕೋಟಿ ಪುರುಷರು ಮತ್ತು 8.39 ಕೋಟಿ ಮಹಿಳೆಯರು ಸೇರಿದಂತೆ ಒಟ್ಟು 17.24 ಕೋಟಿ ಮಂದಿ ಮತ ಚಲಾಯಿಸಲು ಅರ್ಹರಾಗಿದ್ದರು. ಅದರಲ್ಲಿ ಶೇ 66.89 ಪುರುಷರು, ಶೇ 64.4 ಮಹಿಳೆಯರು ಹಾಗೂ ಶೇ 25.2 ಲಿಂಗತ್ವ ಅಲ್ಪಸಂಖ್ಯಾತರು ಮತದಾನ ಮಾಡಿದ್ದಾರೆ' ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

'ದೇಶದ ಭವಿಷ್ಯ ಬದಲಾಯಿಸಿ'

ಲಖನೌ (ಪಿಟಿಐ): ಲೋಕಸಭಾ ಚುನಾವಣೆಯು ಮೀಸಲಾತಿ ಮತ್ತು ಸಂವಿಧಾನದ ರಕ್ಷಣೆಗಾಗಿ ನಡೆಯುವ 'ರಾಷ್ಟ್ರೀಯ ಚಳವಳಿ'ಯಾಗಿದೆ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಶನಿವಾರ ಹೇಳಿದರು.

ದೇಶದ ಭವಿಷ್ಯವನ್ನು ಬದಲಾಯಿಸುವ ಈ ಚಳವಳಿಯಲ್ಲಿ ಪಾಲ್ಗೊಳ್ಳುವಂತೆ ಅವರು ಪಕ್ಷದ ಕಾರ್ಯಕರ್ತರಿಗೆ 'ಎಕ್ಸ್' ಮಾಧ್ಯಮದ ಮೂಲಕ ಕರೆ ನೀಡಿದರು.

ಅಖಿಲೇಶ್ ಅವರು ಉತ್ತರ ಪ್ರದೇಶದ ಕನೌಜ್ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದು, ಇದೆ 13ರಂದು ಮತದಾನ ನಡೆಯಲಿದೆ. 'ಇಂಡಿಯಾ' ಮೈತ್ರಿಕೂಟದ ಎಲ್ಲ ಅಭ್ಯರ್ಥಿಗಳಿಗೂ ಬೆಂಬಲ ನೀಡುವಂತೆ ಅಖಿಲೇಶ್ ಅವರು ಕಾರ್ಯಕರ್ತರಿಗೆ ಸೂಚಿಸಿದರು.

'ಇಂಡಿಯಾ' ಕೂಟ ಜಯ ಗಳಿಸಿದರೆ ಅದು ನಿಮ್ಮ ಹೋರಾಟಕ್ಕೆ ಸಂದ ಗೆಲುವು ಮತ್ತು ಡಾ. ಬಿ.ಆರ್. ಅಂಬೇಡ್ಕರ್, ರಾಮ್ ಮನೋಹರ್ ಲೋಹಿಯಾ ಮತ್ತು ಮುಲಾಯಂ ಸಿಂಗ್ ಯಾದವ್ ಅವರಿಗೆ ಸಲ್ಲುವ ನಿಜವಾದ ಗೌರವವಾಗಿದೆ ಎಂದು ಹೇಳಿದರು.

'ವಿಪಕ್ಷದವರು ರಾಮದ್ರೋಹಿಗಳು'

ಬೇಗುಸರಾಯ್ (ಬಿಹಾರ) (ಪಿಟಿಐ): ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳ ಒಕ್ಕೂಟದವರು 'ರಾಮ ದ್ರೋಹಿ'ಗಳು. ಅವರು ಧರ್ಮದ ಹೆಸರಿನಲ್ಲಿ ದೇಶವನ್ನು ವಿಭಜಿಸಲು ಯತ್ನಿಸುತ್ತಿದ್ದಾರೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಶನಿವಾರ ಟೀಕಿಸಿದರು.

ಬೇಗುಸರಾಯ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಗಿರಿರಾಜ್ ಸಿಂಗ್ ಪರ ಹಮ್ಮಿಕೊಂಡಿದ್ದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷಗಳು ಗೋ ಹತ್ಯೆ ಮಾಡುವವರಿಗೆ ಬೆಂಬಲ ನೀಡುತ್ತಿದ್ದು, ಮುಸ್ಲಿಮರಿಗೆ ಮೀಸಲಾತಿ ನೀಡುತ್ತಿವೆ ಎಂದು ಆರೋಪಿಸಿದರು.

ಈ ಚುನಾವಣೆಯು 'ರಾಮ ಭಕ್ತರು' ಮತ್ತು 'ರಾಮ ದ್ರೋಹಿ'ಗಳ ನಡುವಿನ ಆಯ್ಕೆಯನ್ನು ಜನರಿಗೆ ನೀಡಲಿದೆ ಎಂದರು.

ಮತ್ತೆ ಬಾಯಿತಪ್ಪಿದ ನಿತೀಶ್

ಪಟ್ನಾ: ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮತ್ತೊಮ್ಮೆ ಬಾಯಿತಪ್ಪಿ ಮಾತನಾಡಿದ್ದು, ಶನಿವಾರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ದಿವಂಗತ ರಾಮ್ ವಿಲಾಸ್ ಪಾಸ್ವಾನ್ ಅವರಿಗೆ ಮತ ಹಾಕುವಂತೆ ಕೇಳಿದ ಪ್ರಸಂಗ ನಡೆದಿದೆ. ಪಾಸ್ವಾನ್ ಅವರು 2020ರಲ್ಲಿ ನಿಧನರಾಗಿದ್ದರು.

ತಪ್ಪನ್ನು ಅರಿತ ಕೂಡಲೇ ಸರಿಪಡಿಸಿಕೊಂಡ ಅವರು, 'ರಾಮ್ ವಿಲಾಸ್ ಪಾಸ್ವಾನ್ ಅಲ್ಲ. ಅವರ ಪುತ್ರ ಚಿರಾಗ್ ಪಾಸ್ವಾನ್ ಅವರಿಗೆ ಮತ ನೀಡಿ' ಎಂದು ಮನವಿ ಮಾಡಿದರು. ಹಾಜಿಪುರ ಕ್ಷೇತ್ರದಲ್ಲಿ ಕಣಕ್ಕಿಳಿದಿರುವ ಚಿರಾಗ್ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಪಾಲ್ಗೊಂಡರು.

ನಿತೀಶ್ ಅವರು ಪ್ರಚಾರ ಸಭೆಯಲ್ಲಿ ಬಾಯಿತಪ್ಪಿ ಮಾತಾಡಿದ್ದು ಇದೇ ಮೊದಲಲ್ಲ. ಈ ಹಿಂದೆ ಎರಡು ಸಲ 'ಎನ್‌ಡಿಎ ಮೈತ್ರಿಕೂಟವು ಲೋಕಸಭಾ ಚುನಾವಣೆಯಲ್ಲಿ 4,000ಕ್ಕಿಂತ ಹೆಚ್ಚು ಸ್ಥಾನ ಗೆಲ್ಲುತ್ತದೆ' ಎಂದಿದ್ದರು. ಪ್ರಧಾನಿ ಮೋದಿ ಅವರ ಸಮ್ಮುಖದಲ್ಲೇ ಮುಜುಗರಕ್ಕೀಡಾಗುವ ಹೇಳಿಕೆ ನೀಡಿದ್ದರು.

ಎಂಥಾ ಮಾತು!

ಮರಾಠ ಸಮುದಾಯಕ್ಕೆ ಮೀಸಲಾತಿ ನಿರಾಕರಿಸಿರುವುದಕ್ಕೆ ಮತ್ತು ಪ್ರತಿಭಟನಕಾರರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿರುವುದಕ್ಕೆ, ಆ ಸಮುದಾಯದವರು 'ಮಹಾಯುತಿ' ಸರ್ಕಾರಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ. ರಾಜ್ಯದ ಬಿಜೆಪಿ ಮುಖಂಡರಿಂದಾಗಿ ಮೋದಿ ಅವರಿಗೆ ಕಷ್ಟಕಾಲ ಬಂದಿದೆ. ಈ ಕಾರಣಕ್ಕೆ ಅವರು ರಾಜ್ಯದಾದ್ಯಂತ ಚುನಾವಣಾ ರ‍್ಯಾಲಿಗಳನ್ನು ನಡೆಸುತ್ತಿದ್ದಾರೆ. 'ಮಹಾಯುತಿ' ಮೈತ್ರಿಕೂಟ ಮಾತ್ರವಲ್ಲ, 'ಮಹಾ ವಿಕಾಸ್ ಆಘಾಡಿ' ಕೂಡ ಮರಾಠ ಸಮುದಾಯಕ್ಕೆ ಅನ್ಯಾಯ ಮಾಡಿದೆ

ಮನೋಜ್ ಜರಾಂಗೆ, ಹೋರಾಟಗಾರ

ಪಿಲಿಭಿತ್‌ನಿಂದ ಸ್ಪರ್ಧಿಸಲು ವರುಣ್ ಗಾಂಧಿಗೆ ಟಿಕೆಟ್ ಕೈತಪ್ಪಲು ಕೇಂದ್ರ ಸರ್ಕಾರವನ್ನು ಟೀಕಿಸಿರುವ ಆತನ ಬರಹಗಳೇ ಕಾರಣವಾಗಿರಬಹುದು. ಪಿಲಿಭಿತ್‌ನಿಂದ ವರುಣ್ ಸ್ಪರ್ಧಿಸಿದ್ದರೆ ಚೆನ್ನಾಗಿರುತ್ತಿತ್ತು, ಆದರೆ ಅದು ಪಕ್ಷದ ನಿರ್ಧಾರವಾಗಿತ್ತು. ಟಿಕೆಟ್ ಸಿಗದಿದ್ದರೂ ಆತ ಚೆನ್ನಾಗಿ ಕೆಲಸ ಮಾಡಬಲ್ಲ

ಮೇನಕಾ ಗಾಂಧಿ, ಬಿಜೆಪಿ ನಾಯಕಿ

ಕ್ಷೇತ್ರ ಮಹಾತ್ಮೆ

ಮಧ್ಯಪ್ರದೇಶದ ಬುಡಕಟ್ಟು ಪ್ರಾಬಲ್ಯವಿರುವ ಕ್ಷೇತ್ರಗಳಲ್ಲೊಂದಾಗಿರುವ ಧಾರ್ ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆಯ ಕಾವು ಏರಿಕೆಯಾಗಿದೆ. ಇಲ್ಲಿ ಬಿಜೆಪಿಯು ಸಾವಿತ್ರಿ ಠಾಕೂರ್ ಅವರನ್ನು ಕಣಕ್ಕಿಳಿಸಿದರೆ, ಕಾಂಗ್ರೆಸ್ ಪಕ್ಷವು ರಾಧೇಶ್ಯಾಮ್ ಮುವೆಲ್ ಅವರನ್ನು ಅಖಾಡಕ್ಕಿಳಿಸಿದೆ. ಬುಡಕಟ್ಟು ಅಭ್ಯರ್ಥಿಗಳಿಗೆ ಮೀಸಲಾಗಿರುವ ಈ ಕ್ಷೇತ್ರವು ಬಿಜೆಪಿಯ ಭದ್ರಕೋಟೆಯಾಗಿದೆ. 2019ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಚತ್ತರ್ ಸಿಂಗ್ ದರ್ಬಾರ್ ಅವರು 1,56,029 ಮತಗಳ ಅಂತರದಿಂದ ಕಾಂಗ್ರೆಸ್‌ನ ದಿನೇಶ್ ಗಿರ್ವಾಲ್ ಅವರನ್ನು ಪರಾಭವಗೊಳಿಸಿದ್ದರು. ಚತ್ತರ್ ಸಿಂಗ್ ಅವರಿಗೆ ಈ ಬಾರಿ ಬಿಜೆಪಿ ಟಿಕೆಟ್ ನಿರಾಕರಿಸಿದೆ. ರಾಧೇಶ್ಯಾಮ್ ಅವರು ಮೊದಲ ಬಾರಿ ಲೋಕಸಭಾ ಚುನಾವಣೆಯಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಗಳನ್ನೇ ಪ್ರಮುಖ ಚುನಾವಣಾ ವಿಷಯವಾಗಿಸಿ ಕಾಂಗ್ರೆಸ್ ಅಭ್ಯರ್ಥಿ ಮತಯಾಚಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಗ್ಯಾರಂಟಿಗಳನ್ನು ಮುಂದಿರಿಸಿಕೊಂಡು ಬಿಜೆಪಿ ಅಭ್ಯರ್ಥಿಯು ಜನರ ಬಳಿಗೆ ತೆರಳುತ್ತಿದ್ದಾರೆ. ಭೋಜಶಾಲಾ-ಕಮಲ್ ಮೌಲಾ ಮಸೀದಿ ವಿವಾದವು ಈ ಬಾರಿಯ ಲೋಕಸಭಾ ಚುನಾವಣೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಇಬ್ಬರು ಪ್ರಬಲ ಅಭ್ಯರ್ಥಿಗಳು ಕಣಕ್ಕಿಳಿದಿರುವುದರಿಂದ ಜನರು ಯಾರ ಕಡೆ ವಾಲಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮೋದಿ ಪಿಚ್‌ನಲ್ಲಿ ನಾವು ಆಡಲ್ಲ

ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು 'ಪ್ರಜಾವಾಣಿ'ಗೆ ನೀಡಿರುವ ಸಂದರ್ಶನದ ಭಾಗ ಇಲ್ಲಿದೆ. ಕಾಂಗ್ರೆಸ್ ಹಾಗೂ 'ಇಂಡಿಯಾ' ಮೈತ್ರಿಕೂಟದ ಚುನಾವಣಾ ಸಿದ್ಧತೆ, ಪ್ರಧಾನಿ ಮೋದಿ ಅವರ ಈಚಿನ ಚುನಾವಣಾ ಭಾಷಣಗಳು ಮತ್ತು ಧ್ರುವೀಕರಣ ರಾಜಕಾರಣದ ಬಗ್ಗೆ ಮಾತನಾಡಿದ್ದಾರೆ.

• ಮಂಜುನಾಥ ಹೆಬ್ಬಾರ್


ಪ್ರಜಾವಾಣಿ ಸಂದರ್ಶನ
ಜೈರಾಮ್ ರಮೇಶ್

- **ಲೋಕಸಭಾ ಚುನಾವಣೆಯಲ್ಲಿ ಮೂರನೇ ಹಂತದ ಮತದಾನ ಮುಗಿದಿದೆ. ಕಾಂಗ್ರೆಸ್ ನಿರೀಕ್ಷೆಗಳೇನು?**

ಬಿಹಾರ, ಮಹಾರಾಷ್ಟ್ರ, ರಾಜಸ್ಥಾನ, ಹರಿಯಾಣ, ಜಾರ್ಖಂಡ್ ಮತ್ತಿತರ ರಾಜ್ಯಗಳಲ್ಲಿ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳು ಉತ್ತಮ ಸಾಧನೆ ಮಾಡಲಿವೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು 15ರಿಂದ 18 ಸ್ಥಾನಗಳನ್ನು ಗೆಲ್ಲಲಿದೆ. ಚುನಾವಣೆಯಲ್ಲಿ ಬಿಜೆಪಿಗೆ ಭಾರಿ ಹಿನ್ನಡೆಯಾಗಲಿದೆ ಎಂದು ಗೊತ್ತಾದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಚಾರ ಶೈಲಿ ಸಂಪೂರ್ಣ ಬದಲಾಗಿದೆ. ಅವರು ಮಂಗಳಸೂತ್ರ, ಮುಸ್ಲಿಮರು, ಮೀಸಲಾತಿ, ಪಿತ್ರಾರ್ಜಿತ ಆಸ್ತಿ ತೆರಿಗೆಯಂತಹ ವಿಷಯಗಳ ಬಗ್ಗೆಯೇ ಮಾತನಾಡುತ್ತಿದ್ದಾರೆ.

- **ಮೋದಿ ಹಾಗೂ ಬಿಜೆಪಿಯ ಪ್ರಚಾರದ ಕಣವನ್ನು ಕಾಂಗ್ರೆಸ್ ಸಮರ್ಥವಾಗಿ ಎದುರಿಸುತ್ತಿದೆಯೇ?**

ಮೋದಿ ಹಾಗೂ ಬಿಜೆಪಿಯವರು ನಮಗೆ ಬಲೆ ಬೀಸುತ್ತಿದ್ದಾರೆ. ನಾವು ಬ್ಯಾಟ್ ಮಾಡಲು ಮುಸ್ಲಿಂ ಪಿಚ್, ಮಂಗಳ ಸೂತ್ರದ ಪಿಚ್ ನಿರ್ಮಿಸುತ್ತಿದ್ದಾರೆ. ಆದರೆ, ಮೋದಿಯವರ ಪಿಚ್‌ನಲ್ಲಿ ನಾವು ಆಡುವುದಿಲ್ಲ. ನಾವು ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ, ಮೀಸಲಾತಿ ಹಾಗೂ ಸಂವಿಧಾನ ಬದಲಾವಣೆಯಂತಹ ಜ್ವಲಂತ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದೇವೆ. ಮೋದಿಯವರು ಸ್ಪಷ್ಟವಾಗಿ ಕೋಮುವಾದಿ ಅಜೆಂಡಾಕ್ಕೆ ಹೋಗಿದ್ದಾರೆ. ಮೋದಿ ಅವರು ಮೊದಲು ಕೋಮುಭಾವನೆ ಕೆರಳಿಸುವ ಕೆಲಸಗಳನ್ನೇ ಮಾಡುತ್ತಿದ್ದರು. ಪ್ರಧಾನಿಯಾದ ಬಳಿಕ ಸ್ವಲ್ಪ ಸಮಯ ಮುಖವಾಡ ಹಾಕಿಕೊಂಡಿದ್ದರು. ಈಗ ಮುಖವಾಡ ಕಳಚಿದ್ದಾರೆ. ಸರಳ ಬಹುಮತಕ್ಕೆ ಬೇಕಿರುವ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸ್ಪರ್ಧಿಸುತ್ತಿಲ್ಲ ಎಂದು ಮೋದಿ ಅಪಪ್ರಚಾರ ಮಾಡುತ್ತಿದ್ದಾರೆ. ಸರಳ ಬಹುಮತಕ್ಕೆ ಬೇಕಿರುವ ಸ್ಥಾನಗಳು 272. ಕಾಂಗ್ರೆಸ್ 330 ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ನಮ್ಮ ಪ್ರಣಾಳಿಕೆಯಲ್ಲಿ ಇಲ್ಲದ ವಿಷಯಗಳ ಬಗ್ಗೆ ಮೋದಿಯವರು ಮಾತನಾಡುತ್ತಿದ್ದಾರೆ. ಅವರು ಹತಾಶರಾಗಿದ್ದಾರೆ. ಹಾಗಾಗಿ, ನಿತ್ಯವೂ ಸುಳ್ಳು ಹೇಳುತ್ತಿದ್ದಾರೆ.

'ಪ್ರಜ್ವಲ್ ಹಗರಣ– ಪ್ರಧಾನಿಗೆ ಮೊದಲೇ ಗೊತ್ತಿತ್ತು'

- **ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಒತ್ತಾಯಿಸಿದ್ದಾರೆ. ಈ ಬಗ್ಗೆ ಕಾಂಗ್ರೆಸ್ ನಿಲುವೇನು?**

ಪ್ರಜ್ವಲ್ ಲೈಂಗಿಕ ಹಗರಣದ ಬಗ್ಗೆ ಪ್ರಧಾನಿ ಅವರಿಗೆ 2023ರ ಡಿಸೆಂಬರ್ 13ರಂದೇ ಗೊತ್ತಿತ್ತು. ಪೆನ್ ಡ್ರೈನ್ ಬಗ್ಗೆಯೂ ಅವರಿಗೆ ಮಾಹಿತಿ ಇತ್ತು. ಆದರೂ, ಅವರು ಪ್ರಜ್ವಲ್ ಪರವಾಗಿ ಚುನಾವಣಾ ಪ್ರಚಾರ ನಡೆಸಿದ್ದಾರೆ. ಇಷ್ಟೆಲ್ಲ ಗೊತ್ತಿದ್ದ ಮೇಲೆ ಜೆಡಿಎಸ್ ಜತೆಗೆ ಮೈತ್ರಿ ಮಾಡಿಕೊಂಡಿದ್ದು ಏಕೆ? ಈಗ ರಾಜಕೀಯ ಕಾರಣಕ್ಕೆ ಸಿಬಿಐ ತನಿಖೆಗೆ ಒತ್ತಾಯಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಮೊದಲು ಪ್ರಜ್ವಲ್ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸಲಿ.

- **ಪೆನ್ ಡ್ರೈವ್ ಹಂಚಿಕೆ ಹಿಂದೆ ಡಿ.ಕೆ. ಶಿವಕುಮಾರ್ ಪಾತ್ರವಿದೆ ಎಂದು ಜೆಡಿಎಸ್ ನಾಯಕರು ಆರೋಪಿಸಿದ್ದಾರಲ್ಲ?**

ಈ ಹಗರಣದ ಬಗ್ಗೆ ಬಿಜೆಪಿ ಮುಖಂಡರೊಬ್ಬರು ವರಿಷ್ಠರಿಗೆ ಪತ್ರ ಬರೆದಿದ್ದರು. ಆಗಲೇ ಪೆನ್ ಡ್ರೈವ್ ಬಗ್ಗೆ ಉಲ್ಲೇಖಿಸಿದ್ದರು. ಇದೀಗ, ದುರುದ್ದೇಶದಿಂದ ಶಿವಕುಮಾರ್ ಹೆಸರು ಎಳೆದು ತಂದಿದ್ದಾರೆ.

'2004ರ ಫಲಿತಾಂಶ ಪುನರಾವರ್ತನೆ'

ಈ ಸಲದ ಲೋಕಸಭಾ ಚುನಾವಣೆಯಲ್ಲಿ 2004ರ ಫಲಿತಾಂಶ ಪುನರಾವರ್ತನೆ ಆಗಲಿದೆ. 2003ರ ಛತ್ತೀಸಗಢ, ರಾಜಸ್ಥಾನ ಹಾಗೂ ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಗೆದ್ದಿತ್ತು. ಆದರೆ, 2004ರ ಲೋಕಸಭಾ ಚುನಾವಣೆಯಲ್ಲಿ ಸೋತಿತ್ತು. 2004ರಲ್ಲಿ ಕಾಂಗ್ರೆಸ್ ಪಕ್ಷವು ಪ್ರಧಾನಿ ಅಭ್ಯರ್ಥಿಯನ್ನು ಘೋಷಿಸಿರಲಿಲ್ಲ. ಈ ಸಲವೂ ಪ್ರಧಾನಿ ಅಭ್ಯರ್ಥಿಯ ಘೋಷಣೆ ಮಾಡಿಲ್ಲ. ಬಿಜೆಪಿ ಬಳಿಯಲ್ಲಿ ಈಗಿನಂತೆ ಆಗಲೂ ಅಪರಿಮಿತ ಸಂಪನ್ಮೂಲ ಇತ್ತು. 'ಇಂಡಿಯಾ ಶೈನಿಂಗ್' ಅಭಿಯಾನವಿತ್ತು. ಈ ಸಲ ಬಿಜೆಪಿಯು '400 ಪಾರ್' ಎಂದು ಹೇಳುತ್ತಿದೆ. ಆದರೆ, ಮೋದಿ ಅಧಿಕಾರ ಕಳೆದುಕೊಳ್ಳುವುದು ನಿಶ್ಚಿತ.

'ಡಿಕೆಶಿ ರೀತಿ ಎಲ್ಲರೂ ಧೈರ್ಯವಂತರಲ್ಲ'

- **'ಇಂಡಿಯಾ ಮೈತ್ರಿಕೂಟ'ಕ್ಕೆ ಸಾಮಾನ್ಯ ಕನಿಷ್ಠ ಕಾರ್ಯಕ್ರಮವೇ ಇಲ್ಲವಲ್ಲ?**

ಮೈತ್ರಿಕೂಟದಲ್ಲಿ ಯಾವುದೇ ಗೊಂದಲಗಳಿಲ್ಲ. ಮೈತ್ರಿಕೂಟದ ನಾಯಕರು ಸೀಟು ಹಂಚಿಕೆಯನ್ನು ಸುಸೂತ್ರವಾಗಿ ನಡೆಸಿದ್ದಾರೆ. 2004ರಲ್ಲಿ ಚುನಾವಣೆ ನಡೆದ ಬಳಿಕ ಯುಪಿಎ ಮೈತ್ರಿಕೂಟ ರೂಪುಗೊಂಡಿತು. ಆಗ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ರೂಪಿಸಲಾಗಿತ್ತು. ಈಗಿನ ಸನ್ನಿವೇಶ ಭಿನ್ನ. ಮೈತ್ರಿಕೂಟದ ನಾಯಕರು ಪಟ್ನಾ, ಬೆಂಗಳೂರು ಹಾಗೂ ಮುಂಬೈನಲ್ಲಿ ಸಭೆ ಸೇರಿ ಮೈತ್ರಿಕೂಟದ ಸ್ವರೂಪ ನಿರ್ಧರಿಸಿದ್ದಾರೆ. 'ಇಂಡಿಯಾ' ಕೂಟದ ಒಗ್ಗಟ್ಟಿಗೆ ಬಿಜೆಪಿ ಬೆದರಿದೆ.

- **ಸೂರತ್ ಹಾಗೂ ಇಂದೋರ್‌ನಲ್ಲಿ ನಡೆದ ಬೆಳವಣಿಗೆಗಳು ಕಾಂಗ್ರೆಸ್‌ಗೆ ಹಿನ್ನಡೆ ಅಲ್ಲವೇ?**

ಇಂದೋರ್ ಹಾಗೂ ಸೂರತ್ ಕ್ಷೇತ್ರಗಳಲ್ಲಿ 1984ರಿಂದಲೇ ಬಿಜೆಪಿ ಗೆಲ್ಲುತ್ತಿದೆ. ಭದ್ರಕೋಟೆಯಲ್ಲೇ ಈ ಸಲ ಅವರಿಗೆ ಸೋಲಿನ ಸುಳಿವು ಸಿಕ್ಕಿತು. ಹಾಗಾಗಿ, ಹಳೆಯ ಪ್ರಕರಣಗಳನ್ನು ಮುಂದಿಟ್ಟುಕೊಂಡು ಬೆದರಿಸಿದರು. ಅಶೋಕ್ ಚವಾಣ್, ಅಜಿತ್ ಪವಾರ್ ಹಾಗೂ ಪ್ರಫುಲ್ ಪಟೇಲ್ ಅವರಂತಹ ನಾಯಕರನ್ನು ಬೆದರಿಸಿಯೇ ಬಿಜೆಪಿ ಹಾಗೂ ಮೈತ್ರಿಕೂಟಕ್ಕೆ ಸೇರಿಸಿಕೊಳ್ಳಲಾಗಿದೆ. ಕಾಂಗ್ರೆಸ್‌ನ ಕೆಲವು ನಾಯಕರಲ್ಲೂ ದೌರ್ಬಲ್ಯಗಳಿವೆ. ಎಲ್ಲರೂ ಡಿ.ಕೆ. ಶಿವಕುಮಾರ್ ಅವರಂತೆ ಅಲ್ಲ. ಬಿಜೆಪಿಯ ಬೆದರಿಕೆಗಳಿಗೆ ಶಿವಕುಮಾರ್‌ಮಣಿಯಲಿಲ್ಲ.

'ಕಾಂಗ್ರೆಸ್ 50 ಸ್ಥಾನಗಳನ್ನೂ ಗೆಲ್ಲುವುದಿಲ್ಲ'

ಫುಲ್ಬನಿ/ಬೊಲಂಗಿರ್ (ಒಡಿಶಾ) (ಪಿಟಿಐ): ಕಾಂಗ್ರೆಸ್ ಪಕ್ಷವು ಕನಿಷ್ಠ 50 ಸ್ಥಾನಗಳನ್ನೂ ಗೆಲ್ಲುವುದಿಲ್ಲ ಮತ್ತು ವಿರೋಧ ಪಕ್ಷದ ಸ್ಥಾನಮಾನ ಪಡೆಯುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಅಭಿಪ್ರಾಯಪಟ್ಟರು.

ಜಾರ್ಖಂಡ್‌ನ ಚತ್ರಾದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ಮೋದಿ

ಒಡಿಶಾದ ಕಂಧಮಾಲ್‌ನಲ್ಲಿ ಪ್ರಚಾರ ನಡೆಸಿದ ಅವರು, 'ಕಾಂಗ್ರೆಸ್‌ನ 'ಶಹಜಾದ' 2014ರಿಂದ ಹೇಳಿದ್ದನ್ನೇ ಹೇಳುತ್ತಿದ್ದಾರೆ. ಎನ್‌ಡಿಎ ಈ ಬಾರಿ 400ಕ್ಕೂ ಹೆಚ್ಚು ಸ್ಥಾನ ಪಡೆದು ದಾಖಲೆ ನಿರ್ಮಿಸಲಿದೆ' ಎಂದು ಪ್ರತಿಪಾದಿಸಿದರು.

'ಪಾಕಿಸ್ತಾನವು ಕೂಡ ಅಣ್ವಸ್ತ್ರ ಹೊಂದಿದ್ದು, ಯಾವುದೇ ಕ್ಷಣದಲ್ಲಿ ಅವನ್ನು ಬಳಸಬಹುದು ಎಂದು ಪದೇ ಪದೇ ಹೇಳುವ ಮೂಲಕ ಕಾಂಗ್ರೆಸ್ ಪಕ್ಷವು ಜನರಲ್ಲಿ ಭಯ ಹರಡುತ್ತಿದೆ' ಎಂದು ಆರೋಪಿಸಿದರು. 'ಜೀವಂತ ಶವಗಳಾಗಿರುವ ಈ ಮಂದಿ ದೇಶದ ಚೈತನ್ಯವನ್ನು ಕೊಲ್ಲುತ್ತಿದ್ದಾರೆ' ಎಂದು ಟೀಕಿಸಿದರು.

'ಪಾಕಿಸ್ತಾನವು ಈಗ ತನ್ನ ಬಳಿ ಇರುವ ಬಾಂಬ್‌ಗಳನ್ನು ಮಾರಲು ಪ್ರಯತ್ನಿಸುತ್ತಿದ್ದು, ಕೊಳ್ಳುವವರಿಗಾಗಿ ಹುಡುಕುತ್ತಿದೆ. ಆದರೆ, ಅವು ಕಳಪೆ ಗುಣಮಟ್ಟದವರಾಗಿರುವುದರಿಂದ ಯಾರೂ ಕೊಳ್ಳಲು ಮುಂದೆ ಬರುತ್ತಿಲ್ಲ' ಎಂದು ವ್ಯಂಗ್ಯವಾಡಿದರು.

ಮೋದಿ ಮತ್ತೆ ಸರ್ಕಾರ ರಚಿಸುವುದು ಕಷ್ಟ: ಖರ್ಗೆ

ಪಟ್ನಾ/ಸಮಸ್ತಿಪುರ (ಪಿಟಿಐ): ಪ್ರಧಾನಿ ಮೋದಿ ಅವರು ಮತ್ತೆ ಸರ್ಕಾರ ರಚನೆ ಮಾಡುವುದು ತುಂಬಾ ಕಷ್ಟವಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶನಿವಾರ ಅಭಿಪ್ರಾಯಪಟ್ಟರು.

ಪಟ್ನಾದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, 'ಮೋದಿ ತೆಲಂಗಾಣದಲ್ಲಿ ಪ್ರಚಾರ ಮಾಡುತ್ತಿದ್ದಾಗ ನಾನು ನೆರೆಯ ಆಂಧ್ರಪ್ರದೇಶದಲ್ಲಿ ರ‍್ಯಾಲಿ ನಡೆಸುತ್ತಿದ್ದೆ. ಅವರ ಮಾತುಗಳಲ್ಲಿ ಈ ಹಿಂದೆ ಕಾಣುತ್ತಿದ್ದ ಬಿರುಸು ಮತ್ತು ಉತ್ಸಾಹ ಈಗ ಕಾಣುತ್ತಿಲ್ಲ. ಅವರು ಸರ್ಕಾರ ರಚಿಸುವುದು ಕಷ್ಟವಿದೆ ಎನ್ನುವುದನ್ನು ಮೂರು ಹಂತಗಳ ಚುನಾವಣೆಯ ನಂತರ ನಾನು ಸುಲಭವಾಗಿ ಹೇಳಬಲ್ಲೆ. ಹೀಗಾಗಿಯೇ ಅವರು ತಮ್ಮ ಸಾಧನೆಗಳ ಬದಲು ಹಿಂದೂ– ಮುಸ್ಲಿಂ ವಿಭಜನೆಯ ಬಗ್ಗೆ ಮಾತನಾಡುತ್ತಿದ್ದಾರೆ' ಎಂದು ಹೇಳಿದರು.

ಬಿಹಾರದ ಸಮಸ್ತಿಪುರದಲ್ಲಿ ಮಾತನಾಡಿದ ಖರ್ಗೆ, 'ನಾವು ಅಂಬಾನಿ–ಅದಾನಿ ಬಗ್ಗೆ ಮೌನ ವಹಿಸಿದ್ದೇವೆ ಎಂದು ಹೇಳುತ್ತಾರೆ. ಆದರೆ, ನಾವು ಮೌನವಾಗಿಲ್ಲ. ಅವರ ಆರೋಪದ ಪ್ರಕಾರ ನಾವು ಉದ್ಯಮಿಗಳಿಂದ ಹಣ ಸ್ವೀಕರಿಸಿದ್ದರೆ, ಸರ್ಕಾರ ಯಾಕೆ ಯಾವುದೇ ಕ್ರಮ ಜರುಗಿಸಿಲ್ಲ' ಎಂದು ಪ್ರಶ್ನಿಸಿದರು.

ನಾಲ್ಕನೇ ಹಂತ: ಬಹಿರಂಗ ಪ್ರಚಾರ ಅಂತ್ಯ

ಪ್ರಜಾವಾಣಿ ವಾರ್ತೆ



ನವದೆಹಲಿ: ಲೋಕಸಭಾ ಚುನಾವಣೆಯ ನಾಲ್ಕನೇ ಹಂತದ ಮತದಾನ ನಡೆಯಲಿರುವ 96 ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರಕ್ಕೆ ಶನಿವಾರ ಸಂಜೆ ತೆರೆಬಿತ್ತು.

ನಾಲ್ಕನೇ ಹಂತದ ಮತದಾನ ಸೋಮವಾರ ನಡೆಯಲಿದೆ. ಆಂಧ್ರಪ್ರದೇಶ (25) ಮತ್ತು ತೆಲಂಗಾಣದ (17) ಎಲ್ಲ ಕ್ಷೇತ್ರಗಳು ಮಾತ್ರವಲ್ಲದೆ, ಉತ್ತರ ಪ್ರದೇಶದ 13, ಮಹಾರಾಷ್ಟ್ರದ 11, ಮಧ್ಯಪ್ರದೇಶ, ಪಶ್ಚಿಮ ಬಂಗಾಳದ ತಲಾ ಎಂಟು, ಬಿಹಾರದ ಐದು, ಜಮ್ಮು ಮತ್ತು ಕಾಶ್ಮೀರದ ಒಂದು ಹಾಗೂ ಒಡಿಶಾ, ಜಾರ್ಖಂಡ್‌ನ ತಲಾ ನಾಲ್ಕು ಕ್ಷೇತ್ರಗಳಿಗೆ ಮತದಾನ ನಡೆಯಲಿವೆ.

ನಾಲ್ಕನೇ ಹಂತ ಮುಕ್ತಾಯಗೊಂಡರೆ 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾನ ಪ್ರಕ್ರಿಯೆಗೆ ತೆರೆ ಬಿದ್ದಂತಾಗಲಿದೆ. ಒಟ್ಟು 381 ಕ್ಷೇತ್ರಗಳಲ್ಲಿ ಮತದಾನ ಪೂರ್ಣಗೊಳ್ಳಲಿದೆ. ಆಂಧ್ರಪ್ರದೇಶದಲ್ಲಿ ಸೋಮವಾರ ಲೋಕಸಭಾ ಚುನಾವಣೆ ಜತೆಯಲ್ಲೇ ವಿಧಾನಸಭಾ ಚುನಾವಣೆಯ ಮತದಾನವೂ ನಡೆಯಲಿದೆ. ಬಹಿರಂಗ ಪ್ರಚಾರದ ಕೊನೆಯ ದಿನವಾದ ಶನಿವಾರ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಿವಿಧೆಡೆ ರ‍್ಯಾಲಿಗಳಲ್ಲಿ ಪಾಲ್ಗೊಂಡರು.

'ವೈಎಸ್‌ಆರ್‌ಸಿಪಿ ಬಿಜೆಪಿಯ 'ಬಿ' ಟೀಂ'

ರಾಹುಲ್ ಗಾಂಧಿ ಅವರು ಆಂಧ್ರಪ್ರದೇಶದ ಕಡಪದಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದರು. ಪಕ್ಷದ ನಾಯಕಿ ವೈ.ಎಸ್‌.ಶರ್ಮಿಳಾ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಕಡಪ (ಆಂಧ್ರಪ್ರದೇಶ) (ಪಿಟಿಐ): ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್.ಜಗನ್‌ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರ್‌ಸಿಪಿ, ಟಿಡಿಪಿ ಮತ್ತು ಜನಸೇನಾ ಪಕ್ಷಗಳು ಬಿಜೆಪಿಯ 'ಬಿ' ಟೀಂ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು. ಕಡಪದಲ್ಲಿ ಶನಿವಾರ ಚುನಾವಣಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು ಆಡಳಿತಾರೂಢ ವೈಎಸ್‌ಆರ್‌ಸಿಪಿ ಮತ್ತು ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು.

ಇಂದು ಆಂಧ್ರಪ್ರದೇಶದ ಆಡಳಿತವು ಬಿಜೆಪಿಯ 'ಬಿ' ಟೀಂನ ಕೈಯಲ್ಲಿದೆ. ಬಿಜೆಪಿಯ 'ಬಿ' ಎಂದರೆ ಇಲ್ಲಿ 'ಬಾಬು' (ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು), 'ಜೆ' ಎಂದರೆ ಜಗನ್, 'ಪಿ' ಎಂದರೆ ಪವನ್ (ಜನಸೇನಾ ಪಕ್ಷದ ಸ್ಥಾಪಕ ಪವನ್ ಕಲ್ಯಾಣ್) ಎಂದು ದೂರಿದರು. ಈ ಮೂವರು ನಾಯಕರ ರಿಮೋಟ್ ಕಂಟ್ರೋಲ್ ಪ್ರಧಾನಿ ನರೇಂದ್ರ ಮೋದಿ ಅವರ ಕೈಯಲ್ಲಿದೆ ಎಂದು ಆರೋಪಿಸಿದರು. ಮಾಜಿ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ (ವೈಎಸ್‌ಆರ್) ಅವರ ಹೆಸರು ಪ್ರಸ್ತಾಪಿಸಿದ ರಾಹುಲ್, 'ವೈಎಸ್‌ಆರ್ ಅವರು ಆಂಧ್ರಪ್ರದೇಶದಲ್ಲಿ ನಡೆಸಿದ್ದ ಪಾದಯಾತ್ರೆಯು ನನ್ನ ಭಾರತ್ ಜೋಡೊ ಯಾತ್ರೆಗೆ ಸ್ಫೂರ್ತಿಯಾಯಿತು' ಎಂದರು.

ಜನಸ್ತೋಮ
ತೆಲಂಗಾಣದ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಕಾಂಗ್ರೆಸ್‌ನ ಲೋಕಸಭಾ ಅಭ್ಯರ್ಥಿ ಪರವಾಗಿ ಹೈದರಾಬಾದ್ ಸನಿಹದ ಪಠಾಣ್‌ಚೆರುನಲ್ಲಿ ರೋಡ್ ಶೋ ನಡೆಸಿದರು –ಪಿಟಿಐ ಚಿತ್ರ

ಮುಸ್ಲಿಮರು ಹೇಗೆ ಅಭದ್ರ: ಅನುರಾಗ್

ಹಮೀರ್‌ಪುರ (ಹಿಮಾಚಲ ಪ್ರದೇಶ) (ಪಿಟಿಐ): ದೇಶದಲ್ಲಿ ಮುಸ್ಲಿಮರ ಜನಸಂಖ್ಯೆಯು ಶೇ 45ರಷ್ಟು ಏರಿಕೆಯಾಗಿರುವಾಗ ಮತ್ತು ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಲ್ಲಿ ಸಮಾನ ಫಲಾನುಭವಿಗಳಾಗಿರುವಾಗ ಅವರು ಹೇಗೆ ಅಭದ್ರರಾಗುತ್ತಾರೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಶನಿವಾರ ಪ್ರಶ್ನಿಸಿದರು.

ದೇಶದ ಜನಸಂಖ್ಯೆಯಲ್ಲಿ ಮುಸ್ಲಿಮರ ಪ್ರಮಾಣ 1950ರಿಂದ 2015ರ ನಡುವೆ ಶೇ 43ರಷ್ಟು ಏರಿಕೆಯಾಗಿದೆ. ಇದೇ ಅವಧಿಯಲ್ಲಿ ಹಿಂದೂಗಳ ಪ್ರಮಾಣ ಶೇ 7.8ರಷ್ಟು ಇಳಿಕೆಯಾಗಿದೆ ಎಂದು ಪ್ರಧಾನಿಯ ಆರ್ಥಿಕ ಸಲಹಾ ಸಮಿತಿಯ ಅಧಿಕಾರಿಗಳು ಸಿದ್ಧಪಡಿಸಿರುವ ವರದಿಯಲ್ಲಿ ಹೇಳಿರುವುದನ್ನು ಉಲ್ಲೇಖಿಸಿ ಅವರು ಈ ಹೇಳಿಕೆ ನೀಡಿದ್ದಾರೆ. ಅಲ್ಪಸಂಖ್ಯಾತರು ಅಭಿವೃದ್ಧಿ ಹೊಂದುತ್ತಿದ್ದಾರೆ, ಚಿಂತಿಸಬೇಕಾಗಿಲ್ಲ ಎಂದು ಪಿಟಿಐ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದರು.

ಓಲೈಕೆಯ ಮತ್ತು ಮತಬ್ಯಾಂಕ್ ರಾಜಕಾರಣ ಮಾಡುವ ಸಲುವಾಗಿ ಜನರ ಸಂಪತ್ತನ್ನು ಕಸಿದು, ಮುಸ್ಲಿಮರಿಗೆ ನೀಡಲು ಕಾಂಗ್ರೆಸ್ ಬಯಸುತ್ತಿದೆ ಎಂದು ಆರೋಪಿಸಿದರು. ಸಂವಿಧಾನದಲ್ಲಿ ಯಾವುದೇ ಬದಲಾವಣೆಯಾಗದು ಎಂದೂ ಅವರು ಹೇಳಿದರು.

ಮಹಾರಾಷ್ಟ್ರ: ಈರುಳ್ಳಿ ಬೆಳೆಗಾರರ ಮತ ಯಾರಿಗೆ?

ನಾಸಿಕ್ (ಪಿಟಿಐ): ಮಹಾರಾಷ್ಟ್ರದ ಉತ್ತರ ಮತ್ತು ಪಶ್ಚಿಮ ಭಾಗಗಳು ಈರುಳ್ಳಿ ಬೆಳೆಗೆ ಪ್ರಸಿದ್ಧಿ ಪಡೆದಿವೆ. ಲೋಕಸಭಾ ಚುನಾವಣೆಯ ನಾಲ್ಕು ಮತ್ತು ಐದನೇ ಹಂತಗಳಲ್ಲಿ 'ಈರುಳ್ಳಿ ವಲಯ'ದ 24 ಕ್ಷೇತ್ರಗಳ ವ್ಯಾಪ್ತಿಯಲ್ಲಿ ರೈತರ ಸಂಕಷ್ಟವೇ ಮುಖ್ಯ ಚುನಾವಣಾ ವಿಷಯವಾಗಿದೆ.

ರಾಜ್ಯದ 22 ಜಿಲ್ಲೆಗಳಲ್ಲಿ ಈರುಳ್ಳಿ ಬೆಳೆಯಲಾಗುತ್ತಿದ್ದು, ಅವುಗಳ ವ್ಯಾಪ್ತಿಯ 13 ಲೋಕಸಭಾ ಕ್ಷೇತ್ರಗಳ ರೈತರ ಮೇಲೆ ಕೇಂದ್ರದ ಈರುಳ್ಳಿಗೆ ಸಂಬಂಧಿಸಿದ ನೀತಿಗಳು ನೇರ ಪರಿಣಾಮ ಬೀರುತ್ತವೆ. ಅವುಗಳ ಪೈಕಿ ಸೋಲಾಪುರ, ಲಾತೂರ್, ಬಾರಾಮತಿ ಮತ್ತು ಉಸ್ಮಾನಾಬಾದ್ ಕ್ಷೇತ್ರಗಳ ಮತದಾನವು ಮೂರನೇ ಹಂತದಲ್ಲಿ ಮೇ 7ರಂದು ನಡೆದಿದೆ.

ಈರುಳ್ಳಿ ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸುವಲ್ಲಿ ಆಡಳಿತಾರೂಢ ಪಕ್ಷ ಮತ್ತು ವಿರೋಧ ಪಕ್ಷಗಳೂ ವಿಫಲವಾಗಿವೆ ಎಂದು ಮಹಾರಾಷ್ಟ್ರ ರಾಜ್ಯ ಈರುಳ್ಳಿ ಬೆಳೆಗಾರರ ಸಂಘದ ಸ್ಥಾಪಕ ಅಧ್ಯಕ್ಷ ಭರತ್ ದಿಘೋಲೆ ಹೇಳಿದರು.

'ಈರುಳ್ಳಿ ಬೆಳೆಗಾರರಲ್ಲಿ ತೀವ್ರವಾದ ಅಸಮಾಧಾನವಿದ್ದು, ಅದು ಮೇ 13 ಮತ್ತು ಮೇ 20ರಂದು ಇವಿಎಂ ಯಂತ್ರಗಳಲ್ಲಿ ಮತ ಚಲಾವಣೆ ಮೂಲಕ ವ್ಯಕ್ತವಾಗಲಿದೆ' ಎಂದು ಅವರು ತಿಳಿಸಿದರು.

ಈ ಹಿಂದೆ ಕೇಂದ್ರ ಸರ್ಕಾರವು ದೇಶಿ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸಲು ಈರುಳ್ಳಿ ರಫ್ತಿನ ಮೇಲೆ ಶೇ 14 ತೆರಿಗೆ ವಿಧಿಸಿತ್ತು. ಅದರ ವಿರುದ್ಧ ರೈತರು ಪ್ರತಿಭಟನೆ ನಡೆಸಿದ ನಂತರ ತೆರಿಗೆಯನ್ನು ಹಿಂಪಡೆದು, ಟನ್ ಈರುಳ್ಳಿಗೆ ಸುಮಾರು ₹71 ಸಾವಿರ ಬೆಂಬಲ ಬೆಲೆ ನಿಗದಿ ಮಾಡಿತ್ತು. ಆದರೂ ಬೆಂಬಲ ಬೆಲೆ ಸಾಲದು ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದ್ದರು.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಸರ್ಕಾರವು ಈರುಳ್ಳಿ ರಫ್ತಿನ ಮೇಲೆ ಸಂಪೂರ್ಣ ನಿಷೇಧ ಹೇರಿತು. ನಿಷೇಧವನ್ನು ಮೇ 4ರಂದು ವಾಪಸ್ ಪಡೆದರೂ, ರಫ್ತಿನ ಮೇಲೆ ಶೇ 40 ತೆರಿಗೆ ವಿಧಿಸುವ ಮೂಲಕ ಟನ್ ಈರುಳ್ಳಿಗೆ ಸುಮಾರು ₹46 ಸಾವಿರ ಕನಿಷ್ಠ ರಫ್ತು ಬೆಲೆಯನ್ನು ನಿಗದಿಪಡಿಸಿತ್ತು.

ವಿರೋಧ ಪಕ್ಷದ ವಿರುದ್ಧವೂ ದಿಘೋಲೆ ಅಸಮಾಧಾನ ವ್ಯಕ್ತಪಡಿಸುತ್ತಾರೆ. 'ಚುನಾವಣೆಯಲ್ಲಿ ರೈತರ ಸಿಟ್ಟನ್ನು ಮತವಾಗಿ ಪರಿವರ್ತಿಸಿಕೊಳ್ಳಬಹುದು ಎಂದು ವಿರೋಧ ಪಕ್ಷಗಳು ರಫ್ತು ನಿಷೇಧ ಹಿಂಪಡೆಯುವಂತೆ ಸರ್ಕಾರದ ಮೇಲೆ ಒತ್ತಡ ಹೇರಲಿಲ್ಲ' ಎಂದು ಅವರು ಆರೋಪಿಸುತ್ತಾರೆ.

ಶಿವಸೇನಾ (ಯುಬಿಟಿ) ಉದ್ಧವ್ ಠಾಕ್ರೆ ಅವರಾಗಲಿ, ಕಾಂಗ್ರೆಸ್ ಆಗಲಿ ಈರುಳ್ಳಿ ಬೆಳೆಗಾರರ ಕಷ್ಟಕ್ಕೆ ಸ್ಪಂದಿಸಲಿಲ್ಲ ಎಂದು ದಿಘೋಲೆ ಹೇಳುತ್ತಾರೆ. ಸರ್ಕಾರವು ಈರುಳ್ಳಿ ಬೆಳೆಗಾರರಿಗೆ ಘೋಷಣೆ ಮಾಡಿದಂತೆ ಬೆಳೆಯನ್ನು ಕೊಂಡುಕೊಳ್ಳಲಿಲ್ಲ, ರಫ್ತು ಕೂಡ ಮಾಡಲಿಲ್ಲ. ಗ್ರಾಹಕರಿಗಾಗಿ ಈರುಳ್ಳಿ ಬೆಲೆ ಏರಿಕೆ ತಡೆಯಲು ಬೆಳೆಗಾರರನ್ನು ಆ ರೀತಿ ಸಂಕಷ್ಟಕ್ಕೀಡುಮಾಡುವ ಅಗತ್ಯವಿಲ್ಲ' ಎನ್ನುವುದು ಅವರ ಅನಿಸಿಕೆ.

ನಾಯಕರು ಏನನ್ನುವರು...

ಮಹಾರಾಷ್ಟ್ರದ ಧುಲೆ, ದಿಂಡೋರಿ, ಅಹಮದ್‌ನಗರ, ಶಿರಡಿ, ಶಿರೂರ್, ಬೀಡ್, ಮಾವಲ್, ನಂದೂರ್‌ಬಾರ್ ಮತ್ತು ದೇಶದ ಅತಿ ದೊಡ್ಡ ಈರುಳ್ಳಿ ಮಾರುಕಟ್ಟೆಯಾದ ಲಾಸ್ಲಗಾಂವ್ ಇರುವ ನಾಸಿಕ್ ಕ್ಷೇತ್ರಗಳ ಈರುಳ್ಳಿ ಬೆಳೆಗಾರರು ಸರ್ಕಾರದ ನೀತಿಗಳಿಂದ ಬಾಧಿತರಾಗಿದ್ದಾರೆ. ಈ ಕ್ಷೇತ್ರಗಳ ಮತದಾನವು ಮುಂದಿನ ಎರಡು ಹಂತಗಳಲ್ಲಿ ನಡೆಯಲಿದೆ.

'ಮಹಾರಾಷ್ಟ್ರ ದೇಶದಲ್ಲಿಯೇ ಅತಿ ಹೆಚ್ಚು ಈರುಳ್ಳಿ ಬೆಳೆಯುವ ರಾಷ್ಟ್ರವಾಗಿದ್ದು, ಒಟ್ಟು ಬೆಳೆಯಲ್ಲಿ ಶೇ 40ರಷ್ಟು ಇಲ್ಲಿ ಬೆಳೆಯಲಾಗುತ್ತದೆ. ರೈತವಿರೋಧಿ ನೀತಿಗಳ ಕಾರಣದಿಂದ ಗ್ರಾಮೀಣ ಭಾಗದಲ್ಲಿ ಆಡಳಿತ ವಿರೋಧಿ ಅಲೆಯನ್ನು ಕಾಣಬಹುದು' ಎಂದು ನಾಸಿಕ್‌ನ ಹಿರಿಯ ಕಾಂಗ್ರೆಸ್ ಮುಖಂಡ ರಾಜಾರಾಮ್ ಪಂಗಾವ್ಣೆ ಹೇಳಿದರು.

'ಈರುಳ್ಳಿ ರಫ್ತು ನಿಷೇಧ ಸಂಬಂಧ ರೈತರು ಸರ್ಕಾರದ ವಿರುದ್ಧ ಅಸಮಾಧಾನಗೊಂಡಿದ್ದು ನಿಜ. ಆದರೆ, ಈಗ ನಿಷೇಧ ಹಿಂಪಡೆಯಲಾಗಿದೆ. ಅದರಿಂದ ಅವರಿಗೆ ಲಾಭವಾಗಲಿದೆ. ನಾವು ಚುನಾವಣಾ ಪ್ರಚಾರದಲ್ಲಿ ಅದನ್ನೇ ಮುಖ್ಯವಾಗಿ ಪ್ರಸ್ತಾಪಿಸುತ್ತಿದ್ದೇವೆ' ಎಂದು ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ, ಎನ್‌ಸಿಪಿ ಮುಖಂಡ ಛಗನ್ ಭುಜಬಲ್ ಹೇಳಿದ್ದಾರೆ.

ಶಾಂಕರದರ್ಶನದ ಬೆಳಕು

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಸನ್ಯಾಸಿಗಳ ಸಂಖ್ಯೆ ಹೆಚ್ಚುತ್ತಿದೆ; ಸನ್ಯಾಸಿಗಳ ವೈಭವವೂ ಹೆಚ್ಚುತ್ತಿದೆ. ಆದರೆ ಸನ್ಯಾಸಿಗಳಲ್ಲಿ ಸಂನ್ಯಾಸಧರ್ಮ ದಿಟವಾಗಿ ನೆಲೆಗೊಳ್ಳುತ್ತಿದೆಯೆ? ನೆಲೆಗೊಂಡಿದೆಯೆ? ಇದು ನಾವೆಲ್ಲರೂ ಚಿಂತಿಸಬೇಕಾದ ಸಂಗತಿ.

ಆಚಾರ್ಯ ಶಂಕರರು ಸನ್ಯಾಸ ಧರ್ಮದ ಲಕ್ಷಣವನ್ನು ಸ್ಪಷ್ಟಗೊಳಿಸಿದವರು. ಅಷ್ಟೇಕೆ, ತತ್ತ್ವಜ್ಞಾನದ ದಾರಿಯನ್ನೇ ಬೆಳಗಿದವರು ಅವರು. ಉಪನಿಷತ್ತುಗಳ ಆದರ್ಶವನ್ನು ಎತ್ತಿ ನಿಲ್ಲಿಸಿ, ಆಧ್ಯಾತ್ಮಿಕತೆಯ ಅನಿವಾರ್ಯತೆಯನ್ನೂ ಸೊಗಸನ್ನೂ ಸತ್ತ್ವವನ್ನೂ ಸ್ಥಾಪಿಸಿದರು.

ಸನ್ಯಾಸ ಎಂದರೆ ಲೋಕವನ್ನು ಉದ್ಧರಿಸಲು ಧರಿಸಿದ ದಿರಸು – ಎಂಬ ಧೋರಣೆಯೇ ಇಂದು ನಮ್ಮ ಸಮಾಜದಲ್ಲಿ ಗಟ್ಟಿಯಾಗುತ್ತಿದೆ. ಆದರೆ ಸನ್ಯಾಸದ ನಡಿಗೆ ಎಂದರೆ ಅದು ಅಧ್ಯಾತ್ಮದ ನಡಿಗೆ. ನಮ್ಮನ್ನು ನಾವು ಚೆನ್ನಾಗಿ ತಿಳಿದುಕೊಳ್ಳುವುದೇ ಅಧ್ಯಾತ್ಮ. ನಮ್ಮನ್ನು ನಾವು ಅರಿತುಕೊಳ್ಳಲು ಮೊದಲು ನಾವು ಸಾಧನೆಯನ್ನು ಮಾಡಬೇಕು. ನಮ್ಮ ಅಂತರಂಗ-ಬಹಿರಂಗಗಳಲ್ಲಿರುವ ಕೊಳೆಗಳನ್ನು ಸಾಧನೆಯ ಮೂಲಕ ಶುದ್ಧವಾಗಿ ತೊಳೆದುಕೊಳ್ಳಬೇಕು. ಹೀಗೆ ಶುದ್ಧವಾದ ಮೇಲಷ್ಟೆ ಅಧ್ಯಾತ್ಮಚಿಂತನೆಗೆ ಅರ್ಹತೆ ಒದಗುವುದು. ರಾಗ-ದ್ವೇಷಗಳ ಬಲೆಯಿಂದ ಬಿಡಿಸಿಕೊಂಡವರಿಗಷ್ಟೆ ಆತ್ಮಚಿಂತನೆಯ ಅರ್ಹತೆ ದಕ್ಕುವುದು. ಹೀಗೆ ಅಧ್ಯಾತ್ಮಮಾರ್ಗ ಗೊತ್ತು-ಗುರಿಗಳನ್ನು ಗಟ್ಟಿಯಾಗಿ ನೆಲೆಗೊಳಿಸಿದವರು ಶಂಕರಾಚಾರ್ಯರು.

ರೋಗಿಯಾದವನು ಆರೋಗ್ಯವಂತನಾಗುವುದು ಯಾವಾಗ? ಅವನ ರೋಗವು ನಿವೃತ್ತಿಯಾದ ಕೂಡಲೇ ಅವನಲ್ಲಿ ಆರೋಗ್ಯ ಮರಳುತ್ತದೆ, ಅಲ್ಲವೆ? ಹೀಗೆಯೇ ನಾವೆಲ್ಲರೂ ದುಃಖ ಎಂಬ ರೋಗದಿಂದ ನರಳುತ್ತಿದ್ದೇವೆ. ಈ ರೋಗಕ್ಕೆ ಕಾರಣ ನಾವು ಜಗತ್ತನ್ನು ನೋಡುತ್ತಿರುವ ರೀತಿ. ಪ್ರಪಂಚವನ್ನು ನಾವು ದ್ವೈತವಾಗಿ ನೋಡುತ್ತಿದ್ದೇವೆ; ಎಂದರೆ ಭೇದರೂಪಗಳ ಕಟ್ಟನಂತೆ ನೋಡುತ್ತಿದ್ದೇವೆ. ಈ ಕಾರಣದಿಂದಲೇ ದುಃಖ ಎಂಬ ದೊಡ್ಡರೋಗ ನಮ್ಮನ್ನು ಕಾಡುತ್ತಿದೆ. ದ್ವೈತಪ್ರಪಂಚದಿಂದ ನಮಗೆ ಬಿಡುಗಡೆ ದೊರಕಿದರೆ ಆಗ ನಮ್ಮ ದಿಟವಾದ ಸ್ವರೂಪ ನಮಗೆ ದಕ್ಕುತ್ತದೆ. ಇಂಥ ಬಿಡುಗಡೆಗೆ ಅಡ್ಡಿಯಾಗಿರುವುದೇ ಅವಿದ್ಯೆ. ಅವಿದ್ಯೆಯು ನಾಶವಾದರೆ ದುಃಖಾತ್ಮಕವಾದ ಪ್ರಪಂಚವೂ ನಮ್ಮ ಪಾಲಿಗೆ ಉಪಶಮಗೊಳ್ಳುತ್ತದೆ. ಇದೇ ಆನಂದದ ಪ್ರಾಪ್ತಿಗೆ ದಾರಿ; ಇದೇ ನಮ್ಮತನದ ಅರಿವು; ಇದೇ ಉಪನಿಷತ್ತುಗಳ ಸಂದೇಶ – ಎಂದು ಪ್ರತಿಪಾದಿಸಿದ ಆಚಾರ್ಯರು, ಅವಿದ್ಯಾನಾಶದ ಉಪಾಯಗಳನ್ನೂ ನಮಗಾಗಿ ನಿರೂಪಿಸಿದ್ದಾರೆ.

ಅವಿದ್ಯೆಯನ್ನೂ ಅದರ ಕಾರಣಗಳನ್ನೂ ಆಚಾರ್ಯರು ಸೊಗಸಾಗಿ ವಿವರಿಸಿದ್ದಾರೆ. 'ಅವಿದ್ಯೆಯು ಕತ್ತಲೆಯ ಸ್ವಭಾವದ್ದು. ಅವಿದ್ಯೆಯು ಕತ್ತಲೆಯಂತೆ ವಸ್ತುಗಳನ್ನು ಮರೆಮಾಚುತ್ತದೆ. ಹೀಗಾಗಿ ಅದು ಇರುವ ವಸ್ತುವನ್ನು ತಪ್ಪಾಗಿ ತೋರಿಸುತ್ತದೆ. ಅಥವಾ, ಅದು ವಸ್ತುವಿನ ಸ್ವರೂಪದ ಬಗ್ಗೆ ಸಂಶಯಗಳನ್ನು ಹುಟ್ಟಿಸುತ್ತದೆ; ಅಥವಾ ವಸ್ತುವಿನ ಅರಿವನ್ನೇ ಉಂಟುಮಾಡುವುದಿಲ್ಲ. ಆದರೆ ವಿವೇಕದ ಬೆಳಕು ಒಮ್ಮೆ ಬಿದ್ದಿತೆಂದರೆ ಆ ಕೂಡಲೇ ಅವಿದ್ಯೆ ಮರೆಯಾಗಿ ಬಿಡುತ್ತದೆ' ಎಂದಿರುವ ಅವರು, ನಮ್ಮಲ್ಲಿ ಕತ್ತಲೆ ಎಂಬ ದೋಷವಿದ್ದರೆ ಆಗ ಅನ್ಯಥಾಗ್ರಹಣ, ಸಂಶಯ ಅಥವಾ ಅಗ್ರಹಣ ಎಂಬ ಮೂರು ವಿಧದ ಅವಿದ್ಯೆಗಳು ಉಂಟಾಗುತ್ತವೆ ಎಂದು ಎಚ್ಚರಿಸಿದ್ದಾರೆ; ಅವಿದ್ಯೆಯ ನಿವೃತ್ತಿಯೇ ಆತ್ಮಜ್ಞಾನದ ದಾರಿ, ತನ್ನತನದ ತಿಳಿವಳಿಕೆ ಎಂದು ಪ್ರತಿಪಾದಿಸಿದ್ದಾರೆ.

ಅವಿದ್ಯೆಯ ನಾಶ ಎಂದರೆ ಜ್ಞಾನದ ಪ್ರಾಪ್ತಿ; ಸರಿಯಾದ ತಿಳಿವಳಿಕೆ. ಇಂಥ ಅರಿವನ್ನು ಪಡೆಯಬೇಕು ಎಂದು ಬಯಸುವವನು ಶಮ, ದಮ ಮೊದಲಾದ ಸಾಧನಗಳನ್ನು ಮೈಗೂಡಿಸಿಕೊಂಡಿರಬೇಕು. ವೇದಗಳು ಹೇಳುವುದೂ ಇದನ್ನೇ. ವಿದ್ಯೆಯನ್ನು ಪಡೆದವನು ಶಾಂತನಾಗಿರುತ್ತಾನೆ, ಸಂಯಮಿಯಾಗಿರುತ್ತಾನೆ, ನೆಮ್ಮದಿಯಿಂದಿರುತ್ತಾನೆ, ಸಹನೆಯಿಂದಿರುತ್ತಾನೆ, ಏಕಾಗ್ರಚಿತ್ತದಿಂದ ಕೂಡಿದವನಾಗಿರುತ್ತಾನೆ – ಎಂದು ಆಚಾರ್ಯರು ಸಾಧನೆಗಳ ಆವಶ್ಯಕತೆಯನ್ನು ಸಾರಿ ಸಾರಿ ಹೇಳಿದ್ದಾರೆ.

ಕೇವಲ ಕಾಷಾಯ ವಸ್ತ್ರವನ್ನು ತೊಟ್ಟವರೆಲ್ಲರೂ ಇಂದು ತಮ್ಮನ್ನು ತಾವು ಜ್ಞಾನಿಗಳಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ಇವರಲ್ಲಿ ನಿಜವಾದ ಜ್ಞಾನಿಯಾರು? ವೇಷಧಾರಿಗಳಾರು? ಆಚಾರ್ಯ ಶಂಕರರ ಕೃತಿಗಳನ್ನು ಅನುಸಂಧಾನಿಸಿದರೆ ದಿಟವಾದ ಜ್ಞಾನಿಯ ಲಕ್ಷಣ ಸ್ಪಷ್ಟವಾಗುತ್ತದೆ. ಅಧ್ಯಾತ್ಮಮಾರ್ಗದ ಶುದ್ಧೀಕರಣಪ್ರಕ್ರಿಯೆಯಲ್ಲಿ ಸನ್ಯಾಸಿಗೂ ಸಂಸಾರಿಗೂ ದಾರಿದೀಪವಾಗಬಲ್ಲದ್ದು ಶಾಂಕರದರ್ಶನ.

ಇಂದು ಶಂಕರ-ರಾಮಾನುಜ ಜಯಂತಿ

ಭಗವದ್ರಾಮಾನುಜರ ವೈಭವ

• ಎ. ನರಸಿಂಹನ್

ಭಗವದ್ರಾಮಾನುಜರು ಕ್ರಿ.ಶ. 1017, ಚಿತ್ರಮಾಸ ಆರಿದ್ರಾ ನಕ್ಷತ್ರದಲ್ಲಿ ಅವತರಿಸಿ ವಿಶ್ವಕ್ಕೆಲ್ಲ ಭಕ್ತಿಯ ಮಹತ್ವವನ್ನು ಪ್ರಕಾಶಪಡಿಸಿದ ಮಹಾನುಭಾವರು. ರಾಮಾನುಜ ದರ್ಶನವೆಂದೇ ಪ್ರಸಿದ್ಧವಾಗಿರುವ ವಿಶಿಷ್ಟಾದ್ವೈತದರ್ಶನವನ್ನು ಪರಿಪೂರ್ಣವಾಗಿ ಸ್ಥಾಪನೆಮಾಡಿದ ಶ್ರೇಷ್ಠ ಆಚಾರ್ಯರು.

ಶ್ರುತಿ, ಸ್ಮೃತಿ, ಬ್ರಹ್ಮಸೂತ್ರಗಳು ಮತ್ತು ಪೂರ್ವಾಚಾರ್ಯರುಗಳ ಗ್ರಂಥಗಳನ್ನು ಆಧರಿಸಿ ವಿಶಿಷ್ಟಾದ್ವೈತ ದರ್ಶನವನ್ನು ನವರತ್ನಗಳೆಂದು ಪ್ರಸಿದ್ಧವಾದ ತಮ್ಮ ಒಂಬತ್ತು ಗ್ರಂಥಗಳ ಮೂಲಕ ಸ್ಥಾಪಿಸಿದರು. ಗ್ರಂಥಗಳ ರಚನೆಯ ಮೂಲಕವಲ್ಲದೇ ಭಾರತದೇಶಾದ್ಯಂತ ಪ್ರಯಾಣಮಾಡಿ ಎಲ್ಲೆಡೆಯಲ್ಲಿಯೂ ಸಕಲರೂ ಉದ್ಧಾರವಾಗುವ ಮಾರ್ಗವನ್ನು ಉಪದೇಶಿಸಿ, ದೇವಸ್ಥಾನಗಳಲ್ಲಿಯೂ ಪೂಜಾವಿಧಾನವನ್ನು ವ್ಯವಸ್ಥೆಗೊಳಿಸಿದರು. ಹೀಗೆ ಬಹುಮುಖವಾಗಿ ಲೋಕೋದ್ಧಾರವನ್ನು ಮಾಡಿದ ಅವತಾರ ಪುರುಷರಿವರು. ಯಾವ ಭೇದಭಾವವಿಲ್ಲದೇ ಸಕಲಚೇತನರೂ ಈ ಸಂಸಾರದಿಂದ ಪಾರಾಗುವ ಪ್ರಪತ್ತಿಯೆಂಬ ಉಪಾಯವನ್ನು ಪ್ರಮಾಣಪೂರ್ವಕವಾಗಿ ಸ್ಥಾಪಿಸಿದ ಆಚಾರ್ಯರು.

ಮಾನವನು ಎಂದಿನಿಂದಲೂ ಸುಖವನ್ನೂ ನೆಮ್ಮದಿಯನ್ನೂ ಅರಸುತ್ತಲೇ ಇರುವನು. ಈ ಆಧುನಿಕ ಜೀವನದಲ್ಲಿ ಪ್ರತಿಯೊಬ್ಬರಿಗೂ ನೆಮ್ಮದಿಯ ಆವಶ್ಯಕತೆ ಇರುವುದೆಂಬುದು ಸರ್ವಾನುಭವಸಿದ್ಧವಾಗಿದೆ. ನೆಮ್ಮದಿಯ ಜೀವನಕ್ಕೆ ಒಂದು ಸುಲಭವಾದ ಉತ್ಕೃಷ್ಟವಾದ ಪ್ರಾಮಾಣಿಕವಾದ ಉಪಾಯವನ್ನು ತಾವು ಆಚರಿಸಿ, ಲೋಕಕ್ಕೆಲ್ಲ ಉಪದೇಶಿಸಿದ ಮಹಾಪುರುಷರು ಭಗವದ್ರಾಮಾನುಜರು.

ಮೊದಲು ಎಲ್ಲರಿಗೂ ಬೇಕಾದುದು ತತ್ತ್ವಜ್ಞಾನ. ಎಂದರೆ ಯಾವುದು ಸತ್ಯ, ಯಾವುದು ನಿತ್ಯ ಎಂಬುದು. ಜಗತ್ತಿನಲ್ಲಿ ಹಲವಿಧವಾದ ವಿಚಿತ್ರವಾದ ಪದಾರ್ಥಗಳಿರುವುವು. ಎಲ್ಲ ದೇಹಗಳಲ್ಲಿ ಕೆಲಸಮಾಡುವ ಚೈತನ್ಯವಿರುವುದು. ಈ ಜಗತ್ತಿನ ವ್ಯಾಪಾರವೆಲ್ಲವೂ ಒಂದು ನಿಷ್ಕೃಷ್ಟವಾದ ರೀತಿಯಲ್ಲಿ ನಡೆಯುತ್ತಿದೆ. ಇದರಲ್ಲಿ ಯಾವುದು ಸತ್ಯಭೂತವಾದುದು, ಯಾರಾದರೂ ಇದನ್ನೆಲ್ಲ ನಿಯಮನ ಮಾಡುತ್ತಿರುವರೋ ಮೊದಲಾದ ವಿಷಯಗಳನ್ನು ನಾವು ಪ್ರತ್ಯಕ್ಷವಾಗಿಯೋ ಊಹೆಮಾಡಿಯೋ ತಿಳಿಯಲು ಸಾಧ್ಯವಿಲ್ಲವೆಂಬುದು ಸ್ಪಷ್ಟ. ಇವನ್ನೆಲ್ಲ ತಿಳಿಸುವ ಗ್ರಂಥವೇ ವೇದಗಳು. ಆದರೆ ಅತ್ಯಂತ ಗೂಢವಾದ ರಹಸ್ಯಗಳನ್ನು ತಿಳಿಸುವ ವೇದಗಳ ಅರ್ಥಗಳನ್ನು ತಿಳಿಯುವುದು ಬಹಳ ಕಷ್ಟ. ಅದನ್ನೆಲ್ಲ ಯಾವ ಪರಸ್ಪರ ವಿರೋಧವಿಲ್ಲದಂತೆ, ಎಲ್ಲ ವೇದವಾಕ್ಯಗಳಿಗೂ ಮುಖ್ಯಾರ್ಥನ್ನೇ ಸ್ವೀಕರಿಸಿ ತತ್ತ್ವಾರ್ಥಗಳನ್ನು ಸ್ಥಾಪಿಸಿದ ಕೀರ್ತಿ ಭಗವದ್ರಾಮಾನುಜರಿಗೆ ಸಲ್ಲುವುದು.

ಚಿತ್, ಅಚಿತ್ ಮತ್ತು ಈಶ್ವರರೆಂಬ ಮೂರು ನಿತ್ಯವಾದ ಪರಮಾರ್ಥವಾದ ತತ್ತ್ವಗಳನ್ನು ಈ ದರ್ಶನವು ಒಪ್ಪಿಕೊಂಡಿದೆ. ಈಶ್ವರನೇ ಶ್ರೀಮನ್ನಾರಾಯಣನು, ಪರಬ್ರಹ್ಮನು, ಪರಮಾತ್ಮನು, ಜಗತ್ತಿನ ಏಕೈಕಕಾರಣನು, ದೋಷದೂರನೂ ಸಕಲಕಲ್ಯಾಣಗುಣಾಕರನೂ ಆದವನು, ಚಿತ್ ಮತ್ತು ಅಚಿತ್ ತತ್ತ್ವಗಳು ಆ ಪರಮಾತ್ಮನಿಗೆ ಶರೀರವಾಗಿರುವುದರ ಮೂಲಕ ಅವನ ಪ್ರಕಾರವಾಗಿರುವುವು. ಎಲ್ಲಕ್ಕೂ ಅಂತರ್ಯಾಮಿಯಾದ ಪರಮಾತ್ಮನನ್ನು ಆತ್ಮನನ್ನಾಗಿ ಹೊಂದದ ಪದಾರ್ಥವಿಲ್ಲ. ಈ ಸಂಸಾರವನ್ನು ದಾಟಲು ಭಕ್ತಿಯೋಗ ಮತ್ತು ಪ್ರಪತ್ತಿಯೆಂಬ ಎರಡೇ ಮಾರ್ಗಗಳೆಂದು ಶ್ರುತಿಗಳು ಬೋಧಿಸುತ್ತವೆ, ಅದರಲ್ಲಿ ಪ್ರಪತ್ತಿಯೆಂಬುದು ಸಕಲರೂ, ಯಾವ ಜಾತಿ, ಲಿಂಗ, ಗುಣ, ವಯಸ್ಸು, ಜ್ಞಾನ ಮೊದಲಾದ ಭೇದವಿಲ್ಲದೇ ಅನುಷ್ಠಿಸಬಹುದಾದ ಉಪಾಯವೆಂಬುದನ್ನು ತಾವು ಅನುಷ್ಠಾನಮಾಡಿ ಎಲ್ಲರಿಗೂ ಉಪದೇಶಿಸಿದರು. ಆ ಪರಮಾತ್ಮನ ಚರಣಯುಗಳಗಳ ಧ್ಯಾನ, ಅರ್ಚನ, ಪ್ರಣಾಮ ಇವುಗಳನ್ನು ಪ್ರೀತಿಪೂರ್ವಕವಾಗಿ ಮಾಡುವುದೇ ಭಕ್ತಿಯೋಗವೆಂಬ ಉಪಾಯ. ಹಾಗೆ ಆ ರೀತಿಯ ನಿರಂತರ ಧ್ಯಾನ ಮೊದಲಾದುದು ಯಾರಿಗೆ ಸಾಧ್ಯವಿಲ್ಲವೋ ಅವರೆಲ್ಲರೂ ಮಹಾವಿಶ್ವಾಸದೊಡನೆ ಪರಮಾತ್ಮನಲ್ಲಿ ತಮ್ಮ ಆತ್ಮರಕ್ಷಣೆಯ ಭಾರವನ್ನು ಸಮರ್ಪಿಸಿ ಈ ಸಂಸಾರದಿಂದ ಪಾರಾಗಬಹುದು. ಇದುವೇ ಪ್ರಪತ್ತಿಮಾರ್ಗ. ಇದನ್ನು ಸಕಲರೂ ಅನುಷ್ಠಿಸಬಹುದು. ಇದು ವಿಶ್ವದರ್ಶನಕ್ಕೇ ಭಗವದ್ರಾಮಾನುಜರ ಅಪೂರ್ವವಾದ ಕೊಡುಗೆ ಮತ್ತು ವಿಶ್ವಜನಾಂಗಕ್ಕೇ ಸಕಲರೂ ಉದ್ಧಾರವಾಗಬಹುದೆಂಬ ಆಶ್ವಾಸನೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸುವುದು ಕಡ್ಡಾಯ. ಆಧಾರ್/ಪ್ಯಾನ್ ಹೊಂದಿಲ್ಲದ ದಾನಿಗಳು ತಾವು ನೆಲಸಿರುವ ದೇಶದಲ್ಲಿನ ತೆರಿಗೆದಾತರ ಗುರುತಿನ ಸಂಖ್ಯೆ/ಪಾಸ್‌ಪೋರ್ಟ್ ಸಂಖ್ಯೆ/ಮತದಾರರ ಗುರುತಿನ ಸಂಖ್ಯೆ/ಚಾಲನಾ ಪರವಾನಗಿ ಸಂಖ್ಯೆ ಇದರಲ್ಲಿ ಯಾವುದಾದರೂ ಒಂದನ್ನು ನೀಡುವುದು ಕಡ್ಡಾಯ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್,
ನಂ. 75, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023-24ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ '**ಶೈಕ್ಷಣಿಕ ನೆರವಿಗೆ ಅರ್ಜಿ**' ಎಂದು ಬರೆಯಬೇಕು.

'ಕಲಿಕಾ ಸಾಮಗ್ರಿ ಖರೀದಿಸಿದೆ'

ಸುದ್ದಿ ಜೊತೆಗೆ ಸ್ವಾರಸ್ಯಕರ ಸಂಗತಿಗಳನ್ನು ಜನರಿಗೆ ಮನ ಮುಟ್ಟುವಂತೆ ತಲುಪಿಸುವ 'ಪ್ರಜಾವಾಣಿ' ಬಡ ವಿದ್ಯಾರ್ಥಿಗಳಿಗೆ ನೆರವಿನ ಹಸ್ತ ಚಾಚುವ ಮೂಲಕ ಸಮಾಜ ಸೇವೆ ಮಾಡುತ್ತಿದೆ. 'ಪ್ರಜಾವಾಣಿ' ನೀಡಿದ ಶೈಕ್ಷಣಿಕ ನೆರವಿನಿಂದ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಯಿತು. ಪುಸ್ತಕಗಳು ಸೇರಿ ಇತರೆ ಕಲಿಕಾ ಸಾಮಗ್ರಿಗಳನ್ನು ಖರೀದಿಸಿದೆ.

ದನುಶ್ರೀ ಎ.ಪಿ., ಚಿಕ್ಕಮಗಳೂರು

ಪ್ರಜಾವಾಣಿ
ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ
(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)
: 9008366666
: support@deccanherald.co.in

ಬಿರುಸು ಮಳೆ; ತಂಪಾದ ಇಳೆ

ಒಂದನೇ ಪುಟದಿಂದ...

ಕೆಲ ದ್ವಿಚಕ್ರ ವಾಹನ ಸವಾರರು ಮಳೆಯಲ್ಲೇ ಸಾಗಿದರೆ, ಇನ್ನೂ ಕೆಲವರು ಅಂಗಡಿ ಬದಿಗಳಲ್ಲಿ, ಮೇಲ್ಸೇತುವೆಗಳ ಕೆಳಗಡೆ ಆಶ್ರಯ ಪಡೆದರು. ಹಲವೆಡೆ ಮಳೆ ನೀರು ರಸ್ತೆ ಪೂರ್ತಿ ಆವರಿಸಿಕೊಂಡ ಕಾರಣ ಬಸ್, ಕಾರು, ಆಟೊರಿಕ್ಷಾ ಸೇರಿ ಇತರ ವಾಹನಗಳು ಪ್ರಯಾಸದಿಂದ ಸಾಗಿದವು. ಹುಬ್ಬಳ್ಳಿ ನಗರ ಸುತ್ತಮುತ್ತ 30ಕ್ಕೂ ಹೆಚ್ಚು ಕಡೆ ಮರಗಳು ಉರುಳಿ ಬಿದ್ದಿವೆ. ವಿದ್ಯುತ್ ಪೂರೈಕೆ ಕಡಿತಗೊಂಡಿತು. ಕೆಲ ತಗ್ಗು ಪ್ರದೇಶದ ಹಲವು ಮನೆಗಳಿಗೆ ನೀರು ನುಗ್ಗಿತು.

ಬೆಳಗಾವಿ ನಗರ ಸೇರಿದಂತೆ ಜಿಲ್ಲೆಯ ನಿಪ್ಪಾಣಿ, ಮುನವಳ್ಳಿ, ಖಾನಾಪುರ, ಚನ್ನಮ್ಮನ ಕಿತ್ತೂರಿನಲ್ಲಿ ಗುಡುಗು-ಮಿಂಚು ಸಹಿತ ಉತ್ತಮ ಮಳೆ ಸುರಿದರೆ, ಬೈಲಹೊಂಗಲದಲ್ಲಿ ಹಾಗೂ ವಿಜಯಪುರ ನಗರದಲ್ಲಿ ಸಾಧಾರಣ ಮಳೆಯಾಯಿತು.

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಜೊಯಿಡಾ, ಮುಂಡಗೋಡ ಭಾಗದಲ್ಲಿ ಗುಡುಗು ಸಹಿತ ಮಳೆಯಾದರೆ, ದಾಂಡೇಲಿ, ಶಿರಸಿ, ಯಲ್ಲಾಪುರದಲ್ಲಿ ತುಂತುರು ಮಳೆ ಸುರಿಯಿತು. ಚಿಗಳ್ಳಿ ಸೇರಿ ಕೆಲ ಗ್ರಾಮಗಳಲ್ಲಿ ಬಿರುಸಿನ ಮಳೆಯಾಯಿತು.

ಮೈಸೂರು ಭಾಗದಲ್ಲಿ ಬಿರುಸಿನ ಮಳೆ: ಮೈಸೂರು ಜಿಲ್ಲಾ ಕೇಂದ್ರ ಹಾಗೂ ಸುತ್ತಮುತ್ತ, ಕೊಡಗು ಜಿಲ್ಲೆಯ ಮಡಿಕೇರಿ, ಶನಿವಾರಸಂತೆ, ನಾಪೋಕ್ಲು, ಸುಂಟಿಕೊಪ್ಪ ಭಾಗದಲ್ಲೂ ಧಾರಾಕಾರ ಮಳೆಯಾಗಿದೆ.

ಚಾಮರಾಜನಗರ, ಯಳಂದೂರು ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ವಿವಿಧೆಡೆ ಬಿರುಗಾಳಿ ಸಹಿತ ಮಳೆಯಾಗಿದೆ. ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕೊಣನೂರು ಕೆರೆಕೋಡಿ, ಹಂಡ್ರಂಗಿ, ಬೊಮ್ಮನಹಳ್ಳಿಯಲ್ಲಿ ಹಾಗೂ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲೂ ಮಳೆಯಾಯಿತು.

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕದ ರಾಯಚೂರು ಜಿಲ್ಲೆಯ ಲಿಂಗಸುಗೂರು, ಸಿರವಾರ, ದೇವದುರ್ಗ ಪಟ್ಟಣ ಹಾಗೂ ಕೊಪ್ಪಳ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ.

ಕುಷ್ಟಗಿ ತಾಲ್ಲೂಕಿನ ಹಿರೇಮುಕರ್ತಿನಾಳ ಸೀಮಾಂತರದಲ್ಲಿ ಕನಕರಾಯಪ್ಪ ಕಾಟಾಪುರ (28) ಎಂಬುವರು ಸಿಡಿಲಿನಿಂದ ಮೃತಪಟ್ಟಿದ್ದಾರೆ.

(ಉಪ್ಪಿನಂಗಡಿ) ದಕ್ಷಿಣ ಕನ್ನಡ ವರದಿ: ಗುಂಡ್ಯ, ಇಚ್ಲಂಪಾಡಿ ಪರಿಸರದಲ್ಲಿ ಶನಿವಾರ ಗುಡುಗು ಸಿಡಿಲಿನಿಂದ ಕೂಡಿದ ಧಾರಾಕಾರ ಮಳೆಯಾಗಿದೆ. ಕಡಬ ತಾಲ್ಲೂಕಿನ ಇಚ್ಲಂಪಾಡಿಯಲ್ಲಿ ಸಿಡಿಲಿನಿಂದ ಒಬ್ಬ ಕಾರ್ಮಿಕ ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ.

'ಮೃತರನ್ನು ಉತ್ತರ ಪ್ರದೇಶದ ಚೈನ್‌ಪುರ್‌ನ ಶ್ರೀಕಿಸೂನ್ (56) ಎಂದು ಗುರುತಿಸಲಾಗಿದೆ. ಗಾಯಗೊಂಡ ಇಬ್ಬರು ಕಾರ್ಮಿಕರ ಹೆಸರು ವಿಳಾಸ ಗೊತ್ತಾಗಿಲ್ಲ. ಈ ಕಾರ್ಮಿಕರು ಇಚ್ಲಂಪಾಡಿಯ ಬಳಿ ಗುಂಡ್ಯ ಹೊಳೆಯಲ್ಲಿ ಮರಳು ತೆಗೆಯುವ ಕೆಲಸ ಮಾಡುತ್ತಿದ್ದರು. ನದಿ ಬದಿಯಲ್ಲಿ ಶೆಡ್‌ನಲ್ಲಿ ಇವರು ಉಳಿದುಕೊಂಡಿದ್ದಾಗ ಸಿಡಿಲು ಬಡಿದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿತ್ರದುರ್ಗ ವರದಿ: ಜಿಲ್ಲೆಯ ವಿವಿಧೆಡೆ ಶುಕ್ರವಾರ ರಾತ್ರಿ ಉತ್ತಮ ಮಳೆಯಾಗಿದೆ. ಬಿರುಗಾಳಿಗೆ ಅಲ್ಲಲ್ಲಿ ಮರಗಳು ಉರುಳಿ ಬಿದ್ದಿವೆ.ಹೊಸದುರ್ಗ ತಾಲ್ಲೂಕಿನ ಮಾಡದಕೆರೆಯಲ್ಲಿ 4.2 ಸೆಂ.ಮೀ, ಶ್ರೀರಾಂಪುರದಲ್ಲಿ 4 ಸೆಂ.ಮೀ., ಚಿತ್ರದುರ್ಗ ತಾಲ್ಲೂಕಿನಲ್ಲಿ 3.4 ಸೆಂ.ಮೀ ಮಳೆಯಾಗಿದೆ.

ದಾವಣಗೆರೆ ವರದಿ: ಸಂತೇಬೆನ್ನೂರು ಸೇರಿ ಸುತ್ತಲಿನ ಗ್ರಾಮಗಳಲ್ಲಿ ಶನಿವಾರ ಮುಂಜಾನೆ ಹದ ಮಳೆ ಸುರಿದಿದೆ. ಸಂತೇಬೆನ್ನೂರಿನಲ್ಲಿ 2.4 ಸೆಂ.ಮೀ. ಮಳೆ ದಾಖಲಾಗಿದೆ.

ಹುಬ್ಬಳ್ಳಿಯ ವಿದ್ಯಾನಗರದ ಬಿಆರ್‌ಟಿಎಸ್ ಮಾರ್ಗ ಮತ್ತು ಅದರ ಪಕ್ಕದ ರಸ್ತೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯಿತು

ಕೊಪ್ಪಳದಲ್ಲಿ ಶನಿವಾರ ಸುರಿದ ಮಳೆಯಲ್ಲಿ ಕೈಹಿಡಿದು ಹೊರಟಿದ್ದ ಅಪ್ಪ–ಮಗಳು
–ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಇಂದು ರಾಜ್ಯದಾದ್ಯಂತ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಭಾನುವಾರ ಮಳೆ ಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು 23 ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ ಎಂಟು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಶಿವಮೊಗ್ಗ, ಕೊಡಗು, ಹಾಸನ ಹಾಗೂ ಮೈಸೂರು ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಭಾರಿ ಗಾಳಿ (40ರಿಂದ 50 ಕಿ.ಮೀ.ವೇಗ) ಹಾಗೂ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರು ಸೇರಿ ಇನ್ನುಳಿದ ಜಿಲ್ಲೆಗಳಲ್ಲಿಯೂ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಕಲಬುರಗಿ, ವಿಜಯಪುರ, ಯಾದಗಿರಿ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಕೊಡುಗು ಜಿಲ್ಲೆಗಳಿಗೆ ಇಲಾಖೆ 'ಯೆಲ್ಲೊ ಅಲರ್ಟ್' ನೀಡಿದರೆ, ಇನ್ನುಳಿದ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ. ರಾಜ್ಯದ ಕೆಲವು ಸ್ಥಳಗಳಲ್ಲಿ ಬಿರುಗಾಳಿ ಬೀಸುವ ಸಾಧ್ಯತೆಯ ಬಗ್ಗೆಯೂ ಇಲಾಖೆ ಮುನ್ಸೂಚನೆ ನೀಡಿದೆ.

ಇದೇ 15ರವರೆಗೂ ರಾಜ್ಯದ ಎಲ್ಲ ಜಿಲ್ಲೆಗಳಿಗೆ 'ಆರೆಂಜ್' ಹಾಗೂ 'ಯೆಲ್ಲೊ' ಅಲರ್ಟ್ ನೀಡಿರುವ ಇಲಾಖೆ, ಮಳೆಯ ತೀವ್ರತೆ ಹೆಚ್ಚುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಶನಿವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಮಂಡ್ಯದ ಶ್ರೀರಂಗಪಟ್ಟಣದಲ್ಲಿ ಗರಿಷ್ಠ ಮಳೆ (9 ಸೆಂ.ಮೀ.) ಆಗಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಮುಂಬೈ ಧಾರಣೆ

ಶೇಂಗಾ
11-5-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11000
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆಗೆದ ಬೀಜ)	1530 (1500)
ಒಂದು ವಾರದ ಡೆಲಿವರಿ	1525(1495)
ಸೋಯಾ ಕಚ್ಚಾ	860(850)
ಪಾಮ್ ವಾರದ ಡೆಲಿವರಿ	873 (878)
ಸೂರ್ಯಕಾಂತಿ ಎಣ್ಣೆ ಕಚ್ಚಾ	855 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹72,450 (72,800)
ಬೆಳ್ಳಿ ಕೆ.ಜಿ ₹83,600 (84,150)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಯೂರ ಸುಧಾ ಓದಿರಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವಿದೇಶಿ ವಿನಿಮಯ ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ಕಳೆದ ಮೂರು ವಾರದಿಂದ ಸತತವಾಗಿ ಇಳಿಕೆಯಾಗಿದ್ದ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಮೇ 3ಕ್ಕೆ ಕೊನೆಗೊಂಡ ವಾರದಲ್ಲಿ ಏರಿಕೆಯಾಗಿದೆ.

ಕೊನೆಗೊಂಡ ವಾರದಲ್ಲಿ ₹30,642 ಕೋಟಿ ಹೆಚ್ಚಳವಾಗಿದೆ. ಒಟ್ಟಾರೆ ಮೀಸಲು ಸಂಗ್ರಹವು ₹53.59 ಲಕ್ಷ ಕೋಟಿಗೆ (641.59 ಬಿಲಿಯನ್ ಡಾಲರ್) ಮುಟ್ಟಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಏಪ್ರಿಲ್ 26ಕ್ಕೆ ಅಂತ್ಯಗೊಂಡ ವಾರದಲ್ಲಿ ₹20,149 ಕೋಟಿ ಕುಸಿತವಾಗಿತ್ತು. ಏಪ್ರಿಲ್ 5ಕ್ಕೆ ಕೊನೆಗೊಂಡ ವಾರದಲ್ಲಿ ಒಟ್ಟು ಮೀಸಲು ಸಂಗ್ರಹವು ₹54.18 ಲಕ್ಷ ಕೋಟಿಗೆ ತಲುಪುವ ಮೂಲಕ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿತ್ತು.

ಮೇ 3ಕ್ಕೆ ಅಂತ್ಯಗೊಂಡ ವಾರದಲ್ಲಿ ಮೀಸಲು ಸಂಗ್ರಹದಲ್ಲಿ ವಿದೇಶಿ ಕರೆನ್ಸಿಗಳ ಸಂಗ್ರಹವು ಗರಿಷ್ಠ ಪ್ರಮಾಣದಲ್ಲಿದೆ. ವಿದೇಶಿ ಕರೆನ್ಸಿಗಳ ಸಂಗ್ರಹವು ₹37,250 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಸಂಗ್ರಹವು ₹47.13 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ಆರ್‌ಬಿಐ ವಿವರಿಸಿದೆ.

ಮೀಸಲು ಸಂಗ್ರಹದಲ್ಲಿ ಅಮೆರಿಕದ ಡಾಲರ್ ಹೊರತುಪಡಿಸಿದರೆ ಯೂರೊ, ಪೌಂಡ್ ಹಾಗೂ ಯೆನ್ ಕರೆನ್ಸಿಯ ಮೌಲ್ಯ ಕಡಿಮೆಯಾಗಿದೆ.

ಆದರೆ, ಚಿನ್ನದ ಮೀಸಲು ಸಂಗ್ರಹವು ₹5,455 ಕೋಟಿ ಇಳಿಕೆಯಾಗಿದ್ದು, ₹4.58 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹1,169 ಕೋಟಿ ಇಳಿಕೆಯಾಗಿದ್ದು, ₹37,584 ಕೋಟಿ ಆಗಿದೆ ಎಂದು ತಿಳಿಸಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹269-488
ದ್ವಿತಳಿ (ಬಿ.ವಿ)
₹171-587

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹14300
ಎಸಿ	₹7000
ಆರ್‌ಪಿ	₹8500
ಆರ್‌ಸಿ	₹4530

ಮೂರನೇ ವರ್ಷದ ಪುಣ್ಯಸ್ಮರಣೆ



ದಿ. ಎನ್. ಎಂ. ಚಂದ್ರಶೇಖರ್

ನೀವು 12-5-2024 ಇಂದಿಗೆ ಶಾರೀರಕವಾಗಿ ಮರೆಯಾಗಿ ಮೂರು ವರುಷ ತುಂಬಿದೆ. ಆದರೂ ಇಂದಿಗೂ ನಿಮ್ಮ ಸವಿನಯ ನೆನಪುಗಳು ನಮ್ಮ ಮನದಲ್ಲಿ ಹಸಿರಾಗಿ ನಮ್ಮ ಬಾಳಿಗೆ ನಂದಾದೀಪವಾಗಿ ಪ್ರಜ್ವಲಿಸುತ್ತಿದೆ. ನಿಮ್ಮ ಅಂದಿನ ಹಾದಿಗಳೇ ನಮ್ಮ ಇಂದಿನ ಹಾದಿಯಾಗಿದ್ದು ನಿಮ್ಮ ಆದರ್ಶ ಜೀವನವು ನಮ್ಮ ಇಂದಿನ ಜೀವನದ ಸ್ಫೂರ್ತಿಯ ನೆಲೆಯಾಗಿದೆ.

ಧರ್ಮಪತ್ನಿ: ವಿಮಲಾಕ್ಷಿ ಚಂದ್ರಶೇಖರ್ (ನಾಗವಾರ)
ಮಕ್ಕಳು: ಪದ್ಮನಾಭ, ಹರ್ಷ,
ಸೊಸೆಯಂದಿರು, ಮೊಮ್ಮಕ್ಕಳು
ಇಸ್ರೋ ಲೇಔಟ್, ಬೆಂಗಳೂರು.

ಶೇ 80ಕ್ಕೂ ಅಧಿಕ ವಾಹನಗಳಿಗೆ ಅಳವಡಿಕೆಯಾಗದ ನೋಂದಣಿ ಫಲಕ

ಎಚ್‌ಎಸ್‌ಆರ್‌ಪಿ: ನೀರಸ ಸ್ಪಂದನೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (ಎಚ್‌ಎಸ್‌ಆರ್‌ಪಿ) ಅಳವಡಿಸಲು ವಾಹನಗಳ ಮಾಲೀಕರ ನಿರಾಸಕ್ತಿ ಮುಂದುವರಿದಿದೆ. ಎರಡು ಬಾರಿ ಗಡುವು ವಿಸ್ತರಿಸಿದ್ದರೂ ಎಚ್‌ಎಸ್‌ಆರ್‌ಪಿ ಅಳವಡಿಸಿಕೊಂಡ ವಾಹನಗಳ ಸಂಖ್ಯೆ ಶೇ 20ರಷ್ಟು ತಲುಪಿಲ್ಲ.

ರಾಜ್ಯದಲ್ಲಿ ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳಬೇಕಾದ ವಾಹನಗಳ ಸಂಖ್ಯೆ 2 ಕೋಟಿ ಇದೆ. ಇಲ್ಲಿಯವರೆಗೆ 36 ಲಕ್ಷ (ಶೇ 18) ವಾಹನಗಳಿಗಷ್ಟೇ ಹೊಸ ಫಲಕ ಅಳವಡಿಸಲಾಗಿದೆ. 1.64 ಕೋಟಿ ವಾಹನಗಳಿಗೆ ಅಳವಡಿಕೆ ಆಗಿಲ್ಲ. ಮೇ ಅಂತ್ಯದೊಳಗೆ 10 ಲಕ್ಷ ವಾಹನಗಳಿಗೆ ಹೊಸ ಫಲಕ ಅಳವಡಿಸುವ ನಿರೀಕ್ಷೆ ಇದೆ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

ನಕಲಿ ಸಂಖ್ಯೆಯ ನೋಂದಣಿ ಫಲಕಗಳ ಹಾವಳಿ ತಪ್ಪಿಸಲು ಕೇಂದ್ರ ಸರ್ಕಾರವು 2019ರಲ್ಲಿ ಎಚ್‌ಎಸ್‌ಆರ್‌ಪಿ ಯನ್ನು ಜಾರಿ ಮಾಡಿತ್ತು. ಹಾಗಾಗಿ, 2019ರ ಏಪ್ರಿಲ್ 1ರ ನಂತರದ ವಾಹನಗಳಲ್ಲಿ ಎಚ್‌ಎಸ್‌ಆರ್‌ಪಿ ಇದೆ. ಅದಕ್ಕಿಂತ ಹಿಂದಿನ ವಾಹನಗಳು ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಆಯಾ ರಾಜ್ಯ ಸರ್ಕಾರಗಳು ಕ್ರಮಕೈಗೊಳ್ಳುವಂತೆ ಕೇಂದ್ರವು ಸೂಚಿಸಿತ್ತು.

2023ರ ನವೆಂಬರ್ 17ರೊಳಗೆ ಹಳೇ ವಾಹನಗಳು ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳುವಂತೆ ರಾಜ್ಯ ಸಾರಿಗೆ ಇಲಾಖೆಯು ಕಳೆದ ವರ್ಷದ ಆಗಸ್ಟ್‌ನಲ್ಲಿ ಅಧಿಸೂಚನೆ ಹೊರಡಿಸಿತ್ತು. ಇದನ್ನು ಅಳವಡಿಸಲು ಅವಕಾಶವನ್ನು ಕೆಲವೇ ಏಜೆನ್ಸಿಗಳಿಗೆ ನೀಡಿದ್ದನ್ನು ಪ್ರಶ್ನಿಸಿ ಕೆಲವರು ನ್ಯಾಯಾಲಯದ ಮೊರೆ ಹೋಗಿದ್ದರು.

ಫೆ. 17ರ ವರೆಗೆ ಮೂರು ತಿಂಗಳು ಅವಧಿ ವಿಸ್ತರಣೆ ಮಾಡಲಾಗಿತ್ತು. ಆಗ ಶೇ 5ರಷ್ಟು ವಾಹನಗಳಿಗೆ ಹೊಸ ಫಲಕಗಳ ಅಳವಡಿಕೆಯಾಗಿತ್ತು. ಈ ಅವಧಿ ವಿಸ್ತರಿಸಲು ಮತ್ತೆ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದ್ದರಿಂದ ಮೇ 31ರ ವರೆಗೆ ಅವಕಾಶ ನೀಡಲಾಯಿತು. ಈ ಅವಧಿ ಪೂರ್ಣಗೊಳ್ಳಲು ಕೇವಲ ಮೂರು ವಾರವಷ್ಟೇ ಉಳಿದಿದೆ.

ಎಚ್‌ಎಸ್‌ಆರ್‌ಪಿ

ಬೇಗ ಅಳವಡಿಸಿ: ನಿಯಮ ಪ್ರಕಾರ ಮೇ 31ರ ಒಳಗೆ ಅಳವಡಿಸಿಕೊಳ್ಳದೆ ಇದ್ದರೆ ದಂಡ ವಿಧಿಸುವ ಪ್ರಕ್ರಿಯೆ ಆರಂಭಗೊಳ್ಳಲಿದೆ. ಮೊದಲ ಬಾರಿ ₹500 ದಂಡ ವಿಧಿಸಲಾಗುತ್ತದೆ. ಎರಡನೇ ಬಾರಿಗೆ ₹1,000 ದಂಡ ಕಟ್ಟಬೇಕಾಗುತ್ತದೆ. ಮುಂದೆ ಸಿಕ್ಕಿಬಿದ್ದಾಗ ಪ್ರತಿ ಬಾರಿಗೆ ₹1,000 ದಂಡ ಕಟ್ಟುತ್ತಾ ಹೋಗಬೇಕಾಗುತ್ತದೆ.

'ಅನಗತ್ಯವಾಗಿ ದಂಡ ಕಟ್ಟುವುದನ್ನು ತಪ್ಪಿಸಲು ನಿಗದಿತ ಅವಧಿಯೊಳಗೆ ಹೊಸ ಫಲಕ ಅಳವಡಿಸಿಕೊಳ್ಳಬೇಕು' ಎಂದು ಸಾರಿಗೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ಸಲಹೆ ನೀಡಿದ್ದಾರೆ.

ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳಲು ಮೂರು ಬಾರಿ ಅವಕಾಶ ನೀಡಲಾಗಿದೆ. ಮತ್ತೆ ಗಡುವು ವಿಸ್ತರಿಸುವ ಬಗ್ಗೆ ಸದ್ಯ ಚಿಂತನೆ ನಡೆಸಿಲ್ಲ
ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

'ವಾಹನಗಳ ಮಾಲೀಕರು http://transport.karnataka.gov.in ಅಥವಾ www.siam.in ಮೂಲಕ ನಿಗದಿತ ನೋಂದಣಿ ಮಾಡಿಕೊಳ್ಳಬಹುದು. ನೋಂದಣಿ ಮಾಡಿಕೊಂಡವರಿಗೆ ಅಲ್ಲಿಂದ ಒಂದು ತಿಂಗಳು ಯಾವುದೇ ದಂಡ ವಿಧಿಸುವುದಿಲ್ಲ. ಅದರ ಒಳಗೆ ಫಲಕ ಅಳವಡಿಸಿಕೊಳ್ಳಬೇಕು' ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸೆಲ್ಕೊದ 'ಸೂರ್ಯಮಿತ್ರ' ಪ್ರಶಸ್ತಿಗೆ ರಿಚರ್ಡ್ ಹ್ಯಾನ್ಸೆನ್ ಭಾಜನ

ಬೆಂಗಳೂರು: ಸೆಲ್ಕೊ ಸಂಸ್ಥೆ ಕೊಡಮಾಡುವ 2023ನೇ ಸಾಲಿನ 'ಸೂರ್ಯಮಿತ್ರ' ವಾರ್ಷಿಕ ಪ್ರಶಸ್ತಿಗೆ ಅಮೆರಿಕದ ಸೌರ ವಿದ್ಯುತ್ ಪ್ರವರ್ತಕ ರಿಚರ್ಡ್ ಹ್ಯಾನ್ಸೆನ್ ಭಾಜನರಾಗಿದ್ದಾರೆ.

ಅಭಿವೃದ್ಧಿಶೀಲ ರಾಷ್ಟ್ರಗಳ ಗ್ರಾಮೀಣ ಪ್ರದೇಶದಲ್ಲಿ ಸೌರ ವಿದ್ಯುತ್ ಸೌಲಭ್ಯ ಹೆಚ್ಚಿಸಲು ಹಾಗೂ ಆಧುನಿಕ ಫೋಟೊ ವೋಲ್ಟಾಯಿಕ್ (ಪಿವಿ) ತಂತ್ರಜ್ಞಾನವನ್ನು ಕಿರು ಹಣಕಾಸು ಸಂಸ್ಥೆಗಳ ಮೂಲಕ ಬೆಸೆದು, ಪ್ರಸರಿಸುವಲ್ಲಿ ಹ್ಯಾನ್ಸೆನ್ ಸಲ್ಲಿಸಿರುವ ಸೇವೆ ಪರಿಗಣಿಸಿ ಅವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಸೆಲ್ಕೊ ಇಂಡಿಯಾದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮೋಹನ ಭಾಸ್ಕರ ಹೆಗಡೆ ತಿಳಿಸಿದ್ದಾರೆ.

ಬೆಂಗಳೂರಿನ ವೈಯಾಲಿ ಕಾವಲ್‌ನಲ್ಲಿರುವ ಚೌಡಯ್ಯ ಸ್ಮಾರಕ ಭವನದಲ್ಲಿ ಇದೇ 27ಕ್ಕೆ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಸುಸ್ಥಿರ ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ನೀಡಿರುವ ಗಣ್ಯರು, ಗ್ರಾಮೀಣ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಗೆ ಶ್ರಮಿಸಿದ ಅಸಾಧಾರಣ ವ್ಯಕ್ತಿಗಳು ಅಥವಾ ಸಂಸ್ಥೆಗಳನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತದೆ.

ಪ್ರಸ್ತುತ ಹ್ಯಾನ್ಸೆನ್ ಅವರು ಎನರ್ಜಿ ಅಕ್ಸೆಸ್ ಫೌಂಡೇಶನ್‌ನ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ವಿದ್ಯುತ್ ಬೇಡಿಕೆ ಪೂರೈಕೆಗೆ ಕ್ರಮ

ನವದೆಹಲಿ (ಪಿಟಿಐ): ಮೇ ಹಾಗೂ ಜೂನ್ ತಿಂಗಳಿನಲ್ಲಿ ಅತಿಯಾಗಿ ಬಳಕೆಯಾಗುವ ಸಮಯದಲ್ಲಿ (ಪೀಕ್ ಅವರ್) ಅಗತ್ಯವಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸುವುದಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ವಿದ್ಯುತ್ ಸಚಿವಾಲಯ ತಿಳಿಸಿದೆ.

'ಏಪ್ರಿಲ್‌ನಲ್ಲಿ ಸಂಜೆ ಅವಧಿಯಲ್ಲಿ 224 ಗಿಗಾವಾಟ್‌ನಷ್ಟು ವಿದ್ಯುತ್ ಬೇಡಿಕೆ ಇತ್ತು. ಮುಂಜಾಗ್ರತೆಯಾಗಿ ಕೈಗೊಂಡಿದ್ದ ಕ್ರಮಗಳಿಂದಾಗಿ ಇಷ್ಟು ಪ್ರಮಾಣದ ವಿದ್ಯುತ್ ಪೂರೈಸುವಲ್ಲಿ ಯಶಸ್ವಿ ಆಗಿದ್ದೇವೆ' ಎಂದು ತಿಳಿಸಿದೆ.

ಮೇ ತಿಂಗಳಿನಲ್ಲಿ ಬೆಳಿಗ್ಗಿನ ಅವಧಿಯಲ್ಲಿ 235 ಗಿಗಾವಾಟ್ ಹಾಗೂ ಸಂಜೆ ವೇಳೆ 225 ಗಿಗಾವಾಟ್‌ನಷ್ಟು ವಿದ್ಯುತ್ ಬೇಕಿದೆ. ಜೂನ್‌ನಲ್ಲಿ ಬೆಳಿಗ್ಗಿನ ಅವಧಿಯಲ್ಲಿ 240 ಗಿಗಾವಾಟ್ ಹಾಗೂ ಸಂಜೆ ಅವಧಿಯಲ್ಲಿ 235 ಗಿಗಾವಾಟ್‌ನಷ್ಟು ವಿದ್ಯುತ್‌ಗೆ ಬೇಡಿಕೆ ಸೃಷ್ಟಿ ಆಗಬಹುದೆಂದು ಅಂದಾಜಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಎಲ್‌ಐಸಿ ಪ್ರೀಮಿಯಂ ಸಂಗ್ರಹ ದಶಕದಲ್ಲೇ ಗರಿಷ್ಠ ದಾಖಲೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಏಪ್ರಿಲ್‌ನಲ್ಲಿ ಒಟ್ಟು ₹12,384 ಕೋಟಿ ಪ್ರೀಮಿಯಂ ಸಂಗ್ರಹಿಸಿದೆ. ಇದು ಕಳೆದ ಒಂದು ದಶಕದ ಅವಧಿಯಲ್ಲಿ ತಿಂಗಳೊಂದರಲ್ಲಿ ಸಂಗ್ರಹವಾಗಿರುವ ಗರಿಷ್ಠ ಮೊತ್ತವಾಗಿದೆ ಎಂದು ಎಲ್‌ಐಸಿ ತಿಳಿಸಿದೆ.

ಜೀವ ವಿಮಾ ಪರಿಷತ್ ಇತ್ತೀಚೆಗೆ ಬಿಡುಗಡೆಗೊಳಿಸಿರುವ ಅಂಕಿ–ಅಂಶದ ಅನ್ವಯ ಎಲ್‌ಐಸಿಯು ಕಳೆದ ವರ್ಷದ ಏಪ್ರಿಲ್‌ನಲ್ಲಿ ₹5,810 ಕೋಟಿ ಪ್ರೀಮಿಯಂ ಸಂಗ್ರಹಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 113ರಷ್ಟು ಏರಿಕೆಯಾಗಿದೆ.

ಇತ್ತೀಚೆಗೆ ಹೊಸ ಮಾರುಕಟ್ಟೆ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸಲಾಗಿದೆ. ಗ್ರಾಹಕ ಕೇಂದ್ರಿತ ಸೇವೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ವಿಮಾದಾರರಲ್ಲಿ ವಿಶ್ವಾಸಾರ್ಹತೆ ಉಳಿಸಿಕೊಂಡಿದೆ. ಹಾಗಾಗಿ, ಹೆಚ್ಚಿನ ಮೊತ್ತ ಸಂಗ್ರಹಿಸಲು ಸಾಧ್ಯವಾಗಿದೆ ಎಂದು ಎಲ್‌ಐಸಿ ತಿಳಿಸಿದೆ.

ಏಪ್ರಿಲ್‌ನಲ್ಲಿ ವೈಯಕ್ತಿಕ ಪ್ರೀಮಿಯಂ ವಿಭಾಗದಲ್ಲಿ ₹3,175 ಕೋಟಿ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಸಂಗ್ರಹದಲ್ಲಿ ಶೇ 25.17ರಷ್ಟು ಹೆಚ್ಚಳವಾಗಿದೆ. ಗುಂಪು ಪ್ರೀಮಿಯಂ ವಿಭಾಗದಲ್ಲಿ ಶೇ 182.16ರಷ್ಟು ಏರಿಕೆಯಾಗಿದ್ದು, ಒಟ್ಟು ₹9,141 ಕೋಟಿ ಸಂಗ್ರಹವಾಗಿದೆ.

ವಾರ್ಷಿಕ ಗುಂಪು ಪ್ರೀಮಿಯಂ ವಿಭಾಗದಲ್ಲೂ ಶೇ 100ರಷ್ಟು ಏರಿಕೆಯಾಗಿದ್ದು, ₹66.83 ಕೋಟಿ ಸಂಗ್ರಹವಾಗಿದೆ ಎಂದು ವಿವರಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100ಕ್ಕೆ	₹595
12 ಕ್ಕೆ	₹80

ಮೈಸೂರು

100ಕ್ಕೆ	₹600

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4
₹177
ಆರ್‌ಎಸ್‌ಎಸ್-5
₹170
ಗುಡ್ ಲಾಟ್
(ಪ್ರತಿ ಕೆ.ಜಿಗೆ) ₹159.50

ವಿನಿಮಯ ದರ

$ ಡಾಲರ್	83.59
£ ಪೌಂಡ್	104.63

ಮಸಾಲೆಯಲ್ಲಿ ಕೀಟನಾಶಕ ತಡೆಗೆ ಹೊಸ ಮಾರ್ಗಸೂಚಿ

ನವದೆಹಲಿ (ಪಿಟಿಐ): ಭಾರತದಿಂದ ವಿದೇಶಗಳಿಗೆ ರಫ್ತು ಮಾಡುವ ಮಸಾಲೆ ಪದಾರ್ಥಗಳಲ್ಲಿ ಕ್ಯಾನ್ಸರ್‌ಕಾರಕ ಎಥಿಲೀನ್ ಆಕ್ಸೈಡ್ ಅಂಶವನ್ನು ತಡೆಗಟ್ಟುವುದಕ್ಕೆ ಸಂಬಂಧಿಸಿದಂತೆ ಭಾರತೀಯ ಮಸಾಲೆ ಮಂಡಳಿಯು ಹೊಸ ಮಾರ್ಗಸೂಚಿ ಪ್ರಕಟಿಸಿದೆ.

ರಫ್ತು ಮಾಡುವ ಮಸಾಲೆ ಪದಾರ್ಥಗಳಿಗೆ ಕ್ರಿಮಿನಾಶಕ ಸಿಂಪಡಣೆ ಅಥವಾ ಧೂಮೀಕರಣದ ವೇಳೆ ಎಥಿಲೀನ್ ಆಕ್ಸೈಡ್ ಬಳಸದಂತೆ ಎಚ್ಚರಿಕೆವಹಿಸಬೇಕು. ಸಾಗಣೆದಾರರು ದಾಸ್ತಾನು, ಪ್ಯಾಕಿಂಗ್ ಸೇರಿ ಯಾವುದೇ ಹಂತದಲ್ಲಿ ಈ ಕೀಟನಾಶಕವನ್ನು ಬಳಸಬಾರದು ಎಂದು ಸೂಚನೆ ನೀಡಿದೆ.

ರಫ್ತುದಾರರು ಕಚ್ಚಾ ಸರಕು, ಅವುಗಳ ಸಂಸ್ಕರಣೆ ಮತ್ತು ಪ್ಯಾಕಿಂಗ್ ಹಂತದಲ್ಲಿ ಈ ಕೀಟನಾಶಕ ಅಂಶದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಬೇಕು. ಪರೀಕ್ಷೆಯ ವೇಳೆ ಈ ಕೀಟನಾಶಕ ಅಂಶ ಪತ್ತೆಯಾಗುವ ಪದಾರ್ಥಗಳನ್ನು ವಿದೇಶಗಳಿಗೆ ರವಾನಿಸಬಾರದು ಎಂದು ಹೇಳಿದೆ.

ಕೀಟಗಳ ಬಾಧೆ ತಡೆಗೆ ಸಂಬಂಧಿಸಿದಂತೆ ವಿಕಿರಣ ತಂತ್ರಜ್ಞಾನ ಸೇರಿದಂತೆ ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಸೂಚಿಸಿರುವ ವಿವಿಧ ವಿಧಾನಗಳನ್ನು ಅನುಸರಿಸಬೇಕು ಎಂದು ಸೂಚಿಸಿದೆ.

ಎಂಡಿಎಚ್ ಹಾಗೂ ಎವರೆಸ್ಟ್ ಕಂಪನಿಯ ಕೆಲವು ಮಸಾಲೆ ಪದಾರ್ಥಗಳಲ್ಲಿ ಕೀಟನಾಶಕ ಅಂಶವಿದೆ ಎಂಬ ಆರೋಪದ ಮೇಲೆ ಹಾಂಗ್‌ಕಾಂಗ್ ಹಾಗೂ ಸಿಂಗಪುರದಲ್ಲಿ ಇವುಗಳ ಮಾರಾಟ, ಬಳಕೆಗೆ ನಿಷೇಧ ಹೇರಲಾಗಿದೆ.

ಯೂನಿಯನ್ ಬ್ಯಾಂಕ್‌ಗೆ ₹3,328 ಕೋಟಿ ಲಾಭ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹3,328 ಕೋಟಿ ನಿವ್ವಳ ಲಾಭಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿನ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 18ರಷ್ಟು ಏರಿಕೆಯಾಗಿದೆ. ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತದಲ್ಲಿ ಇಳಿಕೆ ಆಗಿದೆ. ಹಾಗಾಗಿ, ಲಾಭದಲ್ಲಿ ಈ ಮಟ್ಟದ ಬೆಳವಣಿಗೆ ಸಾಧ್ಯವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಪೂರ್ಣ ಹಣಕಾಸು ವರ್ಷದಲ್ಲಿ ₹13,797 ಕೋಟಿ ನಿವ್ವಳ ಲಾಭಗಳಿಸಿದೆ. ಬಡ್ಡಿ ವರಮಾನದಲ್ಲಿ ಶೇ 14.38ರಷ್ಟು ಹೆಚ್ಚಳವಾಗಿದ್ದು, ₹9,437 ಕೋಟಿ ಗಳಿಸಿದೆ ಎಂದು ಹೇಳಿದೆ.

'2024–25ನೇ ಆರ್ಥಿಕ ವರ್ಷದಲ್ಲಿ ಸಾಲ ನೀಡಿಕೆಯಲ್ಲಿ ಶೇ 11ರಿಂದ 13ರಷ್ಟು ಹಾಗೂ ಠೇವಣಿ ಸಂಗ್ರಹದಲ್ಲಿ ಶೇ 9ರಿಂದ 11ರಷ್ಟು ಬೆಳವಣಿಗೆ ಸಾಧಿಸುವ ಗುರಿ ಹೊಂದಲಾಗಿದೆ' ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕಿ ಹಾಗೂ ಸಿಇಒ ಎ. ಮಣಿಮೇಖಲೈ ತಿಳಿಸಿದ್ದಾರೆ.

ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹4,041 ಕೋಟಿಯಿಂದ ₹3,222 ಕೋಟಿಗೆ ಇಳಿಕೆಯಾಗಿದೆ. ಬ್ಯಾಂಕ್‌ನ ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಶೇ 7.53ರಿಂದ ಶೇ 4.76ಕ್ಕೆ ತಗ್ಗಿದೆ ಎಂದು ತಿಳಿಸಿದ್ದಾರೆ.

ಅಫ್ಗಾನಿಸ್ತಾನದಲ್ಲಿ ಜನಜೀವನ ಅಸ್ತವ್ಯಸ್ತ • ಆರೋಗ್ಯ ಕೇಂದ್ರಗಳಿಗೆ ಹಾನಿ

ಭಾರಿ ಮಳೆ; 300ಕ್ಕೂ ಹೆಚ್ಚು ಸಾವು

ಅಫ್ಗಾನಿಸ್ತಾನದ ಉತ್ತರದಲ್ಲಿರುವ ಬಘ್ಲಾನ್ ಪ್ರಾಂತ್ಯದಲ್ಲಿ ಶುಕ್ರವಾರ ಸುರಿದ ಭಾರಿ ಮಳೆಯಿಂದ ಉಂಟಾದ ಪ್ರವಾಹದಿಂದಾಗಿ ಮನೆಗಳು ಕುಸಿದಿದ್ದು, ನೂರಾರು ಮಂದಿ ನಿರಾಶ್ರಿತರಾಗಿದ್ದಾರೆ —ಎಪಿ ಚಿತ್ರ

ಇಸ್ಲಾಮಾಬಾದ್/ಕಾಬೂಲ್ (ಎಪಿ/ ರಾಯಿಟರ್ಸ್): ಅಫ್ಗಾನಿಸ್ತಾನದಲ್ಲಿ ಸುರಿದ ಭಾರಿ ಮಳೆ ಹಾಗೂ ನಂತರ ಉಂಟಾದ ದಿಢೀರ್ ಪ್ರವಾಹದಿಂದಾಗಿ ಸಂಭವಿಸಿದ ಅವಘಡಗಳಲ್ಲಿ 300ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆ ಶನಿವಾರ ಹೇಳಿದೆ.

ಉತ್ತರ ಭಾಗದ ಪ್ರಾಂತ್ಯಗಳಲ್ಲಿ ಪ್ರವಾಹದಲ್ಲಿ ಸಿಲುಕಿ ಸಂಕಷ್ಟ ಎದುರಿಸುತ್ತಿರುವವರಿಗೆ ಆಹಾರ ಪೂರೈಸಲಾಗುತ್ತಿದೆ ಎಂದು ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮದ ಅಧಿಕಾರಿಗಳು ಹೇಳಿದ್ದಾರೆ.

ಬಘ್ಲಾನ್, ತಖಾರ್ ಹಾಗೂ ಬಡಖ್ಶಾನ್ ಪ್ರಾಂತ್ಯಗಳಲ್ಲಿ ಶುಕ್ರವಾರ ಸುರಿದ ಭಾರಿ ಮಳೆಗೆ ಅಧಿಕ ಹಾನಿ ಸಂಭವಿಸಿದೆ ಎಂದು ಒಳಾಡಳಿತ ಸಚಿವಾಲಯದ ವಕ್ತಾರ ಅಬ್ದುಲ್ ಮತೀನ್ ಕಾನೀ ತಿಳಿಸಿದ್ದಾಗಿ ರಾಯಿಟರ್ಸ್ ವರದಿ ಮಾಡಿದೆ.

'ಭೀಕರ ಪ್ರವಾಹದಿಂದಾಗಿ ನೂರಾರು ಜನರು ಮೃತಪಟ್ಟಿದ್ದಾರೆ. ಭಾರಿ ಸಂಖ್ಯೆಯ ಜನರು ಗಾಯಗೊಂಡಿದ್ದಾರೆ' ಎಂದು ತಾಲಿಬಾನ್ ಸರ್ಕಾರದ ವಕ್ತಾರ ಜಬೀ ಉಲ್ಲಾ ಮುಜಾಹಿದ್ ಅವರು 'ಎಕ್ಸ್‌'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಬಡಖ್ಶಾನ್, ಬಘ್ಲಾನ್, ಘೋರ್ ಹಾಗೂ ಹೇರಾತ್ ಪ್ರಾಂತ್ಯಗಳಲ್ಲಿ ಅಧಿಕ ಹಾನಿ ಸಂಭವಿಸಿದೆ. ಈ ಪ್ರಾಕೃತಿಕ ವಿಕೋಪದಿಂದಾಗಿ ಆರ್ಥಿಕವಾಗಿಯೂ ಅಪಾರ ನಷ್ಟ ಉಂಟಾಗಿದೆ' ಎಂದು ಜಬೀ ಉಲ್ಲಾ ಹೇಳಿದ್ದಾಗಿ ಸುದ್ದಿಸಂಸ್ಥೆ ಎಪಿ ವರದಿ ಮಾಡಿದೆ.

'ಬಘ್ಲಾನ್ ಪ್ರಾಂತ್ಯದಲ್ಲಿ ಪ್ರವಾಹಕ್ಕೆ ಸಿಲುಕಿರುವವರ ರಕ್ಷಣಾ ಕಾರ್ಯದಲ್ಲಿ ವಾಯುಪಡೆ ಸಿಬ್ಬಂದಿ ಕಾರ್ಯ ಪ್ರವೃತ್ತರಾಗಿದ್ದು, ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಲಾಗಿದೆ. ಗಾಯಗೊಂಡಿರುವವರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ' ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

'ಭಾರಿ ಮಳೆಗೆ ಮನೆಗಳು ಕುಸಿದಿದ್ದು, ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ. ಸಾರಿಗೆ, ನೀರು ಪೂರೈಕೆ ಹಾಗೂ ತ್ಯಾಜ್ಯ ವಿಲೇವಾರಿ ವ್ಯವಸ್ಥೆಗಳಿಗೆ ಭಾರಿ ಧಕ್ಕೆ ಉಂಟಾಗಿದೆ' ಎಂದು ವಿಶ್ವ ಆರೋಗ್ಯ ಸಂಸ್ಥೆಯ ಅಫ್ಗಾನಿಸ್ತಾನ ಶಾಖಾ ಕಚೇರಿ ತಿಳಿಸಿದೆ.

ನಾಲ್ಕು ಆರೋಗ್ಯ ಕೇಂದ್ರಗಳಿಗೆ ಹಾನಿಯಾಗಿದೆ. ಒಂದು ಆರೋಗ್ಯ ಕೇಂದ್ರ ಪ್ರವಾಹದಿಂದಾಗಿ ಸಂಪೂರ್ಣ ಹಾಳಾಗಿರುವ ಕಾರಣ, ಜಡಿಮಳೆಯಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸಂಸ್ಥೆ ತಿಳಿಸಿದೆ.

ಪಾಕ್: ಮೀಸಲು ಕ್ಷೇತ್ರದ 27 ಶಾಸಕರ ಅಮಾನತು

ಲಾಹೋರ್(ಪಿಟಿಐ): ಮಹಿಳೆಯರು ಮತ್ತು ಅಲ್ಪಸಂಖ್ಯಾತರ ನಾಮ ನಿರ್ದೇಶನಕ್ಕೆ ಸಂಬಂಧಿಸಿ ಅಧೀನ ನ್ಯಾಯಾಲಯ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿದ ಕಾರಣ, ಪಂಜಾಬ್ ಪ್ರಾಂತೀಯ ಅಸೆಂಬ್ಲಿಯ ಮೀಸಲು ಕ್ಷೇತ್ರಗಳ 27 ಶಾಸಕರನ್ನು ಅಮಾನತು ಮಾಡಲಾಗಿದೆ.

ಸುಪ್ರೀಂ ಕೋರ್ಟ್ ಆದೇಶದಂತೆ, ಅಸೆಂಬ್ಲಿ ಸ್ಪೀಕರ್ ಮಲಿಕ್ ಮೊಹಮ್ಮದ್ ಅಹ್ಮದ್ ಖಾನ್ ಈ ಕ್ರಮ ಕೈಗೊಂಡಿದ್ದಾರೆ.

'ಪಾಕಿಸ್ತಾನ ಚುನಾವಣಾ ಆಯೋಗದ ಹಳೆಯ ಅಧಿಸೂಚನೆ ಆಧಾರದ ಮೇಲೆ ಅಸೆಂಬ್ಲಿಗೆ ನೇಮಕಗೊಂಡಿರುವ ಮುಸ್ಲಿಮೇತರ ಸದಸ್ಯರನ್ನು ಅಮಾನತು ಮಾಡಲಾಗಿದೆ' ಎಂದು ಸ್ಪೀಕರ್ ಖಾನ್ ರೂಲಿಂಗ್‌ನಲ್ಲಿ ತಿಳಿಸಿದ್ದಾರೆ ಎಂದು ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ.

ರೂಲಿಂಗ್ ಪ್ರಕಾರ, ಈ ನೇಮಕಾತಿ ಕುರಿತು ಚುನಾವಣಾ ಆಯೋಗ ಅಥವಾ ಸುಪ್ರೀಂ ಕೋರ್ಟ್ ಸ್ಪಷ್ಟೀಕರಣ ನೀಡುವವರೆಗೆ ಮುಸ್ಲಿಮೇತರರು ಸದನದ ಸದಸ್ಯರಾಗಿ ಕಾರ್ಯ ನಿರ್ವಹಿಸುವಂತಿಲ್ಲ ಇಲ್ಲವೇ ಕಲಾಪದಲ್ಲಿ ಪಾಲ್ಗೊಳ್ಳುವಂತಿಲ್ಲ.

ಈ ಬೆಳವಣಿಗೆಯು, ಆಡಳಿತಾರೂಢ ಪಿಎಂಎಲ್–ಎನ್ ನೇತೃತ್ವದ ಮೈತ್ರಿ ಸರ್ಕಾರಕ್ಕಾದ ಭಾರಿ ಹಿನ್ನಡೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮಾಜಿ ಪೊಲೀಸ್ ಅಧಿಕಾರಿ ಶರ್ಮಗೆ ಜಾಮೀನು

ನವದೆಹಲಿ (ಪಿಟಿಐ): ಮುಂಬೈನ ಮಾಜಿ ಪೊಲೀಸ್ ಅಧಿಕಾರಿ ಪ್ರದೀಪ್ ಶರ್ಮ ಅವರಿಗೆ 2006ರ ನಕಲಿ ಎನ್‌ಕೌಂಟರ್ ಪ್ರಕರಣವೊಂದ ರಲ್ಲಿ ಸುಪ್ರೀಂಕೋರ್ಟ್ ಜಾಮೀನು ನೀಡಿದೆ.

ನಕಲಿ ಎನ್‌ಕೌಂಟರ್‌ನಲ್ಲಿ ಪಾತಕಿ ರಾಮನಾರಾಯಣ್ ಗುಪ್ತ ಅಲಿಯಾಸ್ ಲಖ್ಖನ್ ಭೈಯಾ ಹತ್ಯೆ ಆಗಿತ್ತು.

ಅವರಿಗೆ ಜಾಮೀನು ಮಂಜೂರು ಮಾಡುವುದಕ್ಕೆ ರಾಜ್ಯ ಸರ್ಕಾರದ ಆಕ್ಷೇಪ ಇಲ್ಲ ಎಂದು ಮಹಾರಾಷ್ಟ್ರ ಸರ್ಕಾರದ ಪರ ವಕೀಲರು ನ್ಯಾಯಮೂರ್ತಿ ರಿಷಿಕೇಶ್ ರಾಯ್ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ವಿಭಾಗೀಯ ಪೀಠಕ್ಕೆ ತಿಳಿಸಿದರು.

ಗಾಜಾ: 34 ಸಾವಿರ ಜನರ ಸಾವು

ಗಾಜಾ ಪಟ್ಟಿ (ಎಎಫ್‌ಪಿ/ ಎಪಿ): ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧದಲ್ಲಿ ಪ್ಯಾಲೆಸ್ಟೀನ್‌ಗೆ ಸೇರಿದ ಪ್ರದೇಶದಲ್ಲಿ ಕನಿಷ್ಠ 34,971 ಮಂದಿ ಮೃತಪಟ್ಟಿದ್ದಾರೆ ಎಂದು ಹಮಾಸ್ ನಿಯಂತ್ರಣದಲ್ಲಿ ಇರುವ ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ.

ಕಳೆದ 24 ಗಂಟೆಗಳ ಅವಧಿಯಲ್ಲಿ ವರದಿಯಾಗಿರುವ 28 ಜನರ ಸಾವು ಕೂಡ ಇದರಲ್ಲಿ ಸೇರಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಯುದ್ಧ ಶುರುವಾದ ನಂತರದಲ್ಲಿ ಗಾಜಾದಲ್ಲಿ 78,641 ಮಂದಿಗೆ ಗಾಯಗಳಾಗಿವೆ ಎಂದು ಹೇಳಿದೆ.

ಕಾರ್ಯಾಚರಣೆ ವಿಸ್ತರಿಸಲು ಮುಂದಾದ ಇಸ್ರೇಲ್ (ರಫಾ ವರದಿ): ಇಸ್ರೇಲ್ ತನ್ನ ಕಾರ್ಯಾಚರಣೆಯನ್ನು ವಿಸ್ತರಿಸಲು ತಯಾರಿ ನಡೆಸಿದ್ದು, ಈ ಸಂಬಂಧ ಗಾಜಾದ ದಕ್ಷಿಣದ ನಗರವಾದ ರಫಾವನ್ನು ತೊರೆಯುವಂತೆ ಜನರಿಗೆ ಸೂಚಿಸಿದೆ. ಉತ್ತರ ಗಾಜಾದಲ್ಲಿ ಮತ್ತೆ ಗುಂಪುಗೂಡುತ್ತಿರುವ ಹಮಾಸ್ ಪ್ರದೇಶದತ್ತ ತೆರಳುತ್ತಿರುವುದಾಗಿ ಇಸ್ರೇಲ್ ಹೇಳಿದೆ.

ರಫಾದ ಹೊರವಲಯದಲ್ಲಿ ಇಸ್ರೇಲ್ ಪಡೆ ಮತ್ತು ಪ್ಯಾಲೆಸ್ಟೀನ್ ಬಂಡುಕೋರರ ನಡುವೆ ಭಾರೀ ಘರ್ಷಣೆ ಮುಂದುವರಿದಿದೆ. ಇದರಿಂದ ಅಗತ್ಯ ವಸ್ತುಗಳ ಕೊರತೆ ಕಾಡುತ್ತಿದ್ದು, ಈ ಭಾಗದಿಂದ 1.10 ಲಕ್ಷಕ್ಕೂ ಹೆಚ್ಚು ಜನರನ್ನು ತೆರಳುವಂತೆ ಒತ್ತಾಯಿಸಿದೆ.

19 ಜನರ ಸಾವು: ಜವೈದಾ, ಮಘಜಿ ಮತ್ತು ದೇರ್ ಅಲ್ ಬಲಾಹ್ ಪಟ್ಟಣಗಳಲ್ಲಿ ರಾತ್ರಿಯಿಡೀ ನಡೆದಿರುವ ಮೂರು ಪ್ರತ್ಯೇಕ ದಾಳಿಗಳಲ್ಲಿ ಕನಿಷ್ಠ 19 ಜನರು ಮೃತಪಟ್ಟಿದ್ದಾರೆ. ಇದರಲ್ಲಿ ಎಂಟು ಮಹಿಳೆಯರು, ಎಂಟು ಮಕ್ಕಳು ಸೇರಿದ್ದಾರೆ ಎಂದು ದೇರ್ ಅಲ್ ಬಲಾಹ್‌ನ ಆಸ್ಪತ್ರೆ ತಿಳಿಸಿದೆ.

ರಷ್ಯಾ ದಾಳಿ: 1,700ಕ್ಕೂ ಹೆಚ್ಚು ಜನರ ಸ್ಥಳಾಂತರ

ಕೀವ್ (ಎಪಿ): ಹಾರ್ಕಿವ್ ಸೇರಿದಂತೆ ಉಕ್ರೇನ್‌ನ ಈಶಾನ್ಯ ಭಾಗದಲ್ಲಿ ರಷ್ಯಾ ಪಡೆಗಳು ತೀವ್ರ ದಾಳಿ ಪ್ರಾರಂಭಿಸಿವೆ. ದಾಳಿಯ ಪರಿಣಾಮ ಹಾರ್ಕಿವ್ ಪ್ರದೇಶದಿಂದ 1,700ಕ್ಕೂ ಹೆಚ್ಚು ನಾಗರಿಕರು ಬೇರೆಡೆ ಸ್ಥಳಾಂತರಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

30ಕ್ಕೂ ಹೆಚ್ಚು ಹಳ್ಳಿಗಳು ಮತ್ತು ಪಟ್ಟಣಗಳ ಮೇಲೆ ರಷ್ಯಾ ಫಿರಂಗಿ ಮತ್ತು ವೈಮಾನಿಕ ಬಾಂಬ್ ದಾಳಿ ನಡೆಸಿದೆ. ಈ ದಾಳಿಯಲ್ಲಿ ಕನಿಷ್ಠ ಮೂವರು ಸಾವಿಗೀಡಾಗಿದ್ದು, ಐವರು ಗಾಯಗೊಂಡಿದ್ದಾರೆ ಎಂದು ಹಾರ್ಕಿವ್ ಗವರ್ನರ್ ಓಲೆಹ್ ಸಿನಿಹುಬೊವ್ ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಬೆಂಗಳೂರಿನ ವರ್ತೂರಿನಲ್ಲಿರುವ ಆಂಧ್ರಕುಟುಂಬಕ್ಕೆ ಲಿವಿನ್ ಕುಕ್ ಅಗತ್ಯವಿದೆ.ವೆಜ್ ಮತ್ತು ನಾನ್ ವೆಜ್ ಬೇಯಿಸಬೇಕು. ಉಚಿತ ಊಟ ಮತ್ತು ವಸತಿ. ಸಂಬಳ:15000 ರಿಂದ,20,000 ಕರೆಮಾಡಿ:9901201481.

Engg/ Production Technical

FACTORY SUPERVISOR required for small machine Fabrication unit in Peenya. Diploma in mechanical Exp in machine Fabrication required. Salary 30,000 to 35,000 pm. Contact 9880593093

General

COMPUTER OPERATOR for reputed pharma company. Preferably in and around Nelmangala - Tavareker Rd. Ph: 9964343227

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

Teachers/ Professors

REQUIRED COMPUTER Science Lecturer for a Reputed College Near Bagaluru: 9035219389 hrmvs1992@gmail.com

Wanted

ಬೇಕಾಗಿದ್ದಾರೆ ಮಾತ್ರ ಶ್ರವಣ ದೋಷವುಳ್ಳ ಮಕ್ಕಳ ವಸತಿ ಶಾಲೆಗೆ, ಮುಖ್ಯೋಪಾಧ್ಯಾಯರು, ವಿಶೇಷ ಶಿಕ್ಷಕರು, ಅಡಿಗೆಯವರು. ಆಸಕ್ತಕರು ಸಂಪರ್ಕಿಸಬಹುದಾದ ನಂಬರ್ 9886032632, 9606272996.

ಬೇಕಾಗಿದ್ದಾರೆ: ಅಟೆಂಡರ್, ಬಸ್ ಡ್ರೈವರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.

ವ್ಯಾಪಾರ

Business to Business

Finance

LOAN AGAINST PROPERTY/ BUSINESS/ PROJECTS CONTACT: +91 8754809650

ಭವಿಷ್ಯ

Astrology

★ಜೀವನದ ಸರ್ವತೋಮುಖ ಅಭಿವೃದ್ಧಿಗಾಗಿ,ನಿಮ್ಮ ಯಾವುದೇ ಹೆಣ್ಣು ಅಥವಾ ಗಂಡು ಸಂಬಂಧಿತ ಸಂಪೂರ್ಣ ಮನಇಚ್ಛ ವಶೀಕರಣ, ದಾಂಪತ್ಯ,ಸಂತಾನ,ಆರೋಗ್ಯ,ಹಣ, ಆಸ್ತಿ,ಮತ್ತು ಇನ್ನಿತರ ನಿಮ್ಮ ಯಾವುದೇ ಇಷ್ಟಾರ್ಥಫಲಪ್ರಾಪ್ತಿ 3ದಿನಗಳಲ್ಲಿ ಲಭ್ಯ. 9845005009*

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 19.05.2024 12/15/20ದಿನಗಳು ದಿನಗಳು ಈಶಾನ್ಯರಾಜ್ಯಗಳ (ಸೆವೆನ್-ಸಿಸ್ಟರ್ಸ್)ನ 6ರಾಜ್ಯಗಳು ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್, ತ್ರಿಪುರ,ಮಿಝೋರಾಂ, 20.05.2024 10ದಿನಗಳು ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ)ಸಹಿತ 4ವಿಮಾನಗಳಲ್ಲಿ (ಕೆಲವೇ ಸೀಟುಗಳು ಲಭ್ಯತೆ), 26.06.2024,15.07.2024 6/12ದಿನಗಳು ಅಮರನಾಥಯಾತ್ರಾ ಸಹಿತ ಲೇ-ಲಡಾಕ್,20.07.2024 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ, 09.09.2024,21.09.2024 12ದಿನಗಳು ಚಾರ್-ದಾಮ್ ಯಾತ್ರಾ ವಿಶೇಷ, 24.05.2024,20.06.2024, 6ದಿನಗಳು ಭೂತಾನ್ ರಾಷ್ಟ್ರ ಪ್ರವಾಸ.9743351212, 9206979202, 8792319181

ಸುವರ್ಣ ಯಾತ್ರ, ನೇಪಾಳ ಮುಕ್ತಿನಾಥ, ಪಶುಪತಿನಾಥ ಅಯೋಧ್ಯೆ, ಪೋಕ್ರ, ಕಟ್ಮಂಡು ಪ್ರವಾಸ 9 ದಿನಗಳು 29/5/24 ಹಾಗೂ 18/06/24. 8660233673, 6360146483

ಸೌಂದರ್ಯ-ಆರೋಗ್ಯ

Hair Care

ವಿಶೇಷವಾದ ಆಯಸ್ಕಾಂತದ ಕಲ್ಲನ್ನು ನೀರಿನಲ್ಲಿ ಹಾಕಿ ಕುಡಿಯುವುದರಿಂದ ಮಧುಮೇಹ, ರಕ್ತದೊತ್ತಡ , ಕೊಲೆಸ್ಟ್ರಾಲ್, ಹೃದಯ ರೋಗ, ಕೀಲುನೋವು, ಕಿಡ್ನಿ ಸ್ಟೋನ್, ಬೊಜ್ಜು ಕಡಿಮೆ ಮಾಡಿಕೊಳ್ಳಬಹುದು. ಕೆಮ್ಮು, ದಮ್ಮು, ಅಸ್ತಮ ಮುಂತಾದ ಕಾಯಿಲೆಗಳಿಗೆ ಉಪಯೋಗವಿದೆ. ಉಚಿತವಾಗಿ ಕೊಡಲಾಗುವುದು 9019626612.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore Road

SALE 3 BHK Flats Brigade Panorama on Mysore Road, Luxurious Amenities Close to School College Metro STN 9686911410

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸಂಕ್ಷಿಪ್ತ ಸುದ್ದಿ

ದೆಹಲಿ: ಬಿರುಗಾಳಿಗೆ ಮೂವರ ಸಾವು

ನವದೆಹಲಿ (ಪಿಟಿಐ):ದೆಹಲಿಯಾದ್ಯಂತ ಶುಕ್ರವಾರ ಭಾರಿ ಬಿರುಗಾಳಿ ಬೀಸಿದ ಪರಿಣಾಮ ವಿದ್ಯುತ್ ಕಂಬ, ಗೋಡೆ ಕುಸಿತ ಮತ್ತು ಮರಗಳು ಉರುಳಿ ಬಿದ್ದಿರುವುದು ವರದಿಯಾಗಿದೆ. ಈ ಅವಘಡಗಳಲ್ಲಿ ಕನಿಷ್ಠ ಮೂವರು ಸಾವಿಗೀಡಾಗಿದ್ದು, 23 ಜನರು ಗಾಯಗೊಂಡಿದ್ದಾರೆ.

ಪಶ್ಚಿಮ ದೆಹಲಿಯ ವಿಕಾಸಪುರಿಯ ಜನಕಪುರಿ ಮೇಲ್ಸೇತುವೆ ಬಳಿ ದ್ವಿಚಕ್ರವಾಹನದ ಮೇಲೆ ಮರದ ರೆಂಬೆ ಮುರಿದು ಬಿದ್ದ ಪರಿಣಾಮ ಸವಾರ ಸಾವನ್ನಪ್ಪಿದ್ದಾರೆ. ಮತ್ತೊಂದು ಘಟನೆಯಲ್ಲಿ ರಾತ್ರಿ 11 ಗಂಟೆ ಸುಮಾರಿಗೆ ದೆಹಲಿಯ ಐಬಿ ಬ್ಲಾಕ್ ಬಳಿ ಕಾರ್ಮಿಕನೊಬ್ಬನ ಮೇಲೆ ಮರ ಉರುಳಿ ಬಿದ್ದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಛತ್ತೀಸಗಢ ನಕ್ಸಲನ ಹತ್ಯೆ

ರಾಯಪುರ (ಪಿಟಿಐ): ಛತ್ತೀಸಗಢದ ಧಮ್ತರಿ ಮತ್ತು ಗರಿಯಬಂದ್ ಜಿಲ್ಲೆಗಳ ಗಡಿಯಲ್ಲಿ ನಕ್ಸಲರು ಮತ್ತು ಭದ್ರತಾ ಸಿಬ್ಬಂದಿ ನಡುವಿನ ಗುಂಡಿನ ಚಕಮಕಿಯಲ್ಲಿ ಒಬ್ಬ ನಕ್ಸಲ ಸಾವಿಗೀಡಾಗಿದ್ದಾರೆ.

'ಧಮ್ತರಿಯ ಜಿಲ್ಲಾ ಮೀಸಲು ಪಡೆಯು ಅರಣ್ಯ ಪ್ರದೇಶದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡೆಸಿದ್ದು, ಈ ವೇಳೆ ಗುಂಡಿನ ಚಕಮಕಿ ನಡೆದಿದೆ' ಎಂದು ಧಮ್ತರಿಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆಂಜನೇಯ ವರ್ಷ್ನೆ ಶನಿವಾರ ತಿಳಿಸಿದ್ದಾರೆ.

ಉಗ್ರರ ಇಬ್ಬರು ಸಹಚರರ ಬಂಧನ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಉಗ್ರರ ಇಬ್ಬರು ಸಹಚರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಶೋಪಿಯಾನ್‌ನ ಬಾಬಾ ಮೊಹಲ್ಲಾ ನಿವಾಸಿಗಳಾದ ಸುಹೇಬ್ ಇಕ್ಬಾಲ್ ಮಲೀಕ್ ಮತ್ತು ತುಫೇಲ್ ಯೂಸುಫ್ ಮಲೀಕ್ ಅವರನ್ನು ಚೆಕ್ ಪಾಯಿಂಟ್‌ನಲ್ಲಿ ಬಂಧಿಸಲಾಗಿದೆ. ಭಯೋತ್ಪಾದಕ ಕೃತ್ಯದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ವಶಕ್ಕೆ ಪಡೆಯಲಾಗಿದೆ. ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ ಎಂದರು.

ಗಡಿಯಲ್ಲಿ ಪಾಕ್ ಡ್ರೋನ್ ಹಾರಾಟ

ಸಾಂಬಾ/ ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಸಾಂಬಾ ಜಿಲ್ಲೆಯಲ್ಲಿ ಅಂತರ ರಾಷ್ಟ್ರೀಯ ಗಡಿಯ ಬಳಿ ಶುಕ್ರವಾರ ರಾತ್ರಿ ಪಾಕಿಸ್ತಾನದ ಡ್ರೋನ್ ಹಾರಾಟ ನಡೆಸಿದ್ದು, ಅದನ್ನು ಹೊಡೆದುರುಳಿಸಲು ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಸಿಬ್ಬಂದಿ ಗುಂಡಿನ ದಾಳಿ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಡಿಯಲ್ಲಿ ಪಾಕಿಸ್ತಾನದ ಡ್ರೋನ್ ಕಾರ್ಯಾಚರಣೆ ನಡೆಸುತ್ತಿರುವುದನ್ನು ಬಿಎಸ್‌ಎಫ್ ಪಡೆಯ ಸಿಬ್ಬಂದಿ ಪತ್ತೆ ಹಚ್ಚಿದರು. ಅದನ್ನು ಹೊಡೆದುರುಳಿಸಲು ಎರಡು ಸುತ್ತಿನ ಗುಂಡಿನ ದಾಳಿ ನಡೆಸಲಾಯಿತು. ಆದರೆ, ಡ್ರೋನ್ ವಾಪಸ್ ಪಾಕಿಸ್ತಾನದತ್ತ ಹೊರಟಿತು. ಶನಿವಾರ ಬೆಳಿಗ್ಗೆಯೂ ರಾಮಗಢ ಸೆಕ್ಟರ್‌ನ ನಾರಾಯಣಪುರದ ಬಳಿ ಡ್ರೋನ್ ಪತ್ತೆ ಕಾರ್ಯಾಚರಣೆ ನಡೆಸಲಾಯಿತು. ಈ ಪ್ರದೇಶದಲ್ಲಿ ಡ್ರೋನ್ ಮೂಲಕ ಸ್ಫೋಟಕ ಬಿಸಾಡಲಾಗಿದೆಯೇ ಎಂಬುದರ ಬಗ್ಗೆಯೂ ಪರಿಶೀಲನೆ ನಡೆಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭೂಮಿಯತ್ತ ಬೀಸಿಬಂದ ಪ್ರಬಲ ಸೌರ ಮಾರುತಗಳು • ವಿಶ್ವದ ಹಲವು ರಾಷ್ಟ್ರಗಳಲ್ಲಿ ಗೋಚರ

ಲಡಾಖ್: ಉತ್ತರ ಧ್ರುವ ಪ್ರಭೆ ವಿಸ್ಮಯ

ನವದೆಹಲಿ(ಪಿಟಿಐ): ಸೂರ್ಯನ ಮೇಲ್ಮೈಯಿಂದ ಹೊರಬಿದ್ದಿರುವ ಪ್ರಬಲ ಸೌರ ಮಾರುತಗಳಿಂದ ಕಂಡು ಬಂದ ಅಪರೂಪದ ಖಗೋಳ ವಿಸ್ಮಯಕ್ಕೆ ಲಡಾಖ್ ಸಾಕ್ಷಿಯಾಗಿತ್ತು.

ಲಡಾಖ್‌ನ ಹಾನ್ಲೆ ಗ್ರಾಮದಲ್ಲಿರುವ 'ಡಾರ್ಕ್ ಸ್ಕೈ ರಿಸರ್ವ್'ನ ಖಗೋಳ-ವಿಜ್ಞಾನಿಗಳು, ಶನಿವಾರ ತಡರಾತ್ರಿ 1 ಗಂಟೆಯಿಂದ ನಸುಕಿನ 3.30ರ ವರೆಗೆ ಕ್ಷಿತಿಜದ ವಾಯವ್ಯ ದಿಕ್ಕಿನಲ್ಲಿ ಮೂಡಿದ ಉತ್ತರ ಧ್ರುವ ಪ್ರಭೆಯನ್ನು ವೀಕ್ಷಿಸಿದ್ದಾರೆ.

'ಸೂರ್ಯನ 'ಎಆರ್13664' ಭಾಗದಿಂದ ಚಿಮ್ಮಿರುವ ಈ ಶಕ್ತಿಶಾಲಿ ಸೌರ ಮಾರುತಗಳು, ಭೂಮಿಯತ್ತ ಬೀಸಿಬಂದಿವೆ. ಈ ಮಾರುತಗಳು ಸೆಕೆಂಡಿಗೆ 800 ಕಿ.ಮೀ. ವೇಗದಿಂದ ಚಲಿಸುತ್ತವೆ' ಎಂದು ಕೋಲ್ಕತ್ತದಲ್ಲಿರುವ ಸೆಂಟರ್ ಫಾರ್ ಎಕ್ಸಲೆನ್ಸ್ ಇನ್ ಸ್ಪೇಸ್ ಸೈನ್ಸಸ್‌ನ ವಿಜ್ಞಾನಿಗಳು ಹೇಳಿದ್ದಾರೆ.

'ನಿಯಮಿತವಾಗಿ ಇಲ್ಲಿ ನಡೆಯುವ ಆಕಾಶ ವೀಕ್ಷಣೆ ವೇಳೆಯೇ ಸೌರ ಮಾರುತಗಳಿಂದ ಮೂಡಿದ ಉತ್ತರ ಧ್ರುವ ಪ್ರಭೆಯನ್ನು ವೀಕ್ಷಿಸಿರುವುದು ನಮ್ಮ ಅದೃಷ್ಟ' ಎಂದು ಹಾನ್ಲೆ ಡಾರ್ಕ್ ಸ್ಕೈ ರಿಸರ್ವ್‌ನ ಎಂಜಿನಿಯರ್ ಸ್ಟಾಂಜಿನ್ ನೋರ್ಲಾ ಹೇಳಿದ್ದಾರೆ.

'ಕ್ಷಿತಿಜದಗುಂಟ ಮೊದಲು ತಿಳಿಗೆಂಪಿನ ಪ್ರಭೆ ಕಂಡುಬಂತು. ನಂತರ ಇಡೀ ಆಗಸವೇ ಕೆಂಪಾಯಿತಲ್ಲದೇ ನಿಧಾನವಾಗಿ ಗುಲಾಬಿ ರಂಗು ಆವರಿಸಿತು' ಎಂದೂ ಸ್ಟಾಂಜಿನ್ ಹೇಳಿದ್ದಾರೆ. ಆಕಾಶಕಾಯಗಳ ವೀಕ್ಷಣೆಗಾಗಿ ಗಾಢ ಕತ್ತಲು ಇರುವಂತಹ ಹಾಗೂ ದೀರ್ಘಾವಧಿಯಲ್ಲಿ ಮೋಡಗಳು ಬಾರದಂತಹ ತಾಣಗಳನ್ನು ಗುರುತಿ-ಸಲಾಗುತ್ತದೆ. ಇಂತಹ ತಾಣಗಳನ್ನು ಡಾರ್ಕ್ ಸ್ಕೈಪಾರ್ಕ್ ಎನ್ನಲಾಗುತ್ತದೆ. ಭಾರತದಲ್ಲಿ ಲಡಾಖ್‌ನ 'ಹಾನ್ಲೆ' ಎಂಬಲ್ಲಿ ಇಂತಹ ತಾಣವನ್ನು ಗುರುತಿಸಿ, ಅಭಿ-ವೃದ್ಧಿಪಡಿಸಲಾಗಿದ್ದು, 'ಡಾರ್ಕ್ ಸ್ಕೈ ರಿಸರ್ವ್' ಎಂದು ಕರೆಯಲಾಗುತ್ತದೆ.

ಬೆಂಗಳೂರಿನ ಭಾರತೀಯ ಖಭೌತವಿಜ್ಞಾನ ಸಂಸ್ಥೆಯ ತಜ್ಞರ ನೆರವಿನಿಂದ ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಈ ಸ್ಕೈ ರಿಸರ್ವ್ ಅಭಿವೃದ್ಧಿಪಡಿಸಿದೆ.

ಉತ್ತರ ಗೋಳಾರ್ಧದ ಅನೇಕ ರಾಷ್ಟ್ರಗಳಲ್ಲಿನ ಖಗೋಳಾಸಕ್ತರು ಈ ವಿದ್ಯಮಾನ ವೀಕ್ಷಿಸಿದ್ದಾರೆ. ಆಸ್ಟ್ರಿಯಾ, ಜರ್ಮನಿ, ಸ್ಲೊವಾಕಿಯಾ, ಸ್ವಿಜರ್ಲೆಂಡ್, ಡೆನ್ಮಾರ್ಕ್ ಹಾಗೂ ಪೋಲೆಂಡ್‌ನ ಆಕಾಶವೀಕ್ಷಕರು, ಸೌರಮಾರುತಗಳಿಂದ ಮೂಡಿದ ಪ್ರಭಾವಲಯದ ಚಿತ್ರಗಳು ಹಾಗೂ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಸೌರ ಮಾರುತಗಳಿಂದಾಗಿ ಲಡಾಖ್‌ನ ಹಾನ್ಲೆ ಬಳಿಯ 'ಡಾರ್ಕ್ ಸ್ಕೈ ರಿಸರ್ವ್'ನಲ್ಲಿ ಶನಿವಾರ ಕಂಡು ಬಂದ ಅಪರೂಪದ ಉತ್ತರ ಧ್ರುವ ಪ್ರಭೆ –ಪಿಟಿಐ ಚಿತ್ರ

> ಉತ್ತರ ಮತ್ತು ದಕ್ಷಿಣ ಧ್ರುವಗಳಲ್ಲಿ ಈ ರೀತಿಯ ಪ್ರಭಾವಲಯಗಳು ಕಾಣಿಸಿಕೊಳ್ಳುತ್ತಲೇ ಇರುತ್ತವೆ. ಲಡಾಖ್‌ನಲ್ಲಿ ಕಾಣಿಸಿದ ಉತ್ತರ ಧ್ರುವ ಪ್ರಭೆ ಸ್ಥಿರವಾಗಿತ್ತು
> **ದೋರ್ಜೆ ಆಂಗ್‌ಚುಕ್**, ಎಂಜಿನಿಯರ್, ಖಗೋಳವಿಜ್ಞಾನ ವೀಕ್ಷಣಾಲಯ, ಹಾನ್ಲೆ

> ಸೌರ ಮಾರುತಗಳ ಪ್ರಕ್ಷುಬ್ಧತೆ ತೀವ್ರಗೊಂಡ ಸಂದರ್ಭ-ಗಳಲ್ಲಿ ಮಾತ್ರ ಲಡಾಖ್‌ನಲ್ಲಿರುವ ಹಾನ್ಲೆಯಂತಹ ಸ್ಥಳಗಳಲ್ಲಿ ಇಂತಹ ವಿಸ್ಮಯ ನೋಡಬಹುದು
> **ದಿವ್ಯೇಂದು ನಂದಿ**, ಸಿಇಎಸ್‌ಎಸ್‌ಐ ಮುಖ್ಯಸ್ಥ, ಐಐಎಸ್‌ಇಆರ್, ಕೋಲ್ಕತ್ತ

ಜಮ್ಮು: ಆರು ಕಡೆ ಎನ್‌ಐಎ ಶೋಧ

ನವದೆಹಲಿ (ಪಿಟಿಐ): ದೇಶದಲ್ಲಿ ಭಯೋತ್ಪಾದನೆ ಹರಡಲು ಪಾಕಿಸ್ತಾನ ಬೆಂಬಲಿತ ಸಂಘಟನೆಗಳು ರೂಪಿಸಿರುವ ಜಾಲವನ್ನು ಬುಡ ಸಮೇತ ಕಿತ್ತು ಹಾಕುವ ಉದ್ದೇಶದಿಂದ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಶನಿವಾರ ಜಮ್ಮು ಪ್ರಾಂತ್ಯದ ಆರು ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿತು.

ಜಮ್ಮು ಪ್ರಾಂತ್ಯದ ದೋಡಾ, ರಾಂಬನ್ ಮತ್ತು ಕಿಶ್ತ್ವಾರ್ ಜಿಲ್ಲೆಗಳಲ್ಲಿ ಎನ್‌ಎಐ ತಂಡಗಳು ವ್ಯಾಪಕ ಶೋಧ ನಡೆಸಿದವು.

ನಿಷೇಧಿತ ಭಯೋತ್ಪಾದಕ ಸಂಘಟನೆಗಳು ಐಇಡಿ ಮತ್ತು ಸಣ್ಣ ಶಸ್ತ್ರಾಸ್ತ್ರಗಳ ಮೂಲಕ ಜಮ್ಮು ಮತ್ತು ಕಾಶ್ಮೀರದಲ್ಲಿ ಹಿಂಸಾತ್ಮಕ ದಾಳಿಗಳನ್ನು ನಡೆಸಲು ಸಂಚು ರೂಪಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಶೋಧ ನಡೆದಿದೆ ಎಂದು ಎನ್‌ಐಎ ಪ್ರಕಟಣೆ ತಿಳಿಸಿದೆ.

ಹೈಬ್ರಿಡ್ ಭಯೋತ್ಪಾದಕರು, ಉಗ್ರರ ಬಗ್ಗೆ ಸಹಾನುಭೂತಿ ಹೊಂದಿರುವವರು, ಅವರಿಗೆ ಆಶ್ರಯ ನೀಡಿ ಸಹಾಯ ಮಾಡುವವರು ಮತ್ತು ನಿಷೇಧಿತ ಭಯೋತ್ಪಾದಕ ಸಂಘಟನೆಗಳ ಅಂಗಸಂಸ್ಥೆಗಳ ಜತೆ ಸಂಬಂಧ ಹೊಂದಿರುವವರಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆಸಲಾಯಿತು. ಈ ಸ್ಥಳಗಳಿಂದ ಡಿಜಿಟಲ್ ಸಾಧನಗಳು, ಕೆಲ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಎನ್‌ಐಎ ತಿಳಿಸಿದೆ.

ಇವುಗಳಲ್ಲಿ ಲಷ್ಕರ್–ಎ–ತಯಬಾ (ಎಲ್‌ಇಟಿ), ಜೈಷ್–ಎ– ಮೊಹಮ್ಮದ್ (ಜೆಇಎಂ), ಹಿಜ್ಬುಲ್–ಮುಜಾಹಿದ್ದೀನ್ (ಎಚ್‌ಎಂ), ಅಲ್–ಬದ್ರ್, ಅಲ್ ಕೈದಾ ಉಗ್ರ ಸಂಘಟನೆಗಳ ಜತೆ ಸಂಪರ್ಕ ಹೊಂದಿರುವವರ ಸ್ಥಳಗಳು ಸೇರಿವೆ.

ಈ ಸಂಘಟನೆಗಳು ನಡೆಸುತ್ತಿರುವ ಭಯೋತ್ಪಾದಕ ಜಾಲವನ್ನು ನಿರ್ಮೂ-ಲನೆಗೊಳಿಸುವ ಉದ್ದೇಶದಿಂದ 2022ರ ಜೂನ್ 21ರಂದು ಎನ್‌ಐಎ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿತ್ತು.

ಇಂಡಿಯನ್ ಮುಜಾಹಿದೀನ್ ಸದಸ್ಯನಿಗೆ ಜಾಮೀನು

ನವದೆಹಲಿ (ಪಿಟಿಐ): ನಿಷೇಧಿತ ಭಯೋತ್ಪಾದಕ ಸಂಘಟನೆ ಇಂಡಿಯನ್ ಮುಜಾಹಿದೀನ್‌ನ ಸಹ ಸಂಸ್ಥಾಪಕ ಅಬ್ದುಲ್ ಸುಭಾನ್ ಖುರೇಶಿಗೆ ದೆಹಲಿ ಹೈಕೋರ್ಟ್ ಭಯೋತ್ಪಾದನೆಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಜಾಮೀನು ಮಂಜೂರು ಮಾಡಿದೆ.

ಖುರೇಶಿ ಜೈಲಿನಲ್ಲಿ ಕಳೆದಿರುವ ಸರಿಸುಮಾರು ಐದು ವರ್ಷಗಳ ಅವಧಿಯನ್ನು ಪರಿಗಣಿಸಿದ ನ್ಯಾಯಮೂರ್ತಿಗಳಾದ ಸುರೇಶ್ ಕುಮಾರ್ ಕೈತ್ ಮತ್ತು ಮನೋಜ್ ಜೈನ್ ಅವರು ಇದ್ದ ವಿಭಾಗೀಯ ಪೀಠವು, ಜಾಮೀನಿನ ಷರತ್ತುಗಳನ್ನು ವಿಚಾರಣಾ ನ್ಯಾಯಾಲಯ ತೀರ್ಮಾನಿಸಲಿದೆ ಎಂದು ಹೇಳಿತು. 'ವಿಚಾರಣಾ ನ್ಯಾಯಾಲಯ ವಿಧಿಸುವ ಯಾವುದೇ ಷರತ್ತುಗಳ ಉಲ್ಲಂಘನೆ ಆದಲ್ಲಿ, ಖುರೇಶಿ ಸಾಕ್ಷಿಯನ್ನು ಬೆದರಿಸಲು ಅಥವಾ ಅವರ ಮೇಲೆ ಪ್ರಭಾವ ಬೀರಲು ಯತ್ನಿಸಿದರೆ, ವಿಚಾರಣೆಯನ್ನು ವಿಳಂಬಗೊಳಿಸಲು ಯತ್ನಿಸಿದರೆ, ಜಾಮೀನು ರದ್ದು ಮಾಡುವಂತೆ ಕೋರುವ ಅಧಿಕಾರ ಪ್ರಾಸಿಕ್ಯೂಷನ್‌ಗೆ ಇರುತ್ತದೆ' ಎಂದು ಸ್ಪಷ್ಟಪಡಿಸಿದೆ.

ವಿಚಾರಣಾ ನ್ಯಾಯಾಲಯವೊಂದು 2023ರಲ್ಲಿ ತನ್ನ ಜಾಮೀನು ಅರ್ಜಿ ವಜಾಗೊಳಿಸಿದ ಕ್ರಮವನ್ನು ಪ್ರಶ್ನಿಸಿ ಖುರೇಶಿ ಹೈಕೋರ್ಟ್ ಮೊರೆ ಹೋಗಿದ್ದ. ಖುರೇಶಿ, ಇಂಡಿಯನ್ ಮುಜಾಹಿದೀನ್ 'ಸ್ಟುಡೆಂಟ್ಸ್ ಇಸ್ಲಾಮಿಕ್ ಮೂಮೆಂಟ್ ಆಫ್ ಇಂಡಿಯಾ' ಸಂಘಟನೆಯ ಸಕ್ರಿಯ ಸದಸ್ಯ ಆಗಿದ್ದ ಎಂದು ಪ್ರಾಸಿಕ್ಯೂಷನ್ ಆರೋಪಿಸಿದೆ.

ಸಂದೇಶ್‌ಖಾಲಿ ಪ್ರಕರಣ: ಸತ್ಯವನ್ನು ರಾಷ್ಟ್ರಪತಿಗೆ ತಿಳಿಸುತ್ತೇವೆ- ಟಿಎಂಸಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಸಂದೇಶ್‌ಖಾಲಿಯಲ್ಲಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ನಡೆದಿದೆ ಎನ್ನಲಾದ ದೌರ್ಜನ್ಯ ಹಾಗೂ ಜಮೀನು ಕಬಳಿಕೆ ಪ್ರಕರಣಗಳ ಕುರಿತ ವಾಸ್ತವಾಂಶವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ತಿಳಿಸುವುದು ಪಕ್ಷಕ್ಕೆ ಅನಿವಾರ್ಯವಾಗಿದೆ ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಶನಿವಾರ ತಿಳಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಪಶ್ಚಿಮ ಬಂಗಾಳ ಸಚಿವ, ಟಿಎಂಸಿ ನಾಯಕ ಶಶಿ ಪಂಜ 'ಬಿಜೆಪಿಯು ಸಂದೇಶ್‌ಖಾಲಿಯಿಂದ ಗುಂಪೊಂದನ್ನು ಕರೆದುಕೊಂಡು ಹೋಗಿ ಸ್ವತಃ ರಾಷ್ಟ್ರ-ಪತಿಗಳ ಎದುರೇ ಸಂದೇಶ್‌ಖಾಲಿ ಕುರಿತು ಸುಳ್ಳು ಚಿತ್ರಣ ನೀಡಿದೆ. ನಮ್ಮ ಪರವಾಗಿ ಸಂದೇಶ್‌ಖಾಲಿಯಿಂದ ಗುಂಪೊಂದನ್ನು ಕರೆದುಕೊಂಡು ಹೋಗುವ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಸಂದೇಶ್‌ಖಾ-ಲಿಯಲ್ಲಿ ನಿಜಕ್ಕೂ ಏನಾಯಿತು ಎಂಬುದರ ಕುರಿತು ರಾಷ್ಟ್ರಪತಿಗಳಿಗೆ ತಿಳಿಸುವ ಅವಶ್ಯಕತೆಯಿದೆ' ಎಂದು ತಿಳಿಸಿದರು.

'ರಾಷ್ಟ್ರಪತಿಯವರನ್ನು ಭೇಟಿ ಮಾಡಿದ ಬಿಜೆಪಿ ತಂಡ ದಾರಿ ತಪ್ಪಿಸಿದೆ. ಕೇಸರಿ ಪಾಳಯ ಅಂದು, ಇಂದೂ ಸುಳ್ಳು ಹೇಳುತ್ತಿದೆ. ಈ ನಿಟ್ಟಿನಲ್ಲಿ ನಮ್ಮ ಪಕ್ಷದ ನಾಯಕತ್ವ ಒಪ್ಪಿಗೆ ನೀಡಿದರೆ ರಾಷ್ಟ್ರಪತಿ ಅವರನ್ನು ಭೇಟಿ ಮಾಡುತ್ತೇವೆ' ಎಂದಿದ್ದಾರೆ.

ಸ್ಥಳೀಯ ಟಿಎಂಸಿ ನಾಯಕರ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡುವಂತೆ ಸಂದೇಶ್‌ಖಾಲಿ ಮಹಿಳೆಯರಿಗೆ ಬಿಜೆಪಿ ಹಣ ನೀಡಿದೆ ಎಂದು ಟಿಎಂಸಿ ಆರೋಪಿಸಿದೆ. ಈ ನಡುವೆ ಸ್ಥಳೀಯ ಬಿಜೆಪಿ ನಾಯಕರೊಬ್ಬರು ಬಿಜೆಪಿ ಹಣ ನೀಡಿದೆ ಎಂಬುದನ್ನು ಒಪ್ಪಿಕೊಂಡಿ-ದ್ದಾರೆ ಎನ್ನಲಾದ ಆಡಿಯೊವೊಂದು ಹರಿದಾಡಿದೆ. ಆದರೆ, ಇದರ ಸತ್ಯಾಸತ್ಯತೆ ತಿಳಿದುಬಂದಿಲ್ಲ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ 13 ಆರೋಪಿಗಳ ಬಂಧನ

ಪಟ್ನಾ (ಪಿಟಿಐ): ಇದೇ 5ರಂದು ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯ(ನೀಟ್–ಯುಜಿ) ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ಸಂಬಂಧ, ಬಿಹಾರ ಪೊಲೀಸರು ಇದುವರೆಗೆ 13 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರಲ್ಲಿ 4 ಮಂದಿ ಪರೀಕ್ಷಾರ್ಥಿಗಳು ಹಾಗೂ ಅವರ ಕುಟುಂಬಸ್ಥರೂ ಸೇರಿದ್ದಾರೆ ಎನ್ನಲಾಗಿದ್ದು, ಪರೀಕ್ಷೆಗೂ ಮೊದಲು ಆರೋಪಿಗಳು ಅಂದಾಜು 35 ಜನ ವಿದ್ಯಾರ್ಥಿಗಳೊಂದಿಗೆ ಪ್ರಶ್ನೆಗಳನ್ನು ಹಂಚಿಕೊಂಡಿದ್ದಾರೆಂದು ಪೊಲೀಸರು ಶಂಕಿಸಿದ್ದಾರೆ.

'ಈಪ್ರಕರಣದತನಿಖೆಯಜವಾಬ್ದಾರಿಯನ್ನು ಬಿಹಾರ ಪೊಲೀಸ್ ಇಲಾಖೆಯ ಆರ್ಥಿಕ ಅಪರಾಧ ಘಟಕ(ಇಒಯು) ವಹಿಸಿಕೊಂಡಿದ್ದು, 13 ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಲ್ಲಿ ಒಬ್ಬ ಆರೋಪಿಯು ಬಿಹಾರ ಲೋಕಸೇವಾ ಆಯೋಗ(ಬಿಪಿಎಸ್‌ಸಿ) ನಡೆಸಿದ್ದ ಶಿಕ್ಷಕರ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಭಾಗಿಯಾಗಿದ್ದ ಎಂದು ಶಂಕಿಸಲಾಗಿದೆ' ಎಂಬುದಾಗಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಎಲ್ಲ ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ. ಬಂಧಿತರಿಂದ ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಗಳು ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ವಶಕ್ಕೆ ಪಡೆಯಲಾಗಿದೆ. ವಿಚಾರಣೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮೋದಿ ಅಲ್ಲ, ಶಾ ಪ್ರಧಾನಿ'

ಒಂದನೇ ಪುಟದಿಂದ

ಬಿಜೆಪಿಯು ಮತ್ತೆ ಅಧಿಕಾರಕ್ಕೆ ಬಂದಿದ್ದೇ ಆದಲ್ಲಿ ಅಮಿತ್ ಶಾ ಅವರಿಗೆ ಪ್ರಧಾನಿ ಹುದ್ದೆಗೆ ಏರಲು ಅವಕಾಶ ಕಲ್ಪಿಸಿಕೊಡಲು ಯೋಗಿ ಆದಿತ್ಯನಾಥ ಅವರನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ ಸ್ಥಾನದಿಂದ ತೆಗೆಯಲಾಗುತ್ತದೆ ಎಂದರು. ಬಿಜೆಪಿಯೊಳಗೆ ಅಧಿಕಾರದಲ್ಲಿ ಇರಲು 75 ವರ್ಷ ವಯಸ್ಸು ಮೀರಿರಬಾರದು ಎಂಬ ನಿಯಮವನ್ನು ಮೋದಿ ಅವರೇ ರೂಪಿಸಿದ್ದಾರೆ ಎಂದು ಹೇಳಿದರು.

ಮೋದಿ ಅವರು ಸರ್ವಾಧಿಕಾರಿಯ ಮನಃಸ್ಥಿತಿ ಹೊಂದಿದ್ದಾರೆ, 'ಒಂದು ರಾಷ್ಟ್ರ, ಒಬ್ಬನೇ ನಾಯಕ' ತತ್ವವನ್ನು ಅನುಷ್ಠಾನಕ್ಕೆ ತರಲು ಅವರು ಬಯಸಿದ್ದಾರೆ ಎಂದು ಆರೋಪಿಸಿದರು. ಮೋದಿ ಅವರು ತಮಗಾಗಿ ಮತ ಯಾಚಿಸುತ್ತಿಲ್ಲ, ಬಿಜೆಪಿಗೆ ಮತ ನೀಡುವವರಿಗೆ ತಾವು ಮತ ಹಾಕುವುದು ಮೋದಿ ಅವರಿಗಾಗಿ ಅಲ್ಲ, ಅದು ಅಮಿತ್ ಶಾ ಅವರಿಗಾಗಿ ಎಂಬುದು ಗೊತ್ತಿರಬೇಕು ಎಂದರು. ಅಲ್ಲದೆ, ಅಮಿತ್ ಶಾ ಅವರು 'ಮೋದಿಯವರ ಗ್ಯಾರಂಟಿಗಳನ್ನು' ಅನುಷ್ಠಾನಕ್ಕೆ ತರುವರೇ ಎಂದು ಪ್ರಶ್ನಿಸಿದರು.

ಬಂಧನದ ನಂತರವೂ ತಾವು ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸದೆ ಇದ್ದುದನ್ನು ಸಮರ್ಥಿಸಿಕೊಂಡ ಕೇಜ್ರಿವಾಲ್, ಬಂಧನವು ಎಎಪಿಯನ್ನು ಮುಗಿಸಲು ಪ್ರಧಾನಿ ಹೆಣೆದಿದ್ದ ಒಂದು ಜಾಲವಾಗಿತ್ತು ಎಂದರು. ಜೆಎಂಎಂ ಪಕ್ಷದ ನಾಯಕ ಹೇಮಂತ್ ಸೋರೇನ್ ಅವರೂ ಜಾರ್ಖಂಡ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬಾರದಿತ್ತು ಎಂದು ತಮಗೆ ಅನ್ನಿಸಿದ್ದಾಗಿ ಹೇಳಿದರು.

ತಿಹಾರ್ ಜೈಲಿನಿಂದ ಬಿಡುಗಡೆ ಆದ ಮಾರನೆಯ ದಿನವೇ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಕೇಜ್ರಿವಾಲ್, 'ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ಕೇಜ್ರಿವಾಲ್‌ನಿಂದ ಕಲಿಯಿರಿ' ಎಂದು ಮೋದಿ ಅವರಿಗೆ ಹೇಳಿದರು. ಭ್ರಷ್ಟಾಚಾರದ ಆರೋಪ ಹೊತ್ತವರು ಬಿಜೆಪಿಯನ್ನು ಸೇರಿರುವ ಬಗ್ಗೆ ಉಲ್ಲೇಖಿಸಿದರು.

'ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿರುವುದಾಗಿ ಪ್ರಧಾನಿ ಹೇಳುತ್ತಾರೆ. ಆದರೆ ಅವರು ಕಳ್ಳರು ಮತ್ತು ಡಕಾಯಿತರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ. ₹70,000 ಕೋಟಿ ಮೊತ್ತದ ಹಗರಣದಲ್ಲಿ ಭಾಗಿಯಾಗಿರುವುದಾಗಿ ತಾವು ಆರೋಪಿಸಿದ ನಾಯಕರೊಬ್ಬರನ್ನು ಮೋದಿ ಅವರು ಆರೋಪ ಹೊರಿಸಿದ ಹತ್ತು ದಿನಗಳ ನಂತರ ಪಕ್ಷಕ್ಕೆ ಸೇರಿಸಿಕೊಂಡರು' ಎಂದು ಟೀಕಿಸಿದರು.

ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ವಿರೋಧ ಪಕ್ಷಗಳ ನಾಯಕರಾದ ಮಮತಾ ಬ್ಯಾನರ್ಜಿ, ತೇಜಸ್ವಿ ಯಾದವ್, ಎಂ.ಕೆ. ಸ್ಟಾಲಿನ್ ಮತ್ತು ಉದ್ಧವ್ ಠಾಕ್ರೆ ಅವರನ್ನು ಜೈಲಿಗೆ ಕಳುಹಿಸಲಾಗುತ್ತದೆ ಎಂದು ಎಚ್ಚರಿಸಿದ ಕೇಜ್ರಿವಾಲ್, ತಮ್ಮ ಬಂಧನವೂ ಒಂದು ಸಂದೇಶವಾಗಿತ್ತು; ಕೇಜ್ರಿವಾಲ್ ಅವರನ್ನು ವಶಕ್ಕೆ ಪಡೆಯಬಹುದು ಎಂದಾದರೆ ಯಾರನ್ನು ಬೇಕಿದ್ದರೂ ವಶಕ್ಕೆ ಪಡೆಯಬಹುದು ಎಂಬ ಸಂದೇಶ ನೀಡುವ ಉದ್ದೇಶ ಇತ್ತು ಎಂದು ಆರೋಪಿಸಿದರು.

'ಅವರ ಕಾರ್ಯಯೋಜನೆಯ ಹೆಸರು ಒಂದು ದೇಶ, ಒಂದೇ ನಾಯಕ ಎಂಬುದನ್ನು ಜನರು ತಿಳಿಯಬೇಕು. ಇದನ್ನು ಸಾಧಿಸಲು ಎರಡು ದಾರಿಗಳಿವೆ. ಒಂದು, ವಿರೋಧ ಪಕ್ಷಗಳ ನಾಯಕರೆಲ್ಲರನ್ನೂ ಜೈಲಿಗೆ ಅಟ್ಟುವುದು. ಎರಡನೆಯದು, ಜಯ ಗಳಿಸಿದರೆ ಬಿಜೆಪಿಯಲ್ಲಿನ ಎಲ್ಲ ನಾಯಕರನ್ನೂ ನೇಪಥ್ಯಕ್ಕೆ ಸರಿಸುವುದು. ಅವರು ಎಲ್.ಕೆ. ಅಡ್ವಾಣಿ, ಮುರಳಿ ಮನೋಹರ ಜೋಷಿ, ಸುಮಿತ್ರಾ ಮಹಾಜನ್, ಶಿವರಾಜ್ ಸಿಂಗ್ ಚೌಹಾಣ್, ವಸುಂಧರಾ ರಾಜೆ, ಎಂ.ಎಲ್. ಖಟ್ಟರ್ ಅವರನ್ನು ಈಗಾಗಲೇ ನೇಪಥ್ಯಕ್ಕೆ ತಳ್ಳಿದ್ದಾರೆ' ಎಂದು ಕೇಜ್ರಿವಾಲ್ ಹೇಳಿದರು.

'ಮುಂದೆ ಯಾರು? ಅದು ಯೋಗಿ ಆದಿತ್ಯನಾಥ. ಇದನ್ನು ಬರೆದಿಟ್ಟುಕೊಳ್ಳಿ. ಬಿಜೆಪಿ ಜಯ ಗಳಿಸಿದರೆ ಉತ್ತರ ಪ್ರದೇಶದ ಮುಖ್ಯ-ಮಂತ್ರಿಯನ್ನು ಎರಡು ತಿಂಗಳಲ್ಲಿ ಬದಲಿಸಲಾಗುತ್ತದೆ. ಅವರು ದೇಶದಲ್ಲಿ ಜನತಂತ್ರವನ್ನು ಹೊಸಕಿಹಾಕಲು ಯತ್ನಿಸುತ್ತಿದ್ದಾರೆ. ನಾನು ಅದರ ವಿರುದ್ಧ ಹೋರಾಡುತ್ತಿದ್ದೇನೆ' ಎಂದರು.

ಪ್ರಜಾತಂತ್ರವನ್ನು ಜೈಲಿಗೆ ಕಳುಹಿಸಬಹುದು ಎಂದಾದರೆ, ಅದನ್ನು ಜೈಲಿನಿಂದಲೇ ನಡೆಸಬಹುದು ಎಂಬುದನ್ನು ತೋರಿಸಬೇಕಿದ್ದ ಕಾರಣಕ್ಕೆ ತಾವು ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲಿಲ್ಲ ಎಂದು ಹೇಳಿದರು.

ರಾಷ್ಟ್ರಪ್ರೇಮ ಭಾರತ – ಪಾಕಿಸ್ತಾನದ ವಾಘಾ ಗಡಿ ಬಳಿ ಶಾಲಾ ಮಕ್ಕಳು ಭಾರತದ ರಾಷ್ಟ್ರ ಧ್ವಜವನ್ನು ಕೈಯಲ್ಲಿ ಹಿಡಿದು ಸಂಭ್ರಮಿಸಿದರು – ಎಎಫ್‌ಪಿ ಚಿತ್ರ

ಮೋದಿಯೇ ಪ್ರಧಾನಿ: ಬಿಜೆಪಿ ಸ್ಪಷ್ಟನೆ

ನವದೆಹಲಿ/ಹೈದರಾಬಾದ್ (ಪಿಟಿಐ): ಅಧಿಕಾರಕ್ಕೆ ಬಂದಲ್ಲಿ, ನರೇಂದ್ರ ಮೋದಿ ಅವರು ಪ್ರಧಾನಿ ಹುದ್ದೆಯಲ್ಲಿ ಐದು ವರ್ಷ ಮುಂದುವರಿಯಲಿದ್ದಾರೆ ಎಂದು ಬಿಜೆಪಿಯ ಹಿರಿಯ ನಾಯಕರು, ಕೇಂದ್ರ ಸಚಿವರು ಸ್ಪಷ್ಟಪಡಿಸಿದ್ದಾರೆ. ಹೀಗೆ ಹೇಳುವ ಮೂಲಕ ಅವರು, ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಮಾತನ್ನು ಅಲ್ಲಗಳೆದಿದ್ದಾರೆ.

75 ವರ್ಷ ವಯಸ್ಸಾದ ನಂತರ ಮೋದಿ ಅವರು, ಅಮಿತ್ ಶಾ ಅವರನ್ನು ಪ್ರಧಾನಿ ಹುದ್ದೆಯಲ್ಲಿ ಕೂರಿಸುತ್ತಾರೆ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಮೋದಿ ಅವರನ್ನು ಎದುರಿಸಲು ವಿರೋಧ ಪಕ್ಷಗಳ ಬಳಿ ಯಾವುದೇ ಕಾರ್ಯಯೋಜನೆ ಇಲ್ಲ. ಸೋಲಿನ ಭೀತಿಯಿಂದ ಕೇಜ್ರಿವಾಲ್ ಹಾಗೂ ವಿರೋಧ ಪಕ್ಷಗಳ ಇತರ ನಾಯಕರು ದೇಶವನ್ನು ತಪ್ಪುದಾರಿಗೆ ಎಳೆಯುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ, ಅಸಂಗತವಾಗಿ ಮೋದಿ ಅವರ ವಯಸ್ಸಿನ ಕುರಿತು ಮಾತನಾಡುತ್ತಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಕಿಡಿಕಾರಿದ್ದಾರೆ. 'ವಯಸ್ಸಿಗೆ ಸಂಬಂಧಿಸಿದಂತೆ ಬಿಜೆಪಿಯ ಸಂವಿಧಾನದಲ್ಲಿ ಅಂತಹ ಯಾವುದೇ ಅಂಶ ಇಲ್ಲ' ಎಂದು ನಡ್ಡಾ ಹೇಳಿದ್ದಾರೆ.

ಬಿಜೆಪಿಯ ಸಂವಿಧಾನದಲ್ಲಿ ವಯಸ್ಸಿನ ಮಿತಿಯ ಬಗ್ಗೆ ಉಲ್ಲೇಖವಿಲ್ಲ. ಈ ವಿಚಾರದಲ್ಲಿ ಬಿಜೆಪಿಯಲ್ಲಿ ಯಾವ ಗೊಂದಲವೂ ಇಲ್ಲ ಎಂದು ಅಮಿತ್ ಶಾ ಅವರು ಹೈದರಾಬಾದ್‌ನಲ್ಲಿ ಹೇಳಿದ್ದಾರೆ.

ಮುಖ್ಯಾಂಶಗಳು

- ವಯಸ್ಸಿನ ಮಿತಿ ಬಿಜೆಪಿ ಸಂವಿಧಾನದಲ್ಲಿ ಇಲ್ಲ: ಶಾ
- ಕೇಜ್ರಿವಾಲ್ ಸಡಿಲ ಮಾತು: ರಾಜನಾಥ್ ಸಿಂಗ್
- ಬಿಜೆಪಿಯಲ್ಲಿ ಕಂಪನ ಸೃಷ್ಟಿಸುವುದು ಕೇಜ್ರಿವಾಲ್ ಉದ್ದೇಶ?

ಬೋಸ್ ಏಕೆ ರಾಜೀನಾಮೆ ನೀಡಿಲ್ಲ: ಮಮತಾ

ಸಪ್ತಗ್ರಾಮ(ಪಶ್ಚಿಮಬಂಗಾಳ) (ಪಿಟಿಐ): ರಾಜ್ಯಪಾಲ ಸಿ.ವಿ.ಆನಂದ್ ಬೋಸ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಕೇಳಿಬಂದಿದ್ದರೂ, ತಮ್ಮ ಹುದ್ದೆಗೆ ರಾಜೀನಾಮೆ ನೀಡಿಲ್ಲ ಏಕೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರಶ್ನಿಸಿದ್ದಾರೆ.

ಪಶ್ಚಿಮ ಬಂಗಾಳದ ಸಪ್ತಗ್ರಾಮದಲ್ಲಿ ಟಿಎಂಸಿ ಅಭ್ಯರ್ಥಿ ಪರ ಪ್ರಚಾರದಲ್ಲಿ ಪಾಲ್ಗೊಂಡು ಮಾತನಾಡಿದ ಮಮತಾ, ಬೋಸ್ ಅವರು ರಾಜ್ಯಪಾಲ ಹುದ್ದೆಯಿಂದ ಕೆಳಗಿಳಿಯುವವರೆಗೂ ರಾಜಭವನಕ್ಕೆ ಕಾಲಿಡುವುದಿಲ್ಲ ಎಂದು ಶಪಥ ಮಾಡಿದ್ದಾರೆ. ಮುಂದುವರಿದು, ರಾಜ್ಯಪಾಲರನ್ನು ಬೀದಿಯಲ್ಲಿ ಭೇಟಿ ಮಾಡಲು ಇಚ್ಛಿಸುತ್ತೇನೆ ಹೊರತು ರಾಜಭವನಕ್ಕೆ ಹೋಗಲ್ಲ ಎಂದಿದ್ದಾರೆ.

ರಾಜ್ಯಪಾಲರು 'ದೀದಿಗಿರಿ ಸಹಿಸಿಕೊಳ್ಳುವುದಿಲ್ಲ' ಎಂದು ನನ್ನ ಕುರಿತು ಹೇಳಿದ್ದಾರೆ. ಆದರೆ, 'ರಾಜ್ಯಪಾಲರೇ, ನಿಮ್ಮ ದಾದಾಗಿರಿ ಇನ್ನು ನಡೆಯಲ್ಲ' ಎಂಬುದನ್ನು ನಾನು ಅವರಿಗೆ ಹೇಳಬಯಸುತ್ತೇನೆ ಎಂದಿದ್ದಾರೆ.

ರಾಜಭವನದ ಸಿ.ಸಿ.ಟಿವಿ ದೃಶ್ಯಾವಳಿಗಳನ್ನು ಸಾರ್ವಜನಿಕರಿಗೆ ತೋರಿಸಿದ ವಿಚಾರವಾಗಿ ಮಾತನಾಡಿ, 'ರಾಜ್ಯಪಾಲರು ಮಾರ್ಪಾಡು ಮಾಡಿದ ವಿಡಿಯೊವನ್ನು ಜನರಿಗೆ ತೋರಿಸಿದ್ದಾರೆ. ನನಗೆ ಮೂಲ ವಿಡಿಯೊ ಸಿಕ್ಕಿದ್ದು, ಸಂಪೂರ್ಣ ವಿಡಿಯೊ ವೀಕ್ಷಿಸಿದ ಬಳಿಕ ನಾನು ಆಘಾತಕ್ಕೊಳಗಾಗಿದ್ದೇನೆ. ನಿಮ್ಮ (ರಾಜ್ಯಪಾಲರ) ನಡವಳಿಕೆ ನಾಚಿಕೆಗೇಡು' ಎಂದು ಮಮತಾ ಟೀಕಿಸಿದ್ದಾರೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಪ್ರಸ್ತಾವ

ಎರಡು ಭಾಗಗಳಲ್ಲಿ ರಣಜಿ ಟೂರ್ನಿ

ಮುಂಬೈ (ಪಿಟಿಐ): ದೇಶಿ ಕ್ರಿಕೆಟ್ ರೂಪುರೇಷೆ ಬದಲಾಯಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮುಂದಾಗಿದೆ.

ಮುಂಬರುವ ದೇಶಿ ಋತುವಿನಲ್ಲಿ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯನ್ನು ಎರಡು ಭಾಗಗಳಲ್ಲಿ ನಡೆಸುವ ಸಾಧ್ಯತೆ ಇದೆ. ಈ ಕುರಿತು ಅಪೆಕ್ಸ್ ಕಮಿಟಿಗೆ ಪ್ರಸ್ತಾವ ಸಲ್ಲಿಸಲಾಗಿದೆ.

ಹೊಸ ಮಾದರಿಯಲ್ಲಿ ರಣಜಿ ಟ್ರೋಫಿ ಟೂರ್ನಿಯ ಐದು ಲೀಗ್ ಪಂದ್ಯಗಳ ನಂತರ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಹಾಗೂ ವಿಜಯ್ ಹಜಾರೆ ಟ್ರೋಫಿ ಟೂರ್ನಿ ನಡೆಯಲಿವೆ. ರಣಜಿ ಟೂರ್ನಿಯ ಉಳಿದ ಎರಡು ಲೀಗ್ ಪಂದ್ಯಗಳು, ನಾಕ್‌ಔಟ್ ಹಂತದ ಪಂದ್ಯಗಳನ್ನು ಸೀಮಿತ ಓವರ್‌ಗಳ ಟೂರ್ನಿಗಳ ನಂತರ ಆಡಿಸಲಾಗುವುದು.

ರಣಜಿ ಋತುವಿನ ಪಂದ್ಯಗಳು ನಡೆಯುವ ಅವಧಿಯಲ್ಲಿ ದೇಶದ ಕೆಲವು ಭಾಗಗಳಲ್ಲಿ ಪ್ರತಿಕೂಲ ವಾತಾವರಣದ ಸಮಸ್ಯೆ ಇರುತ್ತದೆ. ಅದರಿಂದ ತಪ್ಪಿಸಿಕೊಳ್ಳಲು ಈ ಮಾದರಿಯ ಬಗ್ಗೆ ಚಿಂತನೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. 'ಇದಲ್ಲದೇ ಪಂದ್ಯಗಳ ನಡುವಿನ ದಿನಗಳನ್ನು ಹೆಚ್ಚಿಸುವ-ಕುರಿತು ಯೋಚಿಸಲಾಗಿದೆ. ಇದರಿಂದ ಆಟ ಗಾರರು ತಮ್ಮ ಫಿಟ್‌ನೆಸ್ ನಿರ್ವಹಿಸಿಕೊಳ್ಳಲು ನೆರವಾಗಲಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ. ಹೋದ ವರ್ಷ ಪಂದ್ಯದಿಂದ ಪಂದ್ಯಕ್ಕೆ ಮೂರು ದಿನಗಳ ಕಾಲಾವಕಾಶ ಮಾತ್ರ ನೀಡಲಾಗಿತ್ತು. ಅದರಿಂದಾಗಿ ಪ್ರಯಾಣ ಮತ್ತು ಅಭ್ಯಾಸದಲ್ಲಿ ಆಟಗಾರರು ಬಹಳಷ್ಟು ತೊಂದರೆ ಅನುಭವಿಸಿದ್ದರು.

2036ರ ಒಲಿಂಪಿಕ್ ಕೂಟದ ಬಿಡ್: ಅನುರಾಗ್ ಠಾಕೂರ್

'ಪೈಪೋಟಿ ಎದುರಿಸಲು ಸನ್ನದ್ಧ'

ಅನುರಾಗ್ ಠಾಕೂರ್

ಹಮೀರ್‌ಪುರ್ (ಪಿಟಿಐ); 2036ರ ಒಲಿಂಪಿಕ್ ಕೂಟದ ಬಿಡ್ ಪಡೆಯುವಲ್ಲಿ ಭಾರತದ ಸಾಧ್ಯತೆಗಳ ಬಗ್ಗೆ ವಿಶ್ವಾಸ ವ್ಯ-ಕ್ತಪಡಿಸಿದ ಕ್ರೀಡಾ ಸಚಿವ ಅನುರಾಗ್ ಠಾಕೂರ್, ಬೇರೆ ದೇಶಗಳ ಪೈಪೋಟಿಯನ್ನು ಎದುರಿಸಲು ಸನ್ನದ್ಧರಾಗಿದ್ದೇವೆ ಎಂದು ಹೇಳಿದ್ದಾರೆ.

ಅಂತರರಾಷ್ಟ್ರೀಯ ಒಲಿಂಪಿಕ್ ಕಮಿಟಿ (ಐಒಸಿ) ಮುಂದಿನ ವರ್ಷ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡ-ಲಿರುವುದರಿಂದ ಕ್ರೀಡಾಕೂಟದ ಆತಿಥ್ಯವನ್ನು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಭವಿಷ್ಯದ ಆತಿಥ್ಯ ಆಯೋಗವು 2026 ಅಥವಾ 2027ಕ್ಕಿಂತ ಮೊದಲು ನಿರ್ಧರಿಸು-ತ್ತದೆ.

ಭಾರತದ ಮಹತ್ವಾ-ಕಾಂಕ್ಷೆಯ ಆಸಕ್ತಿಗೆ ಪ್ರಸ್ತುತ ಐಒಸಿ ಮುಖ್ಯಸ್ಥ ಥಾಮಸ್ ಬಾಕ್ ಅವರ ಬೆಂಬಲ ದೊರೆತಿದೆ.

'ನಾವು ಸಂಪೂರ್ಣವಾಗಿ ಸಿದ್ಧರಾಗಿದ್ದೇವೆ. ಪೋಲೆಂಡ್, ಇಂಡೊನೇಷ್ಯಾ, ಮೆಕ್ಸಿಕೊ, ಕತಾರ್ ಮತ್ತು ಸೌದಿ ಅರೇಬಿಯಾದಂತಹ ಹಲವಾರು ದೇಶಗಳು ಸ್ಪರ್ಧೆಯಲ್ಲಿ ಸೇರುವ ಸಾಧ್ಯತೆ ಇರುವುದರಿಂದ ಪೈಪೋಟಿ ಎದುರಿಸಲು ಸನ್ನದ್ದರಾಗಿದ್ದೇವೆ' ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷ ನಮ್ಮ ಬಂಡವಾಳ ವೆಚ್ಚ ₹10 ಲಕ್ಷ ಕೋಟಿಗಳಾಗಿದ್ದ-ರೆ, ಒಂದು ವರ್ಷದ ಹಿಂದೆ ಇದು ₹7.5 ಲಕ್ಷ ಕೋಟಿ. ಈ ವರ್ಷ ಅದು ₹11,11,111 ಕೋಟಿ. ಕ್ರೀಡಾ ಮೂಲ-ಸೌಕರ್ಯಕ್ಕೆ ಕೇವಲ ₹5,000 ಕೋಟಿ. ಇದು ₹20,000 ಕೋಟಿ ತಲುಪಿದರೂ ಮಾಡಬಹುದು' ಎಂದು ಅವರು ವೆಚ್ಚದ ಅಂಶ ಬಗ್ಗೆ ವಿವರಿಸಿದರು.

ಕೇಂದ್ರ ಸರ್ಕಾರ ಸಿದ್ಧತೆ ಪ್ರಾರಂಭಿಸಿದೆ ಮತ್ತು 2030ರ ಯೂತ್ ಒಲಿಂಪಿಕ್ಸ್ ಆತಿಥ್ಯ ಹಕ್ಕುಗಳನ್ನು ಗೆಲ್ಲುವ ಮೂಲಕ ತನ್ನ ವಾದವನ್ನು ಬಲಪಡಿಸಲು ಬಯಸಿದೆ. ಎರಡೂ ಕೂಟಗಳಿಗೂ ಅಹಮದಾಬಾದ್ ಅನ್ನು ಆತಿಥ್ಯ ನಗರವಾಗಿ ಸಿದ್ಧಪಡಿಸುವ ಯೋಜನೆ ನಡೆಯುತ್ತಿವೆ ಎಂದು ತಿಳಿಸಿದರು.

ಕುಸ್ತಿ: ಅಮನ್, ಸುಜಿತ್ ಸೆಮಿಗೆ

ಇಸ್ತಾಂಬುಲ್ (ಪಿಟಿಐ): ಭಾರತದ ಅನುಭವಿ ಕುಸ್ತಿಪಟು ದೀಪಕ್ ಪೂನಿಯಾ ಇಲ್ಲಿ ನಡೆಯುತ್ತಿರುವ ವಿಶ್ವ ಒಲಿಂಪಿಕ್ ಗೇಮ್ಸ್ ಕ್ವಾಲಿಫೈಯರ್‌ನ ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದರು. ಆದರೆ, ಯುವ ಕುಸ್ತಿಪಟುಗಳಾದ ಅಮನ್ ಸೆಹ್ರಾವತ್ ಮತ್ತು ಸುಜಿತ್ ಕಲ್ಕಲ್ ತಮ್ಮ ವಿಭಾಗಗಳಲ್ಲಿ ಸೆಮಿಫೈನಲ್‌ಗೆ ಮುನ್ನಡೆಯುವ ಮೂಲಕ ಪ್ಯಾರಿಸ್ ಕೋಟಾಕ್ಕೆ ಹತ್ತಿರವಾದರು.

ಭಾರತದ ಗ್ರೀಕೊ ರೋಮನ್ ಸ್ಪರ್ಧಿಗಳು ಶುಕ್ರವಾರ ಇಲ್ಲಿ ನಿರಾಸೆ ಮೂಡಿಸಿದ್ದರು. ಪುರುಷರ ವಿಭಾಗದ ಫ್ರೀಸ್ಟೈಲ್ ಸ್ಪರ್ಧೆಗಳು ಶನಿವಾರ ಆರಂಭವಾದವು. ಪ್ಯಾರಿಸ್ ಒಲಿಂಪಿಕ್ಸ್‌ಗೆ ಭಾರತದ ಯಾವುದೇ ಪುರುಷ ಕುಸ್ತಿಪ-ಟುಗಳಿಗೆ ಇನ್ನೂ ಅರ್ಹತೆ ದೊರಕಿಲ್ಲ. ಪ್ಯಾರಿಸ್ ಟಿಕೆಟ್ ಪಡೆಯಲು ಇದು ಕೊನೆಯ ಅವಕಾಶವಾಗಿದೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ದೀಪಕ್ (86 ಕೆಜಿ) ಇಲ್ಲಿ ಮೊದಲ ಸುತ್ತಿನಲ್ಲಿ ಆರಂಭಿಕ ಮುನ್ನಡೆ ಸಾಧಿಸಿದರೂ ನಂತರ 4–6ರಿಂದ ಚೀನಾದ ಜುಶೆನ್ ಲಿನ್ ಅವರಿಗೆ ಮಣಿದರು. ಜುಶೆನ್ ಫೈನಲ್ ತಲುಪಿದ್ದರೆ ರಿಪಿಚೇಜ್ ಮೂಲಕ ಕಂಚಿನ ಪದಕಕ್ಕೆ ಸ್ಪರ್ಧಿಸಲು ದೀಪಕ್‌ಗೆ ಅವಕಾಶ ಸಿಗುತ್ತಿತ್ತು. ಆದರೆ, ಜುಶೆನ್ ಕ್ವಾರ್ಟರ್‌ಫೈನಲ್‌ನಲ್ಲಿ ನಿರ್ಗಮಿಸುವ ಮೂಲಕ ದೀಪಕ್ ಅವರ ಪ್ಯಾರಿಸ್ ಕೋಟಾದ ಕನಸು ಕಮರಿತು.

23 ವರ್ಷದೊಳಗಿನವರ ವಿಶ್ವ ಚಾಂಪಿಯನ್ ಮತ್ತು ಹಿರಿಯ ಏಷ್ಯನ್ ಚಾಂಪಿಯನ್‌ಷಿಪ್ ಪ್ರಶಸ್ತಿ ವಿಜೇತ ಅಮನ್ ನಿರೀಕ್ಷೆಯನ್ನು ಹುಸಿಗೊಳಿಸ-ಲಿಲ್ಲ. ಪುರುಷರ 57 ಕೆಜಿ ವಿಭಾಗದಲ್ಲಿ 20 ವರ್ಷದ ಅವರು ಉಕ್ರೇನ್‌ನ ಆ್ಯಂಡ್ರಿ ಯಾಟ್ಸೆಂಕೊ ವಿರುದ್ಧ ಮೇಲುಗೈ ಸಾಧಿಸಿದರು. ಎದುರಾಳಿಗೆ ಒಂದೂ ಅಂಕ ಬಿಟ್ಟು ಕೊಡದೆ ತಾಂತ್ರಿಕ ಆಧಾರದಲ್ಲಿ ಗೆದ್ದರು. ಅದಕ್ಕೂ ಮೊದಲು 10-4 ಅಂತರದಲ್ಲಿ ಬಲ್ಗೇರಿಯಾದ ಜಾರ್ಜಿ ವ್ಯಾಲೆಂಟಿನೋವ್ ಅವರನ್ನು ಮಣಿಸಿದರು. ಅವರು ನಾಲ್ಕರ ಘಟ್ಟದ ಪಂದ್ಯದಲ್ಲಿ ಉತ್ತರ ಕೊರಿಯಾದ ಚೊಂಗ್ಸಾಂಗ್ ಹಾನ್ ಅವರೊಂದಿಗೆ ಹೋರಾಡಲಿದ್ದಾರೆ.

ಅಮನ್

65 ಕೆಜಿ ವಿಭಾಗದಲ್ಲಿ ಸುಜಿತ್ 3–2ರಿಂದ ಉಜ್ಬೇಕಿಸ್ತಾನದ ಉಮಿಡ್ಜಾನ್ ಜಲೋಲೋವ್ ವಿರುದ್ಧ ಗೆದ್ದರು. ನಂತರದಲ್ಲಿ ಕೊರಿಯಾದ ಜುನ್ಸಿಕ್ ಯುನ್ ವಿರುದ್ಧ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಗೆದ್ದರು. ಅವರು ಮುಂದಿನ ಸುತ್ತಿನ ಪಂದ್ಯದಲ್ಲಿ ಏಷ್ಯನ್ ಗೇಮ್ಸ್ ಚಾಂಪಿಯನ್ ಮಂಗೋಲಿಯಾದ ತುಲ್ಗಾ ತುಮುರ್ ಓಚಿರ್ ವಿರುದ್ಧ ಸೆಣಸಲಿದ್ದಾರೆ.

74 ಕೆ.ಜಿ ವಿಭಾಗದಲ್ಲಿ ಜೈದೀಪ್ ಅಹ್ಲಾವತ್ ಅವರು 1-3ರ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 5–3ರಿಂದ ಮೊಲ್ಡೋವಾದ ವಾಸಿಲೆ ಡೈಕಾನ್ ವಿರುದ್ಧ ಜಯಿಸಿದರು. ನಂತರದ ಪಂದ್ಯದಲ್ಲಿ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಆಸ್ಟ್ರಿಯಾದ ಸೈಮನ್ ಮಾರ್ಚ್ಲ್ ಅವರನ್ನು ಮಣಿಸಿದರು. ಆದರೆ, ಕ್ವಾರ್ಟರ್ ಫೈನಲ್‌ನಲ್ಲಿ 0–3ರಿಂದ ಸ್ಲೋವಾಕಿಯಾದ ತೈಮುರಾಜ್ ಸಲ್ಕಜಾನೋವ್ ಅವರಿಗೆ ಶರಣಾದರು.

ಬ್ಯಾಡ್ಮಿಂಟನ್; ರುದ್ರ ಸಾಹಿ, ಆದಿತ್ಯ, ಸ್ನೇಹಾಗೆ ಗೆಲುವು

ಕ್ವಾರ್ಟರ್‌ಗೆ ರ‍್ಯಾಂಕಿಂಗ್ ಆಟಗಾರರು

ಪ್ರಜಾವಾಣಿ ವಾರ್ತೆ

ಮಂಗಳೂರು: ರಾಜ್ಯ ರ‍್ಯಾಂಕಿಂಗ್ ಆಟಗಾರರ ಪಟ್ಟಿಯಲ್ಲಿರುವ ರುದ್ರ ಶಾಹಿ, ಆದಿತ್ಯ ದಿವಾಕರ್ ಮತ್ತು ಹೇಮಂತ್ ಗೌಡ ಅವರು ಮಂಗಳಾ ಬ್ಯಾಡ್ಮಿಂಟನ್ ಸಂಸ್ಥೆ ಆಶ್ರಯದ ಮಂಗಳಾ ಕಪ್ ರಾಷ್ಟ್ರೀಯ ಮುಕ್ತ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ನಗರದ ಯು.ಎಸ್.ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲೂ ರ‍್ಯಾಂಕಿಂಗ್ ಆಟಗಾರ್ತಿಯರಾದ ಸ್ನೇಹಾ ಎಸ್ ಮತ್ತು ಪ್ರಾಚಿತಾ ಪಿ ಎಂಟರ ಘಟ್ಟ ತಲುಪಿದರು. ರಾಜ್ಯದ ಅಗ್ರ ರ‍್ಯಾಂಕಿಂಗ್ ಆಟಗಾರ್ತಿ ಗ್ಲೋರಿಯಾ ಆಠವಳೆ ಗೈರಾದ ಕಾರಣ ಬಿಂದುಶ್ರೀ ವಾಕ್ ಓವರ್ ಮೂಲಕ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇರಿಸಿದರು.

ರಾಜ್ಯ ರ‍್ಯಾಂಕಿಂಗ್ ಪಟ್ಟಿಯ ಐದನೇ ಸ್ಥಾನದಲ್ಲಿರುವ ಮೈಸೂರು ಆರ್‌ಬಿಎಯ ರುದ್ರಸಾಹಿ, ಎಡಬ್ಲ್ಯು-ಎಸ್‌ಬಿಯ ಗುರುಗುಹನ್ ವಿರುದ್ಧ 21–13, 12–21, 21–17ರಲ್ಲಿ ಜಯ ಸಾಧಿಸಿದರು. ಎಎಸ್‌ಡಬ್ಲ್ಯುಬಿಯ ಆದಿತ್ಯ ದಿವಾಕರ್ ಬೆಂಗಳೂರಿನ ವಿಶಾಲ್ ಮಹರ್ ಅವರನ್ನು 14–21, 21–11, 21–17ರಲ್ಲಿ ಮಣಿಸಿದರು. ಬೆಂಗಳೂರಿನ ಅರ‍್ರೈಸ್ ಅಕಾಡೆಮಿಯ ಹೇಮಂತ್ ಗೌಡ, ವೆಂಕೀಸ್ ಟ್ರೇನಿಂಗ್ ಸೆಂಟರ್‌ನ ಶ್ರೇಯಶ್ವಂತ್ ವಿರುದ್ಧ 22–10, 20–22, 21–19ರಲ್ಲಿ ಜಯ ಸಾಧಿಸಿದರು.

ಬೆಂಗಳೂರಿನ ಅರ‍್ರೈಸ್ ಬ್ಯಾಡ್ಮಿಂಟನ್ ಅಕಾಡೆಮಿಯ ಅಂಜಲಿ ಮತ್ತು ಕನಕ್ ಜೋಡಿ ಪ್ರಜಾವಾಣಿ ಚಿತ್ರ /ಫಕ್ರುದ್ದೀನ್ ಎಚ್

ಮಹಿಳೆಯರ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿರುವ ಬೆಂಗಳೂರಿನ ಸೆಲೆನೈಟ್ ಸ್ಪೋರ್ಟ್ಸ್ ಅಕಾಡೆಮಿಯ ಸ್ನೇಹಾ ಎಸ್ 21–10, 8–21, 21–14ರಲ್ಲಿ ಗ್ಲೋಬಲ್ ಬ್ಯಾಡ್ಮಿಂಟನ್‌ನ ಟ್ರಿವಿಯಾ ವೇಗಸ್ ವಿರುದ್ಧ ಗೆದ್ದರು. ಬೆಂಗಳೂರಿನ ವೈಪಿಬಿಎಯ ಪ್ರಾಚಿತಾ ಪಿ 21–6, 21–16ರಲ್ಲಿ ಬೆಂಗಳೂರಿನ ಸಾನಿಯಾ ಬಾಬುರನ್ನು ಮಣಿಸಿದರು.

16ರ ಘಟ್ಟದ ಇತರ ಫಲಿತಾಂಶಗಳು: ಪುರುಷರ ಸಿಂಗಲ್ಸ್: ಅರ‍್ರೈಸ್‌ನ ನಿಖಿಲ್ ಶ್ಯಾಮ್‌ಗೆ ವೆಂಕೀಸ್ ಅಕಾಡೆಮಿಯ ಗಿರೀಶ್ ವೆಂಕಟ್ ವಿರುದ್ಧ 21–17, 21–11ರಲ್ಲಿ ಜಯ. ಮಂಗಳೂರಿನ ಸಹರ್ಷ ಪ್ರಭುಗೆ ಶಿವಮೊಗ್ಗದ ಅಭಿಷೇಕ್ ವಿರುದ್ಧ 25–27, 21–3, 21–19ರಲ್ಲಿ, ವೈಪಿಬಿಎಯ ರೋಹಿತ್‌ಗೆ ಅರ‍್ರೈಸ್‌ನ ಋಷಿಕೇಶ್ ವಿರುದ್ಧ 24–22, 21–11ರಲ್ಲಿ, ಎಡಬ್ಲ್ಯುಎ-ಸ್‌ಬಿಯ ಆದಿತ್ಯನ್‌ಗೆ ಆರ್‌ಬಿಎಯ ನಿಶಾಂತ್ ವಿರುದ್ಧ 19–21, 21–8, 21–13ರಲ್ಲಿ, ಎಲ್‌ಎನ್‌ಬಿಎಯ ಶ್ರೀವರ್ಷನ್‌ಗೆ ಎಡಬ್ಲ್ಯುಎಸ್‌ಬಿಯ ಹಿಮಾಂಶು ದೇಸಾಯಿ ವಿರುದ್ಧ 21–13, 21–16ರಲ್ಲಿ ಗೆಲುವು.

ಮಹಿಳೆಯರ ಸಿಂಗಲ್ಸ್: ಸೆಲೆನೈಟ್‌ನ ಅನ್ವಿತಾ ವಿಜಯ್‌ಗೆ ಬೆಂಗಳೂರು ನಿಸರ್ಗದ ತನ್ಮಯ ಶಂಕರ್ ವಿರುದ್ಧ 21–13, 21–15ರಲ್ಲಿ, ಅರ‍್ರೈಸ್‌ನ ಪ್ರೇರಣಾ ನೀಲೂರಿಗೆ ಉಡುಪಿಯ ರಕ್ಷಿತಾ ಶೇಟ್ ವಿರುದ್ಧ 21–14, 21–17ರಲ್ಲಿ, ಆರ್‌ಆರ್‌ಬಿಎಯ ಕನಕ ಕಲಾಕೋಟಿಗೆ ಬೆಂಗಳೂರು ಷಟ್ಲರ್ಸ್ ಅಲ್ಲೆಯ ಸಹನಾ ವಿರುದ್ಧ 19–21, 23–21, 21–15ರಲ್ಲಿ, ಸಮರ್ಥ್ ಸ್ಕೂಲ್‌ನ ಕೀರ್ತಿ ಲಕ್ಷ್ಮಿಗೆ ರಾಣೆಬೆನ್ನೂರಿನ ಐಶ್ವರ್ಯಾ ಅಗಡಿ ವಿರುದ್ಧ 21–12, 21–13ರಲ್ಲಿ, ಅರ‍್ರೈಸ್‌ನ ಅಖಿಲಾ ಆನಂದ್‌ಗೆ ಎಲ್‌ಎಬ್‌ಬಿಯ ನೀತಿ ವಿರುದ್ಧ 22–20, 21–13ರಲ್ಲಿ ಜಯ.

ನಾವು... ಎಚ್ಚರದಿಂದ ಗಮನಿಸಬೇಕು 11

ಹೆಗ್ಗೋಡು ಹುಟ್ಟಿದ ಬಗೆ... 12

ಬಿಸಿಲ ಸಂಗಡ ಬದುಕು... 13

ಆಧುನಿಕತೆಗೆ ಮುಖಾಮುಖಿಯಾಗಿರುವ ಸೋಲಿಗರ ಈಗಿನ ತಲೆಮಾರು ತಮ್ಮ ಭಾಷೆ, ಸಂಸ್ಕೃತಿ, ಕಾಡಿನ ಜ್ಞಾನವನ್ನು ನಿಧಾನವಾಗಿ ಕಳೆದುಕೊಳ್ಳುತ್ತಿದೆ. ಇದನ್ನು ಅರಿತಿರುವ ಇದೇ ಸಮುದಾಯದ ಯುವಕರು 'ಆದಿ' ಯೋಜನೆ ಮೂಲಕ ಅವುಗಳನ್ನು ಉಳಿಸಿಕೊಳ್ಳಲು ಮುಂದಾಗಿದ್ದಾರೆ.

ಆದಿ ಸೋಲಿಗ ಜ್ಞಾನ ಹಂಚುವ ಹಾದಿ

ಸೂರ್ಯನಾರಾಯಣ ವಿ.

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟದ ಕಾಡಿನಹಾದಿಯಲ್ಲಿ ಹತ್ತು ಹದಿನೈದು ಮಕ್ಕಳು ಹಿರಿಯರ ಮಾರ್ಗದರ್ಶನದಲ್ಲಿ ಗಿಡ ಮರಗಳನ್ನು ಗುರುತಿಸುವ, ಅರಣ್ಯದ ಬಗ್ಗೆ ತಿಳಿಯುವ ಪ್ರಯತ್ನ ಮಾಡುತ್ತಿದ್ದಾರೆ. ಈ ಮಕ್ಕಳು ನಗರ ಪ್ರದೇಶದವರು ಎಂದುಕೊಳ್ಳಬೇಡಿ. ಇವರು ಸ್ಥಳೀಯ ಸೋಲಿಗರ ಮಕ್ಕಳು, ಅಂದರೆ 'ಕಾಡಿನ ಮಕ್ಕಳು'!

ಆಧುನಿಕತೆ, ಶಿಕ್ಷಣ, ಅರಣ್ಯ ಸಂರಕ್ಷಣೆ ಕಾನೂನು ಸೋಲಿಗರ ಹೊಸ ತಲೆಮಾರನ್ನು ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡಿದರೂ, ಸಮುದಾಯದ ಜ್ಞಾನ, ಸಂಸ್ಕೃತಿ, ಪರಂಪರೆ, ಭಾಷೆಯನ್ನು ಮರೆಯುವಂತೆ ಮಾಡಿದೆ. ಹಳೆಯ ಮತ್ತು ಹೊಸಪೀಳಿಗೆಯ ನಡುವೆ ಕಾಡಿನೊಳಗೆ ಒಡನಾಟ ಕಡಿಮೆಯಾಗಿ ಜ್ಞಾನದ ಕೊಂಡಿಗಳು ಒಂದೊಂದೇ ಕಳಚಿಕೊಳ್ಳುತ್ತಿವೆ. ಈ ಕೊಂಡಿಗಳನ್ನು ಮರುಜೋಡಣೆ ಮಾಡುವ ಪ್ರಯತ್ನ ಬಿಳಿಗಿರಿರಂಗನಬೆಟ್ಟದಲ್ಲಿ 'ಆದಿ' ಯೋಜನೆ ಅಡಿಯಲ್ಲಿ ನಡೆಯುತ್ತಿದೆ.

'ಆದಿ' ಎಂದರೆ ಮೂಲ. ಸೋಲಿಗರ ಭಾಷೆಯಲ್ಲಿ ಹಾದಿ ಅಥವಾ ದಾರಿ ಎಂದರ್ಥ. ಕಾಡಿನ ಹಾದಿಯಲ್ಲಿ ಕಳೆದು ಹೋದ ಜ್ಞಾನವನ್ನು ಆದಿವಾಸಿ ಯುವ ಜನರಿಗೆ ಮತ್ತೆ ತಿಳಿಸುವ ಮೂಲಕ ಯುವಪೀಳಿಗೆಯನ್ನು ಕಾಡಿನ ಜ್ಞಾನಿಗಳನ್ನಾಗಿ ಮಾಡುವ ಮತ್ತು ಅಪರೂಪದ ಗಿರಿಜನರ ಪರಂಪರೆಯನ್ನು ಉಳಿಸಿ ಬೆಳೆಸುವ ಪ್ರಯತ್ನ ಇದಾಗಿದೆ.

ವಿಶಿಷ್ಟ ಸಂಸ್ಕೃತಿ ಭಾಷೆ

ಸೋಲಿಗರು ಎಂದರೆ ಪಶ್ಚಿಮಘಟ್ಟ ಮತ್ತು ಪೂರ್ವಘಟ್ಟಗಳನ್ನು ಬೆಸೆಯುವ ನೀಲಗಿರಿ ಜೈವಿಕ ಮಂಡಲ ವ್ಯಾಪ್ತಿಯಲ್ಲಿ ನೆಲೆಸಿರುವ ವಿಶಿಷ್ಟ ಆದಿವಾಸಿ ಸಮುದಾಯ (ಸೋಲೆಗ ಎಂದೂ ಕರೆಯುತ್ತಾರೆ). ತಮಿಳುನಾಡಿನ ನೀಲಗಿರಿ, ಈರೋಡ್ ಜಿಲ್ಲೆಗಳು, ರಾಜ್ಯದ ಚಾಮರಾಜನಗರ, ಮೈಸೂರು ಜಿಲ್ಲೆಗಳಲ್ಲಿರುವ ಸಂರಕ್ಷಿತ ಅರಣ್ಯ ಪ್ರದೇಶಗಳು, ಮಂಡ್ಯ ಮತ್ತು ಕೊಡಗು ಜಿಲ್ಲೆಗಳ ಕೆಲವು ಪ್ರದೇಶಗಳಲ್ಲೂ ಇವರ ಆವಾಸ ಹರಡಿದೆ.

ಚಾಮರಾಜನಗರ ಜಿಲ್ಲೆಯಲ್ಲೇ 35 ಸಾವಿರದಷ್ಟು ಸೋಲಿಗರಿದ್ದಾರೆ. ಅದರಲ್ಲೂ ಬಿಳಿಗಿರಿರಂಗನಾಥಸ್ವಾಮಿ ದೇವಾಲಯದ (ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿರುವ ಆರುಕುಲ ಸೋಲಿಗರ ಭಾಷೆ, ಆಚಾರ, ವಿಚಾರ ಬೇರೆಯವರಿಗಿಂತ ಭಿನ್ನ. ಉಳಿದೆಲ್ಲ ಪ್ರದೇಶಗಳ ಸೋಲಿಗರು ಕನ್ನಡ ಭಾಷೆಯನ್ನೇ ಮಾತನಾಡಿದರೆ, ಇಲ್ಲಿರುವ 15 ಸಾವಿರದಷ್ಟು ಸೋಲಿಗರು ಕನ್ನಡ, ತಮಿಳು, ಸಂಸ್ಕೃತ ಮಿಶ್ರಿತ ಭಾಷೆ ಮಾತನಾಡುತ್ತಾರೆ.

ಬಿಳಿಗಿರಿರಂಗನಬೆಟ್ಟದಲ್ಲಿ ಸೋಲಿಗ ಮಕ್ಕಳಿಗೆ ಕಾಡಿನ ಜ್ಞಾನದ ಪಾಠ

ಕಳೆದು ಹೋದ ಜ್ಞಾನದ ಹಾದಿ

ಆಧುನಿಕತೆಯತ್ತ ಮುಖ ಮಾಡಿರುವ ಸಮುದಾಯದ ಯುವಜನರು ತಮ್ಮ ವಿಶಿಷ್ಟ ಸಂಸ್ಕೃತಿ, ಭಾಷೆಯಿಂದ ದೂರವಾಗುತ್ತಿದ್ದಾರೆ. ಅರಣ್ಯ ಸಂರಕ್ಷಣೆ ಕಾಯ್ದೆ ಜಾರಿಯಾದ ನಂತರ ಅರಣ್ಯದ ಜೊತೆ ಸೋಲಿಗರ ನಂಟು ಕಡಿಮೆಯಾಗಿದೆ. ಇದರಿಂದಾಗಿ ಅರಣ್ಯದ ಬಗ್ಗೆ ಯುವಪೀಳಿಗೆಗೆ ಹೆಚ್ಚಿನ ಮಾಹಿತಿ ಇಲ್ಲ. ಅದನ್ನು ಕಲಿಯುವ ಆಸಕ್ತಿಯನ್ನೂ ತೋರಿಸುತ್ತಿಲ್ಲ.

ತಮ್ಮ ವೈವಿಧ್ಯಮಯ ಸಂಸ್ಕೃತಿ, ಭಾಷೆಯನ್ನು ಉಳಿಸಿ ಬೆಳೆಸುವ ಅಗತ್ಯವನ್ನು ಮನಗಂಡಿರುವ ಸ್ಥಳೀಯ ವಿದ್ಯಾವಂತ ಸೋಲಿಗರು, ಹತ್ತು ಮಂದಿಯ ತಂಡ ಕಟ್ಟಿಕೊಂಡು ಸ್ವಯಂ ಸೇವಾ ಸಂಸ್ಥೆಗಳು, ಭಾಷಾ ವಿಜ್ಞಾನಿಗಳ ನೆರವಿನೊಂದಿಗೆ 'ಆದಿ' ಎಂಬ ಕಾರ್ಯಕ್ರಮ ರೂಪಿಸಿದ್ದಾರೆ. ಸೋಲಿಗರ ಜ್ಞಾನವನ್ನು ಪಸರಿಸಲು ಹೊಸ ಹಾದಿ ಹುಡುಕುವ ಈ ಯತ್ನಕ್ಕೆ ಸ್ವಯಂ ಸೇವಾ ಸಂಸ್ಥೆಗಳಾದ ಪುನರ್ಚಿತ್ ಮತ್ತು ರೈನ್‌ಮ್ಯಾಟರ್ ಫೌಂಡೇಷನ್ ಸಹಯೋಗ ನೀಡಿವೆ. ಸ್ಥಳೀಯ ಸೋಲಿಗ ಸಂಘಟನೆಗಳು ಇದಕ್ಕೆ ಕೈಜೋಡಿಸಿವೆ.

'ಮೊದಲೆಲ್ಲ ಸೋಲಿಗರ ಜ್ಞಾನವು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಕಾಡಿನ ಹಾದಿಗಳಲ್ಲಿ ಹಸ್ತಾಂತರವಾಗುತ್ತಿತ್ತು. ಹಿರಿಯರು ಮಕ್ಕಳನ್ನು ಕರೆದುಕೊಂಡು ಅರಣ್ಯದಲ್ಲಿ ಸುತ್ತಾಡುವಾಗ ಮೌಖಿಕವಾಗಿಯೇ ತಮ್ಮಲ್ಲಿರುವ ಎಲ್ಲ ಜ್ಞಾನಗಳನ್ನು ಧಾರೆ ಎರೆಯುತ್ತಿದ್ದರು. ಈಗ ಕಾಡಿನೊಳಗೆ ಆದಿವಾಸಿಗಳು ಸುತ್ತಾಡುವುದು ಕಡಿಮೆಯಾಗಿದೆ. ಆಧುನಿಕ ಜಗತ್ತಿಗೆ ತೆರೆದುಕೊಂಡಿರುವ ಯುವ ಜನಾಂಗ, ಹಿರಿಯರೊಂದಿಗೆ ಮೊದಲಿನಷ್ಟು ಒಡನಾಡುತ್ತಿಲ್ಲ. ಹೀಗಾಗಿ, ಹಿರಿಯರ ಜ್ಞಾನ ಹೊಸ ಪೀಳಿಗೆಗೆ ತಲುಪುತ್ತಿಲ್ಲ' ಎಂದು ಹೇಳುತ್ತಾರೆ ಭಾಷಾ ವಿಜ್ಞಾನಿ ಹಾಗೂ ಸೋಲಿಗರ ಭಾಷೆ, ಸಂಸ್ಕೃತಿ ಕುರಿತಾಗಿ ಹಲವು ವರ್ಷಗಳಿಂದ ಅಧ್ಯಯನ ನಡೆಸುತ್ತಿರುವ ಸಮಿರಾ ಅಗ್ನಿಹೋತ್ರಿ.

'ಈಗ ಸೋಲಿಗರ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ, ಓದಿದವರಿಗೆ ಕೆಲಸ ಸಿಗುತ್ತಿಲ್ಲ. ಕೆಲಸದ ಸ್ಥಳಗಳಲ್ಲಿ ಅವರ ಭಿನ್ನ ಭಾಷಾ ಶೈಲಿ ಹಾಗೂ ಇನ್ನಿತರ ಕಾರಣಗಳಿಗೆ ತಾರತಮ್ಯಕ್ಕೂ ಒಳಗಾಗುತ್ತಿದ್ದಾರೆ. ಅತ್ತ ಕೆಲಸವೂ ಸಿಗದೆ, ಇತ್ತ ಹಾಡಿಗಳಲ್ಲಿ ಇರಲೂ ಆಗದೆ ತೊಂದರೆ ಅನುಭವಿಸುತ್ತಿದ್ದಾರೆ. ಸಾಕಷ್ಟು ಸವಾಲುಗಳ ನಡುವೆಯೇ ಕಾಡಿನ ಜ್ಞಾನವನ್ನು ಪುನರುತ್ಥಾನಗೊಳಿಸಲು ಸಮುದಾಯದವರೇ ಮುಂದಾಗಿದ್ದಾರೆ. ಅವರಿಗೆ ನಾವು ಸಹಾಯ ಮಾಡುತ್ತಿದ್ದೇವೆ' ಎಂದು 'ಆದಿ' ಕಾರ್ಯಕ್ರಮದ ಸಂಚಾಲಕರೂ ಆಗಿರುವ ಸಮಿರಾ ಹೇಳುತ್ತಾರೆ. ಈ ಕಾರ್ಯಕ್ರಮದ ಅಡಿಯಲ್ಲಿ ಸೋಲಿಗ ಭಾಷೆ, ಆಚಾರ-ವಿಚಾರ ವೈವಿಧ್ಯ ಉಳಿಸುವ ಹಲವು ಪ್ರಯತ್ನಗಳು ನಡೆಯುತ್ತಿವೆ.

ಅಕ್ಷರಮಾಲೆ ಕೋಷ್ಟಕ

ಕನ್ನಡ ಅಕ್ಷರಮಾಲೆಯಂತೆ, ಸೋಲಿಗ ಭಾಷೆಯನ್ನು ಕೇಂದ್ರೀಕರಿಸಿ ಅಕ್ಷರ ಮಾಲೆಯ ಕೋಷ್ಟಕವನ್ನು (ಚಾರ್ಟ್) 'ಆದಿ' ತಂಡ ಸಿದ್ಧಪಡಿಸಿದೆ. ಸೋಲಿಗ ಭಾಷೆಗೆ ಲಿಪಿ ಇಲ್ಲದಿರುವುದರಿಂದ ಕನ್ನಡದಲ್ಲೇ ಸ್ವರ, ವ್ಯಂಜನ ಅಕ್ಷರಗಳನ್ನು ಬರೆದು, ಅದಕ್ಕೆ ಸೋಲಿಗ ಭಾಷೆಯಲ್ಲಿ ಬಳಕೆಯಲ್ಲಿರುವ ಪದಗಳನ್ನು ಉದಾಹರಣೆಯಾಗಿ ನೀಡಲಾಗಿದೆ (ಉದಾ: ಅ-ಅಳ್ಳುಗ, ಆ-ಆಲುಪ್ಪೆ ಮರ ಇತ್ಯಾದಿ).

ಈ ಅಕ್ಷರಮಾಲೆಯನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ವಹಿಸುವ ಬುಡಕಟ್ಟು ಆಶ್ರಮ ಶಾಲೆಗಳಿಗೆ ನೀಡಲಾಗಿದೆ. ಅಲ್ಲಿ ಗಿರಿಜನರ ಮಕ್ಕಳಿಗೆ ಓದಿಸುವ ಪ್ರಯತ್ನ ನಡೆಯುತ್ತಿದೆ. ಇದು ಮಾತ್ರವಲ್ಲದೇ 'ಆದಿ' ಕಾರ್ಯಕರ್ತರು ವಾರದಲ್ಲಿ ಒಂದು ದಿನ, ರಜಾ ದಿನಗಳಲ್ಲಿ ಮಕ್ಕಳನ್ನು ಕೂರಿಸಿಕೊಂಡು ಅವರಿಗೆ ತಿಳಿ ಹೇಳುವ ಕೆಲಸ ಮಾಡುತ್ತಿದ್ದಾರೆ.

'ಚಿಕ್ಕ ವಯಸ್ಸಿನ ಮಕ್ಕಳಿಗೆ ಅಕ್ಷರಮಾಲೆ ಮಾದರಿಯಲ್ಲಿ ಸೋಲಿಗ ಪದಗಳನ್ನು ಹೇಳಿಕೊಡಲಾಗುತ್ತಿದೆ. ಪದಗಳನ್ನು ಚಿತ್ರಗಳ, ಪ್ರಾತ್ಯಕ್ಷಿಕೆ, ಸೋಲಿಗ ಹಾಡುಗಳು, ಕಥೆಗಳ ಮೂಲಕ ವಿವರಿಸಲಾಗುತ್ತದೆ. ಕಾಡಿನ ನಡಿಗೆ, ಪ್ರಶ್ನೋತ್ತರ ಸೇರಿದಂತೆ ವಿವಿಧ ಕಾರ್ಯಕ್ರಮಗಳ ಮೂಲಕ ತಿಳಿಸಿಕೊಡಲಾಗುತ್ತಿದೆ' ಎಂದು ಹೇಳುತ್ತಾರೆ ಕಾರ್ಯಕ್ರಮದ ಕ್ಷೇತ್ರ ಸಂಚಾಲಕಿ, ಸಮುದಾಯದವರೇ ಆದ ಲಕ್ಷ್ಮಿ.

12ನೇ ಪುಟಕ್ಕೆ...

ಸೋಲಿಗ–ಇಂಗ್ಲಿಷ್ ನಿಘಂಟು

ಸೋಲಿಗರು, ಅವರ ಭಾಷೆಯ ಮೇಲೆ ಅಧ್ಯಯನ ನಡೆಸಿರುವ ಮ್ಯಾನ್ಮಾರ್‌ನ ಭಾಷಾ ಸಂಶೋಧಕ ಆಂಗ್ ಸಿ ಅವರು ಸೋಲಿಗ–ಇಂಗ್ಲಿಷ್ ನಿಘಂಟನ್ನು ಸಿದ್ಧಪಡಿಸಿದ್ದಾರೆ. 455 ಪುಟಗಳ ಈ ನಿಘಂಟಿನಲ್ಲಿ ಬಿಳಿಗಿರಿರಂಗನಬೆಟ್ಟದ ಸೋಲಿಗರು ಬಳಸುವ 1,500ಕ್ಕೂ ಹೆಚ್ಚು ಪದಗಳಿವೆ.

ಆಸ್ಟ್ರೇಲಿಯಾದಲ್ಲಿದ್ದುಕೊಂಡು ಸಂಶೋಧನೆ ಮಾಡುವ ಆಂಗ್ ಸಿ ಅವರು ಹಲವು ವರ್ಷಗಳಿಂದ ಬಿಳಿಗಿರಿರಂಗನಬೆಟ್ಟದ ವ್ಯಾಪ್ತಿಯಲ್ಲಿರುವ ಸೋಲಿಗರೊಂದಿಗೆ ನಂಟು ಹೊಂದಿದ್ದಾರೆ. ಸದ್ಯ, ಸೋಲಿಗ–ಕನ್ನಡ ನಿಘಂಟು ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

'ಆದಿ' ಕಾರ್ಯಕ್ರಮದ ಸಲಹೆಗಾರರೂ ಆಗಿರುವ ಆಂಗ್ ಸಿ ಹೇಳುವುದಿಷ್ಟು: 'ಸೋಲಿಗ ಭಾಷೆ, ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಕಾರ್ಯಕ್ರಮ. ಇದನ್ನು ಹೊರಗಡೆಯವರು ಮಾಡುತ್ತಿಲ್ಲ. ಸ್ವತಃ ಸಮುದಾಯವೇ ಮಾಡುತ್ತಿರುವುದು ಗಮನಾರ್ಹ ಸಂಗತಿ'.

ಸೋಲಿಗ ಅಕ್ಷರ ಮಾಲೆ ಕೋಷ್ಟಕ

ಪ್ರತಿಕ್ರಿಯೆಗಾಗಿ
bhanuvara@prajavani.co.in

ಬಲು ರುಚಿ ಬಂಡೂರು ಕುರಿ

ಹಳೇ ಮೈಸೂರು ಭಾಗದಲ್ಲಿ ಹೆಚ್ಚಾಗಿರುವ ದೇಸಿ ತಳಿಯಾದ ಬಂಡೂರು ಕುರಿಗಳಿಗೆ ಮಾಂಸದ ದೃಷ್ಟಿಯಿಂದ ಒಳ್ಳೆಯ ಹೆಸರಿದ್ದರೂ ದುಬಾರಿ ಎಂಬ ಹಣೆಪಟ್ಟಿಯೇ ಇದಕ್ಕೆ ಹಿನ್ನಡೆಯಾಗಿದೆ.

ಅಭಿಲಾಷ್ ಎಸ್.ಡಿ.

ಬಂಡೂರು ಕುರಿ ಮಾಂಸದ ರುಚಿ ಬೇರೆ ತಳಿಯ ಕುರಿ, ಟಗರು, ಮೇಕೆಗಳಲ್ಲಿ ಸಿಗುವುದಿಲ್ಲ. ಏಕೆಂದರೆ, ಅವುಗಳಲ್ಲಿ ಕೊಬ್ಬು ಮಾಂಸದಿಂದ ಪ್ರತ್ಯೇಕವಾಗಿದ್ದರೆ ಬಂಡೂರು ಕುರಿಯಲ್ಲಿ ಮಾತ್ರ ಮಾಂಸದ ನಡುವಿನಲ್ಲಿಯೇ ತೆಳುವಾದ ಕೊಬ್ಬಿನ ಎಳೆ ಇರುತ್ತದೆ. ಆದ್ದರಿಂದಲೇ ಬಂಡೂರು ತಳಿ ಕುರಿಗೆ ಭಾರೀ ಡಿಮ್ಯಾಂಡ್.

ಅಂದಹಾಗೆ, ಈ ತಳಿಯ ಕುರಿಗಳಿಗೆ ಬಂಡೂರು ಹೆಸರು ಬರಲು ಕಾರಣವಿದೆ. ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಬಂಡೂರು ಇವುಗಳ ತವರು. ಈ ಕಾರಣಕ್ಕಾಗಿಯೇ ಬಂಡೂರು ಕುರಿ ಎಂದೇ ಪ್ರಸಿದ್ಧಿ ಪಡೆದಿದೆ.

ಗಿಡ್ಡಕಾಲು, ಅಗಲ ದೇಹ, ಕುತ್ತಿಗೆಯಲ್ಲಿ ಗಂಟೆಯಂತಹ ಎರಡು ಕೊಳ್ಳು, ಮೈ ತುಂಬಾ ಸೊಂಪಾಗಿ ಬೆಳೆದ ಕೂದಲು–ಇವುಗಳಿಂದ ಈ ಕುರಿಗಳನ್ನು ಸುಲಭವಾಗಿ ಗುರುತಿಸಬಹುದು. ಮುಂದಿನಿಂದ ಮದುವಣಗಿತ್ತಿಯಂತೆ ಮುದ್ದಾಗಿ ಕಾಣುವ ಈ ಕುರಿಗಳು, ಹಿಂದಿನಿಂದ ನೋಡಿದರೆ ಇಂಗ್ಲಿಷ್ ವರ್ಣಮಾಲೆಯ 'ಯು' ಅಕ್ಷರದ ಉಲ್ಟ ಆಕಾರದಲ್ಲಿ ಕಾಣುತ್ತವೆ. ಮನುಷ್ಯರಿಗೆ ಬಲುಬೇಗ ಒಗ್ಗಿಕೊಳ್ಳುತ್ತವೆ. ಹೀಗಾಗಿ ಇವುಗಳನ್ನು ಸಾಕುವುದು ಸುಲಭ. ನಿತ್ಯ ಹುರುಳಿ, ಜೋಳದಂತಹ ಧಾನ್ಯಗಳು, ಒಣಹಣ್ಣುಗಳು, ಹಾಲಿನಂತಹ ಪೌಷ್ಟಿಕ ಆಹಾರ ನೀಡಿ ಪೊಗದಸ್ತಾಗಿ ಸಾಕುವವರೂ ಇದ್ದಾರೆ.

ಹಾಲು ಕುಡಿಯುವ ಮೂರು ತಿಂಗಳ ಮರಿಗೆ ಕನಿಷ್ಠ ₹12 ರಿಂದ ₹15 ಸಾವಿರ ಬೆಲೆ ಇದ್ದರೆ, 20 ರಿಂದ 25 ಕೆ.ಜಿ. ತೂಗುವ ಕುರಿಗಳಿಗೆ ₹50 ರಿಂದ ₹60 ಸಾವಿರ ಬೆಲೆ ಇದೆ. ದೇವಿಪುರದ ರೈತ ಸಣ್ಣಪ್ಪ, ಬಂಡೂರು ಕುರಿಯೊಂದನ್ನು ₹1.90 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ. ಈ ತಳಿಯ ಕುರಿ ಸಾಕಾಣಿಕೆ ಲಾಭದಾಯಕ. ಆದ್ದರಿಂದ ಬಂಡೂರು ಕುರಿಯನ್ನೇ ಸಾಕುವ ಟ್ರೆಂಡ್ ಹೆಚ್ಚಾಗುತ್ತಿದೆ. ವಿದ್ಯಾವಂತ ಯುವಕರು ಹೆಚ್ಚು ಕುರಿಗಳನ್ನು ಒಟ್ಟಿಗೆ ಸಾಕಲು ಮುಂದಾಗುತ್ತಿರುವುದರಿಂದ ಹುಂಡಿ (ಸಾಕುವ ಜಾಗ) ಸ್ವರೂಪವೂ ಬದಲಾಗುತ್ತಿದೆ. ಆಧುನಿಕತೆಗೆ ತಕ್ಕಂತೆ, ಅಟ್ಟಣಿಗೆಯ ಮೇಲೆ ಸಾಕುವ ಕ್ರಮವನ್ನು ಅನುಸರಿಸಲಾಗುತ್ತಿದೆ. ಗೊಬ್ಬರವೆಲ್ಲ ಕೆಳಗೆ ಬೀಳುವುದರಿಂದ ನಿರ್ವಹಣೆ ಸುಲಭವಾಗಿದೆ. ಗಲೀಜಾಗುವುದು, ರೋಗಗಳು ಬಾರದಂತೆ ತಡೆಯಲು ಇದರಿಂದ ಸಾಧ್ಯ.

ಕೋವಿಡ್ ಕಾಲಘಟ್ಟದಲ್ಲಿ ನಗರ ತೊರೆದು ಊರಿಗೆ ಮರಳಿರುವವರು ಹೈನುಗಾರಿಕೆ, ಮುಖ್ಯವಾಗಿ ಬಂಡೂರಿನ ಬೆನ್ನೇರಿದ್ದಾರೆ. ಬಕ್ರೀದ್ ಹಬ್ಬದ ಸಮಯಕ್ಕಾದರೂ ಮಾರಾಟ ಮಾಡಬಹುದು ಎಂಬ ಭರವಸೆ ಇರುವುದರಿಂದ ಮಂಡ್ಯ ಜಿಲ್ಲೆಯ ಹೆಚ್ಚಿನವರು ಮನೆಯಲ್ಲಿ ಒಂದಾದರೂ ಬಂಡೂರು ಟಗರು ಕಟ್ಟುತ್ತಿದ್ದಾರೆ.

ಈ ತಳಿಯ ಕುರಿಗಳ ಸಾಕಣೆಯನ್ನು ಪ್ರೋತ್ಸಾಹಿಸಲು ಸರ್ಕಾರ ಮುಂದಾಗಿದೆ. ರಾಷ್ಟ್ರೀಯ ಜಾನುವಾರು ಮಿಷನ್ (ಎನ್‌ಎಲ್‌ಎಂ) ಅಡಿಯಲ್ಲಿ, ಯಾವುದೇ ತಳಿಯ ಕುರಿಗಳನ್ನು ಹೊಂದಿರುವವರಿಗೆ ಉಚಿತವಾಗಿ ಬಂಡೂರು ಟಗರು ನೀಡುವ ಹಾಗೂ ಅದರ ಫಲಾನುಭವಿಗಳಿಂದ ಭವಿಷ್ಯದಲ್ಲಿ ಹಣ ಕೊಟ್ಟು ಮರಿಗಳನ್ನು ಖರೀದಿಸುವ ಯೋಜನೆ ಕೈಗೊಂಡಿದೆ. ಮಳವಳ್ಳಿ ತಾಲ್ಲೂಕಿನ ಧನಗೂರಿನಲ್ಲಿರುವ 'ಬಂಡೂರು ಕುರಿ ಸಂವರ್ಧನಾ ಕೇಂದ್ರದ ಮೂಲಕ ₹4,000 ದರದಲ್ಲಿ ಟಗರು ಮರಿಗಳನ್ನು ನೀಡಲಾಗುತ್ತಿದೆ. ಹಸು-ಎಮ್ಮೆಗಳಿಗೆ ಕೃತಕ ಗರ್ಭಧಾರಣೆ ಮಾಡುತ್ತಿರುವಂತೆ ಶುದ್ಧ ಬಂಡೂರು ಟಗರಿನ ವೀರ್ಯ ಸಂಗ್ರಹಿಸಿ, ಕುರಿಗಳಿಗೂ ಕೃತಕ ಗರ್ಭಧಾರಣೆ ಮಾಡಲಾಗುತ್ತಿದೆ.

ದೇಹದ ಆಕಾರ ಅಥವಾ ವರ್ತನೆಯನ್ನು ಗಮನಿಸಿ ಬಂಡೂರು ಕುರಿಯಲ್ಲಿ ಹಲವು ಉಪತಳಿಗಳನ್ನು ರೈತರು ಗುರುತಿಸುತ್ತಾರೆ. ಸಂಕೋಚ ಅಥವಾ ಬೆದರುವ ಕುರಿಗಳಿಗೆ ಹುಚ್ಚು ಕುರಿ ಎನ್ನುತ್ತಾರೆ. ಹಾಗೆಯೇ, ಕಪನಿ, ಕರಗಿ, ದೊಡ್ಡಿ, ಸೀರಿ, ಕೊನ್ನಾರೆ, ಹೊಟ್ಟೆನೋವು.., ಹೀಗೆ ಹಲವನ್ನು ಉಲ್ಲೇಖಿಸುತ್ತಾರೆ. 'ಇವೆಲ್ಲವೂ ಆಯಾ ಪ್ರದೇಶದ ರೈತರು ಇಟ್ಟುಕೊಂಡಿರುವ ಹೆಸರಗಳೇ ಹೊರತು ಯಾವುದೇ ಉಪತಳಿಯನ್ನು ವೈಜ್ಞಾನಿಕವಾಗಿ ಗುರುತಿಸಿಲ್ಲ' ಎಂದು ಬಂಡೂರು ಕುರಿ ಸಂವರ್ಧನಾ ಕೇಂದ್ರದ ಉಪ ನಿರ್ದೇಶಕ ಪಿ.ರಮೇಶ್ ಹೇಳುತ್ತಾರೆ.

ಬರಲಿದೆ ಪ್ಯಾಕೆಟ್ ಮಾಂಸ

ಶುದ್ಧ ಬಂಡೂರು ಮಾಂಸಕ್ಕೆಂದೇ ಪ್ರತ್ಯೇಕ ಮಾರಾಟ ಮಳಿಗೆಗಳು ಅಥವಾ ಕೇಂದ್ರಗಳು ಇಲ್ಲದಿರುವುದು ವ್ಯಾಪಾರಕ್ಕೂ ಹಿನ್ನಡೆಯಾಗಿದೆ.

12ನೇ ಪುಟಕ್ಕೆ...

ಕಿರುಗಾವಲು ಸಂತೆಯಲ್ಲಿ ಮೂರು ತಿಂಗಳ ಬಂಡೂರು ಕುರಿ ಮರಿಗಳು

ಚಿತ್ರಗಳು: ಕೆ.ಟಿ.ಲಿಂಗರಾಜು ತಳಗವಾದಿ

ಖ್ಯಾತ ಕಿರುಗಾವಲು ಸಂತೆ

ಪ್ರತಿ ಶನಿವಾರ ನಡೆಯುವ ತಾಲ್ಲೂಕಿನ ಕಿರುಗಾವಲು ಸಂತೆಯಲ್ಲಿ ಬಂಡೂರು ಕುರಿ ಮಾರಾಟವೇ ಪ್ರಮುಖವಾಗಿರುತ್ತದೆ. ರಾಜ್ಯದ ನಾನಾ ಭಾಗಗಳಿಂದ ಬರುವ ರೈತರು ಕುರಿ ಮತ್ತು ಮೇಕೆಗಳ ಖರೀದಿಗೆ ಮುಗಿಬೀಳುತ್ತಾರೆ. ಇಲ್ಲಿನ ವಾಹಿವಾಟು ಪ್ರತಿವಾರ ₹30 ರಿಂದ ₹40 ಲಕ್ಷಕ್ಕೂ ಅಧಿಕ. ಇಲ್ಲಿಗೆ ಬಂಡೂರು ಕುರಿ ಖರೀದಿಗಾಗಿಯೇ ಬರುವವರು ಹೆಚ್ಚು.

ಕಾಡಿನ ಮಧ್ಯದಲ್ಲಿರುವ ಬನದಲ್ಲಿ ವರ್ಷಕ್ಕೊಮ್ಮೆ ನಡೆಯುವ ಪೂಜೆ

ಪ್ರಜಾವಾಣಿ ಚಿತ್ರ

ಮಲೆನಾಡ ದೇವರ ಬನ ಬಾಂಧವ್ಯದ ವನ

ಕೀರ್ತಿಕುಮಾರಿ ಎಂ.

'ದೈಯದ ಬನದ ಸಾರು ತರ್ರೋ...', 'ಕಡುಬು ಬೆಂದ ನೋಡ್ರೋ...', 'ಕೋಳಿ ಹಿಡ್ಕೊ ಬರ್ರೋ... ಟೈಮ್ ಆಗೋತು'–ಮಲೆನಾಡಿನಲ್ಲಿ ಹರಕೆಯ ದಿನ 'ದೇವರ ಬನ'ದಲ್ಲಿ ಇಂಥ ಮಾತುಗಳದ್ದೇ ಸದ್ದು, ಗದ್ದಲ.

ಊರು ಬಿಟ್ಟು ಉದ್ಯೋಗ ಅರಸಿ ಮಹಾನಗರಗಳಿಗೆ ಹೋದವರು, ಮದುವೆ ಮಾಡಿಕೊಂಡು ಗಂಡನ ಮನೆಗೆ ಸೇರಿದ ಹೆಣ್ಣು ಮಕ್ಕಳು, ಬೇರೆ ಯಾವುದೋ ಕಾರಣಕ್ಕೆ ಬೇರೆ ಊರಿನಲ್ಲಿ ನೆಲೆಸಿದವರು ಹೀಗೆ... ಎಲ್ಲರೂ ವರ್ಷಕ್ಕೆ ಒಮ್ಮೆ 'ಆದಿ ಸ್ಥಳ'ಕ್ಕೆ ಬಂದು ಕುಟುಂಬದ ಆರಾಧ್ಯ ದೈವಕ್ಕೆ ಪೂಜೆ, ಪುನಸ್ಕಾರ ಮಾಡಿ ಹರಕೆ ಒಪ್ಪಿಸುವ ದಿನ ಎಲ್ಲರ ಮೊಗದಲ್ಲಿ ಸಂಭ್ರಮ ಸಡಗರ.

ಹೌದು, ಮಲೆನಾಡಲ್ಲಿ ಈಗ ದೈವದ ಹರಕೆಯ ಕಾಲ. ಪ್ರತಿ ವರ್ಷ ಏಪ್ರಿಲ್ ಆರಂಭದಿಂದ ಜೂನ್ ವರೆಗೆ ದೇವರ ಬನಗಳಲ್ಲಿ ಹರಕೆ ಅಥವಾ ಮಾವುಳಗಳು ನಡೆಯುತ್ತವೆ.

ಇಲ್ಲಿನ ಪ್ರತಿ ಕುಟುಂಬವೂ (ರಕ್ತ ಸಂಬಂಧಿಗಳನ್ನು ಒಳಗೊಂಡ ಹಲವು ಕುಟುಂಬಗಳು) ಒಂದೊಂದು ದೇವರ ಬನ ಅಥವಾ ದೈಯದ ಬನವನ್ನು ಹೊಂದಿರುತ್ತದೆ. ಸಣ್ಣಪುಟ್ಟ ಗಿಡ, ಮರ, ಬಳ್ಳಿಗಳಿಂದ ಹಿಡಿದು ರೆಂಬೆಕೊಂಬೆಗಳನ್ನು ಆ ತುದಿಯಿಂದ ಈ ತುದಿವರೆಗೆ ಚಾಚಿಕೊಂಡ ದೊಡ್ಡ ಗಾತ್ರದ ಮರಗಳನ್ನೂ ಒಳಗೊಂಡ 'ಕಾಡಿನ ಗೂಡು' ಕುಟುಂಬದ ಆರಾಧ್ಯ ದೈವಕ್ಕೆ ಮೀಸಲು. ಇಲ್ಲಿ ಭೂತ, ಚೌಡಿ, ಗಿಡನ ದೈಯ, ಕೀಳು ಚೌಡಿ... ಹೀಗೆ ಹಲವು ದೈಯಗಳನ್ನು ನೆಲೆಹಾಕಿ ಆರಾಧಿಸಲಾಗುತ್ತದೆ. ಈ ದೈವಗಳು ಕುಟುಂಬದ ಹಿತ ಕಾಯುತ್ತವೆ, ಬೆಳೆಗೆ ರೋಗ ರುಜಿನ ತಗುಲದಂತೆ ರಕ್ಷಿಸುತ್ತವೆ, ಜಾನುವಾರು, ಆಸ್ತಿ ಪಾಸ್ತಿಯನ್ನು ಕಾಪಾಡುತ್ತವೆ ಎಂಬ ನಂಬಿಕೆ ಇಲ್ಲಿನ ಜನರಲ್ಲಿ ಹಾಸುಹೊಕ್ಕಾಗಿದೆ.

ಸಾಮಾನ್ಯವಾಗಿ ಜಮೀನಿನ ಅಂಚಿನಲ್ಲಿ ಅಥವಾ ದರುಗಿನ ಹಡ್ಡೆಗಳಲ್ಲಿ ದೈವದ ಬನಗಳು ಇರುತ್ತವೆ. ಅಲ್ಲಿರುವ ಮರಗಿಡಗಳನ್ನು ಯಾರೂ ಕಡಿಯುವುದಿಲ್ಲ.

11ನೇ ಪುಟಕ್ಕೆ...

ನಾವು... ಎಚ್ಚರದಿಂದ ಗಮನಿಸಬೇಕು

ಕುಮಾರಸ್ವಾಮಿ ಬೆಜ್ಜಿಹಳ್ಳಿ

ರಂಗಭೂಮಿ

ಇತ್ತೀಚೆಗೆ ಕನ್ನಡ ರಂಗಭೂಮಿಯಲ್ಲಿ ಯುವ ತಲೆಮಾರು ನಾಟಕ ರಚನೆ, ನಿರ್ದೇಶನ ಹಾಗೂ ಪ್ರಯೋಗಗಳಲ್ಲಿ ಅನೇಕ ಹೊಸತನಗಳನ್ನು ಹೊತ್ತು ತರುತ್ತಿದೆ. ಇದಕ್ಕೆ ಹೊಸ ಸೇರ್ಪಡೆ 'ನಾವು...' ಎಂಬ ನಾಟಕ. ಅಭಿಮನ್ಯು ಭೂಪತಿ ಮತ್ತು ರೋಹಿತ್ ಜೋಡಿ ಈ ನಾಟಕವನ್ನು ರಚಿಸಿದೆ. ವಿನ್ಯಾಸ ಮತ್ತು ನಿರ್ದೇಶನದ ಜವಾಬ್ದಾರಿಯನ್ನು ಅಭಿಮನ್ಯು ಭೂಪತಿ ನಿಭಾಯಿಸಿದ್ದಾರೆ. ಬೆಂಗಳೂರು ಥಿಯೇಟರ್ ಆನ್ಸಂಬಲ್ ತಂಡ ಈ ನಾಟಕವನ್ನು ಅಭಿನಯಿಸಿದೆ.

ಭಾರತದ ಸಂವಿಧಾನದ ಪೀಠಿಕೆಯು 'ಭಾರತೀಯರಾದ ನಾವು' ಎಂಬ ಸಾಲಿನೊಂದಿಗೆ ಪ್ರಾರಂಭವಾಗುತ್ತದೆ. 'ನಾವು' ಎಂಬುದು ಜಾತಿ ಧರ್ಮ ವರ್ಗ ವರ್ಣ ಲಿಂಗ ಹಾಗೂ ಪ್ರದೇಶ-ಹೀಗೆ ಎಲ್ಲ ಬಗೆಯ ಅಸಮಾನತೆಗಳನ್ನು ಮೀರಿದ ಒಂದು ಒಳಗೊಳ್ಳುವ ಪರಿಕಲ್ಪನೆ. ಜಾತಿ ಅಸಮಾನತೆ ಹಾಗೂ ಕ್ರೌರ್ಯವನ್ನು ಸಾಮಾನ್ಯ ಸಂಗತಿಗಳಂತೆ ಹಗುರವಾಗಿ ಪರಿಗಣಿಸುತ್ತಿರುವ ಈ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಇದರ ತೀವ್ರತೆಯನ್ನು ತಲುಪಿಸುವ ಹೊಸದಾರಿಗಳನ್ನು ನಾವು ಕಂಡುಕೊಳ್ಳಬೇಕಿದೆ. ಕನ್ನಡ ರಂಗಭೂಮಿಯಲ್ಲಿ ಈ ಬಗೆಯ ಹೊಸದಾದ ಪ್ರಯೋಗಗಳನ್ನು 'ನಾವು...' ನಾಟಕ ಮಾಡಿದೆ.

ಅಭಿಮನ್ಯು ಭೂಪತಿ

ನಾಟಕ ಮತ್ತು ಪ್ರೇಕ್ಷಕರ ನಡುವಿನ ನಿರ್ದಿಷ್ಟ ಮಾನಸಿಕ ದೂರವನ್ನು ಈ ನಾಟಕವು ಹೊಸತನಕ್ಕೆ ಎಂಬಂತೆ ತುಸು ಬದಲಾಯಿಸಿದೆ. 'ಈ ನಾಟಕದಲ್ಲಿ ನೀವೂ ಕೂಡ ಪಾಲುದಾರರು ಸ್ವಾಮಿ, ಎಚ್ಚರದಿಂದಿರಿ' ಎಂದು ಪ್ರಾರಂಭವಾಗುವ ನಾಟಕವು ಸಾಮಾಜಿಕ ಹೊಣೆಗಾರಿಕೆಯ ಭಾಗವಾಗಿ ಪ್ರೇಕ್ಷಕರನ್ನು ಅಣಿಗೊಳಿಸುತ್ತದೆ. ಪ್ರಯೋಗದ ದೃಷ್ಟಿಯಿಂದ ಆರಂಭದಿಂದಲೇ ಸಾಂಪ್ರದಾಯಿಕ ಮಾದರಿಗಳನ್ನು ಮುರಿದು ಹೊಸತನಕ್ಕೆ ತಿರುಗುವ ನಾಟಕವು ನಿಧಾನವಾಗಿ ಪ್ರೇಕ್ಷಕರನ್ನೂ ಹೊಸತನಕ್ಕೆ ಹೊಂದಿಸುವಲ್ಲಿ ಯಶಸ್ವಿಯಾಗಿದೆ. ತೊಂಬತ್ತರ ದಶಕದಿಂದ ಇಲ್ಲಿಯವರೆಗೆ ಭಾರತೀಯ ಸಮಾಜದಲ್ಲಿ ಜಾತಿ ಕಾರಣಕ್ಕಾಗಿ ನಡೆದ ದೌರ್ಜನ್ಯಗಳ ಕರಾಳತೆಯನ್ನು ಅತಿರೇಕಗಳಿಲ್ಲದೆ ಪ್ರೇಕ್ಷಕರ ಮುಂದಿಡುತ್ತದೆ. ನಾಟಕವನ್ನು ನೋಡುತ್ತಲೇ ಪ್ರೇಕ್ಷಕರು ತಮ್ಮನ್ನು ತಾವು ನಾಟಕದ ಭಾಗವಾಗಿಸಿಕೊಂಡು ಸಂವೇದನೆಗೆ ಒಳಗಾಗುವ ಪ್ರಕ್ರಿಯೆಯೇ ಕನ್ನಡ ರಂಗಭೂಮಿಯಲ್ಲಿ ಹೊಸತು ಎನ್ನಬಹುದು. ರಂಗಶಂಕರದ 2023ರ ಕನ್ನಡ ನಾಟಕೋತ್ಸವದ ಸಲುವಾಗಿ ಈ ನಾಟಕವವನ್ನು ರಚಿಸಲಾಗಿತ್ತು.

ಸಾಮಾಜಿಕ ಚರಿತ್ರೆಯಲ್ಲಿ ಜಾತಿ ಕಾರಣಕ್ಕಾಗಿ ಆಗಿ ಹೋದ ಅನೇಕ ಕ್ರೌರ್ಯಗಳನ್ನು ನೆನಪಿಸುವಂತಹ ಅನೇಕ ಘಟನೆಗಳನ್ನು ನಾಟಕದ ಹಿನ್ನೆಲೆಯಲ್ಲಿ ಬಳಸಿಕೊಳ್ಳಲಾಗಿದೆ. 2006 ರಲ್ಲಿ ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ನಡೆದ ಭೀಕರ ಹತ್ಯಾಕಾಂಡವನ್ನೂ ಒಳಗೊಂಡಂತೆ ಇತ್ತೀಚೆಗೆ ಕರ್ನಾಟಕದಲ್ಲಿ ವಸತಿ ಶಾಲೆಯ ಮಕ್ಕಳನ್ನು ಮಲದ ಗುಂಡಿಗೆ ಇಳಿಸಿದ ಅಮಾನವೀಯ ಘಟನೆಗಳವರೆಗೆ ದಲಿತ ಸಂವೇದನೆಯನ್ನು ಭಾವನಾತ್ಮಕತೆಯ ಆಚೆಗೆ ವಾಸ್ತವದ ನೆಲೆಗಟ್ಟಿನಲ್ಲಿ ನಾಟಕವು ಕಟ್ಟಿಕೊಡುತ್ತದೆ.

'ನಾಟಕವನ್ನು ಪ್ರದರ್ಶಿಸಿ ಚಪ್ಪಾಳೆ ಗಿಟ್ಟಿಸಿಕೊಳ್ಳುವ ಇರಾದೆ ನಮ್ಮದಲ್ಲ, ಬದಲಾಗಿ ನಾಟಕವನ್ನು ಪ್ರೇಕ್ಷಕ ಎದೆಯಾಳಕ್ಕೆ ಇಳಿಸಿಕೊಂಡು ಸಾಮಾಜಿಕ ಬದಲಾವಣೆಯ ಜವಾಬ್ದಾರಿಯನ್ನು ಹೊರುವಂತಾಗಬೇಕು. ಜಾತಿಯ ಕಾರಣಕ್ಕಾಗಿ ನಡೆಯುವ ಕ್ರೌರ್ಯ, ಅಪಮಾನಗಳನ್ನು ಅಂತಃಕರಣದಲ್ಲಿ ನೋಡುವಂತಾಗಬೇಕು ಮತ್ತು ಎಲ್ಲವೂ ಸರಿಯಿದೆ ಎಂಬ ಭ್ರಮಾಲೋಕದಿಂದ ಪ್ರೇಕ್ಷಕರು ಹೊರಬರಬೇಕು. ಈ ಕಾರಣದಿಂದಲೇ ಅನೇಕ ಹೊಸತನಗಳನ್ನು ಈ ನಾಟಕದಲ್ಲಿ ನಾವು ತಂದಿದ್ದೇವೆ' ಎನ್ನುತ್ತಾರೆ ಯುವ ನಿರ್ದೇಶಕ ಅಭಿಮನ್ಯು ಭೂಪತಿ. ಇದೊಂದು ಡಿವೈಸ್ಡ್ ನಾಟಕವಾಗಿದ್ದು, ರಂಗಭೂಮಿಯ ಸಂಪ್ರದಾಯಿಕತೆಯನ್ನು ಒಡೆದು ಕಟ್ಟಿದ ನಾಟಕವಾಗಿದೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಒಂದೋ ಶೋಷಕರಾಗಿ ಇಲ್ಲವೇ ಶೋಷಿತರಾಗಿ ಬದುಕಬೇಕೇ ಹೊರತು ಇವೆರಡನ್ನೂ ಮೀರಿ ಬದುಕುವುದು ಕಷ್ಟದ ಕೆಲಸ. ಸಾಮಾಜಿಕ ಬದಲಾವಣೆ ಎಂಬುದು ಕೇವಲ ಶೋಷಿತರ ನೋವು ಅಪಮಾನಗಳನ್ನು ವಿಜ್ರಂಭಿಸುವುದರಲ್ಲಿ ಇಲ್ಲ, ಬದಲಾಗಿ ನಿರಂತರ ಶೋಷಣೆಯನ್ನು ಮಾಡುವ ವರ್ಗಗಳು ಆತ್ಮಾವಲೋಕನ ಮಾಡಿಕೊಳ್ಳುವಂತಾಗಬೇಕು. ಇಂತಹ ಸಾಧ್ಯತೆಗಳನ್ನು 'ನಾವು...' ನಾಟಕವು ಒಳಗೊಂಡಿದೆ.

20ನೇ ಶತಮಾನದಲ್ಲಿ ಜರ್ಮನಿಯ ಬರ್ಟೋಲ್ಟ್ ಬ್ರೆಕ್ಟ್‌ನಿಂದಾಗಿ ಎಪಿಕ್ ಥಿಯೇಟರ್ ಪರಿಕಲ್ಪನೆ ಹೆಚ್ಚು ಜನಪ್ರಿಯವಾಯಿತು. ಬ್ರೆಕ್ಟ್‌ಗೆ ರಂಗಭೂಮಿ ಜನಸಾಮಾನ್ಯರ ರಾಜಕೀಯ ಶಿಕ್ಷಣಕ್ಕೆ ಸಾಧನವಾಗಿ ಕಂಡಿತ್ತು. ಭಾವೋದ್ವೇಗದಲ್ಲಿ ಮನುಷ್ಯ ತನ್ನ ವಿವೇಚನಾಶಕ್ತಿಯನ್ನು ಕಳೆದುಕೊಳ್ಳುತ್ತಾನೆ ಎಂದು ತಿಳಿದಿದ್ದ ಬ್ರೆಕ್ಟ್ ತನ್ನ ಏಲಿನಿಯೇಷನ್ ಸಿದ್ಧಾಂತಕ್ಕೆ ಒಂದು ಸ್ವರೂಪವನ್ನು ಕೊಡುವುದಾಗಿ ಹಲವಾರು ಪ್ರಯೋಗಗಳನ್ನು ಮಾಡುತ್ತಾನೆ. ಅಂಥದ್ದೇ ಒಂದು ಪ್ರಯೋಗವನ್ನು ಈ ನಾಟಕದಲ್ಲೂ ಕಾಣಬಹುದು. ಎಲ್ಲಾ ಕಲಾವಿದರು ತಮ್ಮ ಪಾತ್ರಗಳನ್ನು ಸಹಜವಾಗಿ ಮನಮುಟ್ಟುವಂತೆ ನಟಿಸಿದ್ದಾರೆ. ಪಾತ್ರಧಾರಿಗಳು ಒಂದು ಕ್ಷಣ ಒಂದು ಮುದ್ದಾದ ಸಣ್ಣ ರೈತ ಕುಟುಂಬದಂತೆ ಪ್ರೇಕ್ಷಕರ ಮನಸ್ಸಿನಲ್ಲಿ ನೆಲೆಸಿದರೆ, ಮರುಕ್ಷಣ ಅವರು ಕೇವಲ ನಟರಾಗಿ ಪಾತ್ರಗಳ ಅಂತರಾಳವನ್ನು ವಿಮರ್ಶಾತ್ಮಕವಾಗಿ ಬಯಲುಗೊಳಿಸುತ್ತಾರೆ. ದೃಶ್ಯಗಳ ನಡುವೆ ನೈಜ ಸಾಕ್ಷ್ಯಚಿತ್ರಗಳ ತುಣುಕುಗಳನ್ನು ತೆರೆಯ ಮೇಲೆ ತೋರಿಸಿ, ಇದು ಕೇವಲ ಕಥೆಯಲ್ಲ, ನಮ್ಮ ನಿಮ್ಮೆಲ್ಲರ ಜೀವನ ಎಂದು ನಮ್ಮನ್ನು ಮತ್ತೆ ಮತ್ತೆ ಎಚ್ಚರಿಸುತ್ತಾರೆ. ಮಂಜು ನಾರಾಯಣ್ ಅವರ ಬೆಳಕಿನ ವಿನ್ಯಾಸ ಪೂರಕವಾಗಿದ್ದು ಕೊನೆಯ ದೃಶ್ಯದಲ್ಲಿ ಸಶಕ್ತವಾಗಿ ಮೂಡಿಬಂದಿದೆ. ಪ್ರಸನ್ನ ಎಂ.ಎಸ್. ಅವರ ಸಂಗೀತ ಸಂಯೋಜನೆ ಅಚ್ಚುಕಟ್ಟಾಗಿದೆ. ದೈಹಿಕ ರಂಗಭೂಮಿಯ ಬಳಕೆ ಈ ನಾಟಕದ ಪ್ರಸ್ತುತಿಯನ್ನು ಉನ್ನತ ಮಟ್ಟಕ್ಕೆ ಒಯ್ದಿದೆ. ಇಲ್ಲಿನ ಸಂಕೇತಗಳ ಬಳಕೆ ನಿಜಕ್ಕೂ ಪ್ರೇಕ್ಷಕರ ಮನದಲ್ಲಿ ದೀರ್ಘಕಾಲ ಉಳಿಸುತ್ತದೆ. ❖

ಪ್ರವಚನ ಪ್ರವೀಣ ಸ್ವಾಮಿ ಚಿನ್ಮಯಾನಂದ

2024ರಲ್ಲಿ ಇಡೀ ವಿಶ್ವದಾದ್ಯಂತ ಗುರುದೇವ ಸ್ವಾಮಿ ಚಿನ್ಮಯಾನಂದರ 108ನೇ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ.

ಸ್ವಾಮಿ ಆದಿತ್ಯಾನಂದ

ಸ್ವಾಮಿ ಚಿನ್ಮಯಾನಂದರು ಮನೆಯ ಪೂಜಾಕೋಣೆಯಲ್ಲಿ ಬಟ್ಟೆಯಿಂದ ಬಂಧಿಸಲ್ಪಟ್ಟಿದ್ದ ಭಗವದ್ಗೀತೆ ಗ್ರಂಥವನ್ನು ಕೇವಲ ಆ ಗ್ರಂಥ ಪೂಜಿಸಲು ಮಾತ್ರವಲ್ಲ ಎಂದರಿತು, ಜನರ ಮನದಲ್ಲಿ ನಿಲ್ಲುವಂತೆ ಮಾಡಿದರು. ಭಗವದ್ಗೀತೆಯು ನಮಗೆ ಬದುಕುವ ಕಲೆಯನ್ನು ತಿಳಿಸುತ್ತದೆ. ಅದರ ಜ್ಞಾನವು ನಮಗೆ ಆನಂದವನ್ನು ನೀಡುವುದರಲ್ಲಿ ಸಂಶಯವಿಲ್ಲ ಎಂಬುದು ಸ್ವಾಮಿ ಚಿನ್ಮಯರ ದೃಢ ನಂಬಿಕೆಯಾಗಿತ್ತು.

ಸ್ವಾಮಿ ಚಿನ್ಮಯಾನಂದರು ಮೇ 8, 1916 ರಂದು ಕೇರಳದ ಎರ್ನಾಕುಳಂನಲ್ಲಿ ಜನಿಸಿದರು. ತಂದೆ ತಾಯಿ ಇಟ್ಟ ಹೆಸರು ಬಾಲಕೃಷ್ಣ ಮೆನನ್. ಪ್ರಾಥಮಿಕ ವಿದ್ಯಾಭ್ಯಾಸ ಕೇರಳದಲ್ಲಿ ಹಾಗೂ ಹೆಚ್ಚಿನ ವ್ಯಾಸಂಗವನ್ನು ಲಖನೌದಲ್ಲಿ ಮಾಡಿದರು. ತಂದೆಯ ಇಚ್ಛೆಯಂತೆ ಸ್ನಾತಕೋತ್ತರ ಕಾನೂನು ಪದವಿ ಪಡೆದರು. ಆದರೆ ಬಾಲಕೃಷ್ಣ ಮೆನನ್ ಅವರ ಆಸಕ್ತಿಯಿದ್ದದ್ದು ಪತ್ರಿಕೋದ್ಯಮದಲ್ಲಿ. ದೆಹಲಿಯ ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಉಪ ಸಂಪಾದಕ ವೃತ್ತಿಯನ್ನು ಮಾಡತೊಡಗಿದರು.

ಅದು ಸ್ವಾತಂತ್ರ್ಯ ಸಂಗ್ರಾಮದ ಕಾಲ. ಬಾಲಕೃಷ್ಣ ಮೆನನ್ ಸಂಪೂರ್ಣವಾಗಿ ತಮ್ಮನ್ನು ಅದರಲ್ಲಿ ತೊಡಗಿಸಿಕೊಂಡು ಬ್ರಿಟಿಷರ ಕೆಂಗಣ್ಣಿಗೆ ಗುರಿಯಾದರು. ಬ್ರಿಟಿಷರ ತೊಂದರೆಗಳಿಂದ ತಪ್ಪಿಸಿಕೊಳ್ಳಲು ಪಂಜಾಬ್ ರಾಜ್ಯದ ಮೊರೆಹೊಕ್ಕರು. ಸ್ವಾತಂತ್ರೋತ್ತರದಲ್ಲಿ ಮತ್ತೆ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡರು.

'ಭಾರತದ ಆರ್ಥಿಕ ಹಿನ್ನಡೆಗೆ ಸಾಧು ಸಂತರೇ ಕಾರಣ. ಅವರು ದುಡಿದರೆ ದೇಶಕ್ಕೆ ಹಿತವೆಂಬ ಮನೋಭಾವದಿಂದ ಸಂತ ಮಹಾಂತರ ಜೀವನವನ್ನು ಹಾಗೂ ಕಪಟವನ್ನು ಜಗತ್ತಿಗೆ ಪರಿಚಯಿಸುತ್ತೇನೆ' ಎಂಬ ದೃಢ ವಿಶ್ವಾಸದಿಂದ ದೆಹಲಿಯಿಂದ ಹೃಷೀಕೇಶಕ್ಕೆ ಹೋಗಿ ಸ್ವಾಮಿ ಶಿವಾನಂದರ ದಿವ್ಯಜೀವನಸಂಘದಲ್ಲಿ ತಂಗಿದರು. ಸ್ವಾಮಿ ಶಿವಾನಂದರು ತಮಿಳುನಾಡಿನವರು. ವೃತ್ತಿಯಲ್ಲಿ ವೈದ್ಯರಾಗಿದ್ದ ಇವರು ಮಲೇಷ್ಯಾದಲ್ಲಿ ಕೆಲಸ ಮಾಡುತ್ತಿದ್ದರು. ಆತ್ಮಜ್ಞಾನದಲ್ಲಿ ಜಿಜ್ಞಾಸೆ ಹೊಂದಿದವರಾಗಿ ಭಾರತಕ್ಕೆ ಹಿಂತಿರುಗಿ ವಿಧಿವತ್ತಾಗಿ ಸನ್ಯಾಸ ಸ್ವೀಕರಿಸಿ, ಹೃಷೀಕೇಶದಲ್ಲಿ ದಿವ್ಯಜೀವನ ಸಂಘವನ್ನು ಸ್ಥಾಪಿಸಿದರು. ಬಾಲಕೃಷ್ಣ ಮೆನನ್ ಸ್ವಾಮಿ ಶಿವಾನಂದರ ಜೀವನ ಹಾಗೂ ಅವರ ಕಾರ್ಯಗಳನ್ನು ನೋಡಿ ತಮ್ಮ ಮನಸ್ಸಿನಲ್ಲಿದ್ದ ತಪ್ಪು ತಿಳಿವಳಿಕೆಯನ್ನು ಬದಲಿಸಿಕೊಂಡು, ಕೆಲಕಾಲ ಅಲ್ಲೇ ವಾಸಿಸತೊಡಗಿದರು. ಬಾಲಕೃಷ್ಣ ಮೆನನ್‌ಗೆ ಅಧ್ಯಾತ್ಮದಲ್ಲಿ ಆಸಕ್ತಿ ಹೆಚ್ಚಾಗತೊಡಗಿತು. ನಿತ್ಯವೂ ಸ್ವಾಮಿ ಶಿವಾನಂದರೊಡನೆ ಸಂವಾದ ಮಾಡುತ್ತಿದ್ದರು. ಇವರ ಆಸಕ್ತಿಯನ್ನು ಗುರುತಿಸಿ ಸ್ವಾಮಿ ಶಿವಾನಂದರು 1946ರ ಶಿವರಾತ್ರಿ ದಿನ ಬಾಲಕೃಷ್ಣ ಮೆನನ್‌ಗೆ ಸನ್ಯಾಸವನ್ನು ನೀಡಿ, ಸ್ವಾಮಿ ಚಿನ್ಮಯಾನಂದ ಸರಸ್ವತಿ ಎಂಬ ಹೆಸರಿಟ್ಟರು. ಸನ್ಯಾಸಿಯಾದರೂ ಚಿನ್ಮಯಾನಂದರ ಜ್ಞಾನದಾಹ ಇಂಗಲಿಲ್ಲ. ಇದನ್ನರಿತ ಶಿವಾನಂದರು ಚಿನ್ಮಯಾನಂದರನ್ನು ಉತ್ತರಕಾಶಿಯಲ್ಲಿದ್ದ ಸ್ವಾಮಿ ತಪೋವನ ಮಹಾರಾಜರ ಬಳಿ ಹೆಚ್ಚಿನ ವ್ಯಾಸಂಗಕ್ಕಾಗಿ ಕಳುಹಿಸಿದರು.

ಸ್ವಾಮಿ ತಪೋವನ ಮಹಾರಾಜರು ಸಂಸ್ಕೃತ ಪಂಡಿತರು ಮಾತ್ರವಲ್ಲ, ಶ್ರೋತ್ರಿಯರೂ, ಬ್ರಹ್ಮನಿಷ್ಠರೂ ಆಗಿದ್ದರು. ಅವರನ್ನು ಜನರು 'ಹಿಮವದ್ ವಿಭೂತಿ' ಎಂದು ಗೌರವಿಸುತ್ತಿದ್ದರು. ಸ್ವಾಮಿ ಚಿನ್ಮಯಾನಂದರು ಹಲವಾರು ವರ್ಷ ತಪೋವನ ಮಹಾರಾಜರ ಬಳಿ ವೇದಾಂತವನ್ನು ಕಲಿತರು. ಉತ್ತರಕಾಶಿ ತಪೋವನ ಮಹಾರಾಜರು ವಾಸಿಸುತ್ತಿದ್ದ ಊರು.

ಸ್ವಾಮಿ ತಪೋವನ ಮಹಾರಾಜರಿಂದ ಅನುಮತಿ ಪಡೆದು ಹಿಮಾಲಯದಿಂದ ದಕ್ಷಿಣದತ್ತ ಪ್ರಯಾಣ ಬೆಳೆಸಿದರು. ಡಿಸೆಂಬರ್ 31, 1951 ರಂದು ಪುಣೆಯಲ್ಲಿ ತಮ್ಮ ಮೊದಲ ಪ್ರವಚನವನ್ನು ಪ್ರಾರಂಭಿಸಿದರು. ಹೀಗೆ ಆರಂಭವಾದ ಅವರ ಪ್ರವಚನಮಾಲೆ ಅವಿರತವಾಗಿ 43 ವರ್ಷಗಳು ನಡೆಯಿತು. ಸ್ವಾಮೀಜಿ ಪ್ರವಚನಗಳಿಂದ ದೇಶ-ವಿದೇಶಗಳಲ್ಲಿ ವಿಖ್ಯಾತರಾದರು.

ಶಾಂತಿ ಎಲ್ಲಿದೆ?

ಗುರುದೇವ ಸ್ವಾಮಿ ಚಿನ್ಮಯಾನಂದರು ಪ್ರವಚನದಲ್ಲಿ ಪ್ರಸಿದ್ಧರು. ಜನರು ಅವರು ಹೇಳುತ್ತಿದ್ದ ದೃಷ್ಟಾಂತಗಳನ್ನು ಬಹಳ ಇಷ್ಟಪಡುತ್ತಿದ್ದರು. ನಿತ್ಯಜೀವನಕ್ಕೆ ಉಪಯುಕ್ತವಾಗುವ ಹಲವಾರು ನಿದರ್ಶನಗಳನ್ನು ನೀಡುತ್ತಿದ್ದರು. ಒಮ್ಮೆ ಅವರು ಸತ್ಸಂಗವನ್ನು ನಡೆಸಿಕೊಡುತ್ತಿದ್ದಾಗ ಭಕ್ತರೊಬ್ಬರು ಗುರುದೇವರ ಬಳಿ ಬಂದು 'ಗುರುದೇವ, ದಯವಿಟ್ಟು ನಿಮ್ಮ ಎರಡೂ ಕೈಗಳನ್ನು ನನ್ನ ತಲೆಯ ಮೇಲಿಡಿ' ಎಂದು ಕೇಳಿದರು. ಗುರುದೇವರು 'ಏಕೆ' ಎಂದು ಪ್ರಶ್ನಿಸಿದಾಗ ಆತ 'ನನಗೆ ಮನಸ್ಸಿನ ಶಾಂತಿ ಬೇಕಿದೆ' ಎಂದರು. ಆಗ ಗುರುದೇವರು 'ನಿಮ್ಮ ಪ್ರಕಾರ ನನ್ನ ಎರಡೂ ಕೈಗಳಲ್ಲಿ ಮನಃಶಾಂತಿಯಿದೆ. ಒಂದು ವೇಳೆ ಈ ಎರಡೂ ಕೈಗಳಲ್ಲಿ ಶಾಂತಿಯು ಇರುವುದಾದರೆ ಅದನ್ನು ಮೊದಲು ನನ್ನ ತಲೆಯ ಮೇಲೆ ನಾನೇ ಇಟ್ಟುಕೊಳ್ಳುತ್ತೇನೆ, ಏಕೆಂದರೆ ನನಗೂ ಕೂಡ ಮನಸ್ಸಿನ ಶಾಂತಿ ಬೇಕು. ಆ ಮನಸ್ಸಿನ ಶಾಂತಿ ಹೊರಗಿನಿಂದ ಬರುವುದಿಲ್ಲ. ನಾನು ಮನಸ್ಸಿನ ಶಾಂತಿಗಾಗಿ ಪ್ರವಚನ ನೀಡುತ್ತೇನೆ. ಇತರರು ಮನಸ್ಸಿನ ಶಾಂತಿಗಾಗಿ ಪ್ರವಚನಕ್ಕೆ ಬರುತ್ತಾರೆ, ಕೆಲವರು ಹಾಡನ್ನು ಹಾಡಿದರೆ, ಕೆಲವರು ಲೋಕಕಲ್ಯಾಣದ ಕಾರ್ಯದಲ್ಲಿ ತೊಡಗುತ್ತಾರೆ' ಎಂದು ಹೇಳಿದರು.



ಸ್ವಾಮೀ ಚಿನ್ಮಯಾನಂದ

'ನಿಮ್ಮಿಂದ ಎಷ್ಟು ಮಂದಿ ಉದ್ಧಾರವಾದರು?'

ಅದು 1977ರ ಇಸವಿ. ಚಿನ್ಮಯ ಸಂಸ್ಥೆಗೆ ರಜತ ಮಹೋತ್ಸವದ ಸಂಭ್ರಮ. ಜಗತ್ತಿನ ನಾನಾ ದೇಶಗಳಿಂದ ಬಂದ ಶಿಷ್ಯರು ಹಾಗೂ ಭಕ್ತರು ಸಮಾವೇಶದಲ್ಲಿ ಭಾಗವಹಿಸಿದ್ದರು. ಮುಂಬೈ ನಗರದಲ್ಲಿ ಆಯೋಜಿಸಿದ್ದ ಈ 25ರ ಸಂಭ್ರಮದಲ್ಲಿ ಅನೇಕ ಪತ್ರಕರ್ತರೂ ಭಾಗವಹಿಸಿದ್ದರು.

ಪತ್ರಕರ್ತರೊಬ್ಬರು ಸಂಸ್ಥೆಯ ಸಂಸ್ಥಾಪಕರನ್ನು ಉದ್ದೇಶಿಸಿ, 'ನಿಮ್ಮ ಸಂಸ್ಥೆಗೆ ರಜತ ಮಹೋತ್ಸವ. ಈ 25 ವರ್ಷಗಳಲ್ಲಿ ನಿಮ್ಮಿಂದ ಎಷ್ಟು ಜನರು ಉದ್ಧಾರವಾದರು' ಎಂದು ಪ್ರಶ್ನಿಸಿದರು. ಅವರ ಪ್ರಶ್ನೆಗೆ ಹಸನ್ಮುಖಿಯಾಗಿ ಉತ್ತರಿಸಿದ ಸ್ವಾಮೀ ಚಿನ್ಮಯಾನಂದರು- 'ಈ ಇಪ್ಪತ್ತೈದು ವರ್ಷಗಳಲ್ಲಿ ನಾನು ಹಲವಾರು ಊರುಗಳಲ್ಲಿ, ಹಲವಾರು ದೇಶಗಳಲ್ಲಿ ಭಗವದ್ಗೀತೆ, ಉಪನಿಷತ್ತುಗಳು ಹಾಗೂ ಇನ್ನಿತರ ಗ್ರಂಥಗಳ ಕುರಿತು ಪ್ರವಚನ ನೀಡಿದ್ದೇನೆ. ನಾನು ಪ್ರವಚನವನ್ನು ಜನರನ್ನು ಉದ್ಧರಿಸಲು ಮಾಡುವುದಿಲ್ಲ. ನನ್ನ ಪ್ರವಚನದ ಸಮಯದಲ್ಲಿ ಮೊದಲಿಗೆ ನನ್ನ ಮನಸ್ಸು ಶಾಂತವಾಗಿರುತ್ತದೆ. ಪ್ರವಚನದಿಂದ ಇತರರಿಗೆ ಉಪಯೋಗವಾಗುತ್ತದೊ ಇಲ್ಲವೊ ನನಗೆ ಗೊತ್ತಿಲ್ಲ, ನನಗಂತೂ ಅದು ಮಹತ್ತರವಾದ ಉಪಯೋಗವನ್ನು ಮಾಡಿದೆ. ನಿಮ್ಮ ಪ್ರಶ್ನೆಗೆ ಉತ್ತರಿಸಬೇಕಾದಲ್ಲಿ ಆ ಪ್ರವಚನದಿಂದ ಒಬ್ಬ ಉದ್ಧಾರವಾಗಿದ್ದಾನೆ, ಅದು ನಾನೇ' ಎಂದಿದ್ದರು.

ಮಲೆನಾಡ ದೇವರ ಬನ ಬಾಂಧವ್ಯದ ವನ

10ನೇ ಪುಟದಿಂದ...

ದೊಡ್ಡ ಗಾತ್ರದ ಮರವೊಂದರ ಕೆಳಗಿರುವ ಕಾಡು ಕಲ್ಲಿನಲ್ಲೇ ದೈವತ್ವ ಕಂಡುಕೊಂಡು ಪೂಜಿಸುತ್ತಾರೆ. ಇತ್ತೀಚೆಗೆ ಈ ಮರದ ಬುಡದಲ್ಲಿ ಕಟ್ಟೆ ನಿರ್ಮಿಸಿ ದೈವವನ್ನು ನೆಲೆ ಹಾಕುವ ಸಂಪ್ರದಾಯ ಮುನ್ನೆಲೆಗೆ ಬಂದಿದೆ. ಕೆಲವು ಕಡೆಗಳಲ್ಲಿ ನಿರಾಕಾರ ಕಲ್ಲುಗಳ ಜೊತೆಗೆ ಶೂಲ ಇರುತ್ತದೆ. ಹೆಣ್ಣು ದೈವ (ಉದಾ: ಚೌಡಿ) ಆಗಿದ್ದರೆ ಶೂಲ, ಹಸಿರು ಗಾಜಿನ ಬಳೆಗಳೂ ಇರುತ್ತವೆ. ದೇವಸ್ಥಾನಗಳಲ್ಲಿ ನಿತ್ಯ ಪೂಜೆ ನಡೆಯುವಂತೆ ಈ ದೈವಗಳಿಗೆ ನಿತ್ಯ ಪೂಜೆ ನಡೆಯುವುದಿಲ್ಲ. ವರ್ಷಕ್ಕೊಮ್ಮೆ ಒಳ್ಳೆಯ ದಿನವನ್ನು ಗೊತ್ತು ಮಾಡಿ ಪೂಜೆ ಮಾಡುತ್ತಾರೆ. ಮಾಂಸಾಹಾರ ದೈವಗಳಾಗಿದ್ದಲ್ಲಿ ಪ್ರಾಣಿ ಬಲಿ ನೀಡಿ ಹರಕೆ ತೀರಿಸುತ್ತಾರೆ.

ಒಂದೊಂದು ದೈವಕ್ಕೆ ಒಂದೊಂದು ಬಗೆಯಲ್ಲಿ ಹರಕೆ ಒಪ್ಪಿಸುವ ಸಂಪ್ರದಾಯ ಇದೆ. ಈ ಆಚರಣೆಯು ಕುಟುಂಬದಿಂದ ಕುಟುಂಬಕ್ಕೆ ಭಿನ್ನವಾಗಿರುತ್ತದೆ. ಹರಕೆಯ ದಿನದ ಮುನ್ನಾ ದಿನ ದೈವದ ಬನವನ್ನು ಶುಚಿ ಮಾಡಿ, ಓರಣಗೊಳಿಸುತ್ತಾರೆ. ಮುಂಜಾನೆಯೇ ಎದ್ದು ಕಡುಬು ಮತ್ತು ಬಲಿಕೊಡುವ ಪ್ರಾಣಿಯ ಸಾರು ಮಾಡಲು ಅಗತ್ಯ ಪದಾರ್ಥ ಸಿದ್ಧಪಡಿಸಿಕೊಂಡು ಬನಕ್ಕೆ ತೆರಳುತ್ತಾರೆ. ಅಲ್ಲಿ ಪೂಜೆ ಸಲ್ಲಿಸಿ ನಂತರ ದೈವಕ್ಕೆ ಕುರಿ, ನಾಟಿಕೋಳಿ, ಕೋಳಿ, ಹಣ್ಣು, ಕಾಯಿ ಸಮರ್ಪಿಸುತ್ತಾರೆ.

ದೈವಕ್ಕೆ ಅರ್ಪಿಸಿರುವ ನೈವೇದ್ಯ

ಚಿತ್ರ: ನಲ್ಮೆಯ ಮಲೆನಾಡು ಇನ್‌ಸ್ಟಾಗ್ರಾಂ ಪೇಜ್

ರಕ್ತಾಹಾರ ಬೇಡುವ ದೈಯಗಳಿಗೆ ಕುಟುಂಬದ ಯಜಮಾನ ತನ್ನ ಕೈಯಿಂದಲೇ ಪ್ರಾಣಿಗಳನ್ನು ವಧಿಸಿ, ಅರ್ಪಿಸುತ್ತಾನೆ. ಬಲಿ ಅರ್ಪಿಸಿದ ಪ್ರಾಣಿಯ ತಲೆಯನ್ನು ದೇವರಿಗೆ ಬಿಟ್ಟು ಉಳಿದ ದೇಹದ ಭಾಗವನ್ನು ಸಂಬಂಧಪಟ್ಟವರು ಮನೆಗೆ ಒಯ್ಯುತ್ತಾರೆ. ಆ ದಿನ ಸಂಬಂಧಿಕರು, ಆಪ್ತರಿಗೆ ಆಹ್ವಾನ ನೀಡಿ ಔತಣವನ್ನು ಏರ್ಪಡಿಸುತ್ತಾರೆ.

ಮಾಂಸದ ಅಡುಗೆಯನ್ನು ದೈವಕ್ಕೆ ಸಮರ್ಪಿಸಿದ ನಂತರ ದೈವದ ಬನದ ಸಾರನ್ನು ಪ್ರಸಾದವಾಗಿ ಸಾಮೂಹಿಕ ಭೋಜನ ಮಾಡುತ್ತಾರೆ. ಮನೆಯಲ್ಲಿ ಬಗೆಬಗೆಯ ಮಾಂಸಾಹಾರ ಖಾದ್ಯ ಮಾಡಿದರೂ ದೈವದ ಬನದ ಸಾರಿನ ರುಚಿಗೆ ಸಮ ಅಲ್ಲ ಎಂಬುದು ಎಲ್ಲರ ಮಾತು, ನಂಬಿಕೆ.

ವಿಶೇಷ ಎಂದರೆ ಮಾಂಸಾಹಾರ ಸೇವಿಸದ ಜಾತಿಗಳಲ್ಲೂ ಈ ದೈವಗಳನ್ನು ಆರಾಧಿಸಿ ಕುರಿ, ಕೋಳಿ ಬಲಿ ನೀಡುತ್ತಾರೆ. ದೈವಕ್ಕೆ ಅರ್ಪಿಸಿದ ಕುರಿ ಕೋಳಿಯನ್ನು ಮಾಂಸಾಹಾರ ಸೇವಿಸುವ ಜನರಿಗೆ ನೀಡುತ್ತಾರೆ.

ಈ ದೈವದ ಹರಕೆಯು ಮೇಲ್ನೋಟಕ್ಕೆ ಧಾರ್ಮಿಕ ಆಚರಣೆ ಅನಿಸಿದರೂ ಹರಿದು ಹಂಚಿ ಹೋಗಿರುವ ಕುಟುಂಬದ ಹಲವು ತಲೆಮಾರುಗಳನ್ನು ಒಟ್ಟಿಗೆ ಸೇರಿಸುವ, ಹೊಸ ತಲೆಮಾರಿಗೆ ಹಳೆ ಬೇರುಗಳನ್ನು ಪರಿಚಯಿಸುವ ಬೆಸುಗೆಯೂ ಆಗಿದೆ.

ಸರ್ವಕಾಲದಲ್ಲೂ ಹಚ್ಚ ಹಸಿರನ್ನು ಹೊದ್ದು ಕಂಗೊಳಿಸುವ ಮಲೆನಾಡಿನ ಪ್ರಾಕೃತಿಕ ಸೌಂದರ್ಯ ಮತ್ತಷ್ಟು ರಮಣೀಯವಾಗಿ ಕಾಣಲು ಈ 'ದೇವರ ಬನಗಳು' ಬಹುಮುಖ್ಯವಾಗಿವೆ. ಆಧುನಿಕತೆ ಮತ್ತು ಮನುಷ್ಯನ ದುರಾಸೆಯಿಂದ ಮಲೆನಾಡಿನಲ್ಲಿ ಕಾಡು ಕಣ್ಮರೆಯಾಗುತ್ತಿರುವ ಹೊತ್ತಲ್ಲಿ ಅಲ್ಪಸ್ವಲ್ಪವಾದರೂ ಕಾಡು ಉಳಿಯಲು ಇಂಥ ಬನಗಳು ಕಾರಣ. ಕಾಡು ಕಲ್ಲುಗಳಲ್ಲೇ ದೈವತ್ವ ಕಂಡುಕೊಂಡು ಅದಕ್ಕಾಗಿ ಬನ ನಿರ್ಮಿಸಿ ಪೂಜಿಸುವ ಅಪೂರ್ವ ಆಚರಣೆಗೆ ಅಡಿಪಾಯ ಹಾಕಿಕೊಟ್ಟವರು ನಮ್ಮ ಪೂರ್ವಿಕರು, ಅವರ ದೂರದೃಷ್ಟಿಗೆ ನಮ್ಮದೊಂದು ಸಲಾಂ. ❖

ಮುನ್ನೋಟ 12-05-2024 ರಿಂದ 18-05-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ವಾರದ ಆರಂಭ ಸಂತೋಷದಾಯಕವಾಗಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬಂದಿರುತ್ತದೆ. ಉತ್ತಮವಾಗಿ ಮಾತನಾಡಿ ಜನರನ್ನು ಗೆಲ್ಲುವಿರಿ. ಚುರುಕಾಗಿ ಕೆಲಸ ಮಾಡಿ ಎಲ್ಲರ ಗಮನ ಸೆಳೆಯುವಿರಿ. ಆಸ್ತಿಗಾಗಿ ಪ್ರಯತ್ನ ಪಡಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದ ಯಶಸ್ಸು ಸಿಗುತ್ತದೆ. ಆರೋಗ್ಯದ ಬಗ್ಗೆ ಕಾಳಜಿ ಇರಲಿ. ವೃತ್ತಿಯಲ್ಲಿ ಸ್ವಲ್ಪ ಮಟ್ಟನ ಏಳಿಗೆ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಬಹಳ ಗಂಭೀರವಾದ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ಆದಾಯವು ಸಾಮಾನ್ಯ ಮಟ್ಟದಲ್ಲಿ ಇರುತ್ತದೆ. ತಾಯಿಯಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಹಾಯ ಸಿಕ್ಕರೂ ಉಳಿದವರು ಸಹಕರಿಸುವುದಿಲ್ಲ. ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದ ಯಶಸ್ಸು ಇರುವುದಿಲ್ಲ. ಮೂತ್ರ ಸಂಬಂಧಿ ದೋಷಗಳು ಇರುವವರು ಎಚ್ಚರ ವಹಿಸಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವಾರದ ಆರಂಭ ಆಹ್ಲಾದಕರವಾಗಿರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಗಳು ನಿಮ್ಮ ಲಾಭಕ್ಕೆ ಮಾತ್ರ ಸೀಮಿತವಾಗಿರುತ್ತವೆ. ಕುಟುಂಬದಲ್ಲಿ ಸ್ವಲ್ಪಮಟ್ಟಿನ ಸೌಖ್ಯವಿರುತ್ತದೆ. ಆಸ್ತಿವಿಚಾರದಲ್ಲಿ ಸ್ವಲ್ಪ ಪ್ರಗತಿಯನ್ನು ಕಾಣಬಹುದು. ಬಂಧುಗಳಲ್ಲಿ ಹಣಕಾಸಿನ ವ್ಯವಹಾರಕ್ಕಾಗಿ ಬಿಸಿ ಮಾತುಗಳಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆರಂಭದಲ್ಲಿ ಸ್ಥಿರ ಮನಸ್ಸು ಇರುವುದಿಲ್ಲ. ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ನಿಮ್ಮ ನಡವಳಿಕೆಗಳಲ್ಲಿ ಹೆಚ್ಚು ಧರ್ಮ ಶ್ರದ್ಧೆ ಕಾಣುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ನಿರೀಕ್ಷಿಸಿದ ಫಲಿತಾಂಶ ಸಿಗುತ್ತದೆ. ದೇಹದಲ್ಲಿ ವಾಯು ಪ್ರಕೋಪ ಕಾಣಿಸಬಹುದು. ಸಂಗಾತಿಯು ನಿಮ್ಮ ಕಡೆ ಹೆಚ್ಚು ಗಮನ ಕೊಡುವುದಿಲ್ಲ. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿರುವುದಿಲ್ಲ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಆತ್ಮಾಭಿಮಾನ ಬಹಳ ಹೆಚ್ಚಾಗಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ನಿಮ್ಮ ಹಿರಿಯರ ಸಹಕಾರ ದೊರೆಯುತ್ತದೆ. ಆಸ್ತಿ ಖರೀದಿಯ ವ್ಯವಹಾರಗಳಲ್ಲಿ ಮುಂದುವರೆಯುವುದು ಬೇಡ. ವಿದ್ಯಾಭ್ಯಾಸದಲ್ಲಿ ಸ್ವಲ್ಪ ಉತ್ತಮ ಫಲಿತಾಂಶ ಇರುತ್ತದೆ. ಅಜೀರ್ಣ ನಿಮ್ಮನ್ನು ಕಾಡಬಹುದು. ಸಂಗಾತಿಯ ನಡುವೆ ಕಾವೇರಿದ ಮಾತುಗಳಾಗಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ನಿಮ್ಮ ಕೆಲವು ಕೆಲಸಗಳಿಗೆ ಸಂಗಾತಿಯಿಂದಲೇ ಅಡ್ಡಿ ಬರಬಹುದು. ಕುಟುಂಬದಲ್ಲಿ ಸ್ವಲ್ಪ ಶಾಂತಿ ನೆಲೆಸುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಸೊಂಟ ನೋವು ಅಥವಾ ಬೆನ್ನು ನೋವು ಕಾಣಿಸಬಹುದು. ಸಂಗಾತಿಯು ನಿಮ್ಮ ವಿರುದ್ಧವಾಗಿ ಮಾತನಾಡುವ ಸಾಧ್ಯತೆಗಳಿವೆ, ಎಚ್ಚರವಾಗಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಮಾತುಗಳಲ್ಲಿ ತಾಳ್ಮೆ ಇದ್ದರೂ ಕೃತಿಯಲ್ಲಿ ವ್ಯತ್ಯಾಸವಿರುತ್ತದೆ. ಕುಟುಂಬದಲ್ಲಿ ನಿರೀಕ್ಷಿತ ಸಂತಸವಿರುವುದಿಲ್ಲ. ವಿದ್ಯಾರ್ಥಿಗಳಿಗೆ ಯಶಸ್ಸು ಇರುವುದಿಲ್ಲ. ಹರಿತವಾದ ಆಯುಧಗಳಿಂದ ಗಾಯವಾಗುವ ಸಾಧ್ಯತೆ ಇದೆ. ಸಂಗಾತಿಯಿಂದ ಸ್ವಲ್ಪಮಟ್ಟಿನ ಧನ ಸಹಕಾರ ಸಿಗುತ್ತದೆ. ಪರಿಚಯದವರಿಂದ ಸರ್ಕಾರಿ ಕೆಲಸ ಕಾರ್ಯಗಳು ಸುಲಭವಾಗುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಮಹತ್ತರ ನಿರ್ಧಾರವನ್ನು ಕೈಗೊಂಡು ಮುಂದುವರೆಯುವಿರಿ. ಆದಾಯವು ಚೇತರಿಕೆಯ ಹಾದಿಯಲ್ಲಿರುತ್ತದೆ. ಎಲ್ಲರನ್ನು ಅನುಸರಿಸಿಕೊಂಡು ನಡೆಯುವಿರಿ. ರೈತರಿಗೆ ಕೃಷಿಯಿಂದ ಲಾಭವಿರುತ್ತದೆ. ಕೃಷಿ ಜಮೀನು ಕೊಳ್ಳಬಹುದು. ತಲೆ ನೋವು ಕೆಲವರನ್ನು ಕಾಡಬಹುದು. ಮಾನಸಿಕ ರೋಗಿಗಳಿಗೆ ಆರೋಗ್ಯ ಸುಧಾರಿಸುತ್ತದೆ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಮನಸ್ಸಿನಲ್ಲಿ ಚಂಚಲತೆ ಇರುತ್ತದೆ. ನಿಮ್ಮ ಪರಿಶ್ರಮದಿಂದ ಹಣ ಸಂಪಾದನೆ ಮಾಡುವಿರಿ. ಶತ್ರುಗಳನ್ನು ಸದ್ದಿಲ್ಲದಂತೆ ಸುಮ್ಮನಾಗಿಸುವಿರಿ. ಆಸ್ತಿ ವಿಚಾರಗಳಲ್ಲಿ ಹೆಚ್ಚು ಗೊಂದಲಗಳಾಗಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಮಕ್ಕಳಿಂದ ಧನ ಸಹಾಯ ಸಿಗುತ್ತದೆ. ಪಿತ್ತವಿಕಾರಗಳಾಗುವ ಸಾಧ್ಯತೆಗಳಿವೆ. ಪ್ರೀತಿ, ಪ್ರೇಮದಲ್ಲಿರುವವರಿಗೆ ಯಶಸ್ಸು ಸಿಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ತಾಳ್ಮೆಯಿಂದ ಮುನ್ನಡೆಯುವುದು ಒಳಿತು. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಬಂಧುಗಳಿಂದ ಅಡ್ಡಿ ಬರುವ ಸಾಧ್ಯತೆ ಇದೆ. ಆಸ್ತಿ ವಿಚಾರದಲ್ಲಿ ಈಗ ಶುಭವಾರ್ತೆಗಳು ಕೇಳಿ ಬರುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುತ್ತದೆ. ಮಕ್ಕಳಿಂದ ನಿಮಗೆ ಧನ ಸಹಾಯವಿರುತ್ತದೆ. ಸಂಗಾತಿ ನಿಮ್ಮ ಮೇಲೆ ಮುನಿಸಿಕೊಳ್ಳುವ ಸಾಧ್ಯತೆಯಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆದಾಯವು ಕಡಿಮೆ ಇದ್ದರೂ ಅದರ ನಿರ್ವಹಣೆಯನ್ನು ಸರಿಯಾಗಿ ಮಾಡುವಿರಿ. ಯುವಕರ ಹಗುರ ಮಾತುಗಳು ಅವರ ಆದಾಯಕ್ಕೆ ಧಕ್ಕೆ ತರಬಹುದು. ಸಮಾಜಮುಖಿ ಕೆಲಸ ಮಾಡುವವರಿಗೆ ಹೆಚ್ಚು ಗೌರವ ದೊರೆಯುತ್ತದೆ. ಆಸ್ತಿಕೊಳ್ಳಲುಬೇಕಾದ ಹಣ ಒದಗುತ್ತದೆ. ಅನಾರೋಗ್ಯ ಪೀಡಿತರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮದೇ ಆದ ಒತ್ತಡಗಳಿಂದ ಕೆಲಸ ಕಾರ್ಯಗಳಲ್ಲಿ ಹಿನ್ನಡೆ ಕಾಣುವಿರಿ. ಹಣದ ಒಳಹರಿವು ಅಗತ್ಯವನ್ನು ಪೂರೈಸುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ಹೆಚ್ಚು ಶ್ರದ್ಧೆ ಮೂಡುತ್ತದೆ. ಹಿರಿಯರು ನಿಮ್ಮ ಕೆಲಸಗಳಿಗೆ ಸಹಕಾರ ನೀಡುವರು. ನಿವೇಶನ ಕೊಳ್ಳುವ ಯೋಗವಿದೆ. ತಾಯಿಯಿಂದ ಧನ ಸಹಾಯ ದೊರೆಯುತ್ತದೆ. ಬಾಯಿಯಲ್ಲಿ ತೊಂದರೆ ಅಥವಾ ಕಣ್ಣಿನ ತೊಂದರೆಗಳು ಕಾಣಿಸಬಹುದು.

ಪದಬಂಧ 2841



ಮೇಲಿನಿಂದ ಕೆಳಕ್ಕೆ

1. ಕಾಗೆ ಹಾರಿದ್ದಕ್ಕೆ ಹಾಕಿದ ಚಪ್ಪಾಳೆಗೆ ಸರಿಹೋಯಿತು 5
2. ಕೊಳೆರಹಿತ ಮನಸ್ಸಿನಲ್ಲಿ ತುಂಬಿದ ಸಂತೋಷ 5
3. ಹೆಚ್ಚು ಮಂದಿ ಒಪ್ಪಿ ಓಟು ಹಾಕಿದರೆ ಪಕ್ಷಕ್ಕೆ ಸಿಗುವ ಹೆಚ್ಚಿನ ಬಲ 4
4. ಸಿಟ್ಟಾಗಿ ಧ್ವನಿ ಎತ್ತರಿಸಿ ರೇಗು 4
7. ಕೃತಕ ರಾಸಾಯನಿಕಗಳನ್ನು ಬಳಸದೆ ಮಾಡುವ ಕೃಷಿ ಕೆಳಗಿನಿಂದ ಮೇಲಕ್ಕೆ 4
9. ಎಂದಿಗೂ ನಂದದ ಹಣತೆಯ ಬೆಳಕು 4
10. ಹರಿಯುವ ಹೊಳೆ 2
12. ಆಕಾಶಕ್ಕೊಂದು ಎಟುಕದ ಮೇರೆ 2
14. ತ್ಯಾಗರಾಜರ ಕೃತಿಯಲ್ಲಿ ಮದುಮಗ ನಡೆದುಬರುವ ರೀತಿ 5
15. ಕಾಮ ಸುಂದರಿ ಮತ್ತು ಅವಳ ಪ್ರಣಯ ಪತಿ 5
16. ಹೊರಗೆ ಕಾಣದ ಬೇಗೆ ಬವಣೆ 4
17. ದ್ರವಗಳ ಬಗ್ಗೆ ಅಪಾರ ತಿಳುವಳಿಕೆ 4

ಎಡದಿಂದ ಬಲಕ್ಕೆ

1. ಸಮಯದ ಆಗುಹೋಗುಗಳನ್ನು ಬಲ್ಲವ 4
3. ದುಷ್ಟದಮನಕ್ಕೆ ಶಕ್ತಿ ಬಳಸುವ "ಯೋಗ"ವೇ ಇದು 5
5. ವಿವಾಹದಲ್ಲಿ ಭತ್ತದರಳಿನಿಂದ ನಡೆಯುವ ಅಗ್ನಿಕಾರ್ಯ 4
6. ನಿಧಾನವಾಗಿ ನಿಂತು ಮದುವೆಯಾಗು 5
8. ಯಶೋದೆಯ ಪುತ್ರ ಯಾದವ ವಂಶವನ್ನು ಬೆಳಗಿದ ಕಂದ 5
11. ಪ್ರೇಮದಲ್ಲಿ ಹುಚ್ಚನಾದ ಹಿಂದಿ ಪ್ರಿಯಕರ 3
13. ಲೌಕಿಕದ ಮಹಾಸಮುದ್ರ: ಇದನ್ನು ದಾಟುವುದು ಬಲುಕಠಿಣ 5
16. ಮಡಚಿದ್ದನ್ನು ಬಿಚ್ಚಿದಷ್ಟು ಸಿಗುವ ನವಿರಾದ ತೆಳು ಜೋಡಣೆ 5
18. ನಿಜವನ್ನೇ ನಂಬಿದ ಮೊದಲ ಕಾಲಮಾನ 4
19. ಕೆಲಸ ಮಾಡಿದಕ್ಕೆ ನಿತ್ಯ ಸಿಗುವ ಸಂಬಳ 5
20. ಇವರು ಬೇರೆ ಯಾರೂ ಅಲ್ಲ, ನಮ್ಮದೇ ಸ್ವಂತ ಮಂದಿ 4

ಪದಬಂಧ ಉತ್ತರ -2840

ಮೇಲಿಂದ ಕೆಳಕ್ಕೆ

1.ವಾತ್ಸಾಯನ 2.ವಿಪರೀತ 3.ಯಷವಿ 4.ಶಹರು 6.ರುದ್ರನಾಟಕ 10. ಜಾಗೃತಿ 12.ರವಾನೆ 13.ಅಂಧಕಾರ 14.ಮನೋಕಾರಕ 16.ಡಮಾರು 18.ತರುಣರು 19.ಯದುವೀರ 20.ಕಾರಾಂತ 21.ವಾಸಂತಿ

ಎಡದಿಂದ ಬಲಕ್ಕೆ

1.ವಾಯುಜೀವಿ 3.ಯತೀಶ 5.ಪರಮಪುರುಷ 7.ದ್ರವಿಡರು 9.ನವಜಾತ 11.ನರಳಾಟ 13. ಅಂತಿಮ 15.ಕಡವ 17.ನೋವಿನೆಣ್ಣೆ 18.ತರುವಾಯ 20.ಕಾರವಾರ 22.ಸಂಕಟಹರಣ 23.ತಪತಿ 24.ರುಚಿಕರ

ಹೆಗ್ಗೋಡು ಹುಟ್ಟಿದ ಬಗೆ...

ಹೆಗ್ಗೋಡಿನಲ್ಲಿರುವ ಶಿವರಾಮ ಕಾರಂತ ರಂಗಮಂದಿರ

ಚಂದ್ರಶೇಖರ್ ಕಾಕಾಲ್

ಅಬ್ಬಬ್ಬ ಎಂಥಾ ಮಳೆ. ಇದು ಪುಷ್ಯ ಮಳೆಯ ಮೂರನೇ ಪಾದ. ತಮ್ಮನ ಮಳೆ ಇನ್ನೂ ಎರಡು ದಿನ ಹೊಯ್ಯುತ್ತೆ ಅಂತ ಹೇಳುತ್ತಾ ಕೈಲಿದ್ದ ಕೊಡೆ ಮಡಿಚಿಡುತ್ತಾ ಮನೆ ಒಳಗೆ ಬಂದರು ನಮ್ಮೂರಿನ ಶೇಷಗಿರಿಯಣ್ಣ. ಬೆಳಿಗ್ಗೆ 7.30ರ ಸುಮಾರಿಗೆ ದಿನಪತ್ರಿಕೆ ಹಿಡಿದುಕೊಂಡು ನಮ್ಮ ಮನೆಗೆ ಬಂದು ಅದನ್ನು ಕೊಟ್ಟು ಲೋಕಾಭಿರಾಮದ ಒಂದೆರಡು ಮಾತುಗಳನ್ನು ಆಡಿ ಹೋಗುವುದು ಅವರ ರೂಢಿ. ಮಳೆ ವಿಪರೀತವಾಗಿದ್ದರಿಂದ ಒಳಗೆ ಬಂದು ಸೋಫಾದ ಮೇಲೆ ಕುಳಿತು ಅಪ್ಪಯ್ಯ ಈ ಊರಿನಲ್ಲಿ ಮನೆ ಕಟ್ಟಿದ ವರ್ಷವೂ ಇಂಥದ್ದೆ ಮಳೆ ಹೋಯ್ದಿತ್ತಂತೆ ಎಂದು ಮಾತು ಆರಂಭಿಸಿದರು. ಅವರ ಅಪ್ಪಯ್ಯ ಸಂಪೇಕೈ ತಿಮ್ಮಯ್ಯನವರು ಈ ಊರಿನಲ್ಲಿ ಮನೆ ಕಟ್ಟಿದ ಮೊದಲಿಗರು ಎಂದು ಗೊತ್ತಿದ್ದರಿಂದ ಆ ವಿಚಾರವಾಗಿ ಇನ್ನಷ್ಟು ಹೇಳಲು ನಾನು ಹುರಿದುಂಬಿಸಿ ಮಾತಿಗಿಳಿದೆ.

ಈ ಹೆಗ್ಗೋಡು ಎಂಬ ಊರು ಮೊದಲಿಗೆ ದಟ್ಟಕಾಡು ಆಗಿದ್ದು, ಮೇಲಣಗುಡ್ಡದ ತುದಿಯಲ್ಲಿ ಕುರುಚಲು ಗಿಡ, ಬಿದಿರುಮಟ್ಟಿಗಳಿದ್ದ ಸ್ಮಶಾನವಾಗಿತ್ತಂತೆ. ಕೆಳಭಾಗದಲ್ಲಿ ಎಂಟು ಹತ್ತು ಮನೆಗಳು ಮಾತ್ರ ಇದ್ದವು ಅಂತ ಅಪ್ಪಯ್ಯ ಹೇಳುತ್ತಿದ್ದರು ಎನ್ನುತ್ತಾ ಕಥೆ ಹೇಳುವ ತಯಾರಿ ನಡೆಸಿದರು ಶೇಷಗಿರಿಯಣ್ಣ. ಇದಕ್ಕೆ ಹೊಂದಿಕೊಂಡಂತೆ ನಾಲ್ಕಾರು ಕೋವುಗಳಾಗಿ ಒಡೆದಿದ್ದು ಹೊನ್ನೇಮರಗಳ ಸಾಲು ಹೊನ್ನೇಸರ; ಮುಂಡಿಗೇಮಟ್ಟಿಗಳ ಸಾಲು ಮುಂಡಿಗೇಸರ; ಕೇದಿಗೆಮಟ್ಟಿಗಳ ಜೌಗು ಪ್ರದೇಶ ಕೇಡಲಸರ; ಮಾವಿನಮರಗಳ ಸಾಲು ಮಾವಿನಸರ ಎಂಬಂತೆ ಐದಾರು ಮನೆಗಳ ಹತ್ತೆಂಟು ಊರುಗಳು. ಈ ಸರಗಳ ಸಾಲಾಗಿರುವ ಹೆಗ್ಗೋಡಿನ ಒಂದು ಭಾಗದಲ್ಲಿ ಶರಾವತಿ ನದಿಯ ಹಿನ್ನೀರು, ಮತ್ತೊಂದು ಕಡೆ ವರದಾ ನದಿಯ ವಿಸ್ತಾರದ ನಡುವೆ ಹಬ್ಬಿಕೊಂಡಿರುವ ಸ್ವಲ್ಪ ಎತ್ತರದ ಪ್ರದೇಶ. ನಂತರದ ದಿನಗಳಲ್ಲಿ ನನಗೆ ತಿಳಿದಂತೆ ಹೆಗ್ಗೋಡಿನಿಂದ ಹೊಸನಗರಕ್ಕೆ ಹೋಗುವ ಮುಖ್ಯರಸ್ತೆಯ ಬಲಭಾಗಕ್ಕೆ ಹರಿಯುವ ಮಳೆ ನೀರು ಶರಾವತಿಯನ್ನು ಸೇರಿ ಹೊನ್ನಾವರದ ಬಳಿ ಪಡುವಣದ ಅರಬ್ಬೀ ಸಮುದ್ರವನ್ನು, ಎಡಭಾಗಕ್ಕೆ ಬಿದ್ದ ಮಳೆನೀರು ವರದಾನದಿಯ ಮೂಲಕ ಕೃಷ್ಣಾ ನದಿಯೊಡನೆ ಬೆರೆತು ಪೂರ್ವದ ಬಂಗಾಳಕೊಲ್ಲಿಯನ್ನೂ ಸೇರುತ್ತದೆ ಎಂಬ ವಿಚಾರ ನನ್ನನ್ನು ವಿಸ್ಮಯಗೊಳಿಸಿದ್ದಲ್ಲದೇ ಹೆಗ್ಗೋಡಿನ ಸ್ಥಳ ಮಹಿಮೆಯ ಬಗ್ಗೆ ಇನ್ನಷ್ಟು ಕುತೂಹಲ ಮೂಡಿಸಿದ್ದಂತು ನಿಜ.

> ಒಂದು ಸಾಂಸ್ಕೃತಿಕ ಕೇಂದ್ರವಾಗಿದ್ದು, ನೀನಾಸಂನಂತಹ ಸಂಸ್ಥೆಯನ್ನು ಒಳಗೊಂಡು ವಿಶ್ವಕ್ಕೆ ಪರಿಚಿತವಾಗಿರುವ ಈಗಿನ ಹೆಗ್ಗೋಡು ಗ್ರಾಮ ನೂರು ವರ್ಷಗಳ ಮೊದಲು ಅಸ್ತಿತ್ವದಲ್ಲಿ ಇರಲಿಲ್ಲ!

ಒಂದು ಸಾಂಸ್ಕೃತಿಕ ಕೇಂದ್ರವಾಗಿದ್ದು, ನೀನಾಸಂನಂತಹ ಸಂಸ್ಥೆಯನ್ನು ಒಳಗೊಂಡು ವಿಶ್ವಕ್ಕೆ ಪರಿಚಿತವಾಗಿರುವ ಈಗಿನ ಹೆಗ್ಗೋಡು ಗ್ರಾಮ ನೂರು ವರ್ಷಗಳ ಮೊದಲು ಅಸ್ತಿತ್ವದಲ್ಲಿ ಇರಲಿಲ್ಲ ಎಂಬುದು ಒಂದು ವಿಸ್ಮಯವಾಗಿ ಕಾಣಿಸಿತು. ಅದು ಹುಟ್ಟಿ ಬೆಳೆದು ಬಂದ ರೀತಿ, ಸದಾ ಚಟುವಟಿಕೆಯಲ್ಲಿರುವ ಪ್ರವೃತ್ತಿಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬೇಕೆಂಬ ಕುತೂಹಲ ಹುಟ್ಟಿತು. ಒಂದು ಲೋಟ ಬಿಸಿ ಬಿಸಿ ಕಾಫಿ ಕುಡಿಯೋಣ ಎಂದು ಶೇಷಗಿರಿಯಣ್ಣನಿಗೆ ಹೇಳಿ ಅವರನ್ನು ಮಾತಿನಲ್ಲಿ ಕಟ್ಟಿಹಾಕಿ ಕಥೆ ಕೇಳುವುದು ನಮ್ಮ ತಂತ್ರ. ಅವರು ಹೂಂ ಎನ್ನುತ್ತಿದ್ದಂತೆಯೇ ನನ್ನ ಹಿರಿಮಗಳು, ತಮ್ಮನ ಮಕ್ಕಳು, ತಮ್ಮ, ತಂಗಿ ಮನೆಯವರೆಲ್ಲ ಬಂದು ಅವರ ಸುತ್ತಮುತ್ತ ಸೋಫಾ, ಕುರ್ಚಿಗಳ ಮೇಲೆ ಮೈಹರವಿ ಕುಳಿತುಕೊಂಡು ಭೋರ್ಗರೆಯುತ್ತಿದ್ದ ಮಳೆಯ ಮಧ್ಯೆ ಬಿಸಿ ಬಿಸಿ ಕಾಫಿ ಸವಿಯುತ್ತಾ ಮೈಯೆಲ್ಲಾ ಕಿವಿಯಾಗಿ ಕುಳಿತುಕೊಂಡಾಗ ಶೇಷಗಿರಿಯಣ್ಣ ಕಥೆ ಮುಂದುವರಿಸಿದರು.

ನಮ್ಮ ಅಪ್ಪಯ್ಯ ಇದೇ ಹೆಗ್ಗೋಡಿನಿಂದ ಅನತಿ ದೂರದಲ್ಲಿರುವ ಸಂಪೇಕೈ ಊರಿನವರು. ಮನೆಯಲ್ಲಿ ಸುಮಾರು ಜನ. ಸಾಕಷ್ಟು ಸ್ಥಿತಿವಂತರೇ ಆದರೂ ಮನೆಯಲ್ಲಿ ಎಲ್ಲ ಜನರಿಗೂ ಅವಕಾಶವಿಲ್ಲ ಅಂತ ಬೇರೆಯದೇ ಒಂದು ಮನೆ ಮಾಡುವ ಆಲೋಚನೆ ಅಪ್ಪಯ್ಯನಿಗೆ ಬಂತಂತೆ. ಒಂದು ದಿನ ಈಗಿನ ಹೆಗ್ಗೋಡಿನ ಮಗ್ಗುಲಲ್ಲಿ ಗುಡ್ಡದ ಪಕ್ಕ ಇರುವ ನಮ್ಮ ಮೂಲ ಊರು ಸಂಪೇಕೈನಿಂದ ಹೊರಟು ಆ ದಿಂಬದಿಂದ ಗುಡ್ಡ ಹತ್ತಿ ಮೇಲೆ ನಿಂತು ನೋಡಿದರಂತೆ ಅಪ್ಪಯ್ಯ. ಗುಡ್ಡದ ತುದಿಯಿಂದ ನೋಡಿದರೆ ಈಗ ನಾವು ಹಳೆ ಹೆಗ್ಗೋಡು ಎಂದು ಕರೆಯುವ ಕೋವು, ಹೊನ್ನೇಸರ, ಕೇಡಲಸರ, ಭೀಮನಕೋಣೆಗಳ ನಡುವಿನಲ್ಲಿ ಒಂದಷ್ಟು ಗಿಡ ಮರ ಪೊದೆಗಳಿರುವ ಅತ್ತ ಕಾಡೂ ಅಲ್ಲದ, ಇತ್ತ ಬಯಲೂ ಅಲ್ಲದ ಪ್ರದೇಶ. ಎರಡು ಕೆರೆಗಳ ನಡುವೆ ಒಂದಷ್ಟು ಬೆಟ್ಟ, ಬ್ಯಾಣಗಳ ಜಾಗ. ಅಲ್ಲಲ್ಲಿ ಹಸುಗಳು ಮೇಯುತ್ತಾ ಇದ್ದವಂತೆ. ಎತ್ತರದಿಂದ ಪಕ್ಷಿ ನೋಟದಲ್ಲಿ ನೋಡಿದ ನಮ್ಮ ಅಪ್ಪಯ್ಯ ಮನೆ ಕಟ್ಟಲು ಇದು ಪ್ರಶಸ್ತವಾದ ಸ್ಥಳ, ಎರಡು ಕೆರೆಗಳ ನಡುವೆ ಹಸುಗಳು ಮೇಯುತ್ತಿರುವುದು ಶುಭಸೂಚಕ ಎಂದು ಅಲ್ಲೇ ನಿಶ್ಚಯಿಸಿ ಹೊರಟರಂತೆ.

ಗಿಡ ಮರ ಪೊದೆಗಳನ್ನು ಕಡಿದು ಮನೆ ಕಟ್ಟಿಸಲು ಶುರು ಮಾಡಿದ ಅಪ್ಪಯ್ಯ ತಿಮ್ಮಯ್ಯನವರನ್ನು ನೋಡಿ ಸ್ಮಶಾನದಲ್ಲಿ ಮನೆ ಕಟ್ಟಲು ಹೊರಟಿದ್ದಾನಲ್ಲ ಇವನಿಗೇನು ಹುಚ್ಚು ಎಂದು ಊರವರೆಲ್ಲ ಮಾತನಾಡಿಕೊಂಡರಂತೆ. ಯಾವುದಕ್ಕೂ ಜಗ್ಗದ, ಒಂದು ರೀತಿಯಲ್ಲಿ ಬಂಡಾಯದ ನಡವಳಿಕೆಗಳಿಂದಲೇ ಪ್ರಸಿದ್ಧನಾಗಿದ್ದ ಅಪ್ಪಯ್ಯ, ಜಪ್ಪಯ್ಯ ಅನ್ನಲಿಲ್ಲ. ಗೇಲಿ ಮಾಡಿದ ಊರ ಮಂದಿಗೆ 'ಇಲ್ಲೊಂದು ಊರು ಕಟ್ಟುತ್ತೇನೆ ನೋಡುತ್ತಾ ಇರಿ' ಎಂದು ಸವಾಲು ಹಾಕಿದರಂತೆ. ಕಾಫಿ ತಂದ ನನ್ನಮ್ಮ ಅಲ್ಲೇ ಕುಳಿತು ಕಥೆ ಕೇಳಲು ಸೇರಿಕೊಂಡಾಗ ನಮ್ಮ ತಂಡಕ್ಕೆ ಇನ್ನಷ್ಟು ಮೆರಗು ಬಂತು.

ಮನೆ ಕಟ್ಟಿ ಒಕ್ಕಲಾದ ತಿಮ್ಮಯ್ಯ ಹಾಗೆಯೇ ಮುಂದುವರೆದು ಕೇಡಲಸರದ ಹೇರಂಬರಾಯರ ಹತ್ತಿರ ಈ ಸುತ್ತಮುತ್ತ ಒಂದು ಅಂಗಡಿಯಿಲ್ಲ, ಇಲ್ಲಿ ಒಂದು ಮನೆ ಮಾಡಿ ಒಂದು ಅಂಗಡಿ ಹಾಕಿ ಕೊಟ್ಟು ನಿನ್ನ ಎರಡನೇ ಮಗನನ್ನು ಬಿಡು, ಅವನಿಗೊಂದು ಜೀವನೋಪಾಯಕ್ಕೆ ಆಗುತ್ತದೆ ಎಂದು ಹುರಿದುಂಬಿಸಿದಾಗ ಅಲ್ಲಿಗೆ ಒಂದು ದಿನಸಿ ಅಂಗಡಿಯಾಯಿತು. ನಂತರ ಇವರ ಹಿತೈಷಿಗಳು, ಬಂಧುಗಳು ಆದ ಒಬ್ಬರು ಅಲ್ಲೊಂದು ಜವಳಿ ಅಂಗಡಿ ತೆರೆದರಂತೆ. ಮತ್ತೊಬ್ಬರು ಒಂದು ಹೋಟೆಲ್ ಆರಂಭಿಸಿದರಂತೆ. ಆಗ ಅದೊಂದು ಅಂಗಡಿ ಬಯಲು ಆಯಿತು. ಊರು ಎನ್ನಿಸಿಕೊಳ್ಳಲು ಇನ್ನೇನು ಬೇಕು? ಪಕ್ಕದ ಊರುಗಳಿಂದ ಜನ ಬರಲು ಆರಂಭಿಸಿದಾಗ ಇದೊಂದು ಪುಟ್ಟ ಕೇಂದ್ರವೇ ಆಯಿತಂತೆ. ಛಲ ಬಿಡದ ತಿಮ್ಮಯ್ಯ, ಸಾಗರದಿಂದ ಅಮಲ್ದಾರರನ್ನು ಕರೆಸಿ ಊರು ಉದ್ಘಾಟನೆ ಮಾಡಿಸುವ ಪ್ರಸ್ತಾಪ ಮುಂದಿಟ್ಟರಂತೆ. ಆ ಕಾಲದಲ್ಲಿ ಕುದುರೆಯ ಮೇಲೆ ಬಂದ ಅಮಲ್ದಾರರು ಅರಳಿಕಟ್ಟೆಯ ಮೇಲ್ಭಾಗದ ಅಂಗಡಿ ಬಯಲನ್ನು, ಪ್ರಾಯಶಃ 1915ರಲ್ಲಿ, 'ಹೆಗ್ಗೋಡು' ಎಂದು ಉದ್ಘಾಟಿಸಿದಾಗ, ಮೊದಲಿನ ಹೆಗ್ಗೋಡು ಹಳೆಹೆಗ್ಗೋಡು ಎಂದು ಮರುನಾಮಕರಣಗೊಂಡಿತಂತೆ. ಅಲ್ಲಿಗೇ ಸುಮ್ಮನಾಗದ ತಿಮ್ಮಯ್ಯ 1916ರಲ್ಲಿ, ಆಗ ಪ್ರಚಲಿತವಿದ್ದ ಕಾನೂನಿನನ್ವಯ ಒಂದು ಸೊಸೈಟಿ ಸ್ಥಾಪಿಸಿ, 'ಮಹಾಗಣಪತಿ ಕೋ-ಆಪರೇಟಿವ್ ಸೊಸೈಟಿ' ಎಂದು ನೋಂದಾಯಿಸಿದರಂತೆ.

ಕ್ರಮೇಣ ಹೆಗ್ಗೋಡಿನಲ್ಲಿ ಒಂದು ಸಂತೆ ಮೈದಾನ, ಸೊಸೈಟಿ ಬಿಲ್ಡಿಂಗುಗಳು, ಪೋಸ್ಟ್ ಆಫೀಸ್, ಆಸ್ಪತ್ರೆ, ಜಾನುವಾರು ಆಸ್ಪತ್ರೆ, ಹೆಗ್ಗೋಡಿಗೆ ಹೊಂದಿಕೊಂಡಂತೆ ಅದರ ಪಕ್ಕದ ಕೇಡಲಸರ ವ್ಯಾಪ್ತಿಯಲ್ಲಿರುವ ಗುಡ್ಡದ ಮೇಲೆ ಹೈಸ್ಕೂಲು, ಇತ್ಯಾದಿಗಳೆಲ್ಲ ಒಂದಾದ ಮೇಲೊಂದರಂತೆ ಸೇರಿಕೊಂಡು ಸುಮಾರು 50 ವರ್ಷದ ಬೆಳವಣಿಗೆಯಲ್ಲಿ ಒಂದು ಊರಾಗಿ ಬೆಳೆಯಿತು. ನಂತರ ಸುತ್ತಮುತ್ತ ಬಂದ ನೀನಾಸಂ, ಬ್ಯಾಂಕ್, ಚರಕ, ಉಪ್ಪಿನಕಾಯಿ ಫ್ಯಾಕ್ಟರಿ, ಶ್ರಮಜೀವಿ ಆಶ್ರಮ, ಕಾಲೇಜು, ಪೆಟ್ರೋಲ್ ಬಂಕ್, ಸೂಪರ್ ಮಾರ್ಕೆಟ್, ಇತ್ಯಾದಿಗಳು ನಮ್ಮ ಹೆಗ್ಗೋಡಿನಲ್ಲಿ 'ಏನುಂಟು ಏನಿಲ್ಲ' ಎಂಬ ಮಟ್ಟಿಗೆ ಪ್ರಗತಿ ಸಾಧಿಸಿರುವುದಕ್ಕೆ ನಾವೆಲ್ಲರೂ ಸಾಕ್ಷಿಯಾಗಿದ್ದೇವೆ.

ಹೆಗ್ಗೋಡು ಗ್ರಾಮ ಚಿತ್ರಕೃಪೆ: ನೀನಾಸಂ

ಆದಿ ಸೋಲಿಗ ಜ್ಞಾನ ಹಂಚುವ ಹಾದಿ

10ನೇ ಪುಟದಿಂದ...

ಸಮುದಾಯ ಸಹಭಾಗಿತ್ವ

'ಈಗ ಅರಣ್ಯದಲ್ಲಿ ಜೀವ ವೈವಿಧ್ಯ (ಬಯೊ ಡೈವರ್ಸಿಟಿ) ರಕ್ಷಿಸುವುದು ಮಾತ್ರವಲ್ಲ, ಜೀವ ಸಾಂಸ್ಕೃತಿಕ ವೈವಿಧ್ಯವನ್ನೂ (ಬಯೋ ಕಲ್ಚರಲ್ ಡೈವರ್ಸಿಟಿ) ರಕ್ಷಿಸಬೇಕಾಗಿದೆ. ಸಮುದಾಯದ ಸಹಭಾಗಿತ್ವ ಇಲ್ಲದೆ ಈ ಕಾರ್ಯಕ್ರಮ ಯಶಸ್ವಿಯಾಗಲು ಸಾಧ್ಯವೇ ಇಲ್ಲ. ಹೀಗಾಗಿ, ಎಲ್ಲ ಪೋಡುಗಳ ಸೋಲಿಗರನ್ನು ತೊಡಗಿಸಿಕೊಳ್ಳಲು ಸದಾ ಪ್ರಯತ್ನಿಸುತ್ತೇವೆ. ಒಂದು ಆದಿವಾಸಿ ಸಮುದಾಯದವರನ್ನು ಮತ್ತೊಂದು ಆದಿವಾಸಿ ಸಮುದಾಯದವರೊಂದಿಗೆ ಭೇಟಿ ಮಾಡಿಸುವುದು, ವಿವಿಧ ಹಾಡಿಗಳಿಗೆ ಕರೆದೊಯ್ಯುವುದು, ಅವರ ಸಂಸ್ಕೃತಿಯ ಪರಿಚಯ ಮಾಡಿಸಲಾಗುತ್ತಿದೆ' ಎಂದು ಸಮಿರಾ ಅಗ್ನಿಹೋತ್ರಿ ವಿವರಿಸಿದರು.

ಯುವಜನರ ವಿನಿಮಯ

ಆದಿವಾಸಿ ಯುವಜನರ ವಿನಿಮಯ ಎಂಬ ವಿಶಿಷ್ಟ ಕಾರ್ಯಕ್ರಮವೂ ಭಾಷಾ ಪುನರುಜ್ಜೀವನ ಪ್ರಯತ್ನದ ಭಾಗವಾಗಿದೆ. ಇಲ್ಲಿನ ಯುವಜನರನ್ನು ನೀಲಗಿರಿಯ ಆದಿವಾಸಿಗಳ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಅಲ್ಲಿನ ಸಂಸ್ಕೃತಿ ಆಚಾರ ವಿಚಾರಗಳನ್ನು ಪರಿಚಯಿಸುವ ಪ್ರಯತ್ನವನ್ನು ಈ ಕಾರ್ಯಕ್ರಮದಲ್ಲಿ ಮಾಡಲಾಗುತ್ತಿದೆ.

ಪ್ರಯತ್ನ ನಿರಂತರ

'ಎರಡು ವರ್ಷಗಳಿಂದ ನಮ್ಮ ಪ್ರಯತ್ನ ನಡೆಯುತ್ತಿದೆ. ಈಗ ಆರಂಭಿಕ ಹಂತದಲ್ಲಿದೆ. ಗಡುವು ಹಾಕಿಕೊಂಡು ಅನುಷ್ಠಾನಕ್ಕೆ ತರುವ ಯೋಜನೆ ಇದಲ್ಲ. ಇದು ನಿರಂತರವಾಗಿ ನಡೆಯಲಿದೆ' ಎಂದು ಹೇಳುತ್ತಾರೆ ಸಮಿರಾ.

'ಯುವ ಜನರನ್ನು ನಮ್ಮೊಂದಿಗೆ ಕರೆದೊಯ್ಯಲು ಯತ್ನಿಸುತ್ತಿದ್ದೇವೆ. ಆದರೆ, ಅವರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿಲ್ಲ. ಹಾಗಾಗಿ, ಶಾಲೆಗೆ ಹೋಗುವಂತಹ ಚಿಕ್ಕ ಮಕ್ಕಳನ್ನು ಕೇಂದ್ರೀಕರಿಸಿ ನಮ್ಮ ಕೆಲಸವನ್ನು ಮಾಡುತ್ತಿದ್ದೇವೆ. ಮಕ್ಕಳು ಆಸಕ್ತಿಯಿಂದ ಕೇಳುತ್ತಿದ್ದಾರೆ. ಕಲಿಯುತ್ತಿದ್ದಾರೆ. ಸತತವಾಗಿ ಈ ಕೆಲಸ ನಡೆದರೆ ಸಮುದಾಯದ ಹೊಸ ತಲೆಮಾರು ಕೂಡ ಕಾಡಿನ ಜ್ಞಾನದಲ್ಲಿ ಶ್ರೀಮಂತರಾಗುವುದರಲ್ಲಿ ಸಂಶಯವಿಲ್ಲ' ಎಂಬುದು ಈ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿರುವ ಲಕ್ಷ್ಮಿಯವರ ಅನಿಸಿಕೆ.

ಸೋಲಿಗರ ಅಕ್ಷರ ಮಾಲೆ ಕೋಷ್ಟಕದ ಬಗ್ಗೆ ತಂಡದ ಸದಸ್ಯರಿಗೆ ವಿವರಣೆ ನೀಡುತ್ತಿರುವುದು

> **ನಮ್ಮ ಭಾಷೆ, ಸಂಸ್ಕೃತಿ ಉಳಿಸುವ ಪ್ರಯತ್ನಕ್ಕೆ ಬೆಂಬಲ ನೀಡುತ್ತಿದ್ದೇವೆ. ಇದನ್ನು ಪರಿಣಾಮಕಾರಿಯಾಗಿ ಮಾಡುವ ಅವಶ್ಯಕತೆ ಇದೆ. ನಮ್ಮ ಮಕ್ಕಳಿಗೆ ಶಿಕ್ಷಣದ ರೂಪದಲ್ಲಿ ಈ ಮಾಹಿತಿಯನ್ನು ತಿಳಿಸುವ ಕೆಲಸವಾಗಬೇಕು. ಸರ್ಕಾರ ಮುಂದಾದರೆ, ಸೋಲಿಗ ಭಾಷೆ, ಸಂಸ್ಕೃತಿ ಉಳಿಸುವ ಪ್ರಯತ್ನಕ್ಕೆ ದೊಡ್ಡ ಶಕ್ತಿ ಬರುತ್ತದೆ**
>
> **ಸಿ.ಮಾದೇಗೌಡ**
> ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಗಿರಿಜನ ಬುಡಕಟ್ಟು ಅಭಿವೃದ್ಧಿ ಸಂಘ

ಯೂಟ್ಯೂಬ್ ಚಾನೆಲ್

ಸೋಲಿಗರ ಜ್ಞಾನ, ಆಚರಣೆ, ಆಹಾರ ಸಂಸ್ಕೃತಿ ದಾಖಲಿಸಿ, ಯುವಜನರಿಗೆ ತಿಳಿಸಲು 'ಸೋಲಿಗ ಕಾಡಿನ ಗೇನ–soliga traditional knowledge' ಎಂಬ ಯೂಟ್ಯೂಬ್ ಚಾನೆಲ್ ಅನ್ನು ಸ್ಥಳೀಯರೇ ನಿರ್ವಹಿಸುತ್ತಿದ್ದಾರೆ.

ಕಾಡಿನ ಆಹಾರಗಳು, ಕಾಡಿನಗೆಣಸುಗಳು, ಸೋಲಿಗರ ಪೂಜನೀಯ ಸ್ಥಳಗಳು, ಜನಾಂಗದವರ ಜಾನಪದ ಹಾಡುಗಳು, ಆಟಗಳು, ವಿವಿಧ ಗಿಡ ಮರಗಳ ಉಪಯೋಗಗಳು.. ಹೀಗೆ ಆದಿವಾಸಿ ಜನರ ದೈನಂದಿನ ಬದುಕಿನ ಭಾಗವಾಗಿರುವ ವಿಷಯಗಳನ್ನು ಪುಟ್ಟ ಪುಟ್ಟ ವಿಡಿಯೊ ತುಣುಕುಗಳಲ್ಲಿ ದಾಖಲೀಕರಣ ಮಾಡಿ ಯೂಟ್ಯೂಬ್‌ನಲ್ಲಿ ಹಾಕಲಾಗುತ್ತಿದೆ. ಸದ್ಯ 26 ವಿಡಿಯೊಗಳು ಚಾನೆಲ್‌ನಲ್ಲಿ ಲಭ್ಯವಿವೆ.

ಬಲು ರುಚಿ ಬಂಡೂರು ಕುರಿ

10ನೇ ಪುಟದಿಂದ...

ದುಬಾರಿ ಬೆಲೆ ನೀಡಿದರೂ, ಉತ್ಕೃಷ್ಟ ಮಾಂಸ ಸಿಗುವ ಬಗ್ಗೆ ಗ್ರಾಹಕರಿಗೆ ಅನುಮಾನವಿದೆ. ಇವನ್ನೆಲ್ಲ ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ಬಂಡೂರು ಕುರಿ ಮಾಂಸ ಮಾರಾಟವನ್ನು ಉತ್ತೇಜಿಸಲು ಚಿಂತನೆ ನಡೆಸುತ್ತಿದೆ. ನಂದಿನ ಹಾಲಿನ ಕೇಂದ್ರಗಳಂತೆ ಮಾಂಸ ಮಾರಾಟಕ್ಕೂ ಕೇಂದ್ರಗಳನ್ನು ತೆರೆಯಲು ಯೋಚಿಸುತ್ತಿದೆ. ಹಾಗೆ ಏನಾದರೂ ಆದರೆ, ರಾಜ್ಯದೆಲ್ಲೆಡೆ ಬಂಡೂರು ಕುರಿ ಮಾಂಸ ಪ್ಯಾಕೆಟ್ ರೂಪದಲ್ಲಿ ಸಿಗಲಿದೆ. ದೇಶದಾದ್ಯಂತ ಮಾರುಕಟ್ಟೆ ವಿಸ್ತರಣೆಯಾಗಲಿದೆ.

ಈ ತಳಿಯ ಹೆಣ್ಣು ಕುರಿಗಳನ್ನು ಮುಖ್ಯವಾಗಿ ಸಂತಾನೋತ್ಪತ್ತಿಗೆ ಹಾಗೂ ಟಗರುಗಳನ್ನು ಮಾಂಸದ ದೃಷ್ಟಿಯಿಂದ ಸಾಕಲಾಗುತ್ತದೆ. ಟಗರುಗಳು ಸರಾಸರಿ 30 ರಿಂದ 45 ಕೆ.ಜಿ ವರೆಗೆ ಮತ್ತು ಹೆಣ್ಣು ಕುರಿಗಳು 20 ರಿಂದ 35 ಕೆ.ಜಿ ವರೆಗೆ ತೂಗುತ್ತವೆ. 15 ತಿಂಗಳ ನಂತರದ ಕುರಿ ಅಥವಾ ಟಗರಿನ ಮಾಂಸ ಅತ್ಯಂತ ರುಚಿಕಟ್ಟಾಗಿರುತ್ತದೆ.

ಬಂಡೂರು ಕುರಿ ಮಾಂಸದ ರುಚಿ ನೋಡಿದವರು 'ಬಂಡೂರು' ಎನ್ನುವ ಹೆಸರು ಕಿವಿ ಮೇಲೆ ಬೀಳುತ್ತಿದ್ದಂತೆ ಬಾಯಲ್ಲಿ ನೀರೂರುವುದನ್ನು ತಡೆಯಲು ಸಾಧ್ಯವೇ ಇಲ್ಲ.

> **ಮೂವತ್ತು ವರ್ಷಗಳಿಂದಲೂ ಸಾಂಪ್ರದಾಯಿಕ ಶೈಲಿಯ ಹುಂಡಿಯಲ್ಲೇ ಕುರಿ ಸಾಕುತ್ತಿದ್ದೇವೆ. ಹೊಲ-ಗದ್ದೆಗೆ ಅತ್ಯುತ್ತಮವಾದ ಗೊಬ್ಬರ ಇದರಿಂದಲೇ ಸಿಗುತ್ತಿದೆ. ಕೃಷಿಯ ಇನ್ನಿತರ ಮೂಲಗಳನ್ನು ಬಿಟ್ಟು, ವರ್ಷಕ್ಕೆ ಏನಿಲ್ಲವೆಂದರೂ ಎರಡೂವರೆಯಿಂದ ಮೂರು ಲಕ್ಷ ಹಣವನ್ನು ಕುರಿಗಳಿಂದಲೇ ಗಳಿಸುತ್ತಿದ್ದೇನೆ**
>
> **ಚಿಕ್ಕರಾಜು** ರೈತ

ಬಂಡೂರಿನಲ್ಲೇ ಇಲ್ಲ ಮಟನ್ ಸ್ಟಾಲ್!

ಬೇರೆ ಮಾಂಸಕ್ಕಿಂತ ಭಿನ್ನ ರುಚಿಯನ್ನು ಹೊಂದಿರುವುದು ಬಂಡೂರು ಕುರಿಯ ಹೆಗ್ಗಳಿಕೆ. ಇತರ ಜಾತಿಯ ಕುರಿ ಅಥವಾ ಮೇಕೆಯಲ್ಲಿ ಕುತ್ತಿಗೆಯಿಂದ ಹೊಟ್ಟೆಯ ಭಾಗದವರೆಗೆ ಒಂದೇ ಕಡೆ ಕೊಬ್ಬು ಶೇಖರಣೆಯಾಗಿರುತ್ತದೆ. ಆದರೆ, ಬಂಡೂರು ಕುರಿ ಹಾಗಲ್ಲ. ಮಾಂಸದ ಪ್ರತಿ ಪದರದಲ್ಲಿಯೂ ಎಳೆ ಎಳೆಯಾಗಿ ಕೊಬ್ಬು ಹಂಚಿಕೆಯಾಗಿರುತ್ತದೆ. ಈ ವೈಶಿಷ್ಟ್ಯವೇ ಇದರ ಮಾಂಸದ ಉತ್ಕೃಷ್ಟತೆಗೆ ಕಾರಣವಾಗಿದೆ.

ಆದಾಗ್ಯೂ, ಈ ಕುರಿಯ ಮಾಂಸದಂಗಡಿಗಳು, ಬಂಡೂರು ಅಥವಾ ಬನ್ನೂರು ಭಾಗದಲ್ಲೇ ಹೆಚ್ಚಾಗಿ ಕಾಣಸಿಗುವುದಿಲ್ಲ. ಪ್ರತಿ ಕೆ.ಜಿ.ಗೆ ಸಾವಿರಕ್ಕೂ ಹೆಚ್ಚಿನ ಬೆಲೆ ಇರುವ ಕಾರಣ, ವ್ಯವಹಾರ ಅಷ್ಟಾಗಿ ನಡೆಯುವುದಿಲ್ಲ ಎಂಬುದು ಸ್ಥಳೀಯ ವರ್ತಕರ ಮಾತು.

ಮೊದಲ ಓದು

ಮಹಾತ್ಮ, ಪತ್ರಕರ್ತನಾಗುವವರೆಗೂ...

ಅಹಿಂಸೆಯ ಅಸ್ತ್ರವನ್ನೇ ಬಳಸಿ ಬ್ರಿಟಿಷರನ್ನು ದೇಶದಿಂದ ಓಡಿಸುವ ಮೂಲಕ, ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧಿ ಅವರು ತತ್ವಜ್ಞಾನಿ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಮೇಧಾವಿಯ ಜತೆಗೆ ಪ್ರಸಿದ್ಧ ಪತ್ರಕರ್ತರೂ ಹೌದು. ಗಾಂಧಿ ಅವರ ಜೀವನ, ಹೋರಾಟ ಮತ್ತು ಪತ್ರಿಕೋದ್ಯಮದ ಪರಿಚಯವನ್ನು ಒಳಗೊಂಡ ಪತ್ರಕರ್ತ ಗಾಂಧಿ ಕೃತಿಯನ್ನು ಲೇಖಕ ಡಾ. ಅಮ್ಮಸಂದ್ರ ಸುರೇಶ್ ರಚಿಸಿದ್ದಾರೆ.

ಗಾಂಧಿ ಅವರ ಬದುಕು, ಹೋರಾಟಗಳ ಸಂಕ್ಷಿಪ್ತ ಪರಿಚಯದ ಜತೆಗೆ, ಪತ್ರಿಕೋದ್ಯಮದಲ್ಲಿ ಮಹಾತ್ಮ ಗಾಂಧಿ ಅವರ ಆಸಕ್ತಿ, ಬರಹ, ಸಂಪದಾಕತ್ವ, ವೈಚಾರಿಕತೆ ಕುರಿತ ಹಲವು ವಿಷಯಗಳ ಮೇಲೆ ಈ ಕೃತಿ ಬೆಳಕು ಚೆಲ್ಲುತ್ತದೆ. ಅದರಲ್ಲೂ ಇಂದಿನ ಪತ್ರಿಕೋದ್ಯಮ ಹಾಗೂ ಗಾಂಧೀಜಿ ಅವರ ನೈತಿಕ ಪತ್ರಿಕೋದ್ಯಮದೊಂದಿಗೆ ಲೇಖಕರು ಮುಖಾಮುಖಿಯಾಗಿದ್ದಾರೆ.

ಮಹಾತ್ಮಾ ಗಾಂಧಿ ಅವರ ಸಂಪಾದಕತ್ವದ ಇಂಡಿಯನ್ ಒಪಿನಿಯನ್, ಯಂಗ್ ಇಂಡಿಯಾ, ಹರಿಜನ, ದಿ ಇಂಡಿಪೆಂಡೆನ್ಸ್ ಹಾಗೂ ನವಜೀವನ ಎಂಬ ಪತ್ರಿಕೆಯ ಕುರಿತ ಮಾಹಿತಿ ಈ ಕೃತಿಯಲ್ಲಿದೆ. ದಕ್ಷಿಣ ಆಫ್ರಿಕಾದಲ್ಲಿದ್ದಾಗ ಆರಂಭಿಸಿದ ಇಂಡಿಯನ್ ಒಪಿನಿಯನ್ ಪತ್ರಿಕೆಯ ಉಸ್ತುವಾರಿಯನ್ನು ಹೆನ್ರಿಪೊಲಾಕ್ ಅವರಿಗೆ ಹಾಗೂ ಅದರ ಗುಜರಾತಿ ಆವೃತ್ತಿಯನ್ನು ತಮ್ಮ ಪುತ್ರ ಮಣಿಲಾಲ್ ಗಾಂಧಿ ಅವರಿಗೆ ವಹಿಸಿದಾಗ ಪತ್ರಿಕೆಯ ಸಂಪಾದಕ ಹೇಗಿರಬೇಕು ಎಂಬುದನ್ನು ಪತ್ರ ಮೂಲಕ ಹೇಳಿದ ಮಾತುಗಳು ಇಂದಿಗೂ ಪ್ರಸ್ತುತ.

'ನನ್ನ ಜೀವನವೇ ನನ್ನ ಸಂದೇಶ' ಎಂದು ಹೇಳಿದ ಮಹಾತ್ಮ ಗಾಂಧಿ ಅವರು ಮುನ್ನಡೆಸಿದ ಪತ್ರಿಕೆಗಳು, ಅವರ ಪತ್ರಿಕೋದ್ಯಮದ ತತ್ವಗಳು, ಅದರ ವಿಧಗಳು, ಪ್ರಸ್ತುತ ಸಂದರ್ಭದಲ್ಲಿ ಗಾಂಧೀಜಿ ಅವರ ನೈತಿಕ ಪತ್ರಿಕೋದ್ಯಮದ ಪ್ರಸ್ತುತತೆ ಸೇರಿದಂತೆ ಅವರು ಈ ಕ್ಷೇತ್ರ ಕುರಿತು ಇಟ್ಟುಕೊಂಡಿದ್ದ ಅವಿನಾಭಾವ ಸಂಬಂಧಗಳನ್ನು ಈ ಕೃತಿ ಸುಂದರವಾಗಿ ಕಟ್ಟಿಕೊಟ್ಟಿದೆ. ಪತ್ರಿಕೋದ್ಯಮ ವಿಷಯ ಆಸಕ್ತರಿಗೆ, ಮಾಧ್ಯಮ ಕ್ಷೇತ್ರದಲ್ಲಿರುವವರಿಗೆ ಮತ್ತು ಗಾಂಧೀಜಿ ಕುರಿತು ಮಾಹಿತಿ ಬಯಸುವವರಿಗೆ ಈ ಕೃತಿ ನೆರವಾಗಲಿದೆ.



ಪು: 188 ₹225

ಪತ್ರಕರ್ತ ಗಾಂಧಿ
ಲೇ: ಡಾ. ಅಮ್ಮಸಂದ್ರ ಸುರೇಶ್
ಪ್ರ: ಮಹಿಮಾ ಪ್ರಕಾಶನ
ಸಂ: 94487 59815

ಬಳ್ಳಾರಿ ಕನ್ನಡ ಹಿಡಿದಿರಿಸಿದ ಕಥೆಗಳು

ಹೈದರಾಬಾದ್ ಕರ್ನಾಟಕ ಭಾಷಾ ಸೊಗಡು ವೈವಿಧ್ಯಮಯವಾಗಿದೆ. ಬಳ್ಳಾರಿ ಸೀಮೆಯ ಭಾಷೆಯೆಂದರೆ ಆನೆಪಾ ಒಂಟ್ಯಾ ಅಂತಿದ್ರು. ಏನಪ್ಪಾ ಹೊರಟೆಯಾ ಅಂತ ಉಭಯಕುಶಲೋಪರಿಯ ವಿಧ ಅದು. ಅದೇ ಭಾಷಾ ಸೊಗಡನ್ನು ಇರಿಸಿಕೊಂಡು ಕಥೆ ಹೆಣೆದಿದ್ದಾರೆ ಪ್ರವೀಣ್ ಕುಮಾರ್ ಜಿ. ನಮ್ಮ ನೆಲದ, ಸಂಸ್ಕೃತಿಯೊಂದಿಗೆ ಭಾಷಾ ವೈವಿಧ್ಯವನ್ನು ಗುರುತಿಸಿ, ದಾಖಲಿಸುವ ಕೆಲಸದಲ್ಲಿ ಈ ಪುಸ್ತಕ ಬಳ್ಳಾರಿ ಕನ್ನಡವನ್ನು ಸಶಕ್ತವಾಗಿ ಹಿಡಿದಿರಿಸಿದೆ.

ಜಾತಿ, ಲಿಂಗತಾರತಮ್ಯ, ಬಾಲ್ಯವಿವಾಹ, ಮೌಢ್ಯ ಮತ್ತು ಕೋಮು ವಿಷಯಗಳನ್ನು ಕಥಾ ಹಂದರದಲ್ಲಿ ಬಲು ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ. ವ್ಯಂಗ್ಯ ಮತ್ತು ವಿಡಂಬನೆಯಲ್ಲಿಯೇ ಬಾಲ್ಯವಿವಾಹದ ಕತೆ ಓದುಗರಿಗೆ ನಗಿಸುತ್ತಲೇ ಬಾಲ್ಯವಿವಾಹದ ಪರಿಣಾಮವನ್ನು ಹೇಳುತ್ತದೆ. ಚಾಕ್ಲೆಟ್ ಕತೆಯಲ್ಲಿ ಪ್ರೀತಿ ಪ್ರೇಮ, ಕೋಮು ಗಲಭೆಯಾಗಿ ಬದಲಾಗುವ ವಿಷಯವನ್ನು ನಾಜೂಕಾಗಿ ಹೆಣೆಯಲಾಗಿದೆ. ಕುಂಟಕಾಗಿ, ಉಡ, ಮುಂತಾದ ಕತೆಗಳು ವಿಶಿಷ್ಟ ನಿರೂಪಣೆಯಿಂದಾಗಿ ಗಮನಸೆಳೆಯುತ್ತವೆ. ರೊಟ್ಟಿ ಬೆಂಡಿಕಾಯಿ ಚಟ್ನಿ ನಗರೀಕರಣದ ಬದುಕು ಒಂಟಿಯಾಗಿಸುವ ಪರಿಯನ್ನು ಬಿಚ್ಚಿಡುತ್ತ ಹೋಗುತ್ತದೆ. ಅಜ್ಜ ಮೊಮ್ಮಗನ ವಾತ್ಸಲ್ಯದ ಈ ಕತೆ ಬಹುತೇಕವಾಗಿ ಉದ್ಯೋಗವರಸಿ ಬೆಂಗಳೂರು ಸೇರಿದವರೊಂದಿಗೆ ಕನೆಕ್ಟ್ ಆಗುತ್ತದೆ. ಒಂಬತ್ತು ಕತೆಗಳಲ್ಲಿ ಒಂಬತ್ತು ವೈವಿಧ್ಯಮಯವ ವಿಷಯವನ್ನು ಹೆಣೆಯಲಾಗಿದೆ. ಬಳ್ಳಾರಿ ಸೀಮೆಯ ಭಾಷೆ ಓದುಗರ ಓಘವನ್ನು ಎಲ್ಲಿಯೂ ಕಡಿಮೆ ಮಾಡದು.

ಪು: 121 ₹150

ಎಡೆ
(ಕಥಾ ಸಂಕಲನ)
ಲೇ: ಪ್ರವೀಣ್ ಕುಮಾರ್ ಜಿ
ಪ್ರ: ಒಲವು ಬರಹ
ಸಂ: 9845845747

ಸಮೂಹ ಪ್ರಜ್ಞೆ ಮಾತಾದ ಕೃತಿ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಹಾಸಣಗಿ ಎಂಬ ಚಿಕ್ಕ ಹಳ್ಳಿಯಲ್ಲಿ ನೂರು ವರ್ಷಗಳ ಹಿಂದೆ ಆರಂಭವಾದ ಪ್ರಾಥಮಿಕ ಶಾಲೆಯ ಚಿತ್ರಣವನ್ನು ಹಳೆ ವಿದ್ಯಾರ್ಥಿಗಳ ಮೂಲಕ 'ತೇಜೋನಿಧಿ'ಯಲ್ಲಿ ಕಟ್ಟಿಕೊಡಲಾಗಿದೆ. ಈ ಕೃತಿಯಲ್ಲಿರುವ ಲೇಖನಗಳು ಶಾಲೆಯ ಜೊತೆಗೆ ಇಡೀ ಗ್ರಾಮ, ಅಲ್ಲಿನ ಪರಿಸರ, ಸುತ್ತಮುತ್ತಲಿನ ಪ್ರದೇಶಗಳ ಸಮೃದ್ಧವಾದ ಸಾಂಸ್ಕಂತಿಕ ಇತಿಹಾಸವನ್ನೂ ತೆರೆದಿಡುತ್ತದೆ. 'ತೇಜೋನಿಧಿ'ಯು ಮೂರುಭಾಗಗಳಲ್ಲಿ ಮೂಡಿ ಬಂದಿದೆ. ಮೊದಲ ಭಾಗವು ಹಿರಿಯರ, ಶಿಕ್ಷಣ ತಜ್ಞರ, ಸಾಹಿತಿಗಳ ಲೇಖನಗಳನ್ನು ಒಳಗೊಂಡಿದೆ. ಎರಡು ಮತ್ತು ಮೂರನೇ ಭಾಗಗಳಲ್ಲಿ ಹಾಸಣಗಿ ಶಾಲೆಯ ಹಳೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಇತರರ ಬರಹಗಳು ಅಡಕವಾಗಿವೆ. ಮೊದಲ ಲೇಖನವಾಗಿ ಮಹಾತ್ಮಗಾಂಧಿ ಅವರು 1908ರಲ್ಲಿ 'ಹಿಂದ್ ಸ್ವರಾಜ್' ಕೃತಿಯಲ್ಲಿ ಬರೆದ ಲೇಖನವನ್ನು ಆಯ್ದುಕೊಳ್ಳಲಾಗಿದೆ. ಅಲ್ಲದೆ ಜ್ಞಾನಪೀಠ ಪುರಸ್ಕೃತ ಡಾ.ಯು.ಆರ್. ಅನಂತಮೂರ್ತಿ ಅವರ ಉಪನ್ಯಾಸದ ಆಯ್ದ ಭಾಗ, ಸಾಹಿತಿ ಬರಗೂರು ರಾಮಚಂದ್ರಪ್ಪ, ನಿರಂಜನ ವಾನಳ್ಳಿ, ರಾಜಾಸಾಬ್, ಪಿ.ಎನ್.ಶಾಸ್ತ್ರಿ ಮತ್ತಿತರರ ಬರಹಗಳೂ ಇವೆ. ವಸಂತ ಭಟ್ ಅವರು ಈ ಕೃತಿಯನ್ನು ಸಂಪಾದಿಸಿದ್ದಾರೆ. ಒಟ್ಟಿನಲ್ಲಿ ಈ ಕೃತಿಯು ದೇಶದ ಮತ್ತು ರಾಜ್ಯದ ಹಳ್ಳಿಗಳ ಚಿತ್ರಣವನ್ನೂ ಶಿಕ್ಷಣದ ಮಹತ್ವವನ್ನೂ ಓದುಗರ ಮುಂದಿಡುತ್ತದೆ.



ಪು: 360 ₹350

ತೇಜೋನಿಧಿ
ಸಂ: ವಸಂತ ಭಟ್
ಪ್ರ: ಹರಿವು ಬುಕ್ಸ್
ಸಂ: 8088822171

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ನಲ್ದೊಟ್ಟಿಲು

ನಲ್ದೊಟ್ಟಿಲು (ನಾ). ಅಂದವಾದ ತೊಟ್ಟಿಲು
(ನಲ್ + ತೊಟ್ಟಿಲು)

ಕುವೆಂಪು ಅವರು ವಾಲಿಯ ಬದುಕಿನ ಕೊನೆಯ ಕ್ಷಣದಲ್ಲಿ ಅವನಿಂದ ಹೊಮ್ಮಿಸಿರುವ ತಾಯ್ನಾಡಿನ ಬಗೆಗಿನ ನುಡಿ ಹೆತ್ತನಾಡಿನ ಬಗ್ಗೆ ವ್ಯಕ್ತಪಡಿಸಿರುವ ಸತ್ಯ ದರ್ಶನ. ದಿನದ ಅಂತ್ಯದಲ್ಲಿ ಸಂಧ್ಯೆ ಆವರಿಸುವಂತೆ ಅವನಿಗೆ ಸಾವು ಬಳಿ ಸಾರಿದೆ ಎಂಬ ಚಿತ್ರಣ ಪ್ರಕೃತಿ ಸಹಜ ಭಾವ. ನಿಸರ್ಗಧ್ಯಾನಿ ಕುವೆಂಪು ಪ್ರತಿ ಪಾತ್ರದ ಸಂದರ್ಭ, ಸಂಘರ್ಷ, ಶಾಂತನೆಲೆ, ಪ್ರೀತಿ, ವಾತ್ಸಲ್ಯ, ದ್ವೇಷ ಕ್ರೌರ್ಯಗಳಲ್ಲಿ ಪ್ರಕೃತಿಯನ್ನು ಒಂದಾಗಿಸಿ ರೇಖಿಸಿರುವ ರೀತಿ ಅನನ್ಯ.

ವಾಲಿಯು ತನ್ನ ಹೆತ್ತೂರು ಕಿಷ್ಕಿಂಧೆಯನ್ನು ನೆನೆಯುವಾಗ-ಕವಿಯು ಹುಟ್ಟುವಾಗ ಬಸಿರು ನೀನಾದೆ ಮತ್ತು ನಲ್ದೊಟ್ಟಿಲಾದೆ ಎಂದು ವರ್ಣಿಸಿದ್ದಾರೆ. 'ನಲ್ದೊಟ್ಟಿಲು' ಪ್ರೀತಿ ವಾತ್ಸಲ್ಯ ಮಧುರ ಸುಂದರ ಭಾವದ ಮಗು ಈ ಹೊಸ ಪ್ರಪಂಚದಲ್ಲಿ ನಲ್ಮೆಯನ್ನು ಕಂಡ ನೆಲೆ!

ಆಃ ನನ್ನ ಕಿಷ್ಕಿಂಧೆ!..... ತಾಯ್ತಂದೆಯರ ನಾಡೆ!
ತಾಯ್‌ನುಡಿಯ ಮಲೆಗುಡಿಯ
ಬೆಟ್ಟದಡವಿಯ ಬೀಡೆ!
ತಾಯ್‌ವಸಿರ್ ನೀನಾದೆ ಪುಟ್ಟುವಾಗಳ್, ಮತ್ತೆ
ನಲ್ದೊಟ್ಟಿಲಾದೆ, ಜೋಗುಳವಾದೆಯೆಳೆಯಂಗೆ,
ತಾರುಣ್ಯಕುಯ್ಯಾಲೆಯಾದೆ, ಜೌವನಕಾದೆ
ಪೆಣ್ಣೊಲ್ಮೆ. ಮುಪ್ಪಿಗೆ ಧರ್ಮದಾಶ್ರಯಮಾಗಿ,
ತೀರುವೆಡೆ ಶಾಂತಿಯಾಗರಮಾಗುತಿರ್ದಳಂ
ನಿನ್ನನಾಂ ತೊರೆಯುತಿಹನೌ, ಮನ್ನಿಸಾ, ತಾಯಿ!

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

ಕವನ
ಮಲ್ಲಿಕಾರ್ಜುನಗೌಡ ತೂಲಹಳ್ಳಿ ಅವರ ಕೆಂಡ ತೂರುವ ಆಟ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಚಿತ್ರ ಕಥೆ

ಬಿಸಿಲ ಸಂಗಡ ಬದುಕು...

ಕಲ್ಲು ಕ್ವಾರಿನೇ ನಮಗ ದೊಡ್ಡ ಈಜುಕೊಳ. ಇಲ್ಲಿ ಯಾರ ಭಿ ರೊಕ್ಕಾ ಕೇಳಲ್ಲ, ಟೇಮಾಯ್ತು ಮ್ಯಾಗ ಬರ್ರಿ ಅಂತ ಸೀಟಿ ಊದಿ ಕರೆಲ್ಲ.. ನಾವು, ನಮ್ಮ ಈಜು.. ಈಟೇ ನಮ್ ದುನಿಯಾ. ಏನಂತೀರಿ?

ಛಾದ ಕೂಡ, ಗರಂ ಮಿರ್ಚಿ ಇಲ್ಲಂದುರ್.. ಏನ್ ಮಜಾ ಇರ್ತದ್ರಿ

ಸಂತಿ ಮುಗಿಸಿ, ಊರಿಗೆ ಹೋಗಲತಿದ್ದೆವು... ನಮಗಭಿ ಮೊಮ್ಮಕ್ಕಳಗತೆ ಐಸ್‌ಕ್ರೋಟು ತಿಂಬಮ್ಮಿ ಅನಸ್ತು...



ರೈಲ್ ಬರಲಾಕ ಇನ್ನಾ ಟೈಮದ.. ಆಟರಾಗ ಧಗೀಗೆ ತೋಯ್ದು ಮೈಗಿ ತಣ್ಣೀರಾಗ ಮೈತೊಳಕೊಂಡು ಬರ್ತೆ..

ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕದಲ್ಲಿ ಸುಡುವ ಬಿಸಿಲು, ಬೆವರು, ಬಾಯಾರಿಕೆ, ಗರಂ ಚಹಾ ಮತ್ತು ಮಿರ್ಚಿ ಬಜ್ಜಿ ಎಲ್ಲವೂ ಸಹಜ ಜೀವನದ ಭಾಗವೇ. ಗರಿಷ್ಠ ಉಷ್ಣಾಂಶ 45 ಡಿಗ್ರಿ ಸೆಲ್ಸಿಯಸ್ ಗಡಿ ದಾಟಿದರೂ ಬಿಸಿಗಾಳಿ ಸೂಸುವ ಬಿಸಿಲಿನ ಬಗ್ಗೆ ಚಿಂತಿಸುವುದಿಲ್ಲ, ಗೊಣಗುವುದಿಲ್ಲ, ಶಾಪ ಹಾಕುವುದಿಲ್ಲ. ನಡು ಮಧ್ಯಾಹ್ನದಲ್ಲೂ 'ಬರ್ರೀ, ಚಹಾ ಕುಡಿಯೋಣ' ಎನ್ನುವ ಆಹ್ವಾನ ಕೂಡ ಇಲ್ಲಿ ಸಹಜವೇ!

ಇಡೀ ವಾತಾವರಣ ಕಾದ ಕಾವಲಿಯಂತಾದರೂ ಬಜಾರ್‌ನಲ್ಲಿ ಖರೀದಿ ಭರಾಟೆ ಎಂದಿನಂತೆಯೇ ಇರುತ್ತದೆ. ಬಾಲಕರು, ಯುವಕರು ಗಲ್ಲಿ ಕ್ರಿಕೆಟ್ ಆಡುತ್ತಾ ಸಂಭ್ರಮಿಸುತ್ತಾರೆ. ಇಲ್ಲಿ ಸುಡು ಬಿಸಿಲಿನಲ್ಲೂ ಅವರ ದಿನಚರಿ ಎಂದಿನಂತೆ ಜರುಗುತ್ತದೆ. ಬಿಸಿಲಿನ ಝಳವನ್ನು ನಿರ್ಲಕ್ಷಿಸುವುದೊಂದೇ ಇವರಿಗೆ ಉಳಿದ ದಾರಿ. ಬಿಸಿಲನಾಡಿನಲ್ಲಿ ಬಿಸಿಲಿನೊಂದಿಗೆ ಸೆಣಸುವುದೇ ಕಲೆ.

ಸೂರ್ಯ ಕೆಂಡದುಂಡೆಯಾಗಿ ಬೆಂಕಿ ಉಗುಳುತ್ತಿದ್ದರೂ ಚಹಾದಂಗಡಿ ಮುಂದೆ ಗಿರಾಕಿಗಳಿಗೇನು ಬರವಿಲ್ಲ. ಚಹಾದ ಜೋಡಿ ಮಿರ್ಚಿ ಬಜ್ಜಿಯನ್ನು ಸವಿಯುವ ಸೊಗಸೇ ಬೇರೆ. ಬಿಸಿಲ ಬೇಗೆಯಲ್ಲೂ ಬಿಸಿಬಿಸಿ ಚಹಾ ಮತ್ತು ಮಿರ್ಚಿ ತಿನ್ನುವುದರ ಹಿಂದೆ ವೈಜ್ಞಾನಿಕ ವಿಶ್ಲೇಷಣೆ ಇದೆ. ಕಾರ ತಿಂದ ದೇಹ ಬೆವರು ಹರಿಸಿದಾಗ ಅದು ವಾಹನಗಳಲ್ಲಿ ರೇಡಿಯೇಟರ್‌ನಂತೆ ಕೆಲಸ ಮಾಡುತ್ತಾ ದೇಹವನ್ನು ತಂಪಾಗಿಸುವ ವ್ಯವಸ್ಥೆಗೆ ನೆರವಾಗುತ್ತದೆ ಎನ್ನುವುದು ವಿಜ್ಞಾನಿಗಳ ಅಭಿಮತ.

ಮೇ ತಿಂಗಳಲ್ಲಿ ಸುಡುವ ಬಿಸಿಲೇ ಬೇರೆ. ಮುಂಜಾನೆಯಿಂದ ರಾತ್ರಿಯವರೆಗೆ ಬೆಂದ ಭೂಮಿಯಿಂದ ಭುಗಿಲೇಳುವ ಹಬೆ. ಈ ಭಾಗದಲ್ಲಿ ಬಿಸಿಲಿನದೇ ಮೇಲುಗೈ. ಅದರೊಂದಿಗೆ ಹೊಂದುಕೊಂಡು ಬದುಕುವುದು ಜಾಣತನ. ಏನಾದರೇನಂತೆ, ಬಿಸಿಲುನಾಡಿನಲ್ಲಿ ಬಿಸಿಲು ಗೆಲ್ಲಲೇಬೇಕಲ್ಲ...

ಕಲಬುರಗಿ 'ಪ್ರಜಾವಾಣಿ'ಯ ಹಿರಿಯ ಪತ್ರಿಕಾ ಛಾಯಾಗ್ರಾಹಕ ತಾಜುದ್ದೀನ್ ಆಜಾದ್ ಕಟ್ಟಿಕೊಟ್ಟ ಚಿತ್ರ-ಕಥೆ ಇಲ್ಲಿದೆ ನೋಡಿ...

ಬ್ಯಾಸಗಿ ಮುಗೇತನಾ ನಾವು ಹಿಂಗೆ ಇರ್ತೇವು ನೋಡ್ರಿ...

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಕಳ್ಳಗಿಡ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ತು



ಗುಂಡ ನರ್ಸರಿಯಿಂದ ದಾಸವಾಳ ಹೂವಿನ ಗಿಡವೊಂದನ್ನು ಖರೀದಿಸಿ ಮನೆಗೆ ತಂದ. ಗಿಡವಿದ್ದ ಕುಂಡವನ್ನು ಬಿಸಿಲಿನಲ್ಲಿ ಇಟ್ಟು ದಿನವೂ ನೀರು ಹಾಕುತ್ತಿದ್ದ. ದಿನ ಉರುಳಿದರೂ ಗಿಡ ದೊಡ್ಡದಾಗಲೇ ಇಲ್ಲ. ಆದರೂ ಗುಂಡ ಗಿಡಕ್ಕೆ ನೀರು ಹಾಕುವುದನ್ನು ನಿಲ್ಲಿಸಲಿಲ್ಲ. ಗುಂಡನಿಗೆ ತಿಳಿಯದೇ ಇದ್ದಂತೆ ಕಳ್ಳಿಗಿಡವೊಂದು ಕುಂಡದ ಬದಿಯಲ್ಲೇ ಬೆಳೆಯತೊಡಗಿತ್ತು. ತಿಂಗಳು ಉರುಳಿದಾಗ ಕಳ್ಳಿಗಿಡ ಬೆಳೆದು ನಿಂತಿತ್ತು. ಇದನ್ನು ಕಂಡ ಗುಂಡ ಚಕಿತನಾದ.

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಮಾನ್ವಿ ಟಿ.ವಿ. ದಾವಣಗೆರೆ

ಶ್ರೀವರ ನಾಯಕ ಅಂಕೋಲ

ಭುವನ್ ಪಾಟೀಲ್ ಎಂ.ಆರ್., ಹೊನ್ನಾಳಿ

ನಿಶ್ಚಿತ ಎಸ್. ರಾಯಚೂರು

ಸಂಸ್ಕೃತಿ ಎಂ. ಎಸ್. ಮೈಸೂರು

ಅಭಿರಕ್ಷಾ ಕೆ. ಚೆಂಗಡಿ ಬೆಂಗಳೂರು

ಸ್ವಲ್ಪ ಯೋಚ್ನೆ ಮಾಡಿ

ಇಲ್ಲಿ ಕೊಟ್ಟಿರುವ ಹೋಟೆಲ್ ಒಂದರಲ್ಲಿ ಸಿಗುವ ಮೂರು ತಿಂಡಿಗಳ ಹೆಸರುಗಳನ್ನು ಸೇರಿಸಿ ಒಂದು ತಾಲ್ಲೂಕಿನ ಹೆಸರು ಮಾಡಿ

ಶಿರ + ಪುರಿ + ಕಾರ

ಪ್ರಾಸಪದ ಬಂಧ

ಅಕ್ಷರ ಪಟ್ಟಿ

ಕ	ಮಂ	ಧ	ಸೋ
ಒ	ನೇ	ಅಂ	ಕು
ಹಿ	ಸ	ಭ	ಶಾ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರ ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

1

	ಡಿ	ತ
	ಡಿ	ತ

2

	ಮ್ಮ	ತ
	ಮ್ಮ	ತ

3

	ರ	ಣಿ
	ರ	ಣಿ

4

	ಮ	ಕ
	ಮ	ಕ

5

	ಗ	ಳ
	ಗ	ಳ

6

	ಮಾ	ರಿ
	ಮಾ	ರಿ

ಜಾಣಪದ ಆಟ

ಇಲ್ಲಿ ಕೊಟ್ಟಿರುವ 'ಪ್ರ' ಅಕ್ಷರಗಳ ಹಿಂದೆ ಅಕ್ಷರ ಪಟ್ಟಿಯಿಂದ ಆಯ್ದು ಎರಡು ಸೂಕ್ತವಾದ ಅಕ್ಷರ ತುಂಬಿ ಎಂಟು ಪದಗಳನ್ನು ರಚಿಸಿ.

ಅಕ್ಷರ ಪಟ್ಟಿ

ವಾ	ಗ	ಸ	ಮೇ	ವೀ
ಸ್ತು	ನ	ತಿ	ಹ	ತ್ನ
ಸಿ	ತಿ	ಕಾ	ರ	ಯ
ದ್ಧ	ದಾ	ಸಾ	ರ	ಣೆ

1	ಪ್ರ		
2	ಪ್ರ		
3	ಪ್ರ		
4	ಪ್ರ		
5	ಪ್ರ		
6	ಪ್ರ		
7	ಪ್ರ		
8	ಪ್ರ		
9	ಪ್ರ		
10	ಪ್ರ		

ಗಣಿತದಲ್ಲಿ ಗರ್ದಿ ಗಮ್ಮತ್ತು

ಗುಣಾಕಾರದಲ್ಲಿ 'ತ್ರಿವಳಿ' ಸಂಖ್ಯೆಗಳು

1. 17316 X 7 = 121212
2. 18759 X 7 = 131313
3. 20202 X 7 = 141414
4. 21645 X 7 =151515
5. 23088 X 7 = 161616
6. 24531 X 7 = 171717
7. 25974 X 7 = 181818
8. 27417 X 7 =191919

ಮೋಜಿನ ENGLISH

ಬಲಭಾಗದಲ್ಲಿ ಕೊಟ್ಟಿರುವ ಒಂದಕ್ಷರಕ್ಕೆ ಪದಪಟ್ಟಿಯಿಂದ ಸೂಕ್ತವಾದ ಪದ ಆಯ್ಕೆ ಮಾಡಿ ಜೋಡಿಸಿದರೆ ಮತ್ತೊಂದು ಅರ್ಥಬದ್ಧ ಪದವಾಗುವುದು. ಅಂತಹ ಪದಗಳನ್ನು ರಚಿಸಿ

ಪದಪಟ್ಟಿ

NOW	LOW	RAIN	RING	PEN
KILL	OWN	HEAT	EAR	MART

1	R	
2	B	
3	K	
4	O	
5	S	
6	S	
7	B	
8	W	
9	S	
10	N	

ಆಲ್ಫಾಬೆಟ್ ಗೇಮ್

1. ಇಂಗ್ಲಿಷ್ ಮೂಲಾಕ್ಷರಗಳಲ್ಲಿ ಯಾವೊಂದು ಅಕ್ಷರ ಒಂದು ಅಂಕಿಯನ್ನು ಸೂಚಿಸುತ್ತದೆ?
2. ಇಂಗ್ಲಿಷ್ ಮೂಲಾಕ್ಷರಗಳಲ್ಲಿ ಯಾವೊಂದು ಅಕ್ಷರ ಗಣಿತದ ಚಿಹ್ನೆಯೊಂದನ್ನು ಸೂಚಿಸುತ್ತದೆ?

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಚಿಗುರು-ಉಗುರು 2.ಅಮರ-ಸಮರ 3.ದವಡೆ-ಕವಡೆ 4.ಜಪಾನ-ಜೋಪಾನ 5.ಉಂಡಾಡಿ-ಬಿಡಾಡಿ 6.ಉಚಿತ-ಖಚಿತ

ಜಾಣಪದ ಆಟ: 1.ಮಂಗ 2.ಕಂದ 3.ಬಂಡಿ 4.ಉಂಡಿ 5.ಪುಂಡಿ 6.ನಂದಿ 7.ಗುಂಡಿ 8.ದಂಡ 9.ಕಂತೆ 10.ಬಂಕ

ಪೇಚಿನ ಪ್ರಶ್ನೆ: 1X7 = 7

ಮೋಜಿನ ಇಂಗ್ಲಿಷ್: 1.APPLE 2.ABLE 3.CANDLE 4.EAGLE 5.GOOGLE 6.MOBILE 7.NOBLE 8.TABLE 9.HUMBLE 10.BANGLE

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಫಫ್ ಡುಪ್ಲೆಸಿ ಪಡೆಗೆ ಡೆಲ್ಲಿ ಕ್ಯಾಪಿಟಲ್ಸ್ ಸವಾಲು ಇಂದು • ವಿರಾಟ್, ಸಿರಾಜ್ ಮೇಲೆ ಕಣ್ಣು

‘ಅಂಕ ಗಣಿತ’:ಆರ್‌ಸಿಬಿ ಅದೃಷ್ಟಪರೀಕ್ಷೆ

ಬಲಾಬಲ

30 ಪಂದ್ಯ

18 ಆರ್‌ಸಿಬಿ ಜಯ

11 ಡೆಲ್ಲಿ ಜಯ

1 ಫಲಿತಾಂಶವಿಲ್ಲ

7 ಪಂದ್ಯ

309 ರನ್

4 ಅರ್ಧಶತಕ

84 ಶ್ರೇಷ್ಠ

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಜೇಕ್ ಫ್ರೆಸರ್ ಮೆಕ್‌ಗರ್ಕ್ ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ಮಾಡಿದರು –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

• ಗಿರೀಶ ದೊಡ್ಡಮನಿ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಬಾರಿ ಪ್ಲೇ ಆಫ್ ಪ್ರವೇಶಿಸಬಹುದೇ ಎಂಬ ಪ್ರಶ್ನೆಯ ಸುತ್ತಲೇ ಕ್ರಿಕೆಟ್‌ಪ್ರೇಮಿಗಳ ಮಾತುಕತೆಗಳು ಗಿರಕಿ ಹೊಡೆಯುತ್ತಿವೆ.

ಲೀಗ್ ಹಂತದಲ್ಲಿ ಇನ್ನೆರಡು ಪಂದ್ಯಗಳು ಬಾಕಿ ಇರುವ ಈ ಹೊತ್ತಿನಲ್ಲಿಯೂ ಅಗ್ರ ನಾಲ್ಕು ಸ್ಥಾನ ಪಡೆಯುವ ತಂಡಗಳನ್ನು ಖಚಿತವಾಗಿ ಹೇಳಲಾಗದಷ್ಟು ಪೈಪೋಟಿ ಏರ್ಪಟ್ಟಿದೆ. ಈ ತುರುಸಿನಲ್ಲಿ ಫಫ್ ಡುಪ್ಲೆಸಿ ಬಳಗಕ್ಕೂ ಒಂದು ಪುಟ್ಟ ಅವಕಾಶವಿದೆ. ಆದ್ದರಿಂದಲೇ ಆರ್‌ಸಿಬಿ ಆಡಲಿರುವ ಇನ್ನೆರಡೂ ಪಂದ್ಯಗಳು ಭಾರಿ ಕುತೂಹಲ ಕೆರಳಿಸಿವೆ.

ಅದರಲ್ಲೊಂದು ಹಣಾಹಣಿ ಭಾನುವಾರ ನಡೆಯಲಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬೆಂಗಳೂರು ಬಳಗವು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ. ಸತತ ನಾಲ್ಕು ಪಂದ್ಯಗಳಲ್ಲಿ ಜಯಿಸಿ ಆತ್ಮವಿಶ್ವಾಸದ ಉತ್ತುಂಗದಲ್ಲಿರುವ ಆರ್‌ಸಿಬಿ ತಂಡವು ತವರಿನಂಗಳದ ಪಂದ್ಯದಲ್ಲಿ ಗೆಲ್ಲುವ ಕನಸು ಕಾಣುತ್ತಿದೆ. ಸದ್ಯ 10 ಅಂಕ ಗಳಿಸಿರುವ ಆರ್‌ಸಿಬಿಯು ಇನ್ನುಳಿದ ಎರಡೂ ಪಂದ್ಯಗಳಲ್ಲಿ ಉತ್ತಮ ರನ್‌ರೇಟ್‌ನೊಂದಿಗೆ ಜಯಿಸಬೇಕು. ಇನ್ನೊಂದೆಡೆ 12 ಅಂಕಗಳನ್ನು ಗಳಿಸಿರುವ ಚೆನ್ನೈ ಸೂಪರ್ ಕಿಂಗ್ಸ್, ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಲಖನೌ ಸೂಪರ್‌ಜೈಂಟ್ಸ್ ತಂಡಗಳು ತಮ್ಮ ಪಾಲಿನ ಎರಡೂ ಪಂದ್ಯಗಳನ್ನು ಸೋಲಬೇಕು.

ಆರ್‌ಸಿಬಿಯು ತನ್ನ ಕೊನೆಯ ಪಂದ್ಯವನ್ನು (ಮೇ 18) ಚೆನ್ನೈ ವಿರುದ್ಧ ಆಡಲಿದೆ. ಋತುರಾಜ್ ಗಾಯಕವಾಡ ಬಳಗವು ಭಾನುವಾರ ಮಧ್ಯಾಹ್ನ ತನ್ನ ತವರಿನಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಆಡಲಿದೆ. ಅದರಲ್ಲಿ ಗೆದ್ದರೆ ಚೆನ್ನೈ ಹಾದಿ ಸುಗಮವಾಗಲಿದೆ. ಇಲ್ಲದಿದ್ದರೆ ಕಠಿಣವಾಗಲಿದೆ. ಆರ್‌ಸಿಬಿ ತಂಡವು ಒಂದು ಪಂದ್ಯ ಸೋತರೂ ಅಧಿಕೃತವಾಗಿ ಪ್ಲೇ ಆಫ್ ರೇಸ್‌ನಿಂದ ಹೊರಬೀಳಲಿದೆ.

ಅಂಕಪಟ್ಟಿಯ ಈ ಹಾವು–ಏಣಿಯ ಆಟದ ನಡುವೆ ಭಾನುವಾರದ ಪಂದ್ಯವು ಆರ್‌ಸಿಬಿ ಮತ್ತು ಡೆಲ್ಲಿ ತಂಡಗಳೆರಡಕ್ಕೂ ಮಹತ್ವದ್ದಾಗಿದೆ. ಆದರೆ ಡೆಲ್ಲಿ ತಂಡವು ರಿಷಭ್ ಪಂತ್ ಅವರಿಲ್ಲದೇ ಕಣಕ್ಕಿಳಿಯಬೇಕಿದೆ. ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ತಂಡವನ್ನು ಮುನ್ನಡೆಸಲಿದ್ದಾರೆ.

ಆರಂಭಿಕ ಹಂತದಲ್ಲಿ ಆರ್‌ಸಿಬಿಯ ಹಿನ್ನಡೆಗೆ ಕಾರಣವಾಗಿದ್ದ ಬೌಲಿಂಗ್ ಪಡೆ ಈಗ ಪುಟಿದೆದ್ದು ಪಂದ್ಯವನ್ನು ಗೆಲ್ಲಿಸಿಕೊಡುವ ಆಟವಾಡುತ್ತಿದೆ. ಅದರಲ್ಲೂ ವೇಗಿ ಮೊಹಮ್ಮದ್ ಸಿರಾಜ್ ಅವರ ಸ್ವಿಂಗ್ ಅಸ್ತ್ರಗಳು ಎದುರಾಳಿ ಬ್ಯಾಟರ್‌ಗಳಿಗೆ ಮತ್ತೆ ಸಿಂಹಸ್ವಪ್ನವಾಗಿ ಕಾಡುತ್ತಿವೆ. ಪವರ್ ಪ್ಲೇ ಮತ್ತು ಡೆತ್ ಓವರ್‌ಗಳಲ್ಲಿ ಅವರು ತಮ್ಮ ಕೈಚಳಕ ಮೆರೆಯುತ್ತಿದ್ದಾರೆ. ಅವರೊಂದಿಗೆ ಎಡಗೈ ವೇಗಿ ಯಶ್ ದಯಾಳ್ ಕೂಡ ಸಮರ್ಥವಾಗಿ ಬೌಲಿಂಗ್ ಮಾಡುತ್ತಿದ್ದಾರೆ. ಸ್ಪಿನ್ನರ್ ಸ್ವಪ್ನಿಲ್ ಸಿಂಗ್ ಮತ್ತು ಕರಣ್ ಶರ್ಮಾ ಅವರ ಮೋಡಿಯೂ ತಂಡದ ಬಲ ಹೆಚ್ಚಿಸಿದೆ.

ಮುಖ್ಯಾಂಶಗಳು

- ಸತತ ನಾಲ್ಕು ಪಂದ್ಯಗಳಲ್ಲಿ ಗೆದ್ದಿರುವ ಆರ್‌ಸಿಬಿ
- ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಅಕ್ಷರ್ ಪಟೇಲ್ ಹಂಗಾಮಿ ನಾಯಕ
- ಕುತೂಹಲ ಕೆರಳಿಸಿರುವ ಪ್ಲೇ ಆಫ್ ಪ್ರವೇಶದ ಹಾದಿ

ಈ ಬೌಲಿಂಗ್ ಪಡೆಯು ಪಟಾಕಿ ಗಳಂತೆ ರನ್ ಸಿಡಿಸಿರುವ ಡೆಲ್ಲಿಯ ಆರಂಭಿಕ ಬ್ಯಾಟರ್ ಜೇಕ್ ಫ್ರೆಸರ್ ಮೆಕ್‌ಗರ್ಕ್ ಅವರನ್ನು ಕಟ್ಟಿಹಾಕುವತ್ತ ಹೆಚ್ಚು ಶಕ್ತಿ ವಿನಿಯೋಗಿಸಬೇಕಿದೆ. ಅಭಿಷೇಕ್ ಪೊರೆಲ್, ಟ್ರಿಸ್ಟನ್ ಸ್ಟಬ್ಸ್, ರಸಿಕ್ ಸಲಾಮ್ ಅವರು ಸ್ಫೋಟಕ ಶೈಲಿಯ ಆಟಗಾರರಾಗಿದ್ದಾರೆ. ಡೆಲ್ಲಿಯ ಬೌಲರ್‌ಗಳಾದ ಖಲೀಲ್ ಅಹಮದ್, ಮುಕೇಶ್ ಕುಮಾರ್ ಹಾಗೂ ಸ್ಪಿನ್ನರ್ ಕುಲದೀಪ್ ಯಾದವ್ ಅವರ ಮುಂದೆ ಕಠಿಣ ಸವಾಲು ಇದೆ.

ಆರೆಂಜ್ ಕ್ಯಾಪ್ ಧರಿಸಿಕೊಂಡಿರುವ ವಿರಾಟ್ ಕೊಹ್ಲಿ, ಫಫ್ ಡುಪ್ಲೆಸಿ, ವಿಲ್ ಜ್ಯಾಕ್ಸ್, ದಿನೇಶ್ ಕಾರ್ತಿಕ್ ಮತ್ತು ರಜತ್ ಪಾಟೀದಾರ್ ಅವರ ’ಓಟ‘ಗಳಿಗೆ ಕಡಿವಾಣ ಹಾಕುವುದು ಸುಲಭದ ಕೆಲಸವಲ್ಲ.

ಬೆಂಗಳೂರಿನ ಪಿಚ್‌ನಲ್ಲಿ ಯಥಾ ಪ್ರಕಾರ ರನ್‌ಗಳ ಹೊಳೆ ಹರಿಯುವ ಎಲ್ಲ ಸಾಧ್ಯತೆಗಳೂ ಇವೆ. ಸಿಕ್ಸರ್‌ಗಳು, ಬೌಂಡರಿಗಳ ಮಳೆಯ ನಿರೀಕ್ಷೆ ಸಹಜವಾಗಿಯೇ ಗರಿಗೆದರಿದೆ. ಆದರೆ ಮುಂಗಾರುಪೂರ್ವದ ಮಳೆ ಸುರಿಯುವ ಸಾಧ್ಯತೆಗಳೂ ಇವೆ.

ಆರ್‌ಸಿಬಿ ಆಟಗಾರ ವಿರಾಟ್ ಕೊಹ್ಲಿ

ಒಂದು ಪಂದ್ಯದಲ್ಲಿ ರಿಷಭ್ ಅಮಾನತು

ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ರಿಷಭ್ ಪಂತ್ ಅವರ ಮೇಲೆ ಒಂದು ಪಂದ್ಯದ ಅಮಾನತು ವಿಧಿಸಿರುವುದರಿಂದ ಅವರು ಆರ್‌ಸಿಬಿ ಎದುರು ಕಣಕ್ಕಿಳಿಯುವುದಿಲ್ಲ.

ಪ್ರಸಕ್ತ ಟೂರ್ನಿಯಲ್ಲಿ ಮೂರು ಪಂದ್ಯಗಳಲ್ಲಿ ನಿಗದಿಯ ಸಮಯದಲ್ಲಿ ಓವರ್‌ಗಳನ್ನು ಪೂರ್ಣಗೊಳಿಸದ ಕಾರಣಕ್ಕೆ ಅವರನ್ನು ಅಮಾನತು ಮಾಡಲಾಗಿದೆ. ಅಲ್ಲದೇ ₹ 30 ಲಕ್ಷ ದಂಡ ವಿಧಿಸಲಾಗಿದೆ.

ಕಳೆದ ಪಂದ್ಯದಲ್ಲಿ ಡೆಲ್ಲಿ ತಂಡವು 20 ಓವರ್‌ಗಳನ್ನು ಪೂರ್ಣಗೊಳಿಸಲು 117.82 ನಿಮಿಷಗಳನ್ನು ತೆಗೆದುಕೊಂಡಿತ್ತು. ಇದು ನಿಗದಿಯ 85 ನಿಮಿಷಗಳನ್ನು ಮೀರಿತ್ತು.

ತಂಡವು ಚೆನ್ನೈ ಸೂಪರ್ ಕಿಂಗ್ಸ್ (ಮಾ.31), ಕೋಲ್ಕತ್ತ ನೈಟ್ ರೈಡರ್ಸ್ ಹಾಗೂ ರಾಜಸ್ಥಾನ ರಾಯಲ್ಸ್ (ಮೇ 7) ಪಂದ್ಯಗಳಲ್ಲಿ ಸಮಯ ನಿಯಮವನ್ನು ಉಲ್ಲಂಘಿಸಿತ್ತು ಐಪಿಎಲ್ ಸಮಿತಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

> **ಈ ಸಲ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಹೊಣೆ ನನಗೆ ನೀಡಲಾಗಿದೆ. ಕೊಹ್ಲಿ, ಕಾರ್ತಿಕ್ ಮಾರ್ಗದರ್ಶನದಲ್ಲಿ ನನ್ನ ಕೌಶಲಗಳು ಉತ್ತಮಗೊಂಡಿವೆ**
> **ರಜತ್ ಪಾಟೀದಾರ್,** ಆರ್‌ಸಿಬಿ ಬ್ಯಾಟರ್

> **ರಿಷಭ್ ಪಂತ್ ಈ ಪಂದ್ಯಕ್ಕೆ ಇಲ್ಲದಿರುವುದು ತಂಡಕ್ಕೆ ಬಹುದೊಡ್ಡ ಕೊರತೆಯಾಗಿದೆ. ಅವರು ಉತ್ತಮ ದಾಖಲೆ ಹೊಂದಿದ್ದಾರೆ**
> **ರಿಕಿ ಪಾಂಟಿಂಗ್,** ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮುಖ್ಯ ಕೋಚ್

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

700 ವಿಕೆಟ್ ಪಡೆದ ವಿಶ್ವದ ಏಕೈಕ ವೇಗಿ

ಟೆಸ್ಟ್‌ನಿಂದ ಆ್ಯಂಡರ್ಸನ್ ನಿವೃತ್ತಿ ನಿರ್ಧಾರ

ಲಂಡನ್ (ಪಿಟಿಐ): ಇಂಗ್ಲೆಂಡ್ ತಂಡದ ದಿಗ್ಗಜ ವೇಗದ ಬೌಲರ್ ಜೇಮ್ಸ್ ಆ್ಯಂಡರ್ಸನ್ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಣೆ ಮಾಡಿದ್ದಾರೆ.

ಜುಲೈನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ನಡೆಯುವ ಟೆಸ್ಟ್ ಸರಣಿಯ ಮೊದಲನೇ ಪಂದ್ಯ ತಮ್ಮ ವೃತ್ತಿಜೀವನದ ಕೊನೆಯ ಪಂದ್ಯವಾಗಿರಲಿದೆ. ಆ ಮೂಲಕ 20 ವರ್ಷಗಳ ಸುದೀರ್ಘ ಕ್ರಿಕೆಟ್ ಬದುಕಿಗೆ ತೆರೆ ಎಳೆಯಲಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಲ್ಲಿ 700 ವಿಕೆಟ್ ಪಡೆದ ವಿಶ್ವದ ಏಕೈಕ ವೇಗದ ಬೌಲರ್ ಎಂಬ ದಾಖಲೆಗೆ ಅವರು ಪಾತ್ರವಾಗಿದ್ದಾರೆ. ಈಚೆಗೆ ಧರ್ಮಶಾಲಾದಲ್ಲಿ ಭಾರತ ವಿರುದ್ಧದ ಸರಣಿಯಲ್ಲಿ ಅವರು ಈ ಮೈಲಿಗಲ್ಲು ಸ್ಥಾಪಿಸಿದ್ದರು. ಟೆಸ್ಟ್‌ನಲ್ಲಿ ಒಟ್ಟಾರೆ ವಿಕೆಟ್ ಗಳಿಕೆಯಲ್ಲಿ ಅವರಿಗೆ ಮೂರನೇ ಸ್ಥಾನವಿದೆ. ಮೊದಲೆರಡು ಸ್ಥಾನದಲ್ಲಿ ಕ್ರಮವಾಗಿ ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ (800) ಮತ್ತು ಆಸ್ಟ್ರೇಲಿಯಾದ ಶೇನ್ ವಾರ್ನ್ (708) ಇದ್ದಾರೆ.

ಜೇಮ್ಸ್ ಆ್ಯಂಡರ್ಸನ್

‘ಜಿಮ್ಮಿ’ ಎಂಬ ಅಡ್ಡಹೆಸರು ಹೊಂದಿರುವ ಅವರು, 2003ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಈವರೆಗೆ 187 ಟೆಸ್ಟ್ ಪಂದ್ಯಗಳಲ್ಲಿ ಆಡಿದ್ದಾರೆ. ಇಂಗ್ಲೆಂಡ್ ತಂಡವನ್ನು ಅತಿ ಹೆಚ್ಚು ಟೆಸ್ಟ್ ಪಂದ್ಯಗಳಲ್ಲಿ ಪ್ರತಿನಿಧಿಸಿದ ದಾಖಲೆಯೂ ಅವರದ್ದು. ವಿಶ್ವದಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ (200 ಟೆಸ್ಟ್) ಅವರ ನಂತರದಲ್ಲಿ ಸ್ಥಾನದಲ್ಲಿ ಜಿಮ್ಮಿ ಇದ್ದಾರೆ.

194 ಏಕದಿನ ಪಂದ್ಯಗಳನ್ನು ಆಡಿರುವ ಅವರು 269 ವಿಕೆಟ್‌ಗಳನ್ನು ಪಡೆದಿದ್ದಾರೆ. 2015ರಲ್ಲಿ ಕೊನೆಯ ಬಾರಿ ಏಕದಿನ ಪಂದ್ಯವಾಡಿದ್ದರು. 19 ಟಿ20 ಪಂದ್ಯಗಳಲ್ಲಿ 18 ವಿಕೆಟ್ ಗಳಿಸಿದ್ದಾರೆ.

ರಾಣಾ, ವರುಣ್‌ಗೆ ತಲಾ ಎರಡು ವಿಕೆಟ್: ಮುಂಬೈ ಇಂಡಿಯನ್ಸ್‌ಗೆ ಸೋಲು

ಪ್ಲೇಆಫ್‌ಗೆ ಕೋಲ್ಕತ್ತ ನೈಟ್ ರೈಡರ್ಸ್

ಕೋಲ್ಕತ್ತ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡ ಈ ವರ್ಷದ ಐಪಿಎಲ್‌ನಲ್ಲಿ ಪ್ಲೇಆಫ್ ಪ್ರವೇಶಿಸಿತು. ಈ ಸಾಧನೆ ಮಾಡಿದ ಮೊದಲ ತಂಡ ಇದಾಗಿದೆ.

ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ನಾಯಕತ್ವದ ತಂಡ 18 ರನ್‌ಗಳಿಂದ ಮುಂಬೈ ಇಂಡಿಯನ್ಸ್ ವಿರುದ್ಧ ಜಯಿಸಿತು.

158 ರನ್‌ಗಳ ಗುರಿಯನ್ನು ಬೆನ್ನತ್ತಿದ ಮುಂಬೈ ಇಂಡಿಯನ್ಸ್ ತಂಡವನ್ನು ಕೋಲ್ಕತ್ತ ಬೌಲರ್‌ಗಳು ಕಟ್ಟಿಹಾಕಿದರು. 16 ಓವರ್‌ಗಳಲ್ಲಿ 8 ವಿಕೆಟ್‌ಗೆ 139 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಹರ್ಷಿತ್ ರಾಣಾ (34ಕ್ಕೆ2), ವರುಣ್ ಚಕ್ರವರ್ತಿ (17ಕ್ಕೆ2) ಹಾಗೂ ಆ್ಯಂಡ್ರೆ ರಸೆಲ್ (34ಕ್ಕೆ2) ಪರಿಣಾಮಕಾರಿ ಬೌಲಿಂಗ್ ಮಾಡಿದರು. ಕೊನೆ ಓವರ್‌ನಲ್ಲಿ ದಾಳಿಗಿಳಿದ ರಾಣಾ ಅವರು ತಿಲಕ್ ಹಾಗೂ ನಮನ್ ವಿಕೆಟ್ ಕಬಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇಶಾನ್ ಕಿಶಾನ್ (40, 22ಎ), ತಿಲಕ್ ವರ್ಮಾ (32, 17ಎ) ಹಾಗೂ ನಮನ್ ಧೀರ್ (17,6ಎ) ಅವರ ಪ್ರಯತ್ನ ಕೈಗೂಡಲಿಲ್ಲ.

ಪಂದ್ಯಕ್ಕೂ ಮುನ್ನ ಮಳೆ ಬಂದ ಕಾರಣ ಇನಿಂಗ್ಸ್ ಅನ್ನು 16 ಓವರ್‌ಗಳಿಗೆ ನಿಗದಿ ಪಡಿಸಲಾಯಿತು.

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	12	9	3	18	1.428
ರಾಜಸ್ಥಾನ ರಾಯಲ್ಸ್	11	8	3	16	0.476
ಸನ್‌ರೈಸರ್ಸ್ ಹೈದರಾಬಾದ್	12	7	5	14	0.406
ಚೆನ್ನೈ ಸೂಪರ್ ಕಿಂಗ್ಸ್	12	6	6	12	0.491
ಡೆಲ್ಲಿ ಕ್ಯಾಪಿಟಲ್ಸ್	12	6	6	12	-0.316
ಲಖನೌ ಸೂಪರ್ ಜೈಂಟ್ಸ್	12	6	6	12	-0.769
ಆರ್‌ಸಿಬಿ	12	5	7	10	0.217
ಗುಜರಾತ್ ಟೈಟನ್ಸ್	12	5	7	10	-1.063
ಮುಂಬೈ ಇಂಡಿಯನ್ಸ್	13	4	9	8	-0.271
ಪಂಜಾಬ್ ಕಿಂಗ್ಸ್	12	4	8	8	-0.423

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (634)
ಪರ್ಪಲ್ ಕ್ಯಾಪ್: ಹರ್ಷಲ್ ಪಟೇಲ್ (20 ವಿಕೆಟ್)

ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಕೋಲ್ಕತ್ತ ತಂಡಕ್ಕೆ ಆರಂಭದಲ್ಲಿಯೇ ಬಲವಾದ ಪೆಟ್ಟುಕೊಟ್ಟಿತು.

ಕೋಲ್ಕತ್ತ ತಂಡವು 10 ಓವರ್‌ಗಳಲ್ಲಿ 97 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡಿತು. ಆರಂಭದಲ್ಲಿಯೇ ಕುಸಿದ ತಂಡಕ್ಕೆ ವೆಂಕಟೇಶ್ ಅಯ್ಯರ್ (42; 21ಎ) ಮರುಜೀವ ತುಂಬಿದರು. ಇನಿಂಗ್ಸ್‌ನ ಮೊದಲ ಓವರ್‌ನಲ್ಲಿಯೇ ನುವಾನ್ ತುಷಾರ ಬೌಲಿಂಗ್‌ನಲ್ಲಿ ಫಿಲಿಪ್ ಸಾಲ್ಟ್ ಅವರು ಔಟಾದರು.

ಸಿಕ್ಸರ್ ಹೊಡೆದು ತಮ್ಮ ಖಾತೆ ತೆರೆದಿದ್ದ ಸಾಲ್ಟ್ ಅವರಿಗೆ ದೊಡ್ಡ ಇನಿಂಗ್ಸ್ ಆಡಲು ಸಾಧ್ಯವಾಗಲಿಲ್ಲ.

ಎರಡನೇ ಓವರ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಅವರ ಎಸೆತದ ವೇಗವನ್ನು ಅಂದಾಜು ಮಾಡುವಲ್ಲಿ ಎಡವಿದ ಸುನಿಲ್ ನಾರಾಯಣ ಕ್ಲೀನ್‌ಬೌಲ್ಡ್ ಆದರು. ಟೂರ್ನಿಯಲ್ಲಿ ಹಲವು ಸ್ಫೋಟಕ ಇನಿಂಗ್ಸ್ ಆಡಿರುವ ಸುನಿಲ್ ಇಲ್ಲಿ ಖಾತೆಯನ್ನೇ ತೆರೆಯಲಿಲ್ಲ.

ಶ್ರೇಯಸ್ ಅಯ್ಯರ್ ಕೇವಲ ಏಳು ರನ್ ಗಳಿಸಿ ಔಟಾದರು. ಅವರು ಅನ್ಶುಲ್ ಕಾಂಭೋಜ್ ಎಸೆತದಲ್ಲಿ ಬೌಲ್ಡ್ ಆದರು.

ಆದರೆ ಇನ್ನೊಂದೆಡೆ ವೆಂಕಟೇಶ್ ಬ್ಯಾಟ್ ಬೀಸುತ್ತಿದ್ದರು. ಆರು ಬೌಂಡರಿ ಮತ್ತು 2 ಸಿಕ್ಸರ್ ಹೊಡೆದರು.

9ನೇ ಓವರ್‌ನಲ್ಲಿ ಸ್ಪಿನ್ನರ್ ಚಾವ್ಲಾ ಎಸೆತವನ್ನು ಆಡುವ ಭರದಲ್ಲಿ ಸೂರ್ಯಕುಮಾರ್ ಯಾದವ್‌ಗೆ ಕ್ಯಾಚಿತ್ತ ವೆಂಕಟೇಶ್ ಇನಿಂಗ್ಸ್‌ಗೆ ತೆರೆಬಿತ್ತು.

ಕೆಕೆಆರ್ ತಂಡದ ವೆಂಕಟೇಶ್ ಅಯ್ಯರ್: ಪಿಟಿಐ ಚಿತ್ರ

ಕೇವಲ 8 ರನ್‌ಗಳ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡರು.

ನಿತೀಶ್ ರಾಣಾ (33) ಹಾಗೂ ಆ್ಯಂಡ್ರೆ ರಸೆಲ್ (24) ತಂಡದ ಮೊತ್ತ ಹೆಚ್ಚಿಸುವಂತಹ ಬೀಸಾಟವಾಡಿದರು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 16 ಓವರ್‌ಗಳಲ್ಲಿ 7 ಕ್ಕೆ 157 (ವೆಂಕಟೇಶ್ ಅಯ್ಯರ್ 42, ನಿತೀಶ್ ರಾಣಾ 33, ಆ್ಯಂಡ್ರೆ ರಸೆಲ್ ಬ್ಯಾಟಿಂಗ್ 24, ಜಸಪ್ರೀತ್ ಬೂಮ್ರಾ 39ಕ್ಕೆ2, ಪೀಯೂಷ್ ಚಾವ್ಲಾ 28ಕ್ಕೆ2) ಮುಂಬೈ ಇಂಡಿಯನ್ಸ್; 16 ಓವರ್‌ಗಳಲ್ಲಿ 8 ವಿಕೆಟ್‌ಗೆ 139 (ಇಶಾನ್ ಕಿಶಾನ್ 40, ತಿಲಕ್ ವರ್ಮಾ 32, ಹರ್ಷಿತ್ ರಾಣಾ 34ಕ್ಕೆ2, ವರುಣ್ ಚಕ್ರವರ್ತಿ 17ಕ್ಕೆ2) ಪಂದ್ಯ ಶ್ರೇಷ್ಠ: ವರುಣ್ ಚಕ್ರವರ್ತಿ.

ಗಿಲ್‌ಗೆ ₹ 24 ಲಕ್ಷ ದಂಡ

ಅಹಮದಾಬಾದ್ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಶುಕ್ರವಾರ ನಡೆದ ಪಂದ್ಯದಲ್ಲಿ ನಿಧಾನಗತಿಯಲ್ಲಿ ಓವರುಗಳನ್ನು ಮಾಡಿದ್ದಕ್ಕಾಗಿ ಗುಜರಾತ್ ಟೈಟನ್ಸ್ ತಂಡದ ನಾಯಕ ಶುಭಮನ್ ಗಿಲ್ ಅವರಿಗೆ ₹24 ಲಕ್ಷ ದಂಡ ವಿಧಿಸಲಾಗಿದೆ.

ತಂಡದ ಆಟಗಾರರಿಗೂ ದಂಡ ವಿಧಿಸಲಾಗಿದೆ.

ಇಂಪ್ಯಾಕ್ಟ್ ಆಟಗಾರ ಸೇರಿದಂತೆ ಗುಜರಾತ್ ತಂಡದ 12 ಆಟಗಾರರು ₹6 ಲಕ್ಷ ಅಥವಾ ಪಂದ್ಯ ಸಂಭಾವನೆಯ ಶೇ 25ರಷ್ಟಲ್ಲಿ ಯಾವುದು ಕಡಿಮೆಯೊ ಅದನ್ನು ವೈಯಕ್ತಿಕವಾಗಿ ದಂಡದ ರೂಪದಲ್ಲಿ ತೆರಬೇಕಾಗಿದೆ.

ಗೆಲ್ಲಲೇಬೇಕಾದ ಒತ್ತಡದಲ್ಲಿ ಚೆನ್ನೈ ಸೂಪರ್ ಕಿಂಗ್ಸ್

ಚೆನ್ನೈ (ಪಿಟಿಐ): ಐದು ಬಾರಿಯ ಐಪಿಎಲ್ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಭಾನುವಾರ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ. ಪ್ಲೇ ಆಫ್ ಹಾದಿಯನ್ನು ಖಚಿತಪಡಿಸಿಕೊಳ್ಳಲು ತವರಿನಲ್ಲಿ ನಡೆಯುವ ಪಂದ್ಯವನ್ನು ಗೆಲ್ಲಲೇಬೇಕಾದ ಅನಿವಾರ್ಯತೆಗೆ ಸಿಲುಕಿದೆ.

ಚೆನ್ನೈ ತಂಡವು 12 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಶುಕ್ರವಾರ ಗುಜರಾತ್ ಟೈಟನ್ಸ್ ವಿರುದ್ಧದ ಸೋಲು ತಂಡವನ್ನು ಒತ್ತಡಕ್ಕೆ ಸಿಲುಕಿಸಿದೆ. ಪ್ಲೇಆಫ್ ಹಾದಿಯನ್ನು ಜೀವಂತವಾಗಿ ಉಳಿಸಲು ಋತುರಾಜ್ ಗಾಯಕವಾಡ್ ಬಳಗವು ಇನ್ನುಳಿದ ಎರಡೂ ಪಂದ್ಯಗಳನ್ನು (ರಾಜಸ್ಥಾನ ಮತ್ತು ಆರ್‌ಸಿಬಿ ವಿರುದ್ಧ) ಗೆಲ್ಲಲೇಬೇಕಾದ ಅನಿವಾರ್ಯತೆ ಇದೆ.

ಮತ್ತೊಂದೆಡೆ ಕಳೆದೆರಡು ಪಂದ್ಯಗಳಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಮುಗ್ಗರಿಸಿರುವ ರಾಜಸ್ಥಾನ ತಂಡವು ಗೆಲುವಿನ ಲಯಕ್ಕೆ ಮರಳಲು ಹವಣಿಸುತ್ತಿದೆ. 11 ಪಂದ್ಯಗಳಲ್ಲಿ 16 ಅಂಕ ಸಂಪಾದಿಸಿ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಸಂಜು ಸ್ಯಾಮ್ಸನ್ ಬಳಗವು ಈ ಪಂದ್ಯ ಗೆದ್ದರೆ ನಾಕೌಟ್‌ಗೆ ಎರಡನೇ ತಂಡವಾಗಿ ಲಗ್ಗೆಯಿಡಲಿದೆ.

ಋತುರಾಜ್ ಗಾಯಕವಾಡ್ –ಪಿಟಿಐ ಚಿತ್ರ

ಚೆನ್ನೈನ ಅಗ್ರ ಬ್ಯಾಟರ್‌ಗಳಾದ ಅಜಿಂಕ್ಯ ರಹಾನೆ, ರಚಿನ್ ರವೀಂದ್ರ ಮತ್ತು ಋತುರಾಜ್ ಗಾಯಕವಾಡ್ ಅವರು ಗುಜರಾತ್ ವಿರುದ್ಧದ ಪಂದ್ಯದಲ್ಲಿ ವೈಫಲ್ಯ ಅನುಭವಿಸಿದ್ದು ತಂಡಕ್ಕೆ ತಲೆನೋವಾಗಿದೆ.

ಆರಂಭದ ಕೆಲ ಪಂದ್ಯಗಳಲ್ಲಿ ಅಬ್ಬರಿಸಿದ್ದ ಶಿವಂ ದುಬೆ ಅವರು ಮುಂಬರುವ ಟಿ20 ವಿಶ್ವಕಪ್‌ಗೆ ಭಾರತ ತಂಡಕ್ಕೆ ಆಯ್ಕೆಯಾದ ಬಳಿಕ ರನ್ ಬರ ಎದುರಿಸುತ್ತಿದ್ದಾರೆ.

ಮತ್ತೊಂಡೆದೆ ಡೇರಿಲ್ ಮಿಚೆಲ್ ಮತ್ತು ಮೊಯಿನ್ ಅಲಿ ಲಯ ಕಂಡುಕೊಂಡಿರುವುದು ತಂಡದಲ್ಲಿ ಆಶಾಭಾವನೆ ಮೂಡಿಸಿದೆ. ತಂಡದ ಪ್ರಮುಖ ಬೌಲರ್‌ಗಳ ಅನುಪಸ್ಥಿತಿಯಲ್ಲಿ ತುಷಾರ್ ದೇಶಪಾಂಡೆ ಮತ್ತು ಶಾರ್ದೂಲ್ ಠಾಕೂರ್ ಅಮೋಘ ದಾಳಿಯ ಮೂಲಕ ಗಮನ ಸೆಳೆಯುತ್ತಿದ್ದಾರೆ. ಪಂದ್ಯ ಮಧ್ಯಾಹ್ನ ಆರಂಭವಾಗುವುದರಿಂದ ಇಬ್ಬನಿ ಕಡಿಮೆ ಇರಲಿದ್ದು, ಸ್ಪಿನ್ನರ್‌ಗಳಿಗೆ ನೆರವಾಗಬಹುದು.

ಚೆನ್ನೈ ತಂಡಕ್ಕೆ ಹೋಲಿಸಿದರೆ ರಾಜಸ್ಥಾನ ತಂಡದ ಬ್ಯಾಟಿಂಗ್ ಸಾಮರ್ಥ್ಯ ಕೊಂಚ ಉತ್ತಮವಾಗಿದೆ. ಬ್ಯಾಟರ್‌ಗಳಾದ ಜೋಸ್ ಬಟ್ಲರ್, ಸ್ಯಾಮ್ಸನ್, ಶುಭಂ ದುಬೆ, ರೋವ್ಮನ್ ಪೊವೆಲ್ ತಂಡದ ಶಕ್ತಿಯಾಗಿದ್ದಾರೆ. ಆದರೆ, ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಟಿ20 ವಿಶ್ವಕಪ್‌ಗೆ ಭಾರತ ತಂಡಕ್ಕೆ ಆಯ್ಕೆಯಾದರೂ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಲು ಪರದಾಡುತ್ತಿದ್ದಾರೆ. ಬೌಲಿಂಗ್‌ನಲ್ಲಿ ಅನುಭವಿಗಳಾದ ಆರ್. ಅಶ್ವಿನ್, ಯಜುವೇಂದ್ರ ಚಾಹಲ್ ಹಿಂದಿನ ಪಂದ್ಯಗಳಲ್ಲಿ ಪರಿಣಾಮಕಾರಿಯಾಗಿರುವುದು ತಂಡದ ವಿಶ್ವಾಸ ಹೆಚ್ಚಿಸಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ಪ್ರಜಾವಾಣಿ ಭಾನುವಾರ • ಮೇ 12, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

*T&C APPLY

AMT
Crafting Spaces, Building Legacies

ARANYAM

LUXURY FARM PLOTS & ESTATE VILLAS

Witness the Unseen: Experience Zone Opens at Our
Grand Launch from May 16th to 19th

113 ACRES | ESTATE PLOTS STARTING FROM 6000 SQ. FT ONWARDS*

PRICE STARTS FROM ₹1 CR ONWARDS* AVAIL LAUNCH BENEFITS

DODDABALLAPUR

Angsana Oasis Spa And Resort - 15 Minutes	Foxconn 20 Minutes	Bangalore International Airport - 35 Minutes	STRR 8 Mins	Upcoming Bren Racetrack - 5 Minutes	Presidency University 15 Minutes

113 ACRES | OPTION TO BUILD YOUR OWN VILLA | 31,500 SQ.FT. CLUBHOUSE

RSVP FOR LAUNCH EVENT

FINEST 50 PLUS AMENITIES - UPCOMING WELLNESS RETREAT

- Half-Olympic Size Infinity Swimming Pool
- Outdoor Lounge
- Forest Pavillion
- Al Fresco Dining
- Multipurpose Party Lawn
- Aerobics Room
- Gymnasium & More

AMT
Crafting Spaces, Building Legacies

Nelamangala -Doddaballapur road, Karnataka-561203
www.aranyambyamt.com

886 781 1911

HOUZBAY
Launch & Strategic Partner

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

SHREYAS EDUCATION SOCIETY
ST. LAWRENCE HIGH SCHOOL / PU COLLEGE

Magadi Main Road, Kamakshipalya, Bangalore - 79

The Management, Staff & The Students Heartily CONGRATULATE The Young Dedicated Stalwarts.

614 TEJASHWINI HUGGI 98.24%
612 MADHURA S S 97.92%
610 KEERTHANA K 97.60%
602 YUVARAJ KUMAWAT P 96.32%
595 PREKSHA N MURTHY 95.2%
595 ARPITHA R 95.2%
594 GOWTHAM K V 95.04%
590 HARSHITHA B 94.4%
588 DHANUSHREE B J 94.08%
585 PRIYA R SAHANI 93.6%
582 VIKAS V 93.12%
576 ABHINAYA S 92.16%
573 ROHAN M 91.68%
570 PRAGATHI V 91.2%
567 DHANUSHREE M 90.74%
566 NITHIN B V 90.56%
560 SKANDA M 89.6%
560 ULLAS J 89.6%
559 THRISHAN S 89.44%
547 MONIKA V 87.52%
544 VIDYA K 87.04%
542 KIRAN G 86.72%
541 SINCHANA S 86.56%
540 GANESH S SATALI 86.4%
537 RASHMI M 85.92%
537 MOULYA 85.92%
536 THARUN M S 85.76%
535 CHIRAG N MURTHY 85.6%
535 NIMIKSHA M 85.6%
531 ABHIRAM R 84.96%
531 BHARATH N R 84.96%
529 YASHASWINI L 84.64%
526 DIVYA P 84.16%
522 BHOOMIKA A 84%
520 LAVANYA L 84%
519 RAKSHITHA M 84%
516 SHIVAM C 83%
514 CHANDANA I 83%
514 POOJITHA L 83%
508 TEJASWINI N 82%

Admissions Open for Montessori to PUC 2024-2025 | Contact : 9448381257, 8951429321

GOOD SAMARITAN PUBLIC SCHOOL

GSPS Estd-2000

ABBAIAH REDDY LAYOUT, KAGGADASAPURA, C. V. RAMAN NAGAR, BANGALORE - 93

JOURNEY OF TRANSCENDENCE

2020 - 2021	2021 - 2022		2022 - 2023
SWATHI R. NAIR	ASHWAL R. SHANBAG	ABHAY DUBEY H.	HARIPRIYA S.
625 / 625	623 / 625	622 / 625	614 / 625

2023 - 24
LIST OF STUDENTS WHO SECURED A+

LIKITHA POORNASHREE S. 97.28%
SOMAGATTU LOKESH RAM REDDY 97.28%
NAVEENA A. 97.12%
RIA ROSE A. 93.92%
ADITRI MURALIKRISHNAN 93.92%
TIRZAH SINEESH 92.80%
BALKISHAN SUTHAR 92.16%
MOHAN BABU V. 92%
RADHA DEWASI 91.52%
TANISH S. 90.40%
ASHWIN N. 90.08%
MOHAMMED HAYATH SHARIEF 90.08%

Management, Principal, Staff & Parents Congratulate our SSLC Students

DH DECCAN HERALD
ಪ್ರಜಾವಾಣಿ

Classifieds
More value, more impact

EDUCATION

Book your Educational Related Ads in DH All Karnataka + Prajavani Bengaluru City

*Conditions apply

www.dhclassifieds.com

BOOK NOW

For more details contact:

9731810277 | 9886213331
9845114560 | 9900428036
9901641752 | 080- 45557163/164

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್

ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ
ಜಾಹೀರಾತು ಬುಕ್ ಮಾಡಿ

@ 2244/-*
FOR 15 WORDS

www.dhclassifieds.com

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

*Conditions apply

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

ASC Committed to Excellence Since 2009

ASC GROUP OF INSTITUTIONS

#A3, 1st Main Road, 6th Block, Rajajinagar, Bengaluru - 560010.

Prof. H. S. Ananthamurthy
Founder Chairman
ASC Educational & Cultural Trust

Management, CEO, Principal and Staff Congratulate the Students who have excelled in PU and DEGREE Examinations 2024

51 STATE RANKS IN TOP 20 | **334** DISTINCTIONS | **337** FIRST CLASS | **110** CENTUMS

ASC INDEPENDENT PU COLLEGE

Commerce

Rank	Name	Reg. No.	Score
5th	KRUTHIKA R	20249113428	98.83%
6th	HARSHITHA K	20249113336	98.67
6th	ANANYA D	20249113153	98.67
6th	PRERANA M P	20249113634	98.67
7th	MITHUN T N	20249113512	98.50
8th	KRUTHIKA R	20249113429	98.33
8th	YAVANIKA C	20249113903	98.33
8th	D KALPITHA	20249113234	98.33
8th	NEHARIKA PARSWANTH	20249113555	98.33
8th	RAKSHITHA G	20249113675	98.33
9th	THANUSHREE K R	20249113835	98.17
12th	HARISHWAR S	20249113322	97.67
12th	GAYATHRI S UPADHYAYA	20249113299	97.67
13th	MEGHANA K	20249113504	97.50
13th	JAYSREE CHANDRAN B	20249113378	97.50
14th	AKASH T	20249113138	97.33
14th	BHAKTI M	20249113185	97.33
15th	AMOGH A	20249113148	97.17
15th	KAVYASHREE P	20249113405	97.17
16th	M S HEMANT KUMAR	20249113466	97.00
16th	MEGHANA V K	20249113507	97.00
16th	VENKATA NAGA BALAJI M	20249113870	97.00
16th	N AKASH	20249113538	97.00
17th	GAGANA S	20249113292	96.83
17th	JANANI B	20249113370	96.83
17th	DHRUVA P BARDOLI	20249113270	96.83
18th	HARSHINI A	20249113330	96.67
18th	J RACHANA	20249113369	96.67
18th	CHAITHRA R S	20249113206	96.67
19th	GAGANA M R	20249113291	96.50
19th	PRATIBHA V	20249113628	96.50
20th	MITHUN P S	20249113511	96.33
20th	TEJASWINI N	20249113834	96.33
20th	NISHANTHI S	20249113567	96.33
20th	BHOOMIKA JAIN	20249113193	96.33
20th	K R RAHUL	20249113393	96.33

Science

Rank	Name	Reg. No.	Score
11th	R J VARSHA	20249113655	98.00
13th	MEGHANA S	20249113505	97.67
13th	PRAMODH RAO H	20249113619	97.67
14th	DISHA R	20249113278	97.50
15th	HEMAKSHI K	20249113344	97.33
16th	PADMASHREE S S	20249113581	97.17
17th	LOCHANA OMKAR	20249113456	96.83
18th	GAGANA C	20249113290	96.83
18	GANAVI T L	20249113294	96.83
18th	SHIVANI N	20249113758	96.67
19th	MONISH R	20249113529	96.50
20th	DARSHAN K V	20249113239	96.50
20	KUSUMA T	20249113436	96.50
20	MANISHA C S	20249113485	96.50
20	MOHAN KUMAR T	20249113520	96.50

ASC DEGREE COLLEGE

7 UNIVERSITY RANKS

BANGALORE UNIVERSITY RANK HOLDERS- 2023-24

Rank	Name	Course	Reg. No.
1ST	DEEKSHITHA R NAYAK	BCom	191WC41065
1ST	SUPRIYAA K	BCA	201WSB7053
4TH	CHANDRIKA DAVE	BBA	201WC26006
5TH	DEEPA S	BCom	191WC41066
6TH	LIKITH S	BBA	201WC26024
9TH	CHETHAN KUMAR M	BCA	191WSB7010
9TH	HARSHITHA R	BBA	191WC26015

19 UNIVERSITY GOLD MEDALS

BANGALORE UNIVERSITY GOLD MEDALISTS - 2023-24

Reg. No.	Name	Medals
191WC41065	DEEKSHITHAR NAYAK	9 GOLD MEDALS
191WC41063	DEEKSHA V KASHYAP	3 GOLD MEDALS
191WC41056	DEEPA S	1 GOLD MEDAL
